ಹುಬ್ಬಳ್ಳಿ
ಮಂಗಳವಾರ, 17 ಮಾರ್ಚ್ 2026
ಸಂಪುಟ 15, ಸಂಚಿಕೆ 358, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಮುರ್ಮು ಭೇಟಿಗಾಗಿ ಟಿಎಂಸಿ ಮತ್ತೆ ಮನವಿ | 02
ಬೆಂಕಿ ಅವಘಡ: 10 ರೋಗಿಗಳ ಸಾವು | 02
ಮಮತಾ ವಿರುದ್ಧ ಸುವೇಂದು ಸ್ಪರ್ಧೆ | 02

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಶತಭಿಷೆ

ದಿನದ ಮಾತು

ದಿನದ ಒಂದು ಗಂಟೆ ಪುಸ್ತಕ ಓದುವುದಕ್ಕೆ ಸಮರ್ಪಿಸಿ. ನೀವು ಕೆಲವೇ ವರ್ಷಗಳಲ್ಲಿ ಜ್ಞಾನದ ಕೇಂದ್ರವಾಗಿ ಬದಲಾಗುವಿರಿ.

▲ಎ.ಪಿ.ಜೆ. ಅಬ್ದುಲ್ ಕಲಾಂ

ವಜ್ರದ ವ್ಯಾಪಾರಿಯ ಅಪ್ರತಿಮ ಗೋಸೇವೆ

ಧರಣಿ ಮಂಡಲ

• ಕೆ.ಎಸ್. ಶೈಲೇಶ್ ಹೊಳ್ಳ

• ಪುಟ ೬

ಕಿರುಸುದ್ದಿ

ಎಲ್‌ಪಿಜಿ ಗ್ರಾಹಕರಿಗೆ ಇ- ಕೆವೈಸಿ ಕಡ್ಡಾಯ

• **ಹೊಸದಿಲ್ಲಿ:** ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಎಲ್ಲಾ ದೇಶೀಯ ಎಲ್‌ಪಿಜಿ ಗ್ರಾಹಕರಿಗೆ



ಇ-ಕೆವೈಸಿ ಕಡ್ಡಾಯಗೊಳಿಸಿದೆ. ಎಂಒಪಿಎನ್‌ಜಿ ತಮ್ಮ ಎಕ್ಸ್ ಖಾತೆಯಲ್ಲಿ, ಎಲ್ಲಾ ದೇಶೀಯ ಎಲ್‌ಪಿಜಿ ಗ್ರಾಹಕರು ಬಯೋಮೆಟ್ರಿಕ್ ಆಧಾರ ದೃಢೀಕರಣವನ್ನು (ಇ-ಕೆವೈಸಿ) ಪೂರ್ಣಗೊಳಿಸಬೇಕಾಗುತ್ತದೆ ಎಂದು ಹೇಳಿದೆ. ➡ಪುಟ ೪

ರಾಷ್ಟ್ರ ಸೇವಿಕಾ ಸಮಿತಿ ಹಿರಿಯ ಪ್ರಚಾರಿಕಾ ರೇಖಾ ರಾಜೆ ನಿಧನ

• **ಹೊಸದಿಲ್ಲಿ:** ರಾಷ್ಟ್ರ ಸೇವಿಕಾ ಸಮಿತಿಯ ಹಿರಿಯ ಪ್ರಚಾರಿಕಾ ಮತ್ತು ಮಾಜಿ ಅಖಿಲ ಭಾರತೀಯ



ಸಹ-ಸರಕಾರ್ಯವಾಹಿಕಾ ರೇಖಾ ರಾಜೆ (ರೇಖಾತಾಯಿ) ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ದಿಲ್ಲಿಯ ಏಮ್ಸ್‌ನಲ್ಲಿ ನಿಧನರಾದರು. ರೇಖಾ ರಾಜೇ ಅವರು ಕಾನ್ಪುರದಲ್ಲಿ ಜನಿಸಿದರು. ಎಳೆಯ ವಯಸ್ಸಿನಿಂದಲೇ ಸಾಮಾಜಿಕ ಮತ್ತು ರಾಷ್ಟ್ರೀಯತಾವಾದಿ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

• ಪುಟ ೪

ಮೋದಿ ಇಸ್ರೇಲ್ ಭೇಟಿಗೂ ಸಮರಕ್ಕೂ ಸಂಬಂಧವಿಲ್ಲ

• ಪುಟ ೭

ಜೆಫ್ರಿ ಎಪ್ಸ್ಟೀನ್: ಪುರಿ ಪುತ್ರಿಯಿಂದ ಮಾನನಷ್ಟ ಕೇಸ್

• ಪುಟ ೭

4,300ಕ್ಕೂ ಹೆಚ್ಚು ವಿಮಾನಗಳು ರದ್ದು

• ಪುಟ ೭

ದುಬೈ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ

• ಪುಟ ೭

ರಾಜ್ಯದಲ್ಲಿ ಆಲಿಕಲ್ಲು ಮಳೆ, ಸಿಡಿಲಿಗೆ ಬಾಲಕ ಬಲಿ

• ಪುಟ ೪

ಸಚಿವರಿಂದ ಸಿಗದ ಉತ್ತರ | ಸದನದಿಂದ ಹೊರನಡೆದ ಖಾದರ್

ಸ್ಪೀಕರ್ ಸಭಾತ್ಯಾಗ

• **ವಿಧಾನಸಭೆ:** ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಸರ್ಕಾರದ ಸಚಿವರು ಸೂಕ್ತವಾಗಿ ಉತ್ತರಿಸುತ್ತಿಲ್ಲವೆಂದು ಬೇಸರಗೊಂಡು ವಿಧಾನಸಭಾಧ್ಯಕ್ಷರೇ ಸದನ ಮುಂದೂಡಿ, ಸಭಾತ್ಯಾಗ ಮಾಡಿರುವ ಅಪರೂಪದ ಪ್ರಸಂಗಕ್ಕೆ ರಾಜ್ಯ ವಿಧಾನಸಭೆ ಅಧಿವೇಶನ ಸಾಕ್ಷಿಯಾಯಿತು.

ಅಷ್ಟೇ ಅಲ್ಲ, ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳು ಸ್ಪಷ್ಟನೆ ನೀಡುವವರೆಗೂ ಸದನಕ್ಕೆ ಬರುವುದಿಲ್ಲ ಎಂದು ಎಚ್ಚರಿಕೆಯನ್ನೂ ನೀಡಿದರು. ಸೋಮವಾರ ಪ್ರಶ್ನೋತ್ತರ ಕಲಾಪ ಮುಕ್ತಾಯವಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಲಿಖಿತ ಉತ್ತರಗಳ ಮೂಲಕ ನೀಡುವ ಪ್ರಶ್ನೆಗಳ ಪಟ್ಟಿ ಮಂಡನೆಗೆ ಅವಕಾಶ ನೀಡಿದರು. ಈ ವೇಳೆ ಗೃಹ ಸಚಿವ ಡಾ. ಪರಮೇಶ್ವರ ಅವರು ಲಿಖಿತ ಮೂಲಕ ಉತ್ತರಿಸುವ 245 ಪ್ರಶ್ನೆಗಳ ಪೈಕಿ 87 ಪ್ರಶ್ನೆಗಳಿಗೆ ಉತ್ತರ ಮಂಡಿಸಿದರು.

ಈ ವೇಳೆ ಪ್ರತಿಪಕ್ಷ ನಾಯಕ ಆರ್. ಅಶೋಕ ಎದ್ದು ನಿಂತು, ಈ ಸರ್ಕಾರ ಸತ್ತು ಹೋಗಿದೆ. ತಿಥಿ ಮಾಡಬೇಕು. ತಿಥಿ ಮಾಡಿದರೂ ಉಪಯೋಗವಾಗುವುದಿಲ್ಲ. ಈವರೆಗೆ ನಾಲ್ಕು ಬಾರಿ ಎಚ್ಚರಿಸಿದರೂ ಸಭಾಧ್ಯಕ್ಷರ ಮಾತಿಗೂ ಎಚ್ಚೆತ್ತುಕೊಂಡಿಲ್ಲ. ಆದರೂ ಶೇ.50ರಷ್ಟು ಪ್ರಶ್ನೆಗಳಿಗೂ ಉತ್ತರ ನೀಡದೆ ನಿಯಮ ಪಾಲಿಸಿಲ್ಲ. ದೇವರ ಹಾಗೆ ಬಂದು ಕುಳಿತುಕೊಳ್ಳುತ್ತದೆ. 5ನೇ ಬಾರಿಗೆ ಎಚ್ಚರಿಸಿ ಎಂದು ಸಭಾಧ್ಯಕ್ಷರನ್ನು ಮನವಿ ಮಾಡಿದರು.

ನಾಲ್ಕು ಬಾರಿ ಎಚ್ಚರಿಕೆ: ದಿನಕ್ಕೆ ಕೇವಲ 15 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಲು ಸಾಧ್ಯವಿದೆ. ಉಳಿದ ಪ್ರಶ್ನೆಗಳಿಗೆ ನಿಯಮಾವಳಿ ಪ್ರಕಾರ, ಲಿಖಿತ ಉತ್ತರ ನೀಡುವುದು ಸರ್ಕಾರದ ಕರ್ತವ್ಯ. ಗಮನಸೆಳೆಯುವ ಸೂಚನೆಯಲ್ಲಿಯೂ 15ಕ್ಕಿಂತ ಹೆಚ್ಚು ತೆಗೆದುಕೊಳ್ಳದಂತೆ ಮನವಿ ಮಾಡುತ್ತೀರಿ. ಆದರೆ, ಶಾಸಕರ ಪ್ರಶ್ನೆಗಳಿಗೆ ಉತ್ತರಿಸುವ ಸಚಿವರು, ಅಧಿಕಾರಿಗಳು ಅತ್ಯಂತ ನಿರ್ಲಕ್ಷ್ಯ ವಹಿಸಿದ್ದಾರೆ. ಈ ಪೀಠದಿಂದ ನಾಲ್ಕು ಬಾರಿ ಎಚ್ಚರಿಸಲಾಗಿತ್ತು ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಎಷ್ಟು ಹೇಳಿದರೂ ಏನೂ ಸುಧಾರಣೆ ಆಗುವುದಿಲ್ಲ. ಸರಿಯಾದ ಸಮಯಕ್ಕೆ ಸಚಿವರು ಸದನಕ್ಕೆ ಬರುವುದಿಲ್ಲ. ಒಟ್ಟು 245 ಲಿಖಿತ ಪ್ರಶ್ನೆಗಳ ಪೈಕಿ ಸರ್ಕಾರವು ಕೇವಲ 87 ಪ್ರಶ್ನೆಗಳಿಗೆ ಮಾತ್ರ ಉತ್ತರ ನೀಡಿದೆ. ಅಂದರೆ, ಅರ್ಧಕ್ಕಿಂತ ಹೆಚ್ಚು ಪ್ರಶ್ನೆಗಳಿಗೆ ಉತ್ತರವನ್ನೇ ನೀಡಿಲ್ಲ. ಸರ್ಕಾರದ ಈ ವರ್ತನೆ ಸರಿಯಲ್ಲ. ಹೀಗಾದರೆ ಸದನ ನಡೆಸುವುದು ಹೇಗೆ? ಸಂಬಂಧಪಟ್ಟ ಸಚಿವರು ಮತ್ತು ಕಾರ್ಯದರ್ಶಿಗಳು ನನಗೆ ಸ್ಪಷ್ಟೀಕರಣ ನೀಡುವವರೆಗೆ ನಾನು ಸದನವನ್ನು ನಡೆಸುವುದಿಲ್ಲ ಎಂದು ಪೀಠದಿಂದ ಎದ್ದು ಹೊರನಡೆದರು.



ಶಾಸಕರಿಗಾಗಿ ಅಧಿವೇಶನ

ಸಭಾಧ್ಯಕ್ಷರು ಮಾತನಾಡಿ, ಅಧಿವೇಶನ ಎನ್ನುವುದು ಜನರ ಸಮಸ್ಯೆಗಳನ್ನು ಚರ್ಚಿಸಲು ಇರುವ ವೇದಿಕೆ. ಈ ಸದನ ನಡೆಯುವುದು ಸಚಿವರಿಗಾಗಿ ಅಲ್ಲ, ಶಾಸಕರಿಗಾಗಿ ನಡೆಯುತ್ತದೆ. ಮೂರು ತಿಂಗಳಿಗೊಮ್ಮೆ ಶಾಸಕರು ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೊತ್ತು ಇಲ್ಲಿಗೆ ಬರುತ್ತಾರೆ. ಶಾಸಕರು ಇಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದು ಸರ್ಕಾರದ ಕರ್ತವ್ಯ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಸಭಾಧ್ಯಕ್ಷರ ಜತೆ ಸಂಧಾನ ಸಭೆ

ಸದನ ನಡೆಸುವುದಿಲ್ಲ ಎಂದು ಹೊರನಡೆದ ಸಭಾಧ್ಯಕ್ಷ ಯು.ಟಿ.ಖಾದರ್ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು ಹಾಗೂ ಪ್ರತಿಪಕ್ಷ ನಾಯಕರು ಸಂಧಾನ ಸಭೆ ನಡೆಸಿದರು. ಸಭಾಧ್ಯಕ್ಷರನ್ನು ಸಮಾಧಾನಪಡಿಸಿದ ನಾಯಕರು, ಸೂಕ್ತ ರೀತಿಯಲ್ಲಿ ಸದನ ನಡೆಸಲು ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಅಲ್ಲದೇ ಶಾಸಕರ ಪ್ರಶ್ನೆಗಳಿಗೆ ಉತ್ತರ ಕೊಡಿಸುವುದಾಗಿ ಹಾಗೂ ಸದನಕ್ಕೆ ಉತ್ತರ ನೀಡದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದರು. ಜೊತೆಗೆ ಭೋಜನ ವಿರಾಮದ ಬಳಿಕ ಸರ್ಕಾರ ಉತ್ತರ ನೀಡುವುದಾಗಿ ಹೇಳಿದರು. ಮುಖ್ಯಮಂತ್ರಿಗಳ ಭರವಸೆ ತರುವಾಯ ಸದನ ನಡೆಸಲು ಸಭಾಧ್ಯಕ್ಷರು ಒಪ್ಪಿಕೊಂಡರು. ಆ ಬಳಿಕ ಕಲಾಪವನ್ನು ಭೋಜನ ವಿರಾಮಕ್ಕೆ ಮುಂದೂಡಲಾಯಿತು.

3 ಅಧಿಕಾರಿಗಳ ಅಮಾನತಿಗೆ ಕ್ರಮ: ಪರಮೇಶ್ವರ್



ಸಭಾಧ್ಯಕ್ಷರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ, ನೋಟಿಸ್ ನೀಡುವಂತೆ ಮುಖ್ಯಕಾರ್ಯದರ್ಶಿಗೆ ಹೇಳಿದ್ದು, ತುಂಬಾ ಪ್ರಶ್ನೆಗಳು ಅವರಲ್ಲೇ ಉಳಿದುಕೊಂಡಿದ್ದರೆ ಅವರನ್ನು ಅಮಾನತು ಮಾಡಿ ಎಂದು ಹೇಳಿದ್ದಾರೆ ಎಂದು ಸಚಿವ ಡಾ. ಜಿ.ಪರಮೇಶ್ವರ್ ತಿಳಿಸಿದರು. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ, ಕಂದಾಯ ಇಲಾಖೆಯ 91 ಪ್ರಶ್ನೆಗಳಲ್ಲಿ 29 ಉತ್ತರಗಳು ಮಾತ್ರ ಬಂದಿವೆ. ಮುಂದೆ ಇಂತಹ ಬೆಳವಣಿಗೆ ನಡೆಯದಂತೆ ಸೂಕ್ತ ಸಮಯದಲ್ಲಿ ಉತ್ತರ ನೀಡಲಿದೆ ಎಂದು ಸರ್ಕಾರದ ಪರವಾಗಿ ಭರವಸೆ ನೀಡಲಾಗುವುದು ಎಂದರು.

ನಾವಿಕರೆಲ್ಲ ಸುರಕ್ಷಿತ: ರಾಜೇಶ್‌ಕುಮಾರ್

ದೇಶಕ್ಕಿಂದು ಎಲ್ಪಿಜಿ, ತೈಲ ಹೊತ್ತ 2 ನೌಕೆ



• **ಹೊಸದಿಲ್ಲಿ:** ಯುಎಇಯ ಪುಜೈರಾ ಟರ್ಮಿನಲ್ ಮೇಲೆ ಇತ್ತೀಚೆಗೆ ನಡೆದ ಮಿಲಿಟರಿ ದಾಳಿಯ ನಡುವೆಯೂ ಅಲ್ಲಿಂದ ಸುರಕ್ಷಿತವಾಗಿ ಹೊರಬಂದಿರುವ ಭಾರತದ ಜಗ್ ಲಾಡ್ಕಿ ಕಚ್ಚಾ ತೈಲ ಟ್ಯಾಂಕರ್ ಮಂಗಳವಾರ ಭಾರತದ ಮುಂದ್ರಾ ಬಂದರು ತಲುಪುವ ನಿರೀಕ್ಷೆಯಿದೆ. ಇದೇ ವೇಳೆ ಇಂಧನ ಹೊತ್ತ ಶಿವಾಲಿಕ್ ಈಗಾಗಲೇ ಗುಜರಾತ್ ತಲುಪಿದ್ದು, ನಂದಾದೇವಿ ಮಂಗಳವಾರ ಕಾಂಡ್ಲಾ ಬಂದರನ್ನು ತಲುಪುವ ನಿರೀಕ್ಷೆಯಿದೆ

ಜಗ್ ಲಾಡ್ಕಿ ನೌಕೆ ಸುಮಾರು 80,800 ಟನ್ ಮುರ್ಬನ್ ಕಚ್ಚಾ ತೈಲವನ್ನು ಹೊತ್ತು ತರುತ್ತಿದೆ. ಹಡಗಿನಲ್ಲಿರುವ ಎಲ್ಲಾ 22 ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಎಂದು ಬಂದರು, ಹಡಗು ಮತ್ತು ಜಲಮಾರ್ಗ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಸೋಮವಾರ ಖಚಿತಪಡಿಸಿದ್ದಾರೆ. ಮಾ.14ರಂದು ಪುಜೈರಾ ತೈಲ ಟರ್ಮಿನಲ್ ಮೇಲೆ ದಾಳಿ ನಡೆದ ನಂತರ, ಈ ನೌಕೆ ಭಾನುವಾರ ಬೆಳಗ್ಗೆ ಅಲ್ಲಿಂದ ಪ್ರಯಾಣ ಬೆಳೆಸಿತ್ತು.

ಸಿಕ್ಕಿಬಿದ್ದ ಹಡಗುಗಳು: ಸಂಘರ್ಷಪೀಡಿತ ಪ್ರದೇಶದಿಂದ ಸುರಕ್ಷಿತವಾಗಿ ಹೊರಬಂದಿರುವ 28 ಭಾರತೀಯ ಹಡಗುಗಳಲ್ಲಿ ಜಗ್ ಲಾಡ್ಕಿ ನಾಲ್ಕನೆ ಯದ್ದು. ಇದರೊಂದಿಗೆ, ಒಟ್ಟು 92,712 ಟನ್ ಇಂಧನವನ್ನು ಹೊತ್ತಿರುವ ಶಿವಾಲಿಕ್ ಮತ್ತು ನಂದಾ ದೇವಿ ಎಂಬ ಎರಡು ಎಲ್‌ಪಿಜಿ ವಾಹಕ ನೌಕೆಗಳು ಹಾರ್ಮುಜ್ ಜಲಸಂಧಿ ದಾಟಿವೆ. ➡ಪುಟ ೪

ಹಾರ್ಮುಜ್ ಬಗ್ಗೆ ಅಮೆರಿಕ ಜತೆ ಚರ್ಚೆಸಿಲ್ಲ: ಭಾರತ

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಹಡಗುಗಳ ಸುರಕ್ಷಿತ ಸಂಚಾರವನ್ನು ಖಚಿತಪಡಿಸಿಕೊಳ್ಳಲು ಭಾರತ ಅಮೆರಿಕದೊಂದಿಗೆ ಯಾವುದೇ ದ್ವಿಪಕ್ಷೀಯ ಮಾತುಕತೆಯಲ್ಲಿ ತೊಡಗಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸ್ಪಷ್ಟಪಡಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಂತಾರಾಷ್ಟ್ರೀಯ ನೌಕಾ ಹಸ್ತಕ್ಷೇಪಕ್ಕೆ ಕರೆನೀಡಿದ ಬೆನ್ನಲ್ಲೇ, ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಈ ಹೇಳಿಕೆ ನೀಡಿದ್ದಾರೆ. ಈ ವಿಷಯದ ಕುರಿತು ವಿವಿಧ ಪಾಲುದಾರರೊಂದಿಗೆ ಚರ್ಚೆಗಳು ನಡೆಯುತ್ತಿದ್ದರೂ, ವಾಷಿಂಗ್ಟನ್ ಜತೆ ಯಾವುದೇ ನಿರ್ದಿಷ್ಟ ದ್ವಿಪಕ್ಷೀಯ ಮಾತುಕತೆ ನಡೆದಿಲ್ಲ ಎಂದು ಅವರು ಹೇಳಿದ್ದಾರೆ. ಭಾರತದ ಧ್ವಜ ಹೊಂದಿರುವ ಹಡಗುಗಳ ಸುರಕ್ಷಿತ ಸಂಚಾರಕ್ಕಾಗಿ ಇರಾನ್‌ನೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಳ್ಳಲಾಗಿದೆ. ➡ಪುಟ ೪

ಡಿಕೆಶಿ ನೇತೃತ್ವದಲ್ಲಿ ರಾಜ್ಯ ನೀರಾವರಿ ಯೋಜನೆ ಬಗ್ಗೆ ಚರ್ಚೆ

ಸಚಿವರು, ಸಂಸದರ ಸಭೆ ಇಂದು

• **ಬೆಂಗಳೂರು:** ಕೇಂದ್ರ ಸರ್ಕಾರದಲ್ಲಿ ಬಾಕಿ ಉಳಿದಿರುವ ರಾಜ್ಯ ನೀರಾವರಿ ಯೋಜನೆಗಳ ಬಗ್ಗೆ ಮಂಗಳವಾರ (ಮಾ.17) ಮಹತ್ವದ ಸಭೆ ನಡೆಯಲಿದೆ. ಈ ಸಭೆಯಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ನಡೆಯಲಿದೆ.



ರಾಜ್ಯದ ನೀರಾವರಿ ವಿಚಾರವಾಗಿ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿರುವ ಪ್ರಕರಣಗಳ ಕುರಿತು ಚರ್ಚೆ ಹಾಗೂ ಕೇಂದ್ರ ಸರ್ಕಾರದಲ್ಲಿ ಬಾಕಿ ಉಳಿದಿರುವ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಿರಿಯ ವಕೀಲರು ಹಾಗೂ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವರು ಹಾಗೂ ಸರ್ವ ಪಕ್ಷಗಳ ಸಂಸದರ ಜತೆಗೆ ಸಭೆ ನಡೆಸಲಿದ್ದಾರೆ. ಹೀಗಾಗಿ ಈ ಸಭೆ ತೀರಾ ಮಹತ್ವ ಪಡೆದಿದೆ. ➡ಪುಟ ೪

ಆಂಧ್ರ, ಮಹಾರಾಷ್ಟ್ರದ ವಿರುದ್ಧ ಧ್ವನಿ ಎತ್ತಲು ಮನವಿ

ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಲ್ಲಿ ಒಂದಾದ ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನ ಹಾಗೂ ಭೂಸ್ವಾಧೀನ ಪ್ರಕ್ರಿಯೆ ಮಾಡಬಾರದು ಎಂದು ನೆರೆಯ ಆಂಧ್ರ ಪ್ರದೇಶದವರು ಕೇಂದ್ರ ಸರ್ಕಾರಕ್ಕೆ ಆಕ್ಷೇಪಣಾ ಪತ್ರ ಬರೆದಿದೆ. ಅಲ್ಲದೇ, ಮಹಾರಾಷ್ಟ್ರ ಸರ್ಕಾರ ಕೂಡ ಕೇಂದ್ರಕ್ಕೆ ಪತ್ರ ಬರೆದು ಈ ಯೋಜನೆ ಜಾರಿಯಾಗಬಾರದು ಎಂದು ಕೇಂದ್ರಕ್ಕೆ ಮನವಿ ಮಾಡಿದೆ. ಈ ವಿಚಾರವಾಗಿ ಕೇಂದ್ರ ಸರ್ಕಾರ ನಮಗೆ ಪತ್ರ ಬರೆದು ಸ್ಪಷ್ಟನೆ ಕೇಳಿದೆ. ➡ಪುಟ ೪

ಅತಿರೇಕದ ವರ್ತನೆ, ಅಶಿಸ್ತಿನ ನಡವಳಿಕೆಗೆ ದೇವೇಗೌಡ ಬೇಸರ

ಸಂಸತ್ತಲ್ಲಿ ಕಾಂಗ್ರೆಸ್ ಸದಸ್ಯರ ವರ್ತನೆ ಸೋನಿಯಾ ಗಾಂಧಿಗೆ ಎಚ್‌ಡಿಡಿ ಪತ್ರ

• **ಹೊಸದಿಲ್ಲಿ:** ಸಂಸತ್ ಅಧಿವೇಶನದಲ್ಲಿ ವಿಪಕ್ಷಗಳಿಂದ, ಅದರಲ್ಲಿಯೂ ವಿಶೇಷವಾಗಿ ಕಾಂಗ್ರೆಸ್ ಸದಸ್ಯರು ತೋರಿಸುತ್ತಿರುವ ಅತಿರೇಕದ ವರ್ತನೆ, ಅಶಿಸ್ತಿನ ನಡವಳಿಕೆ ಬಗ್ಗೆ ರಾಜ್ಯಸಭಾ ಸದಸ್ಯ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ತೀವ್ರ ಆತಂಕ, ಕಳವಳ ವ್ಯಕ್ತಪಡಿಸಿದ್ದು, ಈ ಬಗ್ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

ಬಜೆಟ್ ಅಧಿವೇಶನದ ವೇಳೆ ಪ್ರತಿಪಕ್ಷಗಳ ಸದಸ್ಯರು ನಿರಂತರವಾಗಿ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದು, ಪ್ರಮುಖವಾಗಿ ಕಾಂಗ್ರೆಸ್ ಸಂಸದರು ಸಂಸತ್ತಿನ ಒಳಗೆ ಹಾಗೂ ಸಂಸತ್ತಿನ ಆವರಣದಲ್ಲಿ ಘೋಷಣೆ ಕೂಗುವುದು, ಫಲಕ ಪ್ರದರ್ಶನ ಮಾಡುವುದು, ನಿರ್ದಿಷ್ಟವಾಗಿ ಹೆಸರು ಕೂಗುವುದು, ಧರಣಿ ಮತ್ತು ಕಲಾಪ ಸ್ಥಗಿತ ಆಗುವಂತೆ ಮಾಡುತ್ತಿದ್ದಾರೆ. ➡ಪುಟ ೪



ಪ್ರತಿಪಕ್ಷದ ಹೊಣೆಗಾರಿಕೆ ಹಾಗೂ ಜವಾಬ್ದಾರಿಗಳ ಬಗ್ಗೆ ತಮಗೆ ಅರಿವಿದೆ. ವಿರೋಧ ಪಕ್ಷಗಳು ತಮ್ಮ ವಿರೋಧವನ್ನು ತೋರಿಸಬಹುದು. ಆದರೆ ಅದು ನಿಯಮಗಳು, ಸಂಪ್ರದಾಯಗಳು ಮತ್ತು ಘನತೆಗೆ ಧಕ್ಕೆ ತರುವಂತಿರಬಾರದು.

■ ಎಚ್.ಡಿ.ದೇವೇಗೌಡ, ರಾಜ್ಯಸಭಾ ಸದಸ್ಯ

ನಿತಿನ್, ನಿತೀಶ್ ಸೇರಿ ಎಂಟು ಎನ್‌ಡಿಎ ಅಭ್ಯರ್ಥಿಗಳಿಗೆ ಜಯ

• **ಹೊಸದಿಲ್ಲಿ:** ಬಿಹಾರ ಮತ್ತು ಒಡಿಶಾದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎಗೆ ಮಹತ್ವದ ಜಯ ದೊರೆತಿದೆ. ಬಿಜೆಪಿ ಬೆಂಬಲಿತ ಬಿಹಾರದಲ್ಲಿ ಐವರು ಮತ್ತು ಒಡಿಶಾದಲ್ಲಿ ಮೂವರು ಅಭ್ಯರ್ಥಿಗಳು ಗೆದ್ದಿದ್ದಾರೆ. ಬಿಹಾರದಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೇರಿ ಐವರು ಎನ್‌ಡಿಎ ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ಚುನಾವಣಾಧಿಕಾರಿ ಖ್ಯಾತಿ ಸಿಂಗ್ ಪ್ರಕಟಿಸಿದಂತೆ, ಕೇಂದ್ರ ಸಚಿವ ರಾಮನಾಥ್ ಠಾಕೂರ್(ಜೆಡಿಯು), ಬಿಜೆಪಿ ನಾಯಕ ಶಿವೇಶ್ ಕುಮಾರ್ ಮತ್ತು ರಾಷ್ಟ್ರೀಯ ಲೋಕ ಮೋರ್ಚಾ ಅಧ್ಯಕ್ಷ ಉಪೇಂದ್ರ ಕುಶ್ವಾಹಾ ಕೂಡ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ➡ಪುಟ ೪

ಬಿಹಾರ, ಒಡಿಶಾ ರಾಜ್ಯಸಭೆ ಚುನಾವಣೆ ಫಲಿತಾಂಶ

ಸರ್ಕಾರದ ಕ್ರಮದ ಬಗ್ಗೆ ಸಚಿವ ಮುನಿಯಪ್ಪ ಮಾಹಿತಿ

ಎಲ್ಪಿಜಿ ವಿತರಣೆಗೆ ಹೊಸ ನೀತಿ

• **ಬೆಂಗಳೂರು:** ಕೊಲ್ಲಿ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಉಂಟಾಗಿರುವ ಎಲ್‌ಪಿಜಿ ಕೊರತೆ ನೀಗಿಸಲು ಹಾಗೂ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ವಿತರಣೆಯನ್ನು ಸುಗಮಗೊಳಿಸಲು ರಾಜ್ಯ ಸರಕಾರ ಹೊಸ ನೀತಿ ಪ್ರಕಟಿಸಿದೆ.

ಐದು ಹಂತದಲ್ಲಿ ವರ್ಗೀಕರಣ: ಈ ನೀತಿ ಅನ್ವಯ, ಎಲ್‌ಪಿಜಿ ಪೂರೈಕೆ ಪ್ರಮಾಣ ಮೊದಲಿನ ಹಂತಕ್ಕೆ ತಲುಪುವವರೆಗೂ ಆದ್ಯತೆ ಮೇರೆಗೆ, ಅಗತ್ಯ ಸೇವೆಗಳಿಗಷ್ಟೇ ಸಿಲಿಂಡರ್ ಪೂರೈಸಲು ಕ್ರಮ ಕೈಗೊಂಡಿದೆ. ಇದೇ ಮಾದರಿಯಲ್ಲಿ ಎಲ್‌ಪಿಜಿ ಪೂರೈಸುವ ಎಲ್ಲ ಸಂಸ್ಥೆಗಳಿಗೂ ರಾಜ್ಯ ಸರಕಾರ ಸೂಚನೆ ನೀಡಿದ್ದು, ಪೂರೈಕೆಯನ್ನು ಐದು ಹಂತಗಳಲ್ಲಿ ವರ್ಗೀಕರಣ ಮಾಡಲಾಗಿದೆ.

ಒಟ್ಟು ಪ್ರತಿನಿತ್ಯ 7 ಸಾವಿರ ವಾಣಿಜ್ಯ ಸಿಲಿಂಡರ್‌ಗಳ ಪೈಕಿ ಶಾಲಾ-ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಆಸ್ಪತ್ರೆಗಳು ಮತ್ತು ಇತರ ಅತ್ಯಗತ್ಯ ಸಂಸ್ಥೆಗಳಿಗೆ ಹೆಚ್ಚಿನ ಆದ್ಯತೆ ಮೇರೆಗೆ ಪ್ರತಿದಿನ 4,200 ಸಿಲಿಂಡಗರ್‌ಗಳನ್ನು ಪೂರೈಸಬೇಕಿದೆ. ಸರಕಾರಿ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳು, ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಿರುವ ಕ್ಯಾಂಟೀನ್‌ಗಳು, ಕೆಎಂಎಫ್ (ನಂದಿನಿ) ಮತ್ತು ಇಂದಿರಾ ಕ್ಯಾಂಟೀನ್‌ಗಳಿಗೆ ಪ್ರತಿದಿನ 1,200 ಸಿಲಿಂಡರ್‌ಗಳು ಪೂರೈಕೆಯಾಗಲಿವೆ. ➡ಪುಟ ೪

ಅಗತ್ಯಕ್ಕಿಂತ ಹೆಚ್ಚು ಬುಕಿಂಗ್: ಮುನಿಯಪ್ಪ

ಎಲ್ಪಿಜಿ ಸಿಲಿಂಡರ್ ಸರಬರಾಜಿನ ಸ್ಥಿತಿಗತಿ ಕುರಿತು ಸೋಮವಾರ ನಡೆದ ಸಭೆ ಬಳಿಕ ಸಚಿವ



ಕೆ.ಎಚ್.ಮುನಿಯಪ್ಪ ಮಾಧ್ಯಮಗಳೊಂದಿಗೆ ಮಾತನಾಡಿದರು. ರಾಜ್ಯದಲ್ಲಿ ಎಲ್ಪಿಜಿ ಸಿಲಿಂಡರ್ ಕೊರತೆ ಇಲ್ಲದೆ ಸರಬರಾಜು ನಿಯಮಿತವಾಗಿ ನಡೆಯುತ್ತಿದೆ. ಕೆಲವೆಡೆ ಜನರು ಆತಂಕದಿಂದ ಅಗತ್ಯಕ್ಕಿಂತ ಹೆಚ್ಚು ಬುಕ್ಕಿಂಗ್ ಮಾಡುತ್ತಿರುವುದರಿಂದ ಗೊಂದಲ ಉಂಟಾಗಿದೆ ಎಂದರು. ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ 25ರಿಂದ 30 ದಿನಗಳಿಗೆ ಒಂದು ಸಿಲಿಂಡರ್ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 45 ದಿನಗಳಿಗೆ ಒಂದು ಸಿಲಿಂಡರ್ ಬಳಕೆಯಾಗುತ್ತದೆ. ಇದಕ್ಕೆ ಅನುಗುಣವಾಗಿ ಸರಬರಾಜು ನಡೆಯುತ್ತಿದೆ.

ಪಶ್ಚಿಮ ಬಂಗಾಳ ಏಳು ಹಿರಿಯ ಅಧಿಕಾರಿಗಳ ವರ್ಗ

• **ಕೋಲ್ಕತಾ:** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಸರ್ಕಾರದ ಅಂದಾದುಂದಿ ಆಡಳಿತ ಮುಂದುವರಿದಿರುವಂತೆಯೇ, ಚುನಾವಣಾ ಆಯೋಗ ಆ ರಾಜ್ಯದಲ್ಲಿ ಹಿಂಸಾಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಾತ್ರಿಪಡಿಸುವುದಕ್ಕಾಗಿ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಮತ್ತು ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಅವರ ಸ್ಥಾನದಿಂದ ಪದಚ್ಯುತಗೊಳಿಸಿ ಅವರ ಸ್ಥಾನಗಳಿಗೆ ದಕ್ಷ, ಅನುಭವೀ ಅಧಿಕಾರಿಗಳನ್ನು ನಿಯೋಜಿಸಿದೆ.

• ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,70,000 (2,75,000) ಅಪರಂಜಿ ಚಿನ್ನ: 1,57,420 (1,62,220) ಆಭರಣ ಚಿನ್ನ: 1,44,300 (1,46,350) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ	ಬಿಎಸ್‌ಇ 75,502 (938↑) ಎನ್‌ಎಸ್‌ಇ 23,408 (257↑)
$1 = ₹92.28	

ಕಿರುಸುದ್ದಿ



ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮಿ ಮಠ ಟ್ರಸ್ಟ್ ಕಮಿಟಿ ವತಿಯಿಂದ ಕಾಲಕಾಲೇಶ್ವರ ಕಲಾ ಹಾಗೂ ಸಾಂಸ್ಕೃತಿಕ ಸಂಸ್ಥೆ ಸಹಯೋಗದಲ್ಲಿ ಸಂಗೀತ ಕಾರ್ಯಕ್ರಮ ನಡೆಯಿತು.

ಇಂದು ಪ್ರತಿಭಟನೆ



• **ಹುಬ್ಬಳ್ಳಿ:** ರಾಜ್ಯ ಸರ್ಕಾರದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳ ಭರ್ತಿ ಹಾಗೂ ವಿದ್ಯಾರ್ಥಿಗಳ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿ ಮಾ. 17 ರಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಉತ್ತರ ಕರ್ನಾಟಕ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಎಬಿವಿಪಿ ಕರ್ನಾಟಕ ಉತ್ತರ ರಾಜ್ಯ ಕಾರ್ಯದರ್ಶಿ ದರ್ಶನ ಹೆಗಡೆ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಟನೆ ಭಾಗವಾಗಿ ಹುಬ್ಬಳ್ಳಿಯ ಕೆಎಂಸಿಆರ್ಐ ಆಸ್ಪತ್ರೆ ಎದುರು ಮಾರ್ಚ್ 17 ರಂದು ಬೆಳಿಗ್ಗೆ 11ಕ್ಕೆ ಪ್ರತಿಭಟನೆ ನಡೆಸಲಾಗುವುದು ಎಂದರು.ಪ್ರತಿಭಟನೆಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಪ್ರಾರಂಭ ಮಾಡಬೇಕು. ವಿವಿಧ ಇಲಾಖೆಗಳಿಗೆ ನೇಮಕಾತಿ ಮಾಡುವಾಗ ವಯೋಮಿತಿಯನ್ನು ಸಡಿಲಿಕೆ ಮಾಡಬೇಕು. ವಿಶ್ವವಿದ್ಯಾಲಯಗಳಿಗೆ ಅನುದಾನ ನೀಡಬೇಕು ಎಂದು ಆಗ್ರಹಿಸಿದರು. ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಫಲಿತಾಂಶ, ಅಂಕಪಟ್ಟಿ ನೀಡಬೇಕು, ಸಮರ್ಪಕವಾಗಿ ವಿದ್ಯಾರ್ಥಿ ವೇತನ ನೀಡಬೇಕು ಎಂದು ಆಗ್ರಹಿಸಲಾಗುವುದು ಎಂದು ಹೇಳಿದರು.

ಅನಮೋಲ ಕಲಬುರ್ಗಿ, ಸಿಖಾ ಜೈನ್ ಇದ್ದರು.

ಅಶ್ವಿನಿ ಕಾಶಪ್ಪಗೆ ಪಿಎಚ್‌ಡಿ



• **ಧಾರವಾಡ:** ಸಂಶೋಧನಾ ವಿದ್ಯಾರ್ಥಿನಿ ಜಗ್ಗಲ್ ಅಶ್ವಿನಿ ಕಾಶಪ್ಪ ಮಂಡಿಸಿದ 'ಡಿಸೈನ್ ಆ್ಯಂಡ್ ಸಿಂಥೆಸಿಸ್ ಆಫ್ ನಾವೇಲ್ ನೈಟ್ರೋಜನ್ ಆ್ಯಂಡ್ ಆಕ್ಸಿಜನ್ ಹಿಟೆರೋಸೈಕಲ್ಸ್: ಎ ಸ್ಪೆಷಲ್ ಫೋಕಸ್ ಆನ್ ದೇರ್ ಬಯೋಲಾಜಿಕಲ್ ಆ್ಯಂಡ್ ಫೋಟೊಫಿಜಿಕಲ್ ಸ್ಟಡೀಸ್' ಎಂಬ ಪ್ರೌಢ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನಿಸಿದೆ. ಇವರಿಗೆ ಪ್ರಾಧ್ಯಾಪಕ ಪ್ರೊ. ಕೆ.ಎಸ್.ಕಟಗಿ ಮಾರ್ಗದರ್ಶಕರಾಗಿದ್ದರು.

ವಿದ್ಯಾರ್ಥಿಗಳಿಗೆ ಉಚಿತ ಪ್ರಯಾಣ

• **ಹುಬ್ಬಳ್ಳಿ:** ಪ್ರಸಕ್ತ ವರ್ಷದ ಎಸ್ಎಸ್ಎಲ್‌ಸಿ ಪರೀಕ್ಷೆ ಬರೆಯಲು ಹಾಜರಾಗುವ ವಿದ್ಯಾರ್ಥಿಗಳಿಗೆ ಅವರ ವಿದ್ಯಾ ಸಂಸ್ಥೆ ಹೊರತು ಬೇರೆ ಕಡೆ ಪರೀಕ್ಷಾ ಕೇಂದ್ರಗಳಿಗೆ ಹೋಗುವುದರಿಂದ ಸಾರಿಗೆ ಸಂಸ್ಥೆಯಿಂದ ಬಸ್‌ಗಳಲ್ಲಿ ಉಚಿತ ಪ್ರಯಾಣ ಅವಕಾಶ ಕಲ್ಪಿಸಲಾಗಿದೆ. ಮಾ. 18 ರಿಂದ ಎಪ್ರಿಲ್ 2 ರ ವರೆಗೆ ಪರೀಕ್ಷೆ ನಡೆಯಲಿದ್ದು, ಹಾಜರಾಗುವ ವಿದ್ಯಾರ್ಥಿಗಳು ಪರೀಕ್ಷೆ ಪತ್ರ ತೋರಿಸಿ ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಹಾಗೂ ಪರೀಕ್ಷೆ ಮುಗಿಸಿ ವಾಸ ಸ್ಥಳಕ್ಕೆ ಹಿಂದಿರುಗಲು ಸಂಸ್ಥೆಯ ನಗರ, ಉಪನಗರ, ಸಾಮಾನ್ಯ ಹಾಗೂ ವೇಗದೂತ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಬಹುದಾಗಿದೆ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದೆ.

ನಿಧನ ಸುದ್ದಿ

ರತ್ನಾಬಾಯಿ ಕುಲಕರ್ಣಿ



• **ಹುಬ್ಬಳ್ಳಿ:** ಇಲ್ಲಿನ ನವನಗರದ ನಿವಾಸಿಯಾಗಿದ್ದ ರತ್ನಾಬಾಯಿ ಕುಲಕರ್ಣಿ (74) ಶನಿವಾರ ರಾತ್ರಿ ನಿಧನರಾದರು. ಮೃತರಿಗೆ ಒಬ್ಬ ಪುತ್ರ ಹಾಗು ಮೂವರು ಪುತ್ರಿಯರು ಇದ್ದಾರೆ.

ಬಾಳಮ್ಮ ಉಳ್ಳಿಕಾಶಿ



• **ಹುಬ್ಬಳ್ಳಿ:** ಹಳೇ ಹುಬ್ಬಳ್ಳಿ ಜಗದೀಶ ನಗರ ನಿವಾಸಿ ಬಾಳಮ್ಮ ಉಳ್ಳಿಕಾಶಿ(71) ಸೋಮವಾರ ನಿಧನರಾದರು. ಮೃತರಿಗೆ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವಿದೆ.



ಹುಬ್ಬಳ್ಳಿ: ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲ ಅವರ 101 ನೇ ಜಯಂತಿ ಅಂಗವಾಗಿ ನಗರದ ಇಂದಿರಾ ಗಾಜಿನ ಮನೆಯಲ್ಲಿರುವ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

ಸತ್ಕಾರ್ಯಗಳಿಂದ ಮನುಷ್ಯ ಸದಾ ಜೀವಂತ

• **ಧಾರವಾಡ:** ನಿಸ್ವಾರ್ಥ ಭಾವದಿಂದ ನಾಡಿನ ಅಭಿವೃದ್ಧಿಗೆ ದುಡಿದವರೇ, ಮಹಾನ್ ವ್ಯಕ್ತಿಗಳಾಗಿ ರೂಪಗೊಳ್ಳುತ್ತಾರೆ. ಮನುಷ್ಯನ ಮಾಡಿದ ಸತ್ಕಾರ್ಯಗಳಿಂದ ಜನಮಾನಸದಲ್ಲಿ ಉಳಿಯುವುದಾಗಿ ವಾಣಿಜ್ಯ ಮಂಡಳಿ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ ಹೇಳಿದರು.

ದಿ. ಆರ್.ಎಸ್.ಹೂಗಾರ ದತ್ತಿ ಅಂಗವಾಗಿ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ದಿ.ಆರ್.ಎಸ್.ಹೂಗಾರ ಸೇವಾರತ್ನ ಪ್ರಶಸ್ತಿ ಪ್ರದಾನ ಹಾಗೂ ಕಲಿಕಾರ್ಥಿ ಪ್ರೋತ್ಸಾಹಧನ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಶ್ರೇಷ್ಠ ವ್ಯಕ್ತಿಗಳಲ್ಲಿ ದಿ. ಆರ್.ಎಸ್.ಹೂಗಾರ ಸಹ ಒಬ್ಬರು. ಅವರ ಹೆಸರಲ್ಲಿ ಪ್ರಶಸ್ತಿ ಹಾಗೂ ಕಲಿಕಾರ್ಥಿ ಪ್ರೋತ್ಸಾಹಧನ ನೀಡುವುದರ ಮೂಲಕ ಅವರನ್ನು ಜೀವಂತ ಇರಿಸಿದ ಕಾರ್ಯ ಶ್ಲಾಘನೀಯ. ಇಂತಹ ಕಾರ್ಯಗಳು ಹೆಚ್ಚೆಚ್ಚು ನಡೆಯಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಲಿಂಗಮ್ಮ ಹೂಗಾರ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್.ಎಸ್.ಹರ್ಲಾಪೂರ, ವಿದ್ಯಾರ್ಥಿ ಜೀವನದಲ್ಲಿ ಬಡತನದ ಬೇಗೆಯಲ್ಲಿ ಬೆಂದಿದ್ದ ದಿ. ಆರ್.ಎಸ್.ಹೂಗಾರ ಕಷ್ಟಗಳು ಅನುಭವಿಸಿ, ಸಾಧನೆ ಮಾಡಿದ್ದಾರೆ ಎಂದು ಸ್ಮರಿಸಿದರು. ಸಮಾರಂಭದಲ್ಲಿ ಲೆಕ್ಕ ಪರಿಶೋಧಕ ಕೆ.ನಾಗರಾಜಗೆ 2026ನೇ ಸಾಲಿನ ದಿ. ಆರ್.ಎಸ್.ಹೂಗಾರ ಸೇವಾರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದೇ ವೇಳೆ ವಿವಿಧ ಶಾಲೆಯ ಏಳು ಜನ ಬಡ ವಿದ್ಯಾರ್ಥಿಗಳಿಗೆ ಕಲಿಕಾರ್ಥಿ ಪ್ರೋತ್ಸಾಹಧನ ನೀಡಲಾಯಿತು. ಸತೀಶ ತುರಮರಿ ಹಾಗೂ ಹೂಗಾರ ಬಂಧುಗಳ ಇದ್ದರು. ಡಾ.ಜಿನದತ್ತ ಹಡಗಲಿ ಸ್ವಾಗತಿಸಿದರು. ಪ್ರೊ. ಶಶಿಧರ ತೋಡಕರ ಪ್ರಾಸ್ತಾವಿಕ ನುಡಿದರು. ಶಂಕರ ಕುಂಬಿ ನಿರೂಪಿಸಿದರು. ಶಂಕರ ಹಲಗತ್ತಿ ಪರಿಚಯಿಸಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು.



ಧಾರವಾಡ:ದಿ. ಆರ್.ಎಸ್.ಹೂಗಾರ ದತ್ತಿ ಅಂಗವಾಗಿ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ದಿ.ಆರ್.ಎಸ್.ಹೂಗಾರ ಸೇವಾರತ್ನ ಪ್ರಶಸ್ತಿ ಪ್ರದಾನ ಹಾಗೂ ಕಲಿಕಾರ್ಥಿ ಪ್ರೋತ್ಸಾಹಧನ ವಿತರಣಾ ಸಮಾರಂಭದಲ್ಲಿ ಲೆಕ್ಕ ಪರಿಶೋಧಕ ಕೆ.ನಾಗರಾಜಗೆ 2026ನೇ ಸಾಲಿನ ದಿ. ಆರ್.ಎಸ್.ಹೂಗಾರ ಸೇವಾರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಾಣಿಜ್ಯ ಮಂಡಳಿ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ,ಲಿಂಗಮ್ಮ ಹೂಗಾರ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್.ಎಸ್.ಹರ್ಲಾಪೂರ, ಇತರರು ಇದ್ದರು.

142 ಕೋಟಿ ರೂ. ಆದಾಯದ ನಿರೀಕ್ಷೆ

1603.26 ಕೋಟಿ ರೂ.ಬಜೆಟ್ ಮಂಡನೆ

• **ಹುಬ್ಬಳ್ಳಿ:** ಸಪ್ತ ಸೂತ್ರಗಳ ಯೋಜನೆಗಳೊಂದಿಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಆಡಳಿತಾರೂಢ ಬಿಜೆಪಿ ಪಕ್ಷವು 2026-27ನೇ ಸಾಲಿನ ಆರ್ಥಿಕ ವರ್ಷಕ್ಕೆ 1603.26 ಕೋಟಿ ಗಾತ್ರದ ಬಜೆಟ್ ಅನ್ನು ನಗರದ ಪಾಲಿಕೆ ಸಭಾ ಭವನದಲ್ಲಿ ಮಂಡಿಸಿತು.

ಸೋಮವಾರ ತೆರಿಗೆ ನಿರ್ಧರಣೆ, ಹಣಕಾಸು ಹಾಗೂ ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ ವಂಟಮುರಿ ಅವರು 41.17 ಲಕ್ಷ ರೂ. ಉಳಿತಾಯ ಬಜೆಟ್ ಮಂಡಿಸಿದರು. 45 ನಿಮಿಷಗಳ ಕಾಲ ಸುದೀರ್ಘ ಬಜೆಟ್ ಪ್ರತಿ ಓದಿದ ಅವರು ಬಸವಣ್ಣವರ ವಚನಗಳನ್ನು ಉಲ್ಲೇಖಿಸಿದರು. ವಿರೋಧ ಪಕ್ಷದ ಸದಸ್ಯರು ಬೋಗಸ್ ಬಜೆಟ್ ಎಂದು ಹೇಳಿಕೆ ನೀಡಿದರು. ಬಹುಮತದೊಂದಿಗೆ ಸಭೆಯಲ್ಲಿ ಮೇಯರ್ ಜ್ಯೋತಿ ಪಾಟೀಲ ಅವರು ಬಜೆಟ್ ಅಂಗೀಕರಿಸಿದರು.

ಆದಾಯ ಕ್ರೂಢೀಕರಣ, ವಾರ್ಡ್ ವಿಕಾಸ ಯೋಜನೆ, ಪೌರಕಾರ್ಮಿಕರ ಕಲ್ಯಾಣಕೋಶ ರಚನೆ, ಕಲ್ಯಾಣ ಕಾರ್ಯಕ್ರಮಗಳು, ನಗರದಲ್ಲಿ ಎಲ್ ಇಡಿ ದೀಪಗಳು ಅಳವಡಿಕೆ, ಘನತ್ಯಾಜ್ಯ ನಿರ್ವಹಣೆ ಹಾಗೂ ಪರಿಸರ ರಕ್ಷಣೆ, ದಿನದ 24 ಗಂಟೆಗೆ ನಿರಂತರ ನೀರು ಸರಬರಾಜು ಸೇರಿ ಸಪ್ತ ಸೂತ್ರಗಳ ಮೂಲಕ ಸ್ವಾವಲಂಬಿ ಹಾಗೂ ಸದೃಢ ಅಭಿವೃದ್ಧಿಯಡೆಯ ಪಾಲಿಕೆ ಎಂಬ ಘೋಷವಾಕ್ಯ ಕಾರ್ಯ ರೂಪಕ್ಕೆ ತರುವ ಸಂಕಲ್ಪದಡಿ ಬಜೆಟ್ ಮಂಡಿಸಲಾಯಿತು.

ಕಳೆದ ವರ್ಷ 1512.67 ಕೋಟಿ ಬಜೆಟ್ ಮಂಡಿಸಲಾಗಿತ್ತು. ಸತತ ನಾಲ್ಕನೇ ಬಾರಿ 1 ಸಾವಿರ ಕೋಟಿ(1603.26 ಕೋಟಿ) ಬಜೆಟ್ ಮಂಡಿಸಿದ್ದು, ಇತಿಹಾಸ ಸೃಷ್ಟಿಸಿದೆ. ಪಾಲಿಕೆ ವಾರ್ಡ್‌ಗಳ ಅಭಿವೃದ್ಧಿಗೆ ಸದಸ್ಯರ ನಿಧಿ 120 ಕೋಟಿ ಮೀಸಲಿಡಲಾಗಿದ್ದು, ಪ್ರತಿ ಸದಸ್ಯರಿಗೆ 1.50 ಕೋಟಿ ನೀಡಲಾಗಿದೆ. ನಾಮನಿರ್ದೇಶಿತ ಸದಸ್ಯರಿಗೆ 50 ಲಕ್ಷ ಒಳಗೊಂಡಿದೆ. ಪಾಲಿಕೆ ವ್ಯಾಪ್ತಿಯ ಹಳ್ಳಿಗಳ ಅಭಿವೃದ್ಧಿಗೆ 11 ಕೋಟಿ, ನಗರ ಹೃದಯ ಭಾಗದಲ್ಲಿರುವ ಚೆನ್ನಮ್ಮ ವೃತ್ತದಲ್ಲಿ ಚೆನ್ನಮ್ಮ ಪುತ್ಥಳಿ ಮೇಲ್ದರ್ಜೆಗೇರಿಸಲು 5 ಕೋಟಿ ಮೀಸಲಿಡಿಸಲಾಗಿದೆ. ಪಾಲಿಕೆ ಆಸ್ತಿ ಸಮೀಕ್ಷೆ(ಜಿಐಎಸ್)ಗೆ 23.50 ಕೋಟಿ, ಮೇಯರ್, ಆಯುಕ್ತರಿಗೆ ತಲಾ 5 ಕೋಟಿ ಹಾಗೂ ಉಪಮೇಯರ್‌ಗೆ 3 ಕೋಟಿ ಮೀಸಲಿಡಲಾಗಿದೆ.



ಮಹಿಳೆಯರಿಗೆ ಪಿಂಕ್ ಆಟೋ

ಮಹಿಳೆಯರು ಸ್ವಾವಲಂಬಿಯಾಗಲು ಮಹಾನಗರ ಪಾಲಿಕೆ ಮೊಟ್ಟಮೊದಲ ಬಾರಿಗೆ ವಿನೂತನ ಪ್ರಯತ್ನಕ್ಕೆ ನಾಂದಿ ಹಾಡಿದ್ದು, ಪ್ರತಿ ವಾರ್ಡ್‌ಗೆ ಒಂದು ಪಿಂಕ್ ಇ-ಆಟೋ ಮಹಿಳೆಗೆ ನೀಡಲು ನಿರ್ಧರಿಸಲಾಗಿದೆ. ಇದಕ್ಕಾಗಿ 4.10 ಕೋಟಿ ಮೀಸಲಿಡಲಾಗಿದೆ. ವಿದ್ಯಾರ್ಥಿನಿಯರಿಗೆ ವಿದ್ಯಾಶ್ರೀ ಯೋಜನೆ ರೂಪಿಸಲಾಗಿದೆ. ಹೆಚ್ಚು ಅಂಕ ಗಳಿಸಿ ವಿದ್ಯಾರ್ಥಿನಿಯರಿಗೆ 25 ಸಾವಿರ ಬಹುಮಾನ ನೀಡಲು ಹಣ ಕಾಯ್ದಿರಿಸಲಾಗಿದೆ.

2025-26 ನೇ ಸಾಲಿನಲ್ಲಿ ಮಹಾನಗರ ಪಾಲಿಕೆ 186 ಕೋಟಿ ಆಸ್ತಿ ಸಂಗ್ರಹಿಸಿದೆ. ಈ ವರ್ಷ 333 ಕೋಟಿ ಆಸ್ತಿ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಪಾಲಿಕೆ ವ್ಯಾಪ್ತಿಯ 7 ಆಸ್ಪತ್ರೆಗಳ ನಿರ್ವಹಣೆಗೆ 5.42 ಕೋಟಿ ನಿಗಧಿ, ಧಾರವಾಡ ಆಸ್ಪತ್ರೆ ಅಭಿವೃದ್ಧಿ 50 ಲಕ್ಷ, ಹುಬ್ಬಳ್ಳಿ-ಧಾರವಾಡ ಆಸ್ಪತ್ರೆಯಲ್ಲಿ ಮಹಿಳಾ ಸಾಂತ್ವನ ಕೇಂದ್ರ ಸ್ಥಾಪನೆಗೆ 50 ಲಕ್ಷ ಮೀಸಲಿರಿಸಿದೆ.

ಜಿಐಎಸ್ ಸರ್ವೇ ಶೇ. 80 ರಷ್ಟು ಕಾಮಗಾರಿ ಮುಗಿದಿದ್ದು, ಇದರಿಂದ 2026-27 ನೇ ಸಾಲಿನ ಆಸ್ತಿ ತೆರಿಗೆ 333 ಕೋಟಿ ಆದಾಯ ಸಂಗ್ರಹಿಸುವ ಗುರಿ ಹೊಂದಿದೆ. ರೈಲ್ವೆ ಹಾಗೂ ವಿಮಾನ ನಿಲ್ದಾಣಗಳಿಂದ ಆಸ್ತಿ ತೆರಿಗೆ ಸಂಗ್ರಹಿಸುವುದು, 2745 ಆಸ್ತಿಗಳ ಲೀಸ್ ನೀಡಲಾಗಿದ್ದು, ಈಗಾಗಲೇ ಅವುಗಳ ಸರ್ವೇ ಕಾರ್ಯ ಕೈಗೊಂಡಿದ್ದು, ವಿಲೇವಾರಿ ಮಾಡಲು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದರಿಂದ 100 ಕೋಟಿ ಆದಾಯ ನಿರೀಕ್ಷಿಸಲಾಗಿದೆ. ವಾಣಿಜ್ಯ ಮಳಿಗೆಗಳಿಂದ ಬಾಡಿಗೆ 4.58 ಕೋಟಿ ಸಂಗ್ರಹವಾಗಿದ್ದು, 8 ಕೋಟಿ ನಿರೀಕ್ಷಿಸಲಾಗಿದೆ. ನೀರಿನ ಕರ ಬಡ್ಡಿ ಮನ್ನ ಮಾಡಿ ವಸೂಲಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, 142 ಕೋಟಿ ಆದಾಯದ ನಿರೀಕ್ಷೆ ಇದೆ.

> ಕೆಲವು ಪ್ರಸ್ತಾಪಗಳು ಸರ್ಕಾರ ಮಟ್ಟದಲ್ಲಿ ಬಾಕಿ ಉಳಿದಿವೆ. ಸರ್ವ ಪಕ್ಷದವರು ಒತ್ತಡ ತಂದು ಅನುಮತಿ ಪಡೆಯಬೇಕು. ಉತ್ತಮ ಬಜೆಟ್ ಆಗಿದ್ದು ರಾಜ್ಯದ ಯಾವ ಪಾಲಿಕೆ ಇಡಲಾರದ ಹೆಜ್ಜೆ ನಾವು ಇಟ್ಟಿದ್ದೇವೆ. ಬಜೆಟ್‌ನಲ್ಲಿ ಘೋಷಿಸಿ ಯೋಜನೆ ತಕ್ಷಣ ಅನುಷ್ಠಾನ ಮಾಡಿ.
> ■ ವೀರಣ್ಣ ಸವಡಿ, ಹಿರಿಯ ಸದಸ್ಯ ಬಿಜೆಪಿ

> ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಪಿಂಕ್ ಇ ಆಟೋ ಬಹಳ ಅನುಕೂಲವಾಗಲಿದೆ. ಇದು ಸಪ್ತ ಸೂತ್ರಗಳ ಬಜೆಟ್ ಆಗಿದೆ.
> ■ ಚಂದ್ರಿಕಾ ಮೇಸ್ತ್ರಿ, ಸದಸ್ಯೆ

ಬಜೆಟ್‌ನ ಪ್ರಮುಖ ಅಂಶಗಳು

- ಪೌರ ಕಾರ್ಮಿಕ ಮಕ್ಕಳಿಗೆ ಲ್ಯಾಪಟಾಪ್ ನೀಡಲು, ಪ್ರತಿಭಾನ್ವಿತ ಕ್ರೀಡಾ ಪಟುಗಳಿಗೆ ಸಹಾಯ ಧನ, ಸೈನಿಕರ ಮಕ್ಕಳ ವಿದ್ಯಾಭಾಸಕ್ಕೆ ಸೇರಿ ತಲಾ 5 ಲಕ್ಷ
- ಪಾಲಿಕೆ ಸದಸ್ಯರು, ಮಾಧ್ಯಮ ಮಿತ್ರರ ಆರೋಗ್ಯ ವಿಮೆಗೆ 80 ಲಕ್ಷ
- ಧಾರವಾಡ ಕಿತ್ತೂರ ಚೆನ್ನಮ್ಮ ಉದ್ಯಾನವನಕ್ಕೆ ಅಭಿವೃದ್ಧಿಗೆ 2 ಕೋಟಿ, ಚಿಟಗುಪ್ಪಿ ಉದ್ಯಾನವನಕ್ಕೆ 1 ಕೋಟಿ
- ನೂತನ ಪಾಲಿಕೆ ಸಭಾ ಭವನದಕ್ಕೆ 5 ಕೋಟಿ
- ಚನ್ನಮ್ಮ ವೃತ್ತದಲ್ಲಿ ಚೆನ್ನಮ್ಮ ಪುತ್ಥಳಿ ಮೇಲ್ದರ್ಜೆಗೇರಿಸಲು 5 ಕೋಟಿ

> ಕಳೆದ ವರ್ಷ ಬಜೆಟ್‌ನಲ್ಲಿ ಮಂಡಿಸಿ ಅನೇಕ ಯೋಜನೆಗಳು ಅನುಷ್ಠಾನವಾಗಿಲ್ಲ, ಪ್ರಸ್ತುತ ವರ್ಷ ಪಾಲಿಕೆಯಿಂದ ಅವಳಿನಗರ ಅಭಿವೃದ್ಧಿ ವಿಶೇಷ ಪ್ಯಾಕೇಜ್ ಜನ ನಿರೀಕ್ಷಿಸಿದ್ದು ಹುಸಿಯಾಗಿದೆ. ವಿರೋಧ ಪಕ್ಷ ನಾಯಕರಿಗೆ 3 ಕೋಟಿ ನೀಡಬೇಕಿತ್ತು. ಬಾರದ ಅನುದಾನ ಮೇಲೆ ಹೆಚ್ಚು ಅವಲಂಬಿತವಾಗಿದ್ದು, ಇದು ಬೋಗಸ್ ಬಜೆಟ್.
> ■ ಇಮ್ರಾನ್ ಯಲಿಗಾರ, ವಿರೋಧ ಪಕ್ಷದ ನಾಯಕ

> ಬಜೆಟ್ ಸತ್ಯಾಂಶದಿಂದ ಕೂಡಿದೆ. ಸದಸ್ಯರ ನಿಧಿ ಹೆಚ್ಚಿಸಲಾಗಿದೆ. ಪಾಲಿಕೆಯಿಂದ 1500 ಕೋಟಿ ಜಿಎಸ್‌ಟಿ ಸರ್ಕಾರಕ್ಕೆ ನೀಡಲಾಗಿದ್ದು, ಒಂದು ರೂಪಾಯಿ ನಮಗೆ ಬಂದಿಲ್ಲ. ವಿದ್ಯಾಶ್ರೀ ಯೋಜನೆ ಸರ್ಕಾರಿ ಕನ್ನಡ ಶಾಲೆಯ ವಿದ್ಯಾರ್ಥಿನಿಯರಿಗೆ ನೀಡಬೇಕು.
> ■ ಈರೇಶ ಅಂಚಟಗೇರಿ, ಸಭಾ ನಾಯಕ

> ನಮ್ಮ ವಾರ್ಡ್‌ನಲ್ಲಿಯ ಸಾರ್ವಜನಿಕ ಶೌಚಾಲಯದ ಟೈಲ್ಸ್ ಕಿತ್ತು ಹೋಗಿರುವ, ನೀರಿನ ಸೌಲಭ್ಯ ಇಲ್ಲದಿರುವ ಬಗ್ಗೆ ಅಧಿಕಾರಿಗಳಲ್ಲಿ ವಿಚಾರಿಸಿದರೆ ಫಂಡ್ಸ್ (ಹಣ) ಇಲ್ಲ ಎಂದು ಉತ್ತರಿಸುತ್ತಾರೆ. ಪರಿಸ್ಥಿತಿ ಹೀಗೆ ಎನ್ನುವುದಾದರೆ 1603 ಕೋಟಿ ರೂ. ಬಜೆಟ್ ಮಾಡಿ ಏನು ಪ್ರಯೋಜನ?
> ■ ದೀಪಾ ನೀರಲಕಟ್ಟಿ, ಕಾಂಗ್ರೆಸ್ ಸದಸ್ಯೆ.

> ನಾಲಾಗಳ ಅಭಿವೃದ್ಧಿಯಾಗಬೇಕು. ತೆಗ್ಗು-ಗುಂಡಿ ಮುಚ್ಚಲು ಇನ್ನೂ ಹೆಚ್ಚಿನ ಅನುದಾನ ನೀಡಬೇಕಿತ್ತು. ವಸತಿ ಪ್ರದೇಶದಲ್ಲಿ ವಾಣಿಜ್ಯ ಮಳಿಗೆ ಸ್ಥಾಪಿಸಿದರೆ ಅವರಿಂದ ತೆರಿಗೆ ವಸೂಲಿ ಮಾಡಬೇಕು.
> ■ ಸುವರ್ಣ ಕಲ್ಲಕುಂಟ್ಲಾ ಹಿರಿಯ ಸದಸ್ಯೆ, ಕಾಂಗ್ರೆಸ್.

ಲಕ್ಷ್ಮೇಶ್ವರ-ಸವದತ್ತಿ ಯಲ್ಲಮ್ಮನ ಗುಡ್ಡಕ್ಕೆ ಬಸ್ ಸೇವೆ ಆರಂಭಿಸಲು ಮನವಿ

• **ಕುಂದಗೋಳ:** ಲಕ್ಷ್ಮೇಶ್ವರ ಬಸ್ ಘಟಕದಿಂದ ಕ್ಷೇತ್ರ ಸವದತ್ತಿ ಯಲ್ಲಮ್ಮನ ಗುಡ್ಡಕ್ಕೆ ನೇರ ಬಸ್ ಸೇವೆ ಆರಂಭಿಸುವಂತೆ ತಾಲೂಕಿನ ವಿವಿಧ ಗ್ರಾಮಗಳ ಎಲ್ಲಮ್ಮ ಭಕ್ತರು ಮನವಿ ಸಲ್ಲಿಸಿದರು.

ಪಟ್ಟಣದ ವಿವಿಧ ಇಲಾಖೆಗಳ ಸಂಕೀರ್ಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಜನತಾದರ್ಶನ ಕಾರ್ಯಕ್ರಮ ದಲ್ಲಿ ಸೋಮವಾರ ಸಮಿತಿಯ ತಾಲೂಕು ಅಧ್ಯಕ್ಷ ಸತೀಶ ಕೊಬ್ಬಯ್ಯನವರ ಅವರಿಗೆ ಭಕ್ತರು ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ಮನವಿ ಸ್ವೀಕರಿಸಿ ಸತೀಶ ಕೊಬ್ಬಯ್ಯ ಅವರು ಮಾತನಾಡಿ, ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಾರಿಗೆ ಸಚಿವರ ಗಮನಕ್ಕೆ ತಂದು ಬಹುದಿನಗಳ ಬೇಡಿಕೆಯಾದ ಲಕ್ಷ್ಮೇಶ್ವರದಿಂದ ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡಕ್ಕೆ ಬಸ್ ಓಡಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ರಾಮಗಿರಿ, ಪಶುಪತಿಹಾಳ, ಸಂಶಿ, ಶಿರೂರು, ಕುಂದಗೋಳ, ಗುಡೇನಕಟ್ಟಿ, ನಾಗರಹಳ್ಳಿ, ಮಂಟೂರ, ಕುಸುಗಲ್, ಬ್ಯಾಹಟ್ಟಿ, ತಿರ್ಲಾಪುರ ಹಾಗೂ ಅಳಗವಾಡಿ ಮಾರ್ಗವಾಗಿ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ.

ಬಸವರಾಜ ಯೋಗಪ್ಪನವರ, ಚಂದ್ರಶೇಖರ ಹರ್ತಿ, ಚನ್ನಬಸಪ್ಪ ಸಿದ್ದನವರ, ಪಾಂಡುರಂಗ ಬಡಿಗೇರ, ಫಕೀರಪ್ಪ ಮೂಲಿಮನಿ, ಗಂಗಪ್ಪ ನಾಗರಹಳ್ಳಿ ಸೇರಿದಂತೆ ಅನೇಕ ಭಕ್ತರು ಉಪಸ್ಥಿತರಿದ್ದರು.



ಇಂದು ತ್ಯಾಜ್ಯ ವಿಲೇವಾರಿ ಪಾದಯಾತ್ರೆ



• **ಧಾರವಾಡ:** ಹೊಸ ಯಲ್ಲಾಪುರದ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ನಡೆದ ಬೆಂಕಿ ಅನಾಹುತ ತಡೆಗೆ ಒತ್ತಾಯಿಸಿ 'ಪರಿಸರಕ್ಕಾಗಿ ನಾವು ಸಂಘಟನೆ' ಮಾ.17ರಂದು ಪಾದಯಾತ್ರೆ ಹಮ್ಮಿಕೊಂಡಿದೆ ಎಂದು ಸಂಘಟನೆ ಅಧ್ಯಕ್ಷ ರಾಜೇಂದ್ರ ಪೋದ್ದಾರ್ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಿಗ್ಗೆ 10ಕ್ಕೆ ತ್ಯಾಜ್ಯದ ಘಟಕದಿಂದ ಆರಂಭವಾಗುವ ಪಾದಯಾತ್ರೆ ಬಾಗಲಕೋಟಿ ಪೆಟ್ರೋಲ್ ಪಂಪ್, ಕೋರ್ಟ್ ಸರ್ಕಲ್, ಜ್ಯುಬ್ಲಿ ವೃತ್ತದ ಮೂಲಕ ಪಾಲಿಕೆಯ ಕಚೇರಿ ತಲುಪಲಿದೆ ಎಂದರು.

ಇದಕ್ಕೂ ಮುನ್ನ ಬೆಳಿಗ್ಗೆ 9.30ಕ್ಕೆ ಸಂಘಟನೆಯ ರಾಜ್ಯಾಧ್ಯಕ್ಷ ಎ.ಟಿ.ರಾಮಸ್ವಾಮಿ ಹಾಗೂ ನಿಡಸೋಸಿ ನಿಜಲಿಂಗೇಶ್ವರ ಸ್ವಾಮೀಜಿ ಮಾತನಾಡಿದ ಬಳಿಕ ಶಾಶ್ವತ ಪರಿಹಾರ ಕಲ್ಪಿಸುವಂತೆ ಒತ್ತಾಯಿಸಿ ಆಯುಕ್ತರಿಗೆ ಮನವಿ ಸಲ್ಲಿಸುವುದಾಗಿಯೂ ಹೇಳಿದರು.

ಹೊಸಯಲ್ಲಾಪುರದ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ತ್ಯಾಜ್ಯ ಸಮರ್ಪಕವಾಗಿ ತ್ಯಾಜ್ಯ ವಿಲೇವಾರಿ ಮಾಡುವಲ್ಲಿ ಪಾಲಿಕೆ ವಿಫಲವಾದ ಪರಿಣಾಮವೇ ಘಟಕದಲ್ಲಿ ಆಗಾಗ್ಗೆ ಬೆಂಕಿ ಹೊತ್ತಿಕೊಂಡು ಜನರ ಜೀವನಕ್ಕೆ ಕುತ್ತು ತರುತ್ತಿದೆ ಎಂದ ಕಳವಳ ವ್ಯಕ್ತಪಡಿಸಿದರು.

ಮಹಾನಗರ ಪಾಲಿಕೆ ಅಧಿಕಾರಿಗಳು ಸಮಸ್ಯೆ ಗಂಭೀರವಾಗಿ ಪರಿಗಣಿಸಿ, ತ್ಯಾಜ್ಯ ವಿಲೇವಾರಿಗೆ ಶಾಶ್ವತ ಪರಿಹಾರ ಅನುಷ್ಠಾನಿಸಬೇಕು. ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ಬೃಹತ್ ಜನಾಂದೋಲನ ರೂಪಿಸುವುದಾಗಿ ಡಾ. ಪೋದ್ದಾರ್ ಎಚ್ಚರಿಕೆ ನೀಡಿದರು. ಮಹಾದೇವ ಹೊರಟ್ಟಿ, ನಾಗರಾಜ ತಿಮ್ಮಾಪುರ, ಮಾಧುರಿ ಚಿಕ್ಕೋಡಿ, ಅರುಣಾ ಹಳ್ಳಿಕೇರಿ, ನಿರ್ಮಲಾ ಹಿರೇಗೌಡರ ಇದ್ದರು.

ಧೈರ್ಯವಾಗಿ ಪರೀಕ್ಷೆ ಎದುರಿಸಿ

• **ಹುಬ್ಬಳ್ಳಿ:** ವಿದ್ಯಾರ್ಥಿಗಳು ಪರೀಕ್ಷೆ ಭಯ ಬಿಟ್ಟು, ಪೂರ್ವ ತಯಾರಿ ಇಂದ ಧೈರ್ಯವಾಗಿ ಪರೀಕ್ಷೆ ಬರೆಯಬೇಕು ಎಂದು ಖ್ಯಾತ ಮನೋವೈದ್ಯ ಡಾ. ಅಭಯ ಮಠಕರ ತಿಳಿಸಿದರು.

ನಗರದ ಗೋಕುಲ್ ರಸ್ತೆ ಕುಮಾರ್ ಪಾರ್ಕ್‌ದಲ್ಲಿರುವ ರೋಟರಿ ಸರಸ್ವತಿ ವಿದ್ಯಾಲಯದ ಎಸ್ ಎಸ್ ಎಲ್ ಸಿ ಮಕ್ಕಳನ್ನು ಉದ್ದೇಶಿಸಿ ಪರೀಕ್ಷಾ ತಯಾರಿ ಕುರಿತು ಏರ್ಪಡಿಸಿದ ಕಾರ್ಯಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ಜೀವನದಲ್ಲಿ ಹಲವಾರು ಸವಾಲು ಹಾಗೂ ಸಮಸ್ಯೆಗಳು ಎದುರಾಗುತ್ತವೆ. ಅವೆಲ್ಲವನ್ನೂ ನಾವು ಸಮಚಿತ್ತದಿಂದ, ಶಾಂತವಾಗಿ, ಭಯವಿಲ್ಲದೆ ಶಿಸ್ತಿನಿಂದ ಪೂರ್ವ ತಯಾರಿ ನಡೆಸಿ ಎದುರಿಸಿದಾಗ ಮಾತ್ರ ಯಶಸ್ವಿಯಾಗಲು ಸಾಧ್ಯ ಎಂದರು. ಜೊತೆಗೆ ನಮ್ಮ ದಿನಚರಿಯಲ್ಲಿ ವ್ಯಾಯಾಮ ಮಾಡುವುದು, ಶಿಸ್ತು ಪಾಲನೆ ,ಸಮಯ ಪಾಲನೆ ಹಾಗೂ ಉತ್ತಮ ಆಹಾರ ಸೇವಿಸುವ ಮೂಲಕ ಆರೋಗ್ಯವಂತ ವಾಗಿರಲು ಪ್ರಯತ್ನಿಸಬೇಕು ಎಂದು ತಿಳಿಸಿದರು.

ರೋಟರಿ ಸರಸ್ವತಿ ವಿದ್ಯಾಲಯದ ಅಧ್ಯಕ್ಷ ಲಿಂಗರಾಜ ಪಾಟೀಲ ಇವರು ಅಧ್ಯಕ್ಷತೆಯನ್ನು ವಹಿಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಶುಭ ಹಾರೈಸಿದರು.

ಪ್ರಾಂಶುಪಾಲೆ ಕೀರ್ತಿ ದೇಶಪಾಂಡೆ, ಶಿಕ್ಷಕರುಗಳಾದ ಸಂಜೀವ ಕುಮಾರ, ರಜನಿ ಹಾಗೂ ಇತರರು ಉಪಸ್ಥಿತರಿದ್ದರು.



ಎಲ್ಲ ಸಮಾಜದ ಅಭಿವೃದ್ಧಿಗೆ ಶ್ರಮ: ಶಾಸಕ ಕೋನರಡ್ಡಿ

• **ನವಲಗುಂದ:** ಯುಗಾದಿ ಹಬ್ಬಕ್ಕೆ ಮಠ ಮಂದಿರ ಪಟ್ಟಿ ನೀಡುವೆ ಕ್ಷೇತ್ರದ ಸಣ್ಣ ಸಮಾಜದಿಂದ ಹಿಡಿದು ದೊಡ್ಡ ಸಮಾಜದ ಅಭಿವೃದ್ಧಿ ಶ್ರಮಿಸಿದ್ದೇನೆ. ನಿಮ್ಮ ಸೇವೆಗೆ ಅವಕಾಶ ಹಾಗೂ ಆಶೀರ್ವಾದ ಹೀಗೆ ಇರಲಿ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.



ಅವರು ಶಾದಿಮಹಲ್ ಉನ್ನತಿಕರಣದ 25 ಲಕ್ಷ ಕಾಮಗಾರಿ ಪೂಜೆ ಹಾಗೂ 35 ಕೋಟಿ ರೂ. ಅನುದಾನದ ಆದೇಶ ಪ್ರತಿ ವಿತರಣಾ ಸಮಾರಂಭ ಹಾಗೂ ಇಫ್ತಿಯಾರ್ ಕೂಟದ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಕ್ಷೇತ್ರದ ಕಾಮಗಾರಿಗಳಿಗೆ ಅಂಕಿ ಅಂಶ ಹಾಗೂ ಸಾಕ್ಷಿ ಸಮೇತ ಕಾರ್ಯನಿರ್ವಹಿಸುತ್ತೇನೆ ವದಂತಿಗಳಿಗೆ ಕಿವಿಗೊಡದಿರಲಿ ಪ್ರಾಮಾಣಿಕ ಸೇವೆ ನನ್ನ ಗುರಿ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹುಡಾ ಅಧ್ಯಕ್ಷ ಶಾಕೀರ ಸನದಿ ಮಾತನಾಡಿ ಶಾಸಕ ಎನ್.ಎಚ್. ಕೋನರಡ್ಡಿ ಕಾರ್ಯ ವೈಖರಿ ಇತರರಿಗೂ ಮಾದರಿಯಾದಂತ ಕೆಲಸಗಳನ್ನು ಮಾಡುತ್ತಿದ್ದು, ಅಲ್ಪಸಂಖ್ಯಾತರ ಬಗ್ಗೆ ಅವರ ಕಾಳಜಿಗೆ ನಾನೇ ಉದಾಹರಣೆ ಎಂದರು.

ಕಾಂಗ್ರೆಸ್ ಮುಖಂಡ ಉಸ್ಮಾನ್ ಬಬರ್ಚಿ ಮಾತನಾಡಿ ಚುನಾವಣೆ ವೇಳೆ ನಾವು ನಿಮ್ಮ ಜೊತೆಗೆ ಇರುತ್ತವೆ ಅಂತಾ ಹೇಳತಾರ ಅವರನ್ನ ನಂಬಬೇಡಿ, ಸದಾಕಾಲವು ನಮ್ಮ ಜೊತೆಯಲ್ಲಿ ಇದ್ದು ಸಮಾಜದ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ ನಿಮಗೆ ನಾವು ಸದಾ ಬೆಂಬಲ ನೀಡುತ್ತವೆ ನಮ್ಮ ಕ್ಷೇತ್ರದಿಂದ ಮತ್ತೊಮ್ಮೆ ಗೆಲ್ಲಿಸಿ ಸಚಿವರನ್ನಾಗಿ ಮಾಡುತ್ತೀವೆ ಎಂದರು.

ಹುಡಾ ಅಧ್ಯಕ್ಷ ಶಾಕೀರ ಸನದಿ ಹಾಗೂ ಶಾಸಕ ಎನ್.ಎಚ್. ಕೋನರಡ್ಡಿ ಸನ್ಮಾನಿಸಿ ಗೌರವಿಸಿದರು.

ಈ ವೇಳೆ ಅಂಜುಮನ್ ಸಂಸ್ಥೆಯ ಅಧ್ಯಕ್ಷ ಅಲ್ಲಾಸಾಬ್ ಕಲ್ಲಕುಟ್ರಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವರ್ಧಮಾನಗೌಡ ಹಿರೇಗೌಡರ, ಸಿಪಿಐ ರವಿ ಕಪ್ಪತ್ತನವರ, ಪುರಸಭೆ ಮುಖ್ಯಾಧಿಕಾರಿ ಶರಣು ಪೂಜಾರ, ಮುಖಂಡರಾದ ಉಸ್ಮಾನ ಬಬರ್ಚಿ, ಆನಂದ ಹವಳಕೊಡ, ಅಬ್ಬಾಸ್ ದೇವರಿಡು, ಸಿರಾಜ್ ಧಾರವಾಡ, ಶಿವಾನಂದ ತಡಸಿ, ಅನ್ವರ ಮೂಲಿಮನಿ, ಕಾಶೀಮಸಾಬ ಅಲ್ಲಿಬಾಯಿ, ಅಸ್ಫಕ್ ಚಾಹುಸೇನರ, ಅಮಾನುಲ್ಲಾ ಖಾಜಿ, ಬಾಬರ ದಫೇದಾರ, ಸುಬಾನ ಬೇಪಾರಿ, ಐ.ಡಿ.ಬಾಗವಾನ, ಎ.ಎಮ್. ನದಾಫ್ ಉಪಸ್ಥಿತರಿದ್ದರು.

ಪ್ರತಿ ಕ್ಷೇತ್ರದಲ್ಲೂ ಮಹಿಳೆ ಮುಂಚೂಣಿ

• **ಅಣ್ಣಿಗೇರಿ:** ಪ್ರತಿಯೊಂದು ಕ್ಷೇತ್ರದಲ್ಲಿ ದಾಪುಗಾಲು ಹಾಕುತ್ತಿರುವ ಸ್ತ್ರೀಯರು ನಮ್ಮ ಸಮಾಜದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ ಎಂದು ಸುಮಿತ್ರ ಹುಣಸಿಮರದ ಹೇಳಿದರು.

ಪಂಪ ನಗರದ ಮಾರುತಿ ದೇವಸ್ಥಾನದಲ್ಲಿ ಪಂಪ ನಗರದ ಮಹಿಳಾ ಬಳಗದಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉದ್ದೇಶಿಸಿ ಉಪನ್ಯಾಸ ಮಾಡಿದರು.

ಉಮಾ ಕಮ್ಮಾರ್ ಅಧ್ಯಕ್ಷತೆ ವಹಿಸಿದ್ದರು. ಉಮಾ ಕಣವಿ ಉದ್ಘಾಟಿಸದರು. ಡಾ. ಸುಧಾ ಕೌಜಗೇರಿ ಪ್ರಾಸ್ತಾವಿಸಿದರು. ಕವಿತಾ ಬಿರಸಲ್, ಉಮಾ ಕಮ್ಮಾರ್, ಮಂಜುಳಾ ಹೊಳೆಯನ್ನವರ್ ಹಾಡುಗಳನ್ನು ಹಾಡಿದರು. ರಾಜೇಶ್ವರಿ ಚಿಕ್ಕಮಠ ಏಕಪಾತ್ರ ಅಭಿನಯ ಮಾಡಿದರುಮ ಸವಿತಾ ಡಬರಿ ತಾಯಿಯ ಬಗ್ಗೆ ಸ್ವರಚಿತ ಕವನ ಹೇಳಿದರು. ಮಹಿಳೆಯರು ಕೋಲಾಟ ಆಡಿ ಸಂಭ್ರಮಿಸಿದರು. ಚಿಕ್ಕ ಮಕ್ಕಳಾದ ಕ್ಷಮ್ಯ ಅಮೃತ ಸಾಕ್ಷಿ ಅಮೃತ ಡಬರಿ ಪ್ರಗತಿ ವಚನವಾಚನ ಮಾಡಿದರು. ಯಶೋಧ ಹೊಳೆಯನ್ನವರ್, ಸಾವಿತ್ರಿ ಹರ್ಲಾಪುರ್, ಶಿವಲೀಲಾ ಗೌಡಪ್ಪಗೌಡರ್ ಮಂಜುಳಾ ಚಾಕಲಬ್ಬಿ, ರೇಣುಕಾ ಬರ್ದೂರ್, ಮಂಜುಳಾ ಪಾಟೀಲ್ ಇತರರಿದ್ದರು. ಸವಿತಾ ಡಬರಿ ನಿರೂಪಿಸಿದರು. ಜಯಶ್ರೀ ಹಿರೇಮಠ ಪ್ರಾರ್ಥಿಸಿದರು. ಡಾ. ಗೀತಾ ಹರ್ಲಾಪುರ್ ಸ್ವಾಗತಿಸಿದರು.



ಅಮ್ಮಿನಬಾವಿಯಲ್ಲಿ ಬುತ್ತಿ ಜಾತ್ರೆಯ ಸಂಭ್ರಮ

• **ಉಪ್ಪಿನಬೆಟಗೇರಿ:** ಧಾರವಾಡ ತಾಲೂಕಿನ ಅಮ್ಮಿನಬಾವಿ ಗ್ರಾಮದ ಸಂಸ್ಥಾನ ಪಂಚಗೃಹ ಹಿರೇಮಠದ ಕರ್ತೃ ಶ್ರೀಗುರುಶಾಂತಲಿಂಗ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದಿರುವ ಮಹಾದಾಸೋಹಿ ಶ್ರೀಕಲಬುರ್ಗಿ ಶರಣಬಸವೇಶ್ವರರ ಪುರಾಣ ಪ್ರವಚನದ ಸಾಂದರ್ಭಿಕ ಸನ್ನಿವೇಶಕ್ಕೆ ಅನುಗುಣವಾಗಿ ಭಾನುವಾರ ಅಮ್ಮಿನಬಾವಿಯಲ್ಲಿ ಬುತ್ತಿ ಜಾತ್ರೆಯ ಸಂಭ್ರಮ ಹಬ್ಬದ ವಾತಾವರಣವನ್ನು ನಿರ್ಮಾಣ ಮಾಡಿತ್ತು.

'ಮಹಾದಾಸೋಹಿ' ಎಂದೇ ಪ್ರಸಿದ್ಧವಾಗಿರುವ ಶ್ರೀಕಲಬುರ್ಗಿ ಶರಣಬಸವೇಶ್ವರರ ಹೆಸರಿನಲ್ಲಿ ವಿಶಿಷ್ಟ ದಾಸೋಹ ಸೇವೆಗೈಯಲು ಅಮ್ಮಿನಬಾವಿ, ಮರೇವಾಡ, ತಿಮ್ಮಾಪೂರ, ಕರಡಿಗುಡ್ಡ, ಕೌಲಗೇರಿ, ಚಂದನಮಟ್ಟಿ ಗ್ರಾಮಗಳೂ ಸೇರಿದಂತೆ ಧಾರವಾಡ ನಗರದಿಂದಲೂ ಮಾತೆಯರು ಬುತ್ತಿಯೊಂದಿಗೆ ವಿಶೇಷ ಖಾದ್ಯಗಳನ್ನು ಬುಟ್ಟಿಯಲ್ಲಿ ಹೊತ್ತು ತಂದಿದ್ದರು.

ಬುತ್ತಿ ಮೆರವಣಿಗೆ: ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಶ್ರೀಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಸವದತ್ತಿ ಮೂಲಿಮಠದ ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಸಾವಿರಾರು ಮಹಿಳೆಯರು ಹೊತ್ತು ತಂದಿದ್ದ ಬುತ್ತಿಬುಟ್ಟಿಗಳ ಮೆರವಣಿಗೆ ಸವದತ್ತಿ ಮುಖ್ಯ ರಸ್ತೆಯ ಅಮ್ಮಿನಬಾವಿ ಬಸ್ ನಿಲ್ದಾಣದಿಂದ ಆರಂಭಗೊಂಡು ಗ್ರಾಮದ ಎಲ್ಲ ಪ್ರಮುಖ ಓಣಿಗಳಲ್ಲಿ ಅತ್ಯಂತ ಸಡಗರದಿಂದ ಜರುಗಿತು. ರೈತ ಮಹಿಳೆಯರು ಭಕ್ತಿಯ ಬದ್ಧತೆಯಲ್ಲಿ ಹೊತ್ತು ತಂದ ಮೊಸರನ್ನದ ಬುತ್ತಿಯ ಜೊತೆಗೆ ಹುರಕ್ಕಿ ಹೋಳಿಗೆ, ಹೂರಣದ ಹೋಳಿಗೆ, ಸಜ್ಜಕದ ಹೋಳಿಗೆ, ಶೇಂಗಾ ಹೋಳಿಗೆ, ಸುರುಳಿ ಹೋಳಿಗೆ, ಗಾರಿಗೆ, ಕರ್ಚಿಕಾಯಿ, ಬುಂದೆ ಉಂಡಿ, ಜಿಲೇಬಿ, ಹೂರಣದ ಕಡಬು, ಜೋಳದ ಉಂಡಿಗಡಬು, ಕಿಚಡಿ, ಹಲವಾರು ವಿಧದ ಚಟ್ನಿ, ವಿವಿಧ ಕಾಳುಪಲ್ಯ, ತರಕಾರಿಯ ಪಲ್ಯ, ಸಜ್ಜೆ ರೊಟ್ಟಿ, ಜೋಳದ ರೊಟ್ಟಿ, ಚಪಾತಿ ದಾಸೋಹ ಸೇವೆಗೆ ಸಮರ್ಪಿತಗೊಂಡವು.



ಅಕ್ಕಿಪ್ರಸಾದ ಆಶೀರ್ವಾದ: ದಾಸೋಹ ಸೇವೆಯ ನಂತರ ಬುತ್ತಿಯನ್ನು ಹೊತ್ತು ತಂದ ಪ್ರತಿಯೊಬ್ಬ ರೈತ ಮಹಿಳೆಯರ ಬುಟ್ಟಿಗಳಿಗೆ ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಶ್ರೀಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ತಮ್ಮ ಕೃಪಾಹಸ್ತದಿಂದ ಒಂದು ಮುಷ್ಟಿ ಅಕ್ಕಿ ಪ್ರಸಾದ ನೀಡಿ, 'ಸದಾ ಕಾಲವೂ ಧಾನ್ಯ ಸಂಪತ್ತು ಸಮೃದ್ಧಿಯಾಗಲಿ, ಎಲ್ಲರ ಬಾಳು ಬಲಿಯಲಿ' ಎಂಬ ಕೃಪಾವಾಣಿಯೊಂದಿಗೆ ಆಶೀರ್ವಾದ ಮಾಡಿದರು. ಅಮ್ಮಿನಬಾವಿ, ಮರೇವಾಡ, ತಿಮ್ಮಾಪೂರ, ಕರಡಿಗುಡ್ಡ, ಕೌಲಗೇರಿ, ಚಂದನಮಟ್ಟಿ ಗ್ರಾಮಗಳ ಅನೇಕ ಗಣ್ಯರು ಪಾಲ್ಗೊಂಡಿದ್ದರು.

ಕಿರುಸುದ್ದಿ

ಆಲಿಕಲ್ಲು ಸಹಿತ ಭಾರೀ ಮಳೆ



ಸಿಂಧನೂರು : ನಗರ ಸೇರಿದಂತೆ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಸೋಮವಾರ ಆಲಿಕಲ್ಲು ಸಹಿತ ಭಾರೀ ಮಳೆಯಾಗಿದೆ.ಸೋಮವಾರ ಮಧ್ಯಾಹ್ನ 4 ಗಂಟೆಯಿಂದ ಮೋಡ ಕವಿದ ವಾತಾವರಣ ನಿರ್ಮಾಣವಾಗಿತ್ತು. ಸಂಜೆ 5 ಗಂಟೆ ಸುಮಾರಿಗೆ ಮಳೆ ಆರಂಭವಾಗಿ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿಯಿತು. ಬಿರುಬಿಸಿಯಿಂದ ಕಂಗೆಟ್ಟಿದ್ದ ಜನರು ಏಕಾಏಕಿ ಸುರಿದ ಮಳೆಯಿಂದ ಸ್ವಲ್ಪ ಮಟ್ಟಿಗೆ ಸಂತಸಪಟ್ಟರು.ಮಳೆ ಜೊತೆಗೆ ಸುರಿದ ಆಲಿಕಲ್ಲುಗಳು ಕೆಲವೇ ನಿಮಿಷಗಳಲ್ಲಿ ನೆಲದ ಮೇಲೆ ರಾಶಿಯಾಗಿ ಸಂಗ್ರಹಗೊಂಡಿದ್ದವು. ಕೆಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡು ಜನರು ತೊಂದರೆ ಅನುಭವಿಸಿದರು. ಸೋಮವಾರ ಸುರಿದ ಮಳೆಯಿಂದ ಜೋಳ ಬೆಳೆದ ರೈತರು ಆತಂಕಗೊಂಡಿದ್ದಾರೆ. ಕಳೆದ ಕೆಲವು ದಿನಗಳಿಂದ ಕಟಾವು ಮಾಡಿದ ಜೋಳವನ್ನು ಮನೆ ಮುಂದೆ ಹಾಗೂ ವಿವಿಧ ಕಡೆಗಳಲ್ಲಿ ಸಂಗ್ರಹಿಸಿ ಇಟ್ಟಿದ್ದರಿಂದ ಅದನ್ನು ಕಾಪಾಡಿಕೊಳ್ಳಲು ರೈತರು ಸಾಹಸಪಟ್ಟರು. ಖರೀದಿ ಕೇಂದ್ರಗಳು ಇನ್ನೂ ಆರಂಭವಾಗದ ಹಿನ್ನೆಲೆಯಲ್ಲಿ ಸರ್ಕಾರದ ವಿರುದ್ಧ ಜೋಳ ಬೆಳೆಗಾರರು ಅಸಮಾಧಾನ ವ್ಯಕ್ತಪಡಿಸಿ ಜೋಳವನ್ನು ಸುರಕ್ಷಿತವಾಗಿ ಸಂಗ್ರಹಿಸಲು ಮುಂದಾಗಿರುವುದು ಕಂಡುಬಂದಿದೆ.

ರಾಜ್ಯದ 5 ಶಾಲೆಗಳು ಆಯ್ಕೆ | ಶಾಲೆಗಳ ಅಭಿವೃದ್ಧಿಗೆ ಕೇಂದ್ರದ ವಿಶೇಷ ಕಾರ್ಯಕ್ರಮ

ಪಿಎಂಶ್ರೀ ಯೋಜನೆಗೆ ಆದರ್ಶ ವಿದ್ಯಾಲಯ ಆಯ್ಕೆ



ರಾಚಪ್ಪಾ ಜಂಬಗಿ

ಕಲಬುರಗಿ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪಿಎಂಶ್ರೀ (ಪಿಎಂ ಸ್ಕೂಲ್ ಫಾರ್ ರೈಸಿಂಗ್ ಇಂಡಿಯಾ) ಯೋಜನೆಯಡಿ ದೇಶಾದ್ಯಂತ ಆಯ್ದ ಸರ್ಕಾರಿ ಶಾಲೆಗಳನ್ನು ಮಾದರಿ ಶಾಲೆಗಳಾಗಿ ಪರಿವರ್ತಿಸಿ ಅಭಿವೃದ್ಧಿ ಪಡಿಸುವ ಸದುದ್ದೇಶದಿಂದ ಕೇಂದ್ರದ 2026-27ನೇ ಸಾಲಿನ ಪಿಎಂಶ್ರೀ ಯೋಜನೆಗೆ ಕಲಬುರಗಿ ಸೇರಿ ರಾಜ್ಯದ ಐದು ಸರ್ಕಾರಿ ಶಾಲೆಗಳು ಆಯ್ಕೆಗೊಂಡಿವೆ.

ರಾಜ್ಯದ ಶಿಕ್ಷಣ ಕ್ಷೇತ್ರಕ್ಕೆ ಕೇಂದ್ರ ಸರ್ಕಾರದಿಂದ ಮತ್ತೊಂದು ಗರಿ ಎಂಬಂತೆ 2026-27ನೇ ಸಾಲಿನ ಪಿಎಂಶ್ರೀ ಯೋಜನೆಯಡಿ ಕಲಬುರಗಿಯ ಚಿತ್ತಾಪುರ ತಾಲೂಕಿನ ಆದರ್ಶ ವಿದ್ಯಾಲಯ, ವಿಜಯಪುರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ-51 ಭೂತನಾಳ, ಎಲ್‌ಟಿ, ಗದಗ ಜಿಲ್ಲೆಯ ಜಿ.ಎಂ.ಪಿ.ಬಿ. ಎಸ್ ಶಾಲೆ ಮುಳಗುಂದ, ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆ ಸುಳೇಬೈಲು ಹಾಗೂ ಬೆಳಗಾವಿಯ ಸರ್ಕಾರಿ ಪ್ರೌಢಶಾಲೆ ದೇವಲಾಟಿ ಸೇರಿದಂತೆ ಐದು ಸರ್ಕಾರಿ ಶಾಲೆಗಳು ಈ ಬಾರಿಯ ಪಿಎಂಶ್ರೀ ಯೋಜನೆಯಡಿ ಆಯ್ಕೆಯಾಗಿವೆ.

ಮಕ್ಕಳ ಬೆಳವಣಿಗೆಗೆ ಸಹಕಾರಿ

ಮಕ್ಕಳ, ಶಾಲೆಗಳ ಭೌತಿಕ ಬೆಳವಣಿಗೆಗೆ ಹಾಗೂ ಸಂಪೂರ್ಣ ಅಭಿವೃದ್ಧಿ ಕಾಣುವುದಕ್ಕೆ ಕೇಂದ್ರ ಸರ್ಕಾರದ ಈ ವಿಶೇಷ ಕಾರ್ಯಕ್ರಮ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗಲಿದೆ. ಕೇಂದ್ರ ಸರ್ಕಾರದಿಂದ ವಿಶೇಷ ಅನುದಾನ ಬರುವ ಈ ಯೋಜನೆಯಡಿ ಮಕ್ಕಳಿಗೆ ವಿನೆಲ್ಲಾ ಕಲಿಕೆ ಕೊಡುವುದು ಜೊತೆಗೆ ಪೂರಕವಾದ ವಾತಾವರಣ ಸೃಷ್ಟಿ ಮಾಡಲು ಅನುಕೂಲವಾಗಲಿದೆ. ಕಳೆದ 2024-25ನೇ ಸಾಲಿನಲ್ಲಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಮಾಲಗತ್ತಿ, ಸರ್ಕಾರಿ ಪ್ರಾಥಮಿಕ ಶಾಲೆ ಮುತ್ತಗಾ, ಸರ್ಕಾರಿ ಪ್ರಾಥಮಿಕ ಶಾಲೆ ಶಂಕರಲಿಂಗನ ಗುಡಿ ಶಹಾಬಾದ್, ಸರ್ಕಾರಿ ಪ್ರಾಥಮಿಕ ಶಾಲೆ ಮಂಗಲಗಿ ಹಾಗೂ 2025-26ನೇ ಸಾಲಿನಲ್ಲಿ ಚಿತ್ತಾಪುರ ತಾಲೂಕಿನ ಸರ್ಕಾರಿ ಪ್ರೌಢಶಾಲೆ ಯಾಗಾಪುರ ಆಯ್ಕೆಗೊಂಡಿದ್ದು, ಈ ಬಾರಿ 2026-27ನೇ ಸಾಲಿನಲ್ಲಿ ಸರ್ಕಾರಿ ಆದರ್ಶ ವಿದ್ಯಾಲಯ ಚಿತ್ತಾಪುರ ಶಾಲೆಯೂ ಪಿಎಂಶ್ರೀ ಯೋಜನೆಯಡಿ ಆಯ್ಕೆಯಾಗಿದೆ ಎಂದು ಚಿತ್ತಾಪುರ ಬಿಇಒ ಶಶಿಧರ್ ಬಿರಾದಾರ ಹೊಸ ದಿಗಂತಕ್ಕೆ ತಿಳಿಸಿದರು

ಪಿಎಂಶ್ರೀ ಯೋಜನೆ ಉದ್ದೇಶ

ಈ ಯೋಜನೆಯಡಿ ಆಯ್ಕೆಯಾದ ಶಾಲೆಗಳಿಗೆ ಮೂಲಸೌಕರ್ಯ ಅಭಿವೃದ್ಧಿ, ಹೊಸ ಅಥವಾ ಸುಧಾರಿತ ಶಾಲಾ ಕಟ್ಟಡ, ವಿದ್ಯಾರ್ಥಿಗಳಿಗೆ ಸುರಕ್ಷಿತ ತರಗತಿ ಕೊಠಡಿಗಳು ಬಾಲಕ, ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಮತ್ತು ಕೈತೊಳೆಯುವ ಸೌಲಭ್ಯ, ಗ್ರಂಥಾಲಯ ಮತ್ತು ಆಟದ ಮೈದಾನಗಳು, ಸ್ಮಾರ್ಟ್ ತರಗತಿಗಳು, ಇಂಟರ್‌ನೆಟ್ ಸಂಪರ್ಕ, ಡಿಜಿಟಲ್ ಲೈಬ್ರರಿ ಸೇರಿದಂತೆ ಆಯ್ಕೆಯಾದ ಶಾಲೆಗಳನ್ನು ಆಧುನಿಕ ಸೌಲಭ್ಯಗಳಿರುವ ಮಾದರಿ ಶಾಲೆಗಳಾಗಿ ರೂಪಿಸಿ, ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಸದುದ್ದೇಶ ಹೊಂದಿದೆ.

ದಿಗಂತ ವಿಶೇಷ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪಿಎಂಶ್ರೀ ಯೋಜನೆ ಮೂಲಕ ದೇಶದ ಆಯ್ದ ಸರ್ಕಾರಿ ಶಾಲೆಗಳು ಮಾದರಿ ಶಾಲೆಗಳಾಗಿ ರೂಪುಗೊಳ್ಳುತ್ತಿವೆ. ಇದು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರಿಯಾಗುವುದರ ಜೊತೆಗೆ ವಿಕಸಿತ ಭಾರತದ ಕನಸನ್ನು ಸಾಕಾರಗೊಳಿಸಲು ಸಹಕಾರಿ.

■ ಅಶೋಕ್ ಬಗಲಿ, ಜಿಲ್ಲಾಧ್ಯಕ್ಷ ಬಿಜೆಪಿ ಕಲಬುರಗಿ ಗ್ರಾಂ

ಈ ಯೋಜನೆಯಡಿ ಕೇಂದ್ರ ಸರ್ಕಾರದ ವಿಶೇಷ ಅನುದಾನ ಬರಲಿದೆ.ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಕೇಂದ್ರ ಸರ್ಕಾರದ ಪಿಎಂಶ್ರೀ ಯೋಜನೆ ಉತ್ತಮ ಕಾರ್ಯಕ್ರಮವಾಗಿದೆ. ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾದ ಶೈಕ್ಷಣಿಕ ಹಾಗೂ ಭೌತಿಕ ಸೌಲಭ್ಯಗಳನ್ನು ಒದಗಿಸಲು ಈ ಯೋಜನೆ ಪೂರಕವಾಗಿದೆ.

■ ಶಶಿಧರ್ ಬಿರಾದಾರ, ಬಿಇಒ ಚಿತ್ತಾಪುರ

ತುತ್ತಿನ ಚೀಲ ತುಂಬಿಸಿಕೊಳ್ಳಲು ಗುಳೆ ಹೊರಟ ಗ್ರಾಮೀಣ ಜನತೆ



ವಾಗೀಶ ವೀ. ಪಾಟೀಲ

ರಾಯಚೂರು: ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳು ಕಡಿಮೆ ಆಗುತ್ತಿದ್ದಂತೆ ಕೃಷಿ ಕಾರ್ಮಿಕರು, ಸಣ್ಣ ಹಿಡುವಳಿದಾರರು ಸೇರಿದಂತೆ ಕೆಲ ಬಡ ಜನತೆ ಬದುಕು ಕಟ್ಟಿಕೊಳ್ಳುವುದಕ್ಕೆ ಗುಳೆ ಹೋಗುತ್ತಿರುವುದು ಕಂಡುಬರುತ್ತಿದೆ.

ರಾಯಚೂರು, ಸಿರವಾರ, ಮಾನ್ವಿ, ಮಸ್ಕಿ ತಾಲೂಕಿನ ಕೆಲ ಗ್ರಾಮಗಳಲ್ಲಿ ಹಾಗೂ ಸಿಂಧನೂರು, ಲಿಂಗಸುಗೂರು, ದೇವದುರ್ಗ ತಾಲೂಕುಗಳಲ್ಲಿನ ಕೆಲ ಗ್ರಾಮಗಳಿಂದ ಬಡ ಕುಟುಂಬಗಳು ತುತ್ತಿನ ಚೀಲ ತುಂಬಿಸಿಕೊಳ್ಳಲು ಕೆಲಸಗಳನ್ನರಸುತ್ತ ಊರಿಂದೂರುಗಳಿಗೆ ತೆರಳುತ್ತಿದ್ದಾರೆ.

ಮುಂಗಾರಿನಲ್ಲಿ ಬಿತ್ತನೆ ಮಾಡಿದ ಹತ್ತಿ, ಮೆಣಸಿನಕಾಯಿ ಬೆಳೆಗಳು ಈಗಾಗಲೇ ಬಹುತೇಕ ಹಕ್ಕಲು ಆಗಿವೆ. ಅಲ್ಲಲ್ಲಿ ಕೊಳವೆ ಬಾವಿ ನೀರಾವರಿ ವ್ಯವಸ್ಥೆ ಹೊಂದಿರುವ ಕೆಲ ರೈತರು ಮಾತ್ರ ಹಿಂಗಾರಿನಲ್ಲಿ ಭತ್ತ, ಹಸಿ ಮೆಣಸಿನಕಾಯಿ ಸೇರಿದಂತೆ ಕೆಲ ಬೆಳೆ ಬೆಳೆದಿದ್ದನ್ನು ಹೊರತು ಪಡಿಸಿದರೆ ರೈತರ ಜಮೀನಿನಲ್ಲಿ ಯಾವುದೇ ಬೆಳೆ ಕಂಡುಬರುತ್ತಿಲ್ಲ. ತುಂಗಭದ್ರಾ ಜಲಾಶಯದ ಗೇಟ್‌ಗಳ ದುರಸ್ತಿ ಕಾರ್ಯ ಇದ್ದುದರಿಂದ ಪ್ರಸಕ್ತ ಸಾಲಿನ ಬೇಸಿಗೆಯಲ್ಲಿ ಬೇಸಿಗೆಯ ಭತ್ತದ ಬೆಳೆಗೆ ಸರ್ಕಾರ ನೀರು ನೀಡುವುದಿಲ್ಲ ಎಂದು ಹೇಳಿದ ಕಾರಣಕ್ಕೆ ಈ ಬಾರಿ ಸಿಂಧನೂರು, ದೇವದುರ್ಗ, ಮಾನ್ವಿ, ಸಿರವಾರ, ಲಿಂಗಸುಗೂರು ತಾಲೂಕುಗಳಲ್ಲಿ ಬೇಸಿಗೆ ಬೆಳೆಯಾಗಿ ಭತ್ತದ ಬೆಳೆಯನ್ನು ಮಾಡದೆ ಹೆಚ್ಚಾಗಿ ನೀರು ಕಡಿಮೆ ಹಾಗೂ ಬೇಗನೆ ಫಸಲು ಬರುವ ಹೈಬ್ರಿಡ್ ಜೋಳವನ್ನು ಹೆಚ್ಚಿನ ರೈತರು ಬೆಳೆದರು ಈಗ ಜೋಳ ಬಹುತೇಕ ಕಟಾವಾಗಿ ಒಕ್ಕಲನ್ನು ರೈತರು ಮಾಡಿ ಮುಗಿಸಿದ್ದಾರೆ.

ರಾಯಚೂರು ತಾಲೂಕಿನ ಸ್ವಲ್ಪ ಬಾಗ ಕೆಲ ಮಾತ್ರ ಬೇಸಿಗೆ ಬೆಳೆಯನ್ನು ಬೆಳೆಯಲಾಗುತ್ತಿದೆ ಹೀಗಾಗಿ ಇಲ್ಲಿನ ರೈತ ಕೂಲಿ ಕಾರ್ಮಿಕರಿಗೆ ಕೆಲಸ ಇಲ್ಲದಂತಾಗುತ್ತಿದೆ. ಒಣ ಮೆಣಸು ಹಾಗೂ ಹಸಿ ಮೆಣಸಿನ ಕಾಯಿ ಕಟಾವು ಮಾಡುವುದಕ್ಕೆ ಮಾತ್ರ ರೈತ ಕೂಲಿ ಕಾರ್ಮಿಕರನ್ನು ಬಳಕೆ ಮಾಡಲಾಗುತ್ತಿದೆ. ಇನ್ನು ಕೆಲ ದಿನಗಳು ಹೋದರೆ ಆ ಕೂಲಿ ಕಾರ್ಮಿಕರಿಗೆ ಕೆಲಸವಿಲ್ಲದಂತಾಗುತ್ತದೆ.

ಬೆಂಗಳೂರು, ಹೈದರಾಬಾದ್, ಮಹಾರಾಷ್ಟ್ರಕ್ಕೆ ಜಿಲ್ಲೆಯ ಬಡ ಕೂಲಿ ಕಾರ್ಮಿಕರು ಕೆಲಸವನ್ನರಸುತ್ತ ಹೋಗುತ್ತಿದ್ದಾರೆ. ಇದಲ್ಲದೆ ಒಂದೂರಿನಿಂದ ಇನ್ನೊಂದೂರಿಗೆ ಮೆಣಸಿನಕಾಯಿ ಬಿಡಿಸುವುದಕ್ಕೆ ಟಾಟಾಏಸ್, ಟಂಟಂಗಳಲ್ಲಿ ಕೃಷಿ ಜಮೀನು ಮಾಲೀಕರು ಕರೆದುಕೊಂಡು ಹೋಗುತ್ತಿದ್ದಾರೆ.

ನಮ್ಮ ಸ್ವಂತದ್ದು ಎರಡು ಎಕರೆ ಜಮೀನಿದೆ. ಬೇಸಿಗೆ ಬೆಳೆಯಾಗಿ ಏನನ್ನು ಹಾಕಿಲ್ಲ. ಮಾಡುವುದಕ್ಕೆ ಕೆಲಸವಿಲ್ಲ. ಅನಿವಾರ್ಯವಾಗಿ ಹೊಟ್ಟೆ ಪಾಡಿಗಾಗಿ ಬೇರೆ ಊರುಗಳಿಗೆ ಹೋಗುತ್ತಿದ್ದೇವೆ. ನಮ್ಮವರು ಕೆಲವರು ಈಗಾಗಲೇ ಬೇರೆಡೆ ಕೆಲಸ ಮಾಡುವುದಕ್ಕೆ ಹೋಗಿದ್ದಾರೆ.

■ ನರಸಪ್ಪ ನಾಯಕ್, ಬಡ ಕೃಷಿ ಕಾರ್ಮಿಕ

ಶಿವಾಜಿ, ನೆತನ್ಯಾಹು, ಮೋದಿ ಫಲಕ ಅಳವಡಿಸಿದ ಶ್ರೀರಾಮ ಸೇನೆ

ಬೆಳಗಾವಿ: ಇರಾನ್ ಪ್ರಮುಖ ಅಲಿ ಖಮೇನಿ ಭಾವಚಿತ್ರಗಳ ಭರಾಟೆ ಹೆಚ್ಚಾಗುತ್ತಿದ್ದಂತೆ ಶ್ರೀರಾಮಸೇನೆಯ ವತಿಯಿಂದ ಛತ್ರಪತಿ ಶಿವಾಜಿ ಮಹಾರಾಜ್, ಇಸ್ರೇಲ್ ಪಿಎಂ ನೆತನ್ಯಾಹು ಮತ್ತು ದೇಶದ ಪಿಎಂ ನರೇಂದ್ರ ಮೋದಿ ಅವರ ಭಾವಚಿತ್ರವಿರುವ ಫಲಕಗಳನ್ನು ಅಳವಡಿಸುವ ಅಭಿಯಾನ ಆರಂಭಿಸಲಾಗಿದೆ.

ಶ್ರೀರಾಮಸೇನೆ ಸಂಸ್ಥಾಪಕ ಪ್ರಮೋದ ಮುತಾಲಿಕ್ ಅವರು ಬೆಳಗಾವಿ ನಗರದಲ್ಲಿ ಅನ್ಯ ಕೋಮಿನವರಿಂದ ನಗರದಲ್ಲಿ ಇರಾನ್ ಪ್ರಮುಖ ಅಲಿ ಖಮೇನಿ ಭಾವಚಿತ್ರಗಳನ್ನು ಅಳವಡಿಸಲಾಗುತ್ತಿದ್ದು, ಅವುಗಳನ್ನು ತೆರವುಗೊಳಿಸಬೇಕೆಂದು ಬೆಳಗಾವಿ ಪೊಲೀಸ್ ಇಲಾಖೆಗೆ ಮತ್ತು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದರು. ಒಂದು ವೇಳೆ ಸ್ಪಂದನೆ ದೊರೆಯದಿದ್ದರೇ ನಗರದ ಪ್ರಮುಖ ಸ್ಥಳಗಲ್ಲಿ ಅಫಜಲ್‌ಖಾನ್ ವಧಿಸಿದ ಶಿವಾಜಿ ಮಹಾರಾಜ್, ಇಸ್ರೇಲ್ ಪಿಎಂ ನೆತನ್ಯಾಹು ಮತ್ತು ದೇಶದ ಪಿಎಂ ನರೇಂದ್ರ ಮೋದಿ ಅವರ ಭಾವಚಿತ್ರವಿರುವ ಫಲಕಗಳನ್ನು ಹಾಕುವ ಎಚ್ಚರಿಕೆ ನೀಡಲಾಗಿತ್ತು.

ಅದರಂತೆ ಬೆಳಗಾವಿ ಆರ್‌ಟಿಓ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಮತ್ತು ಸಾಮ್ರಾಟ್ ಅಶೋಕ್ ವೃತ್ತದ ಬಳಿ ಶ್ರೀರಾಮಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್, ಜಿಲ್ಲಾಧ್ಯಕ್ಷ ರವಿ ಕುಮಾರ್ ಕೋಕಿತಕರ ಸೇರಿದಂತೆ ಇನ್ನುಳಿದವರ ಉಪಸ್ಥಿತಿಯಲ್ಲಿ ಫಲಕಗಳನ್ನು ಅಳವಡಿಸಿ ಭಾರತ ಪರ, ಶಿವಾಜಿ ಮಹಾರಾಜರು, ಸಂಭಾಜಿ ಮಹಾರಾರು, ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಡಾ.ಅಂಬೇಡ್ಕರ್ ಪರ ಜೈಕಾರ ಕೂಗಲಾಯಿತು.

ಜಾನುವಾರು ವಶ: ಇಬ್ಬರ ಮೇಲೆ ಪ್ರಕರಣ ದಾಖಲು

ಭಟ್ಕಳ: ವಧೆ ಮಾಡಿ ಮಾಂಸ ಮಾರಾಟ ಮಾಡುವ ಉದ್ದೇಶದಿಂದ ಅಕ್ರಮವಾಗಿ ಜಾನುವಾರು ಸಾಗಾಟ ಮಾಡಿದ ಆರೋಪದ ಮೇಲೆ ಇಬ್ಬರ ವಿರುದ್ಧ ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಕ್ರಮ ಜಾನುವಾರು ಸಾಗಾಟ ಮಾಡಿದವರನ್ನು ಬಂದರ್ ರಸ್ತೆಯ ನಿವಾಸಿ ಸರ್ವೋಜ್ ಹುಸೇನ್ (37) ಹಾಗೂ ಬೆಂಗಳೂರಿನ ಶಣ್ಮುಖ ಕೆ.ಎಸ್.ಎಂದು ಗುರುತಿಸಲಾಗಿದೆ. ಇವರು ಸಕ್ಷಮ ಪ್ರಾಧಿಕಾರದಿಂದ ಜಾನುವಾರು ಸಾಗಾಟಕ್ಕೆ ಅಗತ್ಯ ಪರವಾನಿಗೆ ಪಡೆಯದೆ ವಾಹನದಲ್ಲಿ ಸುಮಾರು ಆರು ಲಕ್ಷ ರೂಪಾಯಿ ಮೌಲ್ಯದ ಎರಡು ಕೋಣಗಳನ್ನು ಕೇರಳ ರಾಜ್ಯದ ಮಲಪುರಂನಿಂದ ಭಟ್ಕಳಕ್ಕೆ ಸಾಗಾಟ ಮಾಡಿಕೊಂಡು ಬಂದು ಕಟ್ಟಿ ಹಾಕಿದ್ದರು. ಈ ಬಗ್ಗೆ ದೊರೆತ ಖಚಿತ ಮಾಹಿತಿಯ ಮೇರೆಗೆ ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ವೆಂಕಟೇಶ ಮುರನಾಳ ಅವರ ನೇತೃತ್ವದಲ್ಲಿ ದಾಳಿ ನಡೆಸಿ ಆರೋಪಿಗಳನ್ನು ಪತ್ತೆ ಹಚ್ಚಿ ಜಾನುವಾರುಗಳನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕುರಿತು ಗ್ರಾಮೀಣ ಠಾಣೆಯ ಪಿಎಸ್‌ಐ ಮಲ್ಲಿಕಾರ್ಜುನ ಕೊರಾಣಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ವೈಮಾನಿಕ ಸೇವೆ ಆರಂಭಕ್ಕೆ ಪ್ರಸ್ತಾವನೆ ಸಲ್ಲಿಕೆ

ಬೆಂಗಳೂರು: ರಾಜಧಾನಿಯಿಂದ ಬೀದರ್ ಮತ್ತು ಕಲಬುರಗಿಗೆ ವೈಮಾನಿಕ ಸೇವೆ ಆರಂಭಿಸುವ ಬಗ್ಗೆ ವಿಮಾನಯಾನ ಸಂಸ್ಥೆಗಳು ಮಾ.23ರೊಳಗೆ ತಮ್ಮ ಪ್ರಸ್ತಾವನೆ ಸಲ್ಲಿಸಬೇಕು. ಇದರ ಬಗ್ಗೆ ಮುಂದಿನ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ ಪಾಟೀಲ ಹೇಳಿದ್ದಾರೆ.

ಈ ಸಂಬಂಧ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸೋಮವಾರ ವಿವಿಧ ವಿಮಾನಯಾನ ಸಂಸ್ಥೆಗಳೊಂದಿಗೆ ಸಭೆ ನಡೆಸಿದ ಅವರು, ಕಲಬುರಗಿ ವಿಮಾನ ನಿಲ್ದಾಣದಿಂದ ಈಗ ವಿಮಾನಸೇವೆ ಸ್ತಬ್ಧವಾಗಿದೆ. ಬೀದರ್‌ನಲ್ಲಿ ಕೆ.ಕೆ.ಆರ್.ಡಿ.ಬಿ ನೆರವಿನಿಂದ ದಿನಕ್ಕೆ ಒಂದು ವಿಮಾನ ಮಾತ್ರ ಸಂಚರಿಸುತ್ತಿದೆ. ಕೇಂದ್ರ ಸರ್ಕಾರವು ಪ್ರಾದೇಶಿಕ ಮಟ್ಟದಲ್ಲಿ ವಿಮಾನಯಾನ ಉತ್ತೇಜಿಸಲು ಉಡಾನ್ ಯೋಜನೆ ಮೂಲಕ ಮೂರು ವರ್ಷ ನೆರವು ನೀಡಿತು. ಆ ಅವಧಿ ಮುಗಿದ ನಂತರ ಹೀಗಾಗುತ್ತಿದೆ. ಕಲಬುರಗಿಯಲ್ಲಿ 742 ಎಕರೆಯಲ್ಲಿ ವಿಮಾನ ನಿಲ್ದಾಣವಿದೆ. ಇಂದಿನ ಸಭೆಯಲ್ಲಿ ವೈಮಾನಿಕ ಸೇವೆ ಎಷ್ಟರ ಮಟ್ಟಿಗೆ ಕಾರ್ಯಸಾಧು, ವಿಮಾನ ನಿಲ್ದಾಣಗಳ ಪ್ರಾಧಿಕಾರ ಎರಡೂ ಕಡೆ ಒದಗಿಸಿರುವ ಸೌಲಭ್ಯಗಳು ಮುಂತಾದವನ್ನು ಚರ್ಚಿಸಲಾಯಿತು ಎಂದಿದ್ದಾರೆ.

ಕಲಬುರಗಿಯಲ್ಲಿ ರಾತ್ರಿ ವೇಳೆ ವಿಮಾನ ನಿಲ್ಲಿಸುವ ಸೌಲಭ್ಯ ಸೇರಿದಂತೆ ಎಲ್ಲ ಬಗೆಯ ವಿಮಾನಗಳು ಬಂದಿಳಿಯಲು



ಅನುಕೂಲವಿದೆ. ಅಲ್ಲಿಂದ ಬೆಂಗಳೂರು ಮತ್ತು ಉಳಿದ ಅನೇಕ ರಾಜ್ಯಗಳಿಗೆ ದಿನನಿತ್ಯದ ವಿಮಾನಸೇವೆ ಆರಂಭಿಸಬಹುದು ಎಂದು ವಿಮಾನ ಸಂಸ್ಥೆಗಳು ಹೇಳಿವೆ. ಮತ್ತೊಂದು ವಿಮಾನ ಸಂಸ್ಥೆಯು ನಿತ್ಯವೂ ಬೆಂಗಳೂರಿನಿಂದ ಬೆಳಗ್ಗೆ ಹೊತ್ತು ಬೀದರ್‌ಗೆ ಮತ್ತು ಸಂಜೆ ಕಲಬುರ್ಗಿಗೆ ವಿಮಾನಸೇವೆ ಆರಂಭಿಸಲು ಯೋಚಿಸುತ್ತಿರುವುದಾಗಿ ಹೇಳಿದೆ. ಜತೆಗೆ ಬೆಂಗಳೂರು-ಕಲಬುರಗಿ -ಹೈದರಾಬಾದ್-ಬೆಂಗಳೂರು ಮಾರ್ಗವಾಗಿ ಸೇವೆ ಆರಂಭಿಸುವ ಸಾಧ್ಯತೆಯನ್ನೂ ಪರಿಶೀಲಿಸಲಾಗುತ್ತಿದೆ ಎಂದು ವಿವರಿಸಿದ್ದಾರೆ.

ಈ ವೇಳೆ ತೊಗರಿ ಕಣಜ ಕಲಬುರಗಿ ಮತ್ತು ಬೀದರ್‌ಗೆ ವಿಮಾನ ಸೇವೆ ಆರಂಭಿಸಬೇಕು ಎಂದು ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಡಾ.ಶರಣಪ್ರಕಾಶ ಆರ್. ಪಾಟೀಲ್ ಆಗ್ರಹಿಸಿದ್ದಾರೆ.

ಉಪ ಚುನಾವಣೆಗೆ ಏ.9ಕ್ಕೆ ಮತದಾನ

ಬಾಗಲಕೋಟೆ: ಭಾರತ ಚುನಾವಣಾ ಆಯೋಗವು ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪಚುನಾವಣೆಗೆ ಅಧಿಸೂಚನೆ ಹೊರಡಿಸಿದ್ದು, ಉಪ ಚುನಾವಣೆಗೆ ಏ.9ರಂದು ಮತದಾನ ನಡೆಯಲಿದೆ. ಬಾಗಲಕೋಟೆ ಮತಕ್ಷೇತ್ರದ ಉಪಚುನಾವಣೆಯನ್ನು ಪಾರದರ್ಶಕತೆಯಿಂದ ನಡೆಸಲು ಜಿಲ್ಲಾಡಳಿತ ವ್ಯವಸ್ಥೆ ಮಾಡಿಕೊಂಡಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಉಪ ಚುನಾವಣೆಗೆ ಮಾ.16ರಂದು ಅಧಿಸೂಚನೆ ಹೊರಡಿಸಲಾಗಿದ್ದು, ನಾಮಪತ್ರ ಸಲ್ಲಿಕೆಗೆ ಮಾ.23 ಕೊನೆಯ ದಿನವಾಗಿದೆ. ಮಾ.24 ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಮಾ.26 ಕೊನೆಯ ದಿನವಾಗಿದೆ. ಏ. ರಂದು ಮತದಾನ ನಡೆಯಲಿದ್ದು, ಮತ ಎಣಿಕೆ ಮೇ 4ರಂದು ನಡೆಯಲಿದೆ.

ಎಲ್‌ಪಿಜಿ ಗ್ರಾಹಕರಿಗೆ ಇ- ಕೆವೈಸಿ ಕಡ್ಡಾಯ

ಪುಟ ೧→ ತೈಲ ಮಾರ್ಕೆಟಿಂಗ್ ಕಂಪನಿಯ ಮೊಬೈಲ್ ಅಪ್ಲಿಕೇಶನ್ ಮತ್ತು ಆಧಾರ ಫೇಸ್‌ಆರ್‌ಡಿ ಅಪ್ಲಿಕೇಶನ್ ಅನ್ನು ಬಳಸಿಕೊಂಡು ಜನರು ತಮ್ಮ ಮನೆಗಳಿಂದಲೇ ಆರಾಮವಾಗಿ ಪರಿಶೀಲಿಸಬಹುದು ಎಂದು ಅದು ಹೇಳಿದೆ. ಗ್ರಾಹಕರು ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಚಾಲತಾಣಕ್ಕೆ ಭೇಟಿ ನೀಡಬಹುದು ಅಥವಾ ತಮ್ಮ ಎಲ್‌ಪಿಜಿ ವಿತರಕರನ್ನು ಸಂಪರ್ಕಿಸಬಹುದು. ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಭಾರತವು ಎಲ್‌ಪಿಜಿ ಕೊರತೆ ಎದುರಿಸುತ್ತಿದೆ.

ಕೆ.ಎಚ್. ಪಾಟೀಲ್ ಅಪರೂಪದ ರಾಜಕಾರಣಿ



ಬೆಂಗಳೂರು: ಸಹಕಾರಿ ಧುರೀಣ ಕೆ.ಎಚ್. ಪಾಟೀಲರು ಅಪರೂಪದ ರಾಜಕಾರಣಿ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಸಹಕಾರಿ ರಂಗದ ಭೀಷ್ಮ ನಾಡು ಮೆಚ್ಚಿದ ನಾಯಕ ಕೆ.ಎಚ್; ಪಾಟೀಲ್ ರ 101 ನೇ ಜಯಂತ್ಯುತ್ಸವ ಸಮಾ ರಂಭದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಮಾಡದಿರುವ ಕೆಲಸವಿಲ್ಲ ಸಾಮಾನ್ಯ ಗ್ರಾಮದಲ್ಲಿ ಹುಟ್ಟಿ ಪಂಚಾಯತಿ ಸದಸ್ಯರಾಗಿ, ಕಾಂಗ್ರೆಸ್ ಅಧ್ಯಕ್ಷರಾಗಿ, ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಕೆ. ಎಚ್. ಪಾಟೀಲ್ ಅವರು ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರೆಂದರು.

ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಬಡವರು, ದಲಿತರು, ಅಲ್ಪಸಂಖ್ಯಾತರಲ್ಲಿ ಶಕ್ತಿ ತುಂಬುವ ಕೆಲಸ ಮಾಡಿದ್ದನ್ನು ಸ್ಮರಿಸಬೇಕು ಎಂದರು. ಕೆ ಎಚ್ ಪಾಟೀಲ್ ರ ಪುತ್ರ, ಸಚಿವರಾದ ಎಚ್.ಕೆ.ಪಾಟೀಲರು ಅವರ ತಂದೆಯವರು ನಡೆದ ದಾರಿಯಲ್ಲಿ ನಡೆಯುತ್ತಿದ್ದು, ಅವರಿಗಿಂತಲೂ ಹೆಚ್ಚು ಬೆಳೆಯಲಿ ಎಂದರು. ಮಾಜಿ ಸಿಎಂ ವೀರಪ್ಪ ಮೊಯ್ಲಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ , ಡಿಸಿಎಂ ಡಿ.ಕೆ. ಶಿವಕುಮಾರ್, ವಿಧಾನಸಭಾ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಸಚಿವರಾದ ಕೆ. ಎಚ್.ಮುನಿಯಪ್ಪ, ಎಚ್.ಕೆ.ಪಾಟೀಲ್, ರಾಮಲಿಂಗಾರೆಡ್ಡಿ, ಶಾಸಕರಿದ್ದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕನೇಜಿ

ಹಿಂದೆ ನಮ್ಮ ಬಟ್ಟೆಯನ್ನು ನಾವೇ ಒಗೆಯಬೇಕಿತ್ತು, ನಮ್ಮ ತಟ್ಟೆಯನ್ನು ನಾವೇ ತೊಳೆಯಬೇಕಿತ್ತು, ಅಡಿಕೆಯನ್ನೂ ನಾವೇ ಹೆಕ್ಕಬೇಕಿತ್ತು, ದನಗಳನ್ನು ನಾವೇ ಮೇಯಿಸಬೇಕಿತ್ತು - ಡಾ/ ವೀರೇಂದ್ರ ಹೆಗ್ಗಡೆ
- ಇಂದು ನಾವು ಅದೆಲ್ಲವನ್ನೂ ಇನ್ನೊಬ್ಬರಿಂದ ಹಣ ಕೊಟ್ಟು ಮಾಡಿಸುವಷ್ಟು ಮುಂದುವರಿದಿದ್ದೇವೆ, ಆದರೆ ಅದಕ್ಕಾಗಿ ಮಾಡಿದ ಬ್ಯಾಂಕ್ ಸಾಲವನ್ನು ನಾವೇ ದುಡಿದು ನಾವೇ ಕಟ್ಟುತ್ತೇವೆ!

ದಿನ ಭವಿಷ್ಯ

ಮೇಷ
ಪ್ರಗತಿಪರ ದಿನ. ಉದ್ದೇಶಿಸಿದ ಕಾರ್ಯ ಪೂರ್ಣ. ಪ್ರೀತಿಯ ವಿಷಯದಲ್ಲಿ ಸಫಲತೆ. ವೃತ್ತಿಯಲ್ಲಿ ಉನ್ನತಿ, ಕೌಟುಂಬಿಕ ಸಾಮರಸ್ಯ.

ವೃಷಭ
ಕೆಲ ದಿನಗಳ ಪ್ರಕ್ಷುಬ್ಧತೆ ಕಳೆದು ಮನಸ್ಸು ಶಾಂತವಾಗಲಿದೆ. ಕಾರ್ಯ ಸಾಫಲ್ಯದಿಂದ ವಿಶ್ವಾಸ ವೃದ್ಧಿ. ಎಲ್ಲ ಸರಿಯಾಗಿ ನಿಭಾಯಿಸುವಿರಿ.

ಮಿಥುನ
ನೆಮ್ಮದಿ ಕಲಕುವ ಬೆಳವಣಿಗೆ. ನಿಮಗೆ ಧೈರ್ಯ ಕಡಿಮೆ, ಅದರಿಂದ ಗುರಿ ಸಾಧನೆ ಕಷ್ಟ. ಸ್ನೇಹಿತರಿಂದ ಹಣ ವಂಚನೆ ನಡೆದೀತು.

ಕಟಕ
ಕೆಲಸದಲ್ಲಿ ಹೆಚ್ಚು ಗಮನ ಕೇಂದ್ರೀಕರಿಸಿ. ಚಂಚಲಚಿತ್ತ ಒಳಿತಲ್ಲ. ಅನಿರೀಕ್ಷಿತ ಧನಲಾಭ. ದೇವರ ಪ್ರಾರ್ಥನೆಯಿಂದ ಮನಸ್ಸಿಗೆ ಶಾಂತಿ.

ಸಿಂಹ
ನಿರ್ವಹಣೆ ಉತ್ತಮ. ಹಾಗಾಗಿ ಒಳ್ಳೆ ಫಲ ಸಿಗುವುದು. ಆದರೂ ಕೆಲವರ ಅವಕೃಪೆಗೆ ತುತ್ತಾಗುವಿರಿ. ಕೌಟುಂಬಿಕ ಭಿನ್ನಮತ, ಉದ್ವಿಗ್ನತೆ.

ಕನ್ಯಾ
ಉದ್ದೇಶಿಸಿದ ಕಾರ್ಯಕ್ಕೆ ವಿಘ್ನಗಳು. ಪ್ರಯತ್ನ ವಿಫಲ. ಮನಸ್ಸಿಗೆ ನಿರಾಶೆ. ಅತಿಯಾಗಿ ವಿಶ್ವಾಸವಿಟ್ಟವರೇ ಕೇಡು ಬಗೆಯುತ್ತಾರೆ.

ತುಲಾ
ಮಾಡಿದ ಕೆಲಸಕ್ಕೆ ಸೂಕ್ತ ಪ್ರತಿಫಲ ಸಿಗದಿದ್ದರೂ ನಿರಾಶೆ ಆಗದು. ಹಣದ ಹರಿವು ಸುಗಮ. ಉಳಿತಾಯವೂ ಸಾಧ್ಯ. ಮನಸ್ಸು ನಿರಾಳ.

ವೃಶ್ಚಿಕ
ಒತ್ತಡದ ದಿನ. ಅಧಿಕ ಹೊಣೆಗಾರಿಕೆ. ನಿಮ್ಮನ್ನು ದ್ವೇಷಿಸುವವರಿಂದ ದೂರ ಇರಿ. ಅನವಶ್ಯ ವೆಚ್ಚದ ಮೇಲೆ ನಿಯಂತ್ರಣ ಇಡಿ. ಕೌಟುಂಬಿಕ ಸಹಕಾರ.

ಧನು
ಯಾವುದೇ ವಿಷಯಕ್ಕೆ ಕ್ಷಿಪ್ರವಾಗಿ ಪ್ರತಿಕ್ರಿಯಿಸಿ. ಅದು ನಿಮ್ಮ ಘನತೆ ಉಳಿಸುವುದು. ಗುರಿ ಸಾಧನೆ ನಿಮಗೆ ಕಷ್ಟವಾಗಲಾರದು.

ಮಕರ
ಇತ್ತೀಚಿನ ಹಿನ್ನಡೆಗಳಿಂದ ನೊಂದಿದ್ದರೆ ಇಂದು ನಿರಾಳತೆ ಸಿಗಲಿದೆ. ನಿಮಗೆ ಪೂರಕವಾದ ಬೆಳವಣಿಗೆ. ಆಪ್ತರ ಜತೆಗಿನ ಮುನಿಸು ಮಾಯ.

ಕುಂಭ
ವಿಶ್ವಾಸ ವೃದ್ಧಿಯ ಬೆಳವಣಿಗೆ. ಮನೆಯಲ್ಲಿ ಅಧಿಕ ಹೊಣೆಯ ಹೊರೆ. ಹಿರಿಯರಿಗೆ ಸಂಧಿ ನೋವಿನಿಂದ ನೆಮ್ಮದಿ ಸಿಗಬಹುದು.

ಮೀನ
ಇತರರ ಜತೆ ಸರಿಯಾಗಿ ವ್ಯವಹರಿಸಿ. ತಪ್ಪು ಕಲ್ಪನೆ ಮೂಡದಂತೆ ಎಚ್ಚರ ವಹಿಸಿ. ಸಣ್ಣ ಸಮಸ್ಯೆ ಕಡೆಗಣಿಸಬೇಡಿ, ಅದೇ ದೊಡ್ಡದಾದೀತು.

ರಾಹುಕಾಲ: 3.00 - 4.30
ಗುಳಿಕಕಾಲ: 12.00 -1.30

ಅದೃಷ್ಟ ಸಂಖ್ಯೆ: 7,0,6,2

ನಿತಿನ್, ನಿತೀಶ್ ಸೇರಿ ಎಂಟು ಎನ್‌ಡಿಎ ಅಭ್ಯರ್ಥಿಗಳಿಗೆ ಜಯ

ಪುಟ ೧→ 243 ಸದಸ್ಯರ ಬಿಹಾರ ವಿಧಾನಸಭೆಯಲ್ಲಿ ಎನ್‌ಡಿಎಗೆ 202 ಸದಸ್ಯರ ಬೆಂಬಲ ಇರುವುದರಿಂದ ನಾಲ್ಕು ಸ್ಥಾನಗಳಲ್ಲಿ ಸುಲಭವಾಗಿ ಗೆಲುವು ಸಾಧಿಸಿತು. ಐದನೇ ಸ್ಥಾನಕ್ಕಾಗಿ ಪ್ರತಿಪಕ್ಷ ಆರ್‌ಜೆಡಿ ಪಕ್ಷದ ಅಮರೇಂದ್ರ ಧಾರಿ ಸಿಂಗ್ ಅವರನ್ನು ಕಣಕ್ಕಿಳಿಸಿ ಚುನಾವಣೆಯನ್ನು ಸ್ಪರ್ಧಾತ್ಮಕಗೊಳಿಸಿತು. ಎನ್‌ಡಿಎ ಅಭ್ಯರ್ಥಿಗಳಿಗೆ ಬೆಂಬಲವಾಗಿ ಮತ ಚಲಾಯಿಸಿದ ಮೈತ್ರಿ ಶಾಸಕರಿಗೆ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಧನ್ಯವಾದ ತಿಳಿಸಿದ್ದಾರೆ.

ಒಡಿಶಾದಲ್ಲಿ ನಾಲ್ವರು ಆಯ್ಕೆ: ಇನ್ನೊಂದೆಡೆ ಒಡಿಶಾದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ನಾಲ್ವರು ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ಬಿಜೆಪಿ ಅಭ್ಯರ್ಥಿಗಳಾದ ಮನ್ಮೋಹನ್ ಸಾಮಲ್ ಮತ್ತು ಸುಜೀತ್ ಕುಮಾರ್ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಕೇಂದ್ರ ಮಾಜಿ ಸಚಿವ ದಿಲೀಪ್ ರಾಯ್ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗಮನಾರ್ಹ ಜಯ ದಾಖಲಿಸಿದ್ದಾರೆ. ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿದ್ದ ಅವರು, ಬಿಜು ಜನತಾ ದಳ, ಕಾಂಗ್ರೆಸ್ ಮತ್ತು ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿ ಡಾ. ದತ್ತೇಶ್ವರ ಹೋಟಾ ಅವರನ್ನು ಸೋಲಿಸಿದ್ದಾರೆ. ಈ ವೇಳೆ ಬಿಜು ಜನತಾ ದಳ ಮತ್ತು ಕಾಂಗ್ರೆಸ್ ಪಕ್ಷಗಳ ಕೆಲ ಶಾಸಕರು ಪಕ್ಷದ ವಿಪ್‌ಗೆ ವಿರುದ್ಧವಾಗಿ ದಿಲೀಪ್ ರಾಯ್ ಪರ ಮತ ಚಲಾಯಿಸಿದ ಘಟನೆ ಗಮನಸೆಳೆದಿದೆ. ಬಿಜು ಜನತಾ ದಳದ ಸಂತೃಪ್ತ ಮಿಶ್ರಾ ಕೂಡ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

ಶಕ್ತಿ ಯೋಜನೆಯಲ್ಲಿ ಮಹಿಳೆಯರ 700 ಕೋಟಿ ಪ್ರಯಾಣ: ಸಿಎಂ

ಮಹಿಳೆಯರ ಪಾತ್ರ ಮಹತ್ವದ್ದು

ಬೆಂಗಳೂರು: ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯ ಗೆಲುವಿನಲ್ಲಿ ಮಹಿಳಾ ಕಾಂಗ್ರೆಸ್ ಸದಸ್ಯರ ಪಾತ್ರ ಮಹತ್ವವಾದುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ತಿಳಿಸಿದರು.



ಸೋಮವಾರ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ವತಿಯಿಂದ ಆಯೋಜಿಸ ಲಾಗಿದ್ದ ಕಾರ್ಯಕಾರಿ ಸಭೆ ಮತ್ತು ತರಬೇತಿ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿ, 2013 ರಿಂದ 2018 ಮತ್ತು 2023ರಿಂದ ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದೆ. ಪ್ರಮುಖ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯಿಂದ ಇದುವರೆಗೆ ಮಹಿಳೆಯರು 700 ಕೋಟಿ ಪ್ರಯಾಣ ಗಳನ್ನು ಕೈಗೊಂಡಿದ್ದಾರೆ. ಮಹಿಳಾ ಕೇಂದ್ರಿತ ಯೋಜನೆಗಳಿಂದ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲಾಗಿದೆ. ಸರ್ಕಾರದ ಗ್ಯಾರಂಟಿಗಳಿಂದ ಮಹಿಳೆಯರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ 1.26 ಕೋಟಿ ಮಹಿಳೆಯರಿಗೆ ಮಾಸಿಕ 2000 ರೂಗಳನ್ನು ನೀಡಲಾಗುತ್ತಿದ್ದು, ಇದರಿಂದ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಸುಧಾರಿಸಿದೆ. ಆರ್ಥಿಕ ಸ್ವಾತಂತ್ರ್ಯದಿಂದ ಮಹಿಳೆಯರ ಆತ್ಮವಿಶ್ವಾಸ ಹೆಚ್ಚಿದೆ ಎಂದರು.

ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಭಾಗ ವಹಿಸಿ: ಮಹಿಳೆಯರಲ್ಲಿ ನಾಯಕತ್ವದ ಗುಣ ಬಹಳ ಪ್ರಮುಖವಾಗಿದೆ. ಎಲ್ಲರಿಗೂ ಸಮಾನ ಅವಕಾಶ ದೊರೆತರೆ ಸಮಾನತೆಯನ್ನು ಸಾಧಿಸುವುದು ಸುಲಭವಾಗಿದೆ. ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್‌ನಲ್ಲಿ 1 ಲಕ್ಷಕ್ಕೂ ಹೆಚ್ಚು ಮಹಿಳಾ ಸದಸ್ಯರಿದ್ದು, ಭವಿಷ್ಯದಲ್ಲಿ ಈ ಸಂಖ್ಯೆ 2 ಲಕ್ಷಗಳಿಗೆ ವೃದ್ಧಿಸಬೇಕು. ಉಪಚುನಾವಣೆ ಸಮೀಪಿಸುತ್ತಿರುವುದರಿಂದ ಸರ್ಕಾರದ ಜನಪರ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಮಹಿಳಾ ಸದಸ್ಯರ ಪಾತ್ರ ಮಹತ್ವದ್ದಾಗಿದೆ. ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯಲ್ಲಿ ಮಹಿಳಾ ಸದಸ್ಯರ ಎರಡು ತಂಡಗಳನ್ನು ರಚಿಸಿ, ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಸೂಚಿಸಿದರು.

ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಅಲ್ಕಾ ಲಾಂಬಾ, ಕರ್ನಾಟಕ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಸೌಮ್ಯಾ ರೆಡ್ಡಿ, ಮಹಿಳಾ ಕಾಂಗ್ರೆಸ್ ಕರ್ನಾಟಕ ಉಸ್ತುವಾರಿ ಸೋಫಿಯಾ ಜುಬೇರಾ, ಪ್ರಧಾನ ಕಾರ್ಯದರ್ಶಿ ಸೇವಾ ಸೆಲ್ವಾನ್, ಶಾಸಕ ಮಂಥರ್ ಗೌಡ, ನಯನ ಮೋಟಮ್ಮ, ಮಾಜಿ ಸಚಿವ ರಾಣಿ ಸತೀಶ್ ಸೇರಿದಂತೆ ಮಹಿಳಾ ಕಾಂಗ್ರೆಸ್ ವಿಭಾಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಗುರಿ ಇಟ್ಟುಕೊಂಡು ರಾಜಕಾರಣಕ್ಕೆ ಬನ್ನಿ

ಬೆಂಗಳೂರು: ನಿಷ್ಠೆಯಿಂದ ಕೆಲಸ ಮಾಡಿದರೆ ಅಧಿಕಾರ ಮನೆ ಬಾಗಿಲಿಗೆ ಬರಲಿದೆ. ಮಹಿಳೆಯರು ಗುರಿ ಇಟ್ಟುಕೊಂಡು ರಾಜಕಾರಣಕ್ಕೆ ಬರಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಹೇಳಿದರು. ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ವತಿಯಿಂದ ಮಹಿಳಾ ಸಬಲೀಕರಣ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ನಡೆಯುತ್ತಿರುವ ಮಹಿಳಾ ಸಬಲೀಕರಣ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಆರ್‌ಎಸ್‌ಎಸ್ ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದೆ, ಅದೇ ರೀತಿ ಪಕ್ಷದಲ್ಲಿ ಮಹಿಳಾ ಕಾಂಗ್ರೆಸ್ ಘಟಕವು ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದೆ. ಉತ್ತಮ ಕೆಲಸ ಮಾಡಿದರೆ ಅಧಿಕಾರ ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಮುಂಬರುವ ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಎಲ್ಲಾ ವರ್ಗದವರನ್ನು ಗುರುತಿಸಿ ಟಿಕೆಟ್ ನೀಡಬೇಕು ಎಂದರು. ಸಂಘಟನೆಯಲ್ಲಿ ಒತ್ತು ನೀಡುವವರನ್ನು, ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿರುವವರನ್ನು ಗುರುತಿಸಬೇಕು. ನಿಮ್ಮ ಅಕ್ಕಪಕ್ಕದ ಮನೆಯವರ ಮನಸ್ಸನ್ನು ಗೆದ್ದು, ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಬರುವಂತೆ ಮಾಡಬೇಕು. ನಿಸ್ವಾರ್ಥದಿಂದ ಪಕ್ಷದಲ್ಲಿ ಕೆಲಸ ಮಾಡಬೇಕು ಎಂದರು.



ಸಚಿವರು, ಸಂಸದರ ಸಭೆ ಇಂದು

ಪುಟ ೧→ ಈ ಹಿಂದೆ ರಾಜ್ಯದ ನೀರಾವರಿ ಸಚಿವರಾಗಿದ್ದ ಸಚಿವ ಎಚ್.ಕೆ. ಪಾಟೀಲ್, ಎಂ.ಬಿ.ಪಾಟೀಲ್, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಜತೆಗೆ ಮಂಗಳವಾರ ಹೊಸದಿಲ್ಲಿಗೆ ತೆರಳಲಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವ ನೀರಾವರಿ ಪ್ರಕರಣಗಳ ಕುರಿತು ರಾಜ್ಯದ ಅಡ್ವೋಕೆಟ್ ಜನರಲ್ ಹಾಗೂ ರಾಜ್ಯವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರತಿನಿಧಿಸುತ್ತಿರುವ ಹಿರಿಯ ವಕೀಲರ ಜತೆಗೆ ಚರ್ಚೆ ನಡೆಸಲಿದ್ದಾರೆ. ಸುಪ್ರೀಂಕೋರ್ಟ್ ವಿಚಾರಣೆಯಲ್ಲಿ ರಾಜ್ಯ ಸರ್ಕಾರ ತಗೆದುಕೊಳ್ಳಬೇಕಾದ ನಿರ್ಧಾರದ ಕುರಿತು ವಕೀಲರ ತಂಡದೊಂದಿಗೆ ಚರ್ಚಿಸಲಿದ್ದಾರೆ.

ಅದೇ ದಿನ ಸಂಜೆ ರಾಜ್ಯದ ಕೇಂದ್ರ ಸಚಿವರಾಗಿರುವ ಪ್ರಲ್ಹಾದ್ ಜೋಶಿ, ಎಚ್.ಡಿ.ಕುಮಾರಸ್ವಾಮಿ, ವಿ. ಸೋಮಣ್ಣ ಹಾಗೂ ಶೋಭಾ ಕರಂದ್ಲಾಜೆ ಸೇರಿದಂತೆ ಎಲ್ಲ ಪಕ್ಷಗಳ ರಾಜ್ಯ ಸಂಸದರ ಜತೆಗೆ ಸಭೆ ನಡೆಸಲಿದ್ದು, ಈ ಸಭೆಯಲ್ಲಿ ಕೇಂದ್ರ ಸರ್ಕಾರ ಒಪ್ಪಿಗೆ ನೀಡಬೇಕಾದ ಯೋಜನೆಗಳು ಅಸರಲ್ಲಿಯೂ ಪ್ರಮುಖವಾಗಿ ಮೇಕೆದಾಟು, ಕೃಷ್ಣ ಮೇಲ್ದಂಡೆ ಯೋಜನೆ ಹಾಗೂ ತುಂಗಭದ್ರಾ ರಾಷ್ಟ್ರೀಯ ಯೋಜನೆ ಘೋಷಣೆ ಕುರಿತಾಗಿ ಸಂಸದರೊಂದಿಗೆ ಚರ್ಚಿಸಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವಂತೆ ಮನವೊಲಿಸುವ ಪ್ರಯತ್ನ ಮಾಡಲಿದ್ದಾರೆ. ಬಳಿಕ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಲಿದ್ದಾರೆ ಎನ್ನಲಾಗಿದೆ.

ಆಂಧ್ರ, ಮಹಾರಾಷ್ಟ್ರದ ವಿರುದ್ಧ ಧ್ವನಿ ಎತ್ತಲು ಮನವಿ

ಪುಟ ೧→ ನ್ಯಾಯಾಧಿಕರಣ ಆದೇಶದ ಪ್ರಕಾರ ನಮ್ಮ ಪಾಲಿನ ನೀರಿನ ಬಳಕೆಗೆ ಯೋಜನೆ ಮಾಡುತ್ತಿದ್ದು, ಈಗಾಗಲೇ 26 ಸಾವಿರ ಕೋಟಿ ರೂ. ಮೊತ್ತದ ಕಾಮಗಾರಿಗಳನ್ನು ಆರಂಭಿಸಲಾಗಿದೆ. ನಾವು ಈಗಲೇ ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳ ಮಾಡುತ್ತಿಲ್ಲ. 2010 ರಲ್ಲಿ ಆಗಿರುವ ಆದೇಶದ ಅನುಸಾರ ನಮ್ಮ ಪಾಲಿನ ನೀರು ಬಳಕೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ತುಂಗಭದ್ರಾ ಅಣೆಕಟ್ಟೆಯಿಂದ ನಮಗೆ 30 ಟಿಎಂಸಿ ನೀರು ವ್ಯರ್ಥವಾಗುತ್ತಿದ್ದು, ಇದಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳಲು ಆಂಧ್ರ ಸರ್ಕಾರ ಸಹಕಾರ ನೀಡುತ್ತಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ಸಂಸದರ ಜತೆ ಚರ್ಚಿಸಿ ಸರ್ಕಾರದ ಮೇಲೆ ಒತ್ತಡ ಹಾಕಲು ತೀರ್ಮಾನ ಮಾಡಲಾಗುತ್ತದೆ.
■ **ಶಿವಕುಮಾರ್, ಡಿಸಿಎಂ**

ಎಲ್ಪಿಜಿ ವಿತರಣೆಗೆ ಹೊಸ ನೀತಿ

ಪುಟ ೧→ ರೆಸ್ಟೋರೆಂಟ್, ಡಾಬಾ, ಹೋಟೆಲ್ ಮತ್ತು ಕೈಗಾರಿಕಾ ಕ್ಯಾಂಟೀನ್‌ಗಳಿಗೆ ಪ್ರತಿದಿನ 1 ಸಾವಿರ ಸಿಲಿಂಡರ್‌ಗಳನ್ನು ನಿಗದಿಪಡಿಸಲಾಗಿದೆ. ಬೀಜ ಸಂಸ್ಕರಣಾ ಉದ್ಯಮ, ಆಹಾರ ಸಂಸ್ಕರಣಾ ಉದ್ಯಮ, ಕೃಷಿ ಮತ್ತು ಸಂಬಂಧಿತ ವಲಯಗಳು, ಔಷಧೀಯ ಉದ್ಯಮ, ಮೀನುಗಾರಿಕೆ, ಪ್ರಾಣಿ ಸಂಗ್ರಹಾಲಯ, ಕ್ರೀಡಾ ಹಾಸ್ಟೆಲ್‌ಗಳು, ಕಾರ್ಪೊರೇಟ್ ಕ್ಯಾಂಟೀನ್‌ಗಳು, ಕೋಳಿ ಮತ್ತು ರೇಷ್ಮೆ ಸಾಕಾಣಿಕೆ ಉದ್ಯಮಗಳಿಗೆ ಪ್ರತಿದಿನ 500 ಸಿಲಿಂಡರ್ ಹಾಗೂ ಇತರೆ ಅಗತ್ಯಗಳಿಗೆ ನಿತ್ಯ 100 ಸಿಲಿಂಡರ್‌ಗಳನ್ನು ಪ್ರಕರಣದ ಆಧಾರದ ಮೇಲೆ ವಿತರಿಸಲು ರಾಜ್ಯ ಸರಕಾರ ಮುಂದಾಗಿದೆ.

ಎಲ್‌ಪಿಜಿ ಬಳಕೆ ಎಷ್ಟು? 2025ರ ಡಿಸೆಂಬರ್‌ನಿಂದ 2026ರ ಫೆಬ್ರವರಿ ವರೆಗೆ ರಾಜ್ಯದಲ್ಲಿ ಒಟ್ಟು 76,544 ಮೆಟ್ರಿಕ್ ಟನ್ ವಾಣಿಜ್ಯ ಎಲ್‌ಪಿಜಿ ಬಳಕೆಯಾಗಿದ್ದು, ಸರಾಸರಿ ಮಾಸಿಕ ಬಳಕೆಯು 25,515 ಮೆಟ್ರಿಕ್ ಟನ್ ಹಾಗೂ ದೈನಂದಿನ ಬಳಕೆಯು ಸರಾಸರಿ 850 ಮೆಟ್ರಿಕ್ ಟನ್ ಆಗಿದೆ. ಅದೇ ರೀತಿ ಆಟೋ ಎಲ್‌ಪಿಜಿ ದೈನಂದಿನ ಬಳಕೆಯು ಸರಾಸರಿ 56.7 ಮೆಟ್ರಿಕ್ ಟನ್. ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಅನ್ವಯ, ರಾಜ್ಯದಲ್ಲಿ ದಿನನಿತ್ಯ ಸರಾಸರಿ 181.34 ಮೆಟ್ರಿಕ್ ಟನ್ ವಾಣಿಜ್ಯ ಎಲ್‌ಪಿಜಿಯನ್ನು ನಿಯಂತ್ರಿತ ಹಂಚಿಕೆಗೆ ಮೀಸಲಿಡಲಾಗಿದೆ.

ಜನರು ಗಾಬರಿಯಾಗಬಾರದು. ಅಗತ್ಯಕ್ಕಿಂತ ಹೆಚ್ಚು ಸಿಲಿಂಡರ್ ಬುಕ್ ಮಾಡಬಾರದು ಹಾಗೂ ಸಂಗ್ರಹಿಸಬಾರದು. ಯಾವುದೇ ತಾಂತ್ರಿಕ ಸಮಸ್ಯೆ ಕಂಡುಬಂದರೆ ತಕ್ಷಣ ಸಂಬಂಧಿತ ಕಂಪನಿಗಳೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುತ್ತದೆ. ಜನರಿಗೆ ಯಾವುದೇ ತೊಂದರೆ ಆಗದಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ.
■ **ಕೆ.ಎಚ್. ಮುನಿಯಪ್ಪ, ಆಹಾರ ಸಚಿವ**

ದೇಶಕ್ಕಿಂದು ಎಲ್ಪಿಜಿ, ತೈಲ ಹೊತ್ತ 2 ನೌಕೆ

ಪುಟ ೧→ ಶಿವಾಲಿಕ್ ಈಗಾಗಲೇ ಗುಜರಾತ್ ತಲುಪಿದ್ದು, ನಂದಾ ದೇವಿ ಮಂಗಳವಾರ ಕಾಂಡ್ಲಾ ಬಂದರನ್ನು ತಲುಪುವ ನಿರೀಕ್ಷೆಯಿದೆ. ಪ್ರಸ್ತುತ 22 ಭಾರತೀಯ ಧ್ವಜದ ಹಡಗುಗಳು ಪಶ್ಚಿಮ ಪರ್ಷಿಯನ್ ಕೊಲ್ಲಿಯಲ್ಲಿ ಉಳಿದುಕೊಂಡಿದ್ದು, ಸುರಕ್ಷಿತ ನಿರ್ಗಮನಕ್ಕೆ ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿವೆ.

ಸಾರಿಗೆ ಸಮನ್ವಯ ಮತ್ತು ಬೆಂಬಲ: ಫೆ.28ರಂದು ಸಂಘರ್ಷ ಆರಂಭವಾದಾಗಿನಿಂದ, ಡಿಜಿ ಶಿಪ್ಪಿಂಗ್ ನಿಯಂತ್ರಣ ಕೊಠಡಿ, 8,400ಕ್ಕೂ ಹೆಚ್ಚು ಕರೆಗಳನ್ನು ನಿರ್ವಹಿಸಿದೆ. ಇಲ್ಲಿಯವರೆಗೆ ಒಟ್ಟು 286 ಭಾರತೀಯ ನಾವಿಕರನ್ನು ಸ್ವದೇಶಕ್ಕೆ ಕರೆತರಲಾಗಿದೆ. ವ್ಯಾಪಾರ ನಿರಂತರತೆಯನ್ನು ಕಾಪಾಡಿಕೊಳ್ಳಲು ಜವಾಹರಲಾಲ್ ನೆಹರು ಪೋರ್ಟ್ ಅಥಾರಿಟಿ ಸೇರಿದಂತೆ ಪ್ರಮುಖ ಬಂದರುಗಳಲ್ಲಿ ಲಂಗರು ಹಾಕುವ ಮತ್ತು ಸಂಗ್ರಹಣಾ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತಿದೆ. ಹಾರ್ಮುಜ್ ಜಲಸಂಧಿಯ ದಿಗ್ಬಂಧನ ಮುಂದುವರಿದಿದ್ದರೂ, ರಷ್ಯಾದಂತಹ ಪರ್ಯಾಯ ಪೂರೈಕೆದಾರರಿಂದ ತೈಲ ಪಡೆಯುವ ಮೂಲಕ ಕೊರತೆ ನೀಗಿಸಲು ಯತ್ನಿಸಲಾಗುತ್ತಿದೆ.

ಹಾರ್ಮುಜ್ ಬಗ್ಗೆ ಅಮೆರಿಕ ಜತೆ ಚರ್ಚಿಸಿಲ್ಲ: ಭಾರತ

ಪುಟ ೧→ ಶಿಪ್ಪಿಂಗ್ ಮಾರ್ಗಗಳು ನಿರ್ಬಂಧಿತವಾಗಿದ್ದರೂ, ಎರಡು ಭಾರತೀಯ ಎಲ್‌ಪಿಜಿ ವಾಹಕ ನೌಕೆಗಳು ಶನಿವಾರ ಯಶಸ್ವಿಯಾಗಿ ಈ ಜಲಸಂಧಿ ದಾಟಿವೆ. ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ತಗ್ಗಿಸಲು ರಾಜತಾಂತ್ರಿಕ ಮಾರ್ಗ ಅಳವಡಿಸಿಕೊಳ್ಳಲು ಭಾರತ ಕರೆನೀಡಿದೆ.

ಸಂಸತ್ತಲ್ಲಿ ಕಾಂಗ್ರೆಸ್ ಸದಸ್ಯರ ವರ್ತನೆ: ಸೋನಿಯಾಗೆ ಎಚ್‌ಡಿಡಿ ಪತ್ರ

ಪುಟ ೧→ ಇದು ಸಂಸತ್ತಿನ ಘನತೆಯನ್ನು ಕುಗ್ಗಿಸುತ್ತಿದೆ. ಸಂಸದೀಯ ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಧಕ್ಕೆ ಉಂಟು ಮಾಡುತ್ತದೆ ಎಂದು ಮಾಜಿ ಪ್ರಧಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಬಿಸ್ಕತ್ತು, ಪಕೋಡಾ ಸೇವನೆ ಅತಿರೇಕದ ಕ್ರಮ: ಸಂಸತ್ತಿನ ಮೆಟ್ಟಿಲುಗಳ ಮೇಲೆ ಚಹಾ ಸೇವನೆ ಮಾಡುವುದು ಸರಿಯಾದ ನಡವಳಿಕೆ ಅಲ್ಲ. ಈ ಹಿಂದೆ ವಿರೋಧ ಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿಯನ್ನು ಗೌರವಿಸಿ ಸಂಯಮದಿಂದ ವರ್ತಿಸಿದ್ದವು. ಸಂಸತ್ತಿನ ಮೆಟ್ಟಿಲುಗಳ ಮೇಲೆ ಕುಳಿತು ಚಹಾ, ಬಿಸ್ಕತ್ತು, ಪಕೋಡಾ ತಿನ್ನುವುದು ಅತಿರೇಕದ ಕ್ರಮಗಳು. ಇವು ಅನುಚಿತ ಎಂದು ಗೌಡರು ಟೀಕಿಸಿದ್ದಾರೆ.

ಪೀಠಕ್ಕೆ ತೋರುವ ಅಗೌರವ: ವಿರೋಧ ಪಕ್ಷದ ನಾಯಕನ ಕರ್ತವ್ಯ ಸುಲಭವಲ್ಲ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅವರ ಎದುರು ಬೆಟ್ಟದಷ್ಟು ಸವಾಲುಗಳು ಇರುತ್ತವೆ. ಜನರ ಸಂಕಷ್ಟಗಳ ಬಗ್ಗೆ ಕಾಲ ಕಾಲಕ್ಕೆ ಸರಕಾರದ ಗಮನಕ್ಕೆ ತರಬೇಕಾಗುತ್ತದೆ. ಹಾಗಿದ್ದರೂ ಪ್ರತಿಭಟನೆ ಮಾಡುವ ಸಂದರ್ಭ ಬಂದರೆ ಅದಕ್ಕೆ ತನ್ನದೇ ಆದ ರೀತಿನೀತಿ ಇರುತ್ತದೆ. ಅಂತಹ ಸಂದರ್ಭದಲ್ಲಿ ಪೀಠಕ್ಕೆ ಅಗೌರವ ತೋರುವ, ಅಪಚಾರ ಎಸಗುವ ಕೆಲಸ ಆಗಬಾರದು. ನನ್ನ ಕಾಳಜಿ ಮತ್ತು ನನ್ನ ಉದ್ದೇಶವನ್ನು ನೀವು ಅರ್ಥಮಾಡಿಕೊಳ್ಳುತ್ತೀರಿ ಎಂದು ನನಗೆ ನಂಬಿಕೆಯಿದೆ. ನಾನು ಯಾರನ್ನೂ ಲಘುವಾಗಿ ನೋಡುವ ಅಥವಾ ಯಾರ ಉತ್ಸಾಹವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿಲ್ಲ. ಆದರೆ, ವಿರೋಧ ಪಕ್ಷದ ಹಿರಿಯ ಸ್ಥಾನದಲ್ಲಿರುವ ನೀವು, ನಿಮ್ಮ ರಾಜಕೀಯ ಅನುಭವ ಮತ್ತು ಪ್ರಬುದ್ಧತೆಯನ್ನು ಬಳಸಿಕೊಂಡು ನಿಮ್ಮ ಪಕ್ಷದ ನಾಯಕರು ಮತ್ತು ಇತರರೊಂದಿಗೆ ಮಾತನಾಡಿ ಸರಿಪಡಿಸಬೇಕು ಒತ್ತಾಯಿಸುತ್ತೇನೆ ಎಂದು ದೇವೇಗೌಡರು, ಸೋನಿಯಾ ಗಾಂಧಿ ಅವರನ್ನು ಪತ್ರದ ಮೂಲಕ ಆಗ್ರಹಿಸಿದ್ದಾರೆ.

ರಾಷ್ಟ್ರ ಸೇವಿಕಾ ಸಮಿತಿ ಹಿರಿಯ ಪ್ರಚಾರಿಕಾ ರೇಖಾ ರಾಜೆ ನಿಧನ

ಹೊಸದಿಲ್ಲಿ: ರಾಷ್ಟ್ರ ಸೇವಿಕಾ ಸಮಿತಿಯ ಹಿರಿಯ ಪ್ರಚಾರಿಕಾ ಮತ್ತು ಮಾಜಿ ಅಖಿಲ ಭಾರತೀಯ ಸಹ-ಸರಕಾರ್ಯವಾಹಿಕಾ ರೇಖಾ ರಾಜೆ (ರೇಖಾತಾಯಿ) ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ದಿಲ್ಲಿಯ ಏಮ್ಸ್‌ನಲ್ಲಿ ನಿಧನರಾದರು.



ರೇಖಾ ರಾಜೇ ಅವರು ಕಾನ್ಪುರದಲ್ಲಿ ಜನಿಸಿದರು. ಎಳೆಯ ವಯಸ್ಸಿನಿಂದಲೇ ಸಾಮಾಜಿಕ ಮತ್ತು ರಾಷ್ಟ್ರೀಯತಾವಾದಿ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ನಾಸಿಕ್‌ನಲ್ಲಿ ರಾಷ್ಟ್ರ ಸೇವಿಕಾ ಸಮಿತಿ ಶಾಖೆಯ ಸಂಪರ್ಕಕ್ಕೆ ಬಂದರು. ಅವರು ಪುಣೆಯಲ್ಲಿ ತಮ್ಮ ಆರಂಭಿಕ ಶಿಕ್ಷಣವನ್ನು ಪಡೆದರು, ಕಾನ್ಪುರ ವಿಶ್ವವಿದ್ಯಾಲಯದಿಂದ ಎಂ.ಎ. (ಸಮಾಜಶಾಸ್ತ್ರ) ಮತ್ತು ಬಿ.ಎಡ್. ಪದವಿಗಳನ್ನು ಪಡೆದರು.

ತುರ್ತು ಪರಿಸ್ಥಿತಿಯ ಸಮಯದಲ್ಲಿ, ಅವರು ಕಾನ್ಪುರದಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಪ್ರತಿಭಟನಾ ಚಳವಳಿಯಲ್ಲಿ ಮಹಿಳೆಯನ್ನು ಸಜ್ಜುಗೊಳಿಸುವಲ್ಲಿ ಪ್ರಮುಖಪಾತ್ರ ವಹಿಸಿದರು. ಅಶೋಕ್ ಸಿಂಘಾಲ್ ಮತ್ತು ಸಿಂಧುತಾಯಿ ಪಾಠಕ್ ಅವರಿಂದ ಪ್ರೇರಿತರಾದ ರೇಖಾತಾಯಿ, ರಾಷ್ಟ್ರೀಯ ಸೇವಿಕಾ ಸಮಿತಿಯ ಪೂರ್ಣಕಾಲಿಕ ಪ್ರಚಾರಿಕಾರಾದರು. ತಮ್ಮ ಇಡೀ ಜೀವನವನ್ನು ಸಂಘಟನಾ ಕಾರ್ಯಕ್ಕೆ ಮೀಸಲಿಟ್ಟು ಮತ್ತು ರಾಷ್ಟ್ರದ ಸೇವೆಯಲ್ಲಿ ಅವರು ಅವಿವಾಹಿತರಾಗಿ ಉಳಿಯಲು ಪ್ರತಿಜ್ಞೆ ಮಾಡಿದರು.

ರೇಖಾತಾಯಿ ಅವರು ದಿಲ್ಲಿ ಪ್ರಾಂತ ಪ್ರಚಾರಿಕಾ, ಉತ್ತರ ಕ್ಷೇತ್ರ ಪ್ರಚಾರಿಕಾ ಮತ್ತು ಅಖಿಲ ಭಾರತೀಯ ಪ್ರಚಾರಿಕಾ ಪ್ರಮುಖ್ ಸಹಿತ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಹಲವು ವರ್ಷಗಳ ಕಾಲ ಜಲಂಧರ್ ಕೇಂದ್ರ ಸ್ಥಾನವಾಗಿರಿಸಿ ಉತ್ತರ ಕ್ಷೇತ್ರದಾದ್ಯಂತ ಸಮಿತಿಕಾರ್ಯವನ್ನು ವಿಸ್ತರಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರ್ಯಾಣ ಮತ್ತು ಹಿಮಾಚಲ ಪ್ರದೇಶದಂತಹ ಸೂಕ್ಷ್ಮ ಹಾಗೂ ಗಡಿ ಪ್ರದೇಶಗಳಲ್ಲಿ ರಾಷ್ಟ್ರೀಯ ಸೇವಿಕಾ ಸಮಿತಿಯ ಕಾರ್ಯ ವಿಸ್ತರಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಕಾಶ್ಮೀರದಲ್ಲಿ ಹಿಂದುಗಳ ಹತ್ಯಾಕಾಂಡದ ಸಮಯದಲ್ಲಿ ರೇಖಾ ತಾಯಿ ಅನೇಕ ಹುಡುಗಿಯರನ್ನು ರಕ್ಷಿಸಿದ್ದಾರೆ. ಹೆತ್ತವರನ್ನು ಕಳೆದುಕೊಂಡ ಹೆಣ್ಣುಮಕ್ಕಳಿಗಾಗಿ ಜಮ್ಮುವಿನಲ್ಲಿ ಅವರು ಅದಿತಿ ಹಾಸ್ಟೆಲ್ ಅನ್ನು ಸ್ಥಾಪಿಸಿದ್ದಾರೆ. ಲವ್ ಜಿಹಾದ್‌ನಲ್ಲಿ ಸಿಲುಕಿರುವ ಅನೇಕ ಹಿಂದು ಹುಡುಗಿಯರನ್ನು ರಕ್ಷಿಸುವಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ರೇಖಾ ರಾಜೆ ಅವರ ಪಾರ್ಥಿವ ಶರೀರವನ್ನು ದಿಲ್ಲಿಯಿಂದ ಕಾನ್ಪುರದ ಅವರ ಮನೆಗೆ ತರಲಾಯಿತು. ಅಲ್ಲಿ ಸಾರ್ವಜನಿಕ ದರ್ಶನದ ಬಳಿಕ ಅಂತಿಮ ಯಾತ್ರೆಯು ಭೈರವಘಾಟ್ ಗೆ ತೆರಳಿ ಅಂತಿಮ ವಿಧಿವಿಧಾನಗಳೊಂದಿಗೆ ಅಂತ್ಯ ಸಂಸ್ಕಾರ ನಡೆಸಲಾಯಿತು.

ಸಚಿವರಿಂದ ಸಹಾಯವಾಣಿ ವ್ಯವಸ್ಥೆಗೆ ಚಾಲನೆ

ಬೆಂಗಳೂರು: ವ್ಯಸನಮುಕ್ತ ಸಮಾಜ ನಿರ್ಮಾಣದ ಉದ್ದೇಶದಿಂದ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಕಚೇರಿಯಲ್ಲಿ ಸಾರ್ವಜನಿಕರಿಗಾಗಿ ಸ್ಥಾಪಿಸಲಾದ ಸಹಾಯವಾಣಿ (ಹೆಲ್ಪ್‌ಲೈನ್) ವ್ಯವಸ್ಥೆಗೆ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಸಚಿವರು, ವಿದ್ಯಾರ್ಥಿಗಳು ಹಾಗೂ ಸಾರ್ವ ಜನಿಕರಲ್ಲಿ ಮದ್ಯಪಾನ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ರಾಜ್ಯದಾದ್ಯಂತ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ಹೇಳಿದರು.

ಮದ್ಯಪಾನ ಮತ್ತು ಮಾದಕ ವಸ್ತುಗಳ ಬಳಕೆ ವ್ಯಕ್ತಿಯ ಆರೋಗ್ಯ, ಕುಟುಂಬದ ಶಾಂತಿ ಹಾಗೂ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವುದರ ಜೊತೆಗೆ ಯುವಪೀಳಿಗೆಯ ಭವಿಷ್ಯಕ್ಕೂ ದೊಡ್ಡ ಅಪಾಯವನ್ನುಂಟು ಮಾಡುತ್ತಿದೆ. ಇದಲ್ಲದೆ ಸಮಾಜದಲ್ಲಿ ಹೆಚ್ಚುತ್ತಿರುವ ಅಕ್ರಮ ಮದ್ಯ ಸೇವನೆ, ಅಕ್ರಮ ಮಾರಾಟ ಹಾಗೂ ಮಾದಕ ವಸ್ತುಗಳ ಬಳಕೆಯನ್ನು ತಡೆಯಲು ಸಾರ್ವಜನಿಕರ ಸಹಕಾರ ಅತ್ಯಗತ್ಯವಿದೆ. ಈ ಸಂಬಂಧ ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರೆತಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಮಂಡಳಿಯ ಸಹಾವಾಣಿ ಸಂಖ್ಯೆ: 080-22863230ಗೆ ಕರೆ ಮಾಡಿ ದೂರು ನೀಡಬಹುದು ಎಂದರು. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರು ಮಾತನಾಡಿ, ಸಾರ್ವಜನಿಕರಿಂದ ಬರುವ ದೂರುಗಳು ಮತ್ತು ಮಾಹಿತಿಗಳನ್ನು ಗೌಪ್ಯವಾಗಿ ಪರಿಗಣಿಸಲಾಗುವುದಲ್ಲದೆ, ಸಂಬಂಧಪಟ್ಟವರ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಮದ್ಯ ಮತ್ತು ಮಾದಕ ವಸ್ತುಗಳಿಂದ ಸಮಾಜವನ್ನು ರಕ್ಷಿಸುವುದು ಎಲ್ಲರ ಜವಾಬ್ದಾರಿಯಾಗಿದೆ. ಆದ್ದರಿಂದ ಸಾರ್ವಜನಿಕರು ಜಾಗೃತರಾಗಿದ್ದು ಇಂತಹ ಅಕ್ರಮ ಚಟುವಟಿಕೆಗಳ ವಿರುದ್ಧ ಧೈರ್ಯವಾಗಿ ಮಾಹಿತಿ ನೀಡುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಈ ಸಹಾಯವಾಣಿಯು, ಸರ್ಕಾರಿ ರಜಾ ದಿನಗಳು ಹೊರತುಪಡಿಸಿ ಕಚೇರಿ ಸಮಯದ ವೇಳೆ ಅಂದರೆ ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ರವರೆಗೆ ಕಾರ್ಯನಿರ್ವಹಿಸಲಿದೆ. ಈ ವೇಳೆ ಕಲ್ಬುರ್ಗಿ ಡಿ.ಡಿ.ಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸೋಮಶೇಖರ್ ಗೋನಾಯಕ್, ಮಂಡಳಿ ಅಧ್ಯಕ್ಷರ ಕಾರ್ಯದರ್ಶಿ ನರಸಿಂಹಮೂರ್ತಿ, ಮಂಡಳಿ ಕಾರ್ಯದರ್ಶಿ ಎನ್.ಎಸ್. ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಆಲಿಕಲ್ಲು ಮಳೆ, ಸಿಡಿಲಿಗೆ ಬಾಲಕ ಬಲಿ

ಬೆಂಗಳೂರು: ರಾಜ್ಯದ ರಾಯಚೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆಯಾಗಿದೆ. ಈ ಅಕಾಲಿಕ ಮಳೆಯು ಬಿಸಿಲಿನಿಂದ ಜನರಿಗೆ ತಂಪೆರೆದರೂ, ರಾಯಚೂರಿನ ಮಾವು ಬೆಳೆಗಾರರು ಮತ್ತು ಇತರೆ ರೈತರಿಗೆ ಬೆಳೆ ಹಾನಿಯ ಭೀತಿ ತಂದೊಡ್ಡಿದೆ.

ಹೊಲದಲ್ಲಿ ಕೆಲಸ ಮಾಡುತ್ತಿದ್ದ ಕೊಪ್ಪಳ ಜಿಲ್ಲೆ ಯಲಬುರ್ಗಾದ ಎನ್.ಜರಕುಂಟಿಯ ಮಂಜುನಾಥ್ (15) ಸಿಡಿಲಿಗೆ ಬಲಿಯಾಗಿದ್ದಾನೆ. ಬಿಸಿಲ ನಾಡು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಮಲ್ಲದಗುಡ್ಡ ಸೇರಿದಂತೆ ವಿವಿಧೆಡೆ ಸುಮಾರು ಒಂದು ಗಂಟೆ ಕಾಲ ನಿರಂತರ ಆಲಿಕಲ್ಲು ಮಳೆಯಾಗಿದೆ. ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ಮಳೆ ತಂಪು ನೀಡಿದ್ದರೂ, ಆಲಿಕಲ್ಲುಗಳ ಅಬ್ಬರ ಮಾವು ಬೆಳೆಗಾರರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಹೂವು ಬಿಟ್ಟಿದ್ದ ಮಾವಿನ ಗಿಡಗಳಿಗೆ ಆಲಿಕಲ್ಲು ಮಳೆ ಏಟು ನೀಡಿದ್ದು, ಬೆಳೆ ಹಾನಿಯಾಗುವ ಭೀತಿ ಎದುರಾಗಿದೆ.

ರಾಜ್ಯದ ಕರಾವಳಿ ಮತ್ತು ಉತ್ತರ ಒಳನಾಡಿನ ಒಂದೆರಡು ಕಡೆಗಳಲ್ಲಿ ಮಳೆಯಾಗಿದೆ. ಬೀದರ್‌ನಲ್ಲಿ ಆಲಿಕಲ್ಲು ಮಳೆಯಾಗಿದ್ರೆ, ಹುಬ್ಬಳ್ಳಿಯಲ್ಲಿ ಗುಡುಗು ಸಹಿತ ಭಾರೀ ಮಳೆಗೆ ಜನರು ಬೆಚ್ಚಿದ್ದಾರೆ. ಇತ್ತ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಾತ್ರ ಒಣಹವೆ ಮುಂದುವರಿದಿದೆ.



ಬೀದರ್ ನಗರದಲ್ಲಿ ಭಾರೀ ಬಿರುಸಿನ ಮಳೆಯಾಗಿದ್ದು ಸಂಜೆ ವೇಳೆಗೆ ಬಿರುಗಾಳಿ ಹಾಗೂ ಗುಡುಗು ಸಹಿತ ಭಾರೀ ಮಳೆಯಾಗಿದ್ದು, ಸುಡುಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ತಂಪೆರೆದಿದ್ದಾನೆ. ಧಾರವಾಡ, ಕೊಡಗು ಜಿಲ್ಲೆಯ ಮಡಿಕೇರಿ ನಗರ, ಕಕ್ಕಬ್ಬೆ, ನೆಲಜಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಮಳೆಯಾಗಿದೆ. ಕೋಲಾರ, ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ಕೊಪ್ಪ ಮತ್ತು ಕಳಸ ಭಾಗದಲ್ಲಿ ಭಾರೀ ಮಳೆಯಾಗಿದ್ದರೆ, ಶೃಂಗೇರಿ ಹಾಗೂ ಚಿಕ್ಕಮಗಳೂರು ನಗರದಲ್ಲಿ ಸಾಧಾರಣ ಮಳೆಯಾಗಿದೆ. ಮತ್ತೊಂದೆಡೆ ರೈತರು ಜೋಳವನ್ನು ಕಟಾವು ಮಾಡಿ ಜೋಳ ರಾಶಿ ಮಾಡಲು ಸಿದ್ಧತೆ ನಡೆಸಿದ್ದು, ಈ ವೇಳೆ ಅಕಾಲಿಕ ಮಳೆಯಾಗಿದ್ದು, ಹೊಲದಲ್ಲಿ ಕಟಾವು ಮಾಡಿ ಜೋಡಿಸಿದ ಜೋಳ ಭಾರೀ ಮಳೆಯಿಂದಾಗಿ ಹಾನಿಯಾಗಿದೆ. ಕೈಗೆ ತುತ್ತು ಬಾಯಿಗೆ ಬರಲಿಲ್ಲ ಅಂತ ರೈತರು ಬೇಸರಗೊಂಡಿದ್ದಾರೆ.

ಸದನದ ಗಂಭೀರತೆ ಅರ್ಥ ಮಾಡಿಕೊಳ್ಳಿ: ಶಾಸಕ ಸುನೀಲ್

•ಬೆಂಗಳೂರು: ಮುಖ್ಯಮಂತ್ರಿಗಳು ಸದನದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಶಾಸಕ ಸುನೀಲ್ ಕುಮಾರ್ ಒತ್ತಾಯಿಸಿದ್ದಾರೆ.



ಮಾಧ್ಯಮಪ್ರತಿನಿಧಿಗಳ ಜೊತೆ ಸೋಮವಾರ ಮಾತನಾಡಿ, ಪ್ರಶ್ನೆಗಳಿಗೆ ಉತ್ತರ ನೀಡುವ ವೇಳೆ ಸಚಿವರು ಸದನದಲ್ಲಿ ಹಾಜರಿರುವಂತೆ ಎಚ್ಚರಿಕೆಯನ್ನು ಸರ್ಕಾರ ಕೊಟ್ಟಿದ್ದರೂ ಪ್ರಯೋಜನವಾಗಿಲ್ಲ; ಇವತ್ತು 230 ಲಿಖಿತ ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳಿಗೆ ಮಾತ್ರ ಸರ್ಕಾರ ಉತ್ತರ ಕೊಟ್ಟಿದೆ. ಇದು ಸಹಜವಾಗಿ ವಿಧಾನಸಭಾಧ್ಯಕ್ಷರಿಗೆ ಬೇಸರ ತರಿಸಿದೆ ಎಂದು ವಿಶ್ಲೇಷಿಸಿದರು.

ಸರ್ಕಾರದ ನಿಲುವನ್ನು ಖಂಡಿಸಿ ಇತಿಹಾಸದಲ್ಲೇ ಮೊದಲ ಬಾರಿಗೆ ಸಭಾಧ್ಯಕ್ಷರು ಅವರ ಪೀಠವನ್ನು ಬಿಟ್ಟು ಹೋಗಿದ್ದಾರೆ. ಇದು ಆಘಾತಕಾರಿ ಸಂಗತಿ ಎಂದು ತಿಳಿಸಿದರು. ಸರ್ಕಾರಕ್ಕೆ ಸದನ, ಸಂವಿಧಾನದ ಕುರಿತು ಹಾಗೂ ಸದನದ ನಡವಳಿಕೆ ಬಗ್ಗೆ ಗೌರವ ಇದ್ದರೆ, ಮುಖ್ಯಮಂತ್ರಿಗಳು ಸ್ವತಃ ಈ ವಿಚಾರದಲ್ಲಿ ಪ್ರವೇಶ ಮಾಡಿ ಪ್ರಶ್ನೆಗಳಿಗೆ ಉತ್ತರ ಕೊಡುವುದಷ್ಟೇ ಅಲ್ಲ; ಸದನವನ್ನು ಸಚಿವರು ಯಾವರೀತಿ ಗಂಭೀರವಾಗಿ ತೆಗೆದುಕೊಳ್ಳಬೇಕು ಮತ್ತು ಅಧಿಕಾರಿಗಳು ಗಂಭೀರವಾಗಿ ತೆಗೆದುಕೊಳ್ಳಬೇಕೆಂಬುದನ್ನು ಸ್ಪಷ್ಟಪಡಿಸಲಿ ಎಂದು ಒತ್ತಾಯಿಸಿದರು.

ಸಿಎಂ ಈ ವಿಷಯದಲ್ಲಿ ಅಸಹಾಯಕರಾಗಿದ್ದಾರೆ. ಕಳೆದ ಬಾರಿ ಅಧಿವೇಶನ ದಲ್ಲಿ ಎಲ್ಲ ಸಚಿವರು ಅಧಿವೇಶನದ ಸಂದರ್ಭದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕೆಂದು ಸ್ವತಃ ಸಿಎಂಗಳು ಸಚಿವರಿಗೆ ಪತ್ರ ಬರೆದಿದ್ದರು. ಸಿಎಂಗಳ ಪತ್ರಕ್ಕೆ ಬೆಲೆ ಇಲ್ಲ, ಆಡಳಿತ ಹಿಡಿತ ತಪ್ಪಿದೆ ಎಂಬುದು ಗೊತ್ತಾಗಿದೆ ಎಂದರು. ಇಡೀ ವರ್ಷದಲ್ಲಿ ಅಧಿ ವೇಶನ 40 ದಿನ ನಡೆಯುವುದೇ ಕಷ್ಟ, ಆ ಅಧಿವೇಶನದಲ್ಲಿ ಸದಸ್ಯರಿಗೆ ಸರಿಯಾದ ಉತ್ತರ ಸಿಗುತ್ತಿಲ್ಲ, ಯಾವುದೋ ಪ್ರಶ್ನೆಗೆ ಯಾವುದೋ ಉತ್ತರ ಕೊಡಲಾಗುತ್ತಿದೆ. ಇದೊಂದು ಪರಿಪಾಠವಾಗಿದೆ ಎಂದರು.

ಡಿಸಿಎಂ ಪರಿಶೀಲನೆ



ವಿಧಾನಸೌಧದ ಆವರಣದಲ್ಲಿ ತೆರೆದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯ ಮಳಿಗೆಗೆ ಸೋಮವಾರ ಸಂಜೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಭೇಟಿ ನೀಡಿ, ನಿಗಮದ ಉತ್ಪನ್ನಗಳನ್ನು ಪರಿಶೀಲಿಸಿದರು. ಕೆಎಸ್ ಡಿಎಲ್ ಅಧ್ಯಕ್ಷ ಸಿ.ಎಸ್. ನಾಡಗೌಡ (ಅಪ್ಪಾಜಿ) ಹಾಜರಿದ್ದರು.

ಅಮರೇಶ, ಹೆನ್ರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

•ಬೆಂಗಳೂರು: ಸಾಹಿತಿ ಅಮರೇಶ ನುಗಡೋಣಿ ಅವರ ದಡ ಸೇರಿಸು ತಂದೆ ಕಥಾ ಸಂಕಲನ ಹಾಗೂ ಕೊಂಕಣಿ ಸಾಹಿತಿ ಮತ್ತು ಪತ್ರಕರ್ತ ಮಂಗಳೂರಿನ ಹೆನ್ರಿ ಮೆಂಡೋನ್ಸಾ ಅವರ ಲುಸಾವ ಆನಿ ದಿಶಾಶಾ ಸಾಹಿತ್ಯ ವಿಮರ್ಶೆ ಕೃತಿಗೆ 2025ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.





ಈ ಪ್ರಶಸ್ತಿಯು 1 ಲಕ್ಷ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಡಾ. ಜಯಲಲಿತ ಮತ್ತು ಸಹನಾ ಕಾಂಚನ್ ಅವರನ್ನು ಒಳಗೊಂಡ ತಜ್ಞರ ಸಮಿತಿಯು ಈ ಕೃತಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 2025ರ ಜ.30ರಂದು ಆರಂಭವಾದ ಸುದೀರ್ಘ ಆಯ್ಕೆ ಪ್ರಕ್ರಿಯೆ ನಂತರ ಈ ಅಧಿಕೃತ ಘೋಷಣೆ ಹೊರಬಿದ್ದಿದೆ.

ರಾಯಚೂರು ಜಿಲ್ಲೆಯವರಾದ ಅಮರೇಶ ನುಗಡೋಣಿ ಅವರು, ಗ್ರಾಮೀಣ ಬದುಕಿನ ಸಮಸ್ಯೆಗಳು ಹಾಗೂ ವಿಷಯ ಗಳನ್ನು ತಮ್ಮ ಕಥೆಗಳಲ್ಲಿ ನೈಜವಾಗಿ ಚಿತ್ರಿಸುವುದಕ್ಕೆ ಹೆಸರುವಾಸಿ ಯಾಗಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾಗಿದ್ದಾರೆ. ಮಂಗಳೂರಿನ ಹೆನ್ರಿ ಮೆಂಡೋನ್ಸಾ ಅವರು ಕೊಂಕಣಿ ಸಾಹಿತ್ಯದ ಪ್ರಮುಖ ಕವಿ, ಸಣ್ಣ ಕಥೆಗಾರ, ವಿಮರ್ಶಕ ಮತ್ತು ಸಂಪಾದಕರಾಗಿದ್ದು, ಇವರು ಕೇವಲ ಸಾಹಿತಿಯಾಗಿ ಮಾತ್ರವಲ್ಲದೆ, ಕೊಂಕಣಿ ಸಾಹಿತ್ಯವನ್ನು ಡಿಜಿಟಲ್ ಲೋಕಕ್ಕೆ ಕೊಂಡೊಯ್ಯುವಲ್ಲಿ ಮತ್ತು ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ಕಿರುಸುದ್ದಿ

ಆಂಬುಲೆನ್ಸ್‌ಗೆ ಪೂರಕ ಸಿಬ್ಬಂದಿ ನೇಮಕಾತಿ

•ವಿಧಾನಪರಿಷತ್: ರಾಜ್ಯ ಸರ್ಕಾರವೇ ಆಂಬುಲೆನ್ಸ್‌ಗಳ ಕೇಂದ್ರೀಕೃತ ನಿರ್ವಹಣಾ ವ್ಯವಸ್ಥೆಯನ್ನು 112 ಅಡಿಯಲ್ಲಿ ಅನುಷ್ಠಾನಗೊಳಿಸಲು ಮುಂದಾಗಿದ್ದು, 3 ತಿಂಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಟಿ.ಎನ್. ಜವರಾಯಿಗೌಡ ಅವರು ಆ್ಯಂಬುಲೆನ್ಸ್ ವ್ಯವಸ್ಥೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯ ಆ್ಯಂಬುಲೆನ್ಸ್‌ಗಳನ್ನು ತ್ವರಿತ ಹಾಗೂ ಪರಿಣಾಮಕಾರಿಯಾಗಿ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ 112 ಎಂಬ ಕೇಂದ್ರಿಕೃತ ನಿರ್ವಹಣಾ ವ್ಯವಸ್ಥೆಯನ್ನು ಸರ್ಕಾರವೇ ವಹಿಸಿಕೊಳ್ಳಲಿದೆ. ಈ ನೂತನ ವ್ಯವಸ್ಥೆ 3 ತಿಂಗಳಲ್ಲಿ ಅನುಷ್ಠಾನವಾಗುವ ಸಾಧ್ಯತೆ ಇದ್ದು, ತಾಂತ್ರಿಕತೆಯ ಅಳವಡಿಕೆಯ ಕಾರ್ಯ ಪ್ರಗತಿಯಲ್ಲಿದೆ ಎಂದು ಹೇಳಿದರು. ಅದೇ ರೀತಿ ಆ್ಯಂಬುಲೆನ್ಸ್‌ಗೆ ಪೂರಕ ಸಿಬ್ಬಂದಿ ನೇಮಕಾತಿಯನ್ನೂ ಸರ್ಕಾರ ಶೀಘ್ರದಲ್ಲಿಯೇ ಕೈಗೊಳ್ಳಲಿದೆ. ಕೇಂದ್ರ ಸರ್ಕಾರದ ಮಾನದಂಡ ಗಳ ಅನ್ವಯ ರಾಜ್ಯದಲ್ಲಿ ಆ್ಯಂಬುಲೆನ್ಸ್‌ಗಳು ಸಮರ್ಪಕ ವಾಗಿವೆ, ಆ್ಯಂಬುಲೆನ್ಸ್‌ಗಳ ಕೊರತೆ ರಾಜ್ಯದಲ್ಲಿ ಇಲ್ಲ, ಆರೋಗ್ಯ ಕವಚ ವ್ಯಾಪ್ತಿಯಲ್ಲಿ 715 ಹಾಗೂ ರಾಜ್ಯದ 1 ಸಾವಿರ ಒಟ್ಟಾರೆಯಾಗಿ 1,715 ಆ್ಯಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಇನ್ನೂ ಹೆಚ್ಚುವರಿಯಾಗಿ 262 ಆ್ಯಂಬುಲೆನ್ಸ್‌ಗಳ ಖರೀದಿಗೆ ಸರ್ಕಾರ ಮುಂದಾಗಿದೆ ಎಂದರು.

ವಾರದಲ್ಲಿ ನಾಲ್ಕು ಗಂಟೆ ದೈಹಿಕ ಶಿಕ್ಷಣಕ್ಕೆ ಮೀಸಲು

•ವಿಧಾನಪರಿಷತ್: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಾರದಲ್ಲಿ ಪ್ರತಿ ತರಗತಿಗೆ 4 ತಾಸನ್ನು ದೈಹಿಕ ಶಿಕ್ಷಣಕ್ಕೆ ಮೀಸಲಿಡಲಾಗಿದೆ. ಮೌಲ್ಯ ಶಿಕ್ಷಣವನ್ನು ಪ್ರತ್ಯೇಕ ಪಿರಿಯಡ್‌ನಲ್ಲಿ ಬೋಧಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಚಿದಾನಂದ ಗೌಡ ಕೇಳಿದ ಪ್ರಶ್ನೆ ವೇಳೆ ಪ್ರತಿಕ್ರಿಯಿಸಿದ ಅವರು, ರಾಜ್ಯದ ಪ್ರಾಥಮಿಕ ಶಿಕ್ಷಣದಲ್ಲಿ 6,771 ದೈಹಿಕ ಶಿಕ್ಷಕರ ಹುದ್ದೆ ಮಂಜೂರಾಗಿದ್ದು, ಈ ಪೈಕಿ 3,361 ಹುದ್ದೆ ಖಾಲಿ ಇದೆ. ಪ್ರೌಢ ಶಾಲೆಗಳಲ್ಲಿ 5,223 ಹುದ್ದೆ ಮಂಜೂರಾಗಿದೆ. 1,841 ಹುದ್ದೆ ಖಾಲಿ ಉಳಿದಿವೆ. ಮುಂದಿನ 15 ಸಾವಿರ ಶಿಕ್ಷಕರ ನೇಮಕಾತಿಯ ಸಂದರ್ಭದಲ್ಲಿ ದೈಹಿಕ ಶಿಕ್ಷಕರ ನೇಮಕ್ಕೆ ಹೆಚ್ಚು ಒತ್ತು ನೀಡುವುದಾಗಿ ಸಚಿವರು ಭರವಸೆ ನೀಡಿದರು. ಚಿದಾನಂದ ಗೌಡ ಮಾತನಾಡಿ, ಉತ್ತಮ ಮನಸ್ಸಿನೊಂದಿಗೆ ಉತ್ತಮ ದೈಹಿಕ ಆರೋಗ್ಯವು ಅಗತ್ಯ. ಆದ್ದರಿಂದ ಮಕ್ಕಳ ದೈಹಿಕ ಶಿಕ್ಷಣ ಚಟುವಟಿಕೆಗೆ ಕಡಿವಾಣ ಹಾಕಬಾರದು ಎಂದು ಒತ್ತಾಯಿಸಿದರು.

ರಾಜ್ಯಮಟ್ಟದ ಸಮಿತಿ ರಚನೆ

•ವಿಧಾನಪರಿಷತ್: ರಾಜ್ಯದ ಶಿಕ್ಷಣ ಮಹಾವಿದ್ಯಾಲಯಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆಗಾಗಿ ಐವರು ಸದಸ್ಯರನ್ನೊಳಗೊಂಡ ರಾಜ್ಯಮಟ್ಟದ ಸಮಿತಿ ರಚಿಸಲಾಗಿದ್ದು, ಈ ಸಮಿತಿ ವರದಿ ಆಧರಿಸಿ ಶುಲ್ಕ ಪರಿಷ್ಕರಣೆಯ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು. ಪ್ರಶ್ನೋತ್ತರ ವೇಳೆ ಕಾಂಗ್ರೆಸ್ ಸದಸ್ಯ ಮಧು ಜಿ. ಮಾದೇಗೌಡ ಅವರು ಬಿಇಡಿ ಮಹಾವಿದ್ಯಾಲಯಗಳ ಪ್ರವೇಶ ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಶುಲ್ಕ ಪರಿಷ್ಕರಣೆ ವಿಷಯವಾಗಿ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ಸಹ ನಡೆದಿದ್ದು, ಸಮಗ್ರವಾಗಿ ಚರ್ಚೆ ನಡೆಸಲಾಗಿದೆ. ಶುಲ್ಕ ಪರಿಷ್ಕರಣೆಗೆ ಸಮಿತಿ ವರದಿ ನೀಡಿದ ಬಳಿಕವೇ ಸರ್ಕಾರ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುತ್ತಿದೆ ಎಂದರು.

ವಕ್ಫ್ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಹೇಳಿಕೆ

ದೇವಸ್ಥಾನ, ಶಾಲೆಗಳ ಆಸ್ತಿಗಳಿಗೆ ಕೈ ಹಾಕಲ್ಲ

•ವಿಧಾನಸಭೆ: ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಒತ್ತುವರಿಯನ್ನು ತೆರವುಗೊಳಿಸಿ ಆಸ್ತಿಗಳನ್ನು ಮರಳಿ ಪಡೆಯಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ ಯಾವುದೇ ದೇವಸ್ಥಾನ, ಶಾಲೆಗಳಿಗೆ ಕೈ ಹಾಕುವುದಿಲ್ಲ ಎಂದು ವಕ್ಫ್ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಎಂ.ವೈ. ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ 1,12,862 ಎಕರೆ ವಕ್ಫ್ ಆಸ್ತಿ ಇದೆ. ಈ ಆಸ್ತಿ ಸರ್ಕಾರದಿಂದ ಬಂದದ್ದಲ್ಲ, ಖಾಸಗಿ ವ್ಯಕ್ತಿಗಳು ಸಮಾಜದ ಅಭಿವೃದ್ಧಿಗೆ ಕೊಟ್ಟಿರುವುದು. ಅದರಲ್ಲಿ ಕೇವಲ 20,054 ಎಕರೆಗಳು ನಮ್ಮ ಬಳಿಯಿದೆ. 17,969 ಎಕರೆಗಳನ್ನು ಅತಿಕ್ರಮಣ ಮಾಡಲಾಗಿದೆ. 47,263 ಎಕರೆಗಳು ಇನಾಂ ರದ್ದತಿ ಕಾಯ್ದೆಯಡಿ ಮತ್ತು 23,627 ಎಕರೆಗಳು ಭೂ ಸುಧಾರಣಾ ಕಾಯ್ದೆಯಿಂದಾಗಿ ನಮ್ಮ ಕೈ ಬಿಟ್ಟು ಹೋಗಿವೆ. ವಕ್ಫ್ ಆಸ್ತಿಯನ್ನು ಒತ್ತುವರಿ ಮಾಡಿದವರು ಮುಸ್ಲಿಂ ಸಮುದಾಯದವರೇ ಎಂದು ಹೇಳಿದರು.

ವಕ್ಫ್ ಆಸ್ತಿ ಒತ್ತುವರಿ ತೆರವಿಗಾಗಿ ರಾಜ್ಯಾದ್ಯಂತ ವಕ್ಫ್ ಅದಾಲತ್‌ಗಳನ್ನು ನಡೆಸಲಾಗಿದೆ. ವಕ್ಫ್ ಅದಾಲತ್‌ನ ಬಗ್ಗೆ ಹಿಂದೆ ಪ್ರತಿಪಕ್ಷಗಳು ಟೀಕೆ ಮಾಡಿದ್ದವು. ಆದರೆ, ಈ ಅದಾಲತ್ ನಡೆಸಿರುವುದು ವಕ್ಫ್ ಆಸ್ತಿ ಉಳಿಸಲು. ದೇವಸ್ಥಾನ, ಶಾಲೆಗಳಿಗೆ ಬಳಕೆಯಾಗಿರುವ ವಕ್ಫ್ ಆಸ್ತಿಗಳನ್ನು ನಾವು ಹಾಗೆಯೇ ಬಿಟ್ಟಿದ್ದೇವೆ. ಖಾಸಗಿ ವ್ಯಕ್ತಿಗಳು ವಕ್ಫ್ ಆಸ್ತಿಗಳನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತೆರವು ಮಾಡುತ್ತಿದ್ದೇವೆ ಎಂದು ಸಚಿವರು ಸ್ಪಷ್ಟಪಡಿಸಿದರು.

ವಕ್ಫ್ ಆಸ್ತಿಯಲ್ಲಿ ಬೇಸಾಯ ಮಾಡುತ್ತಿದ್ದರೆ ರೈತರಿಗೆ ನೀಡಿ

ಈ ವೇಳೆ ಮಧ್ಯೆ ಪ್ರವೇಶಿಸಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ, ವಕ್ಫ್ ಆಸ್ತಿ ಒತ್ತುವರಿ ತೆರವು ಮಾಡಿ. ಅದಕ್ಕೆ ನಮ್ಮ ಆಕ್ಷೇಪವಿಲ್ಲ. ಹಿಂದೆ ದೇವಸ್ಥಾನಗಳಿಗೂ ಬಹಳಷ್ಟು ಇನಾಂ ಭೂಮಿ ಇತ್ತು. ಭೂ ಸುಧಾರಣಾ ಕಾಯ್ದೆಯಡಿ ಉಳುವ ರೈತರಿಗೆ ನೀಡಲಾಗಿದೆ. ಅದೇ ರೀತಿ ವಕ್ಫ್ ಆಸ್ತಿಯಲ್ಲಿ ಯಾರಾದರೂ ಬೇಸಾಯ ಮಾಡುತ್ತಿದ್ದರೆ ಅದನ್ನು ಅವರಿಗೇ ಕೊಟ್ಟುಬಿಡಿ. ಅತಿಕ್ರಮಣದ ಬಗ್ಗೆ ತನಿಖೆ ಮಾಡಿ ಎಂದು ನಾವೂ ಹೇಳುತ್ತಿದ್ದೇವೆ. ಬೆಂಗಳೂರಿನ ವಿಂಡ್ಸರ್ ಮ್ಯಾನರ್ ಹೋಟೆಲ್ ಇರುವ ಜಾಗ ಸಹ ವಕ್ಫ್ ಆಸ್ತಿ. ಆ ಬಗ್ಗೆಯೂ ಸಚಿವರೇ ಮಾತನಾಡಿ ಎಂದು ಹೇಳಿದರು. ಅದಕ್ಕೆ ಸಚಿವರು ಅದು ಸುಪ್ರೀಂ ಕೋರ್ಟ್‌ನಲ್ಲಿದೆ ಎಂದು ಉತ್ತರಿಸಿದರು. ಸರ್ಕಾರ ಯಾವುದೇ ದೇವಾಲಯಗಳು ಅಥವಾ ಶಿಕ್ಷಣ ಸಂಸ್ಥೆಗಳ ಜಮೀನನ್ನು ವಕ್ಫ್ ಆಸ್ತಿ ಎಂದು ಹೇಳಿಕೊಳ್ಳುವ ಮೂಲಕ ಅವುಗಳ ಮೇಲೆ ಕೈ ಹಾಕುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಸ್ಮಶಾನ ಭೂಮಿ ಮಂಜೂರಿಗೆ ಕ್ರಮ

•ವಿಧಾನಸಭೆ: ಸ್ಮಶಾನ ಇಲ್ಲದ ಗ್ರಾಮಗಳಿಗೆ ಸ್ಮಶಾನ ಭೂಮಿ ಮಂಜೂರಿಗೆ ಸರ್ಕಾರಿ ಜಮೀನು ಇಲ್ಲದಿದ್ದರೆ, ಮಾರ್ಗಸೂಚಿ ದರಕ್ಕಿಂತ ಮೂರು ಪಟ್ಟು ಹಣ ನೀಡಿ ಖಾಸಗಿ ಜಮೀನು ಖರೀದಿಗೆ ಸರ್ಕಾರ ಸಿದ್ಧ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಪ್ರಭು ಚೌಹಾಣ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಕಳೆದ 70 ವರ್ಷಗಳಿಂದ ಎಲ್ಲಾ ಸರ್ಕಾರಗಳೂ ಇರುವ ಭೂಮಿಯನ್ನೆಲ್ಲಾ ರೈತರಿಗೆ ಹಾಗೂ ವಿವಿಧ ಜನಪರ ಯೋಜನೆಗಳಿಗೆ ಮಂಜೂರು ಮಾಡಿದೆ. ಪ್ರಸ್ತುತ ಸ್ಮಶಾನಕ್ಕೂ ಭೂಮಿ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ಹತ್ತು ವರ್ಷಗಳಿಂದ ಎಲ್ಲಾ ಸರ್ಕಾರಗಳೂ ವಸತಿ ಪ್ರದೇಶಗಳಿಗೆ ಅವಶ್ಯ ಇರುವಷ್ಟು ಸ್ಮಶಾನ ಭೂಮಿ ನೀಡಬೇಕು ಎಂದು ಪ್ರಯತ್ನಿಸಿದೆ. ಈ ವಿಚಾರದಲ್ಲಿ ಹೈಕೋರ್ಟ್ ಸಹ ಸರ್ಕಾರದ ಬೆನ್ನುಹತ್ತಿದೆ. ಸರ್ಕಾರಿ ಜಮೀನು ಇದ್ದಲ್ಲಿ ಆ ಭೂಮಿಯನ್ನೇ ಸ್ಮಶಾನಕ್ಕೆ ಕಾಯ್ದಿರಿಸಲಾಗಿದೆ. ಸರ್ಕಾರಿ ಜಮೀನು ಇಲ್ಲದಿದ್ದ ಭಾಗಗಳಲ್ಲಿ ಸ್ಮಶಾನ ಭೂಮಿ ನೀಡುವ ಸಲುವಾಗಿ ಕಳೆದ 3 ವರ್ಷದಲ್ಲಿ 58 ಕೋಟಿ ರೂ. ಕೊಟ್ಟು ಭೂಮಿಯನ್ನು ಖರೀದಿ ಮಾಡುವ ಹಂತಕ್ಕೆ ಬಂದು ನಿಂತಿದ್ದೇವೆ ಎಂದು ವಿಷಾದಿಸಿದರು.

ಔರಾದ್ ತಾಲೂಕಿನ ಪರಿಸ್ಥಿತಿ ಬಗ್ಗೆಯೂ ಸದನಕ್ಕೆ ಮಾಹಿತಿ ನೀಡಿದ ಅವರು, ಔರಾದ್ ತಾಲೂಕಿನ 154 ವಸತಿ ಪ್ರದೇಶಗಳ ಪೈಕಿ 9 ಪ್ರದೇಶಗಳಲ್ಲಿ ಸ್ಮಶಾನ ಇಲ್ಲ ಎಂಬ ವರದಿ ಇದೆ. ಈ 9 ಗ್ರಾಮಗಳ ಪೈಕಿ 2 ಗ್ರಾಮಗಳಿಗೆ ಆ ಗ್ರಾಮದ ಮಿತಿಯಲ್ಲೇ ಸರ್ಕಾರಿ ಭೂಮಿ ಲಭ್ಯ ಇದ್ದು, ಒಂದು ವಾರದಲ್ಲಿ ಸ್ಮಶಾನ ಭೂಮಿಗೆ ಕಾಯ್ದಿರಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಲಾಗಿದೆ.

ಇನ್ನೂ 7 ವಸತಿ ಪ್ರದೇಶಗಳಿಗೆ ಪಕ್ಕದ ಗ್ರಾಮದಲ್ಲಿ ಭೂಮಿ ಇದ್ದು, ಅದನ್ನು 15 ದಿನಗಳ ಒಳಗೆ ಕಾಯ್ದಿರಿಸಲು ಸೂಚಿಸಲಾಗಿದೆ ಎಂದರು.

ಬಗರ್‌ಹುಕುಂ ಸಾಗುವಳಿ ಸಮಿತಿ ರಚಿಸಿಲ್ಲ

•ವಿಧಾನಸಭೆ: ರಾಜ್ಯದ 15 ವಿಧಾನಸಭಾ ಕ್ಷೇತ್ರಗಳಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ರಚನೆಯಾಗಿಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಡಾ. ಅವಿನಾಶ್ ಜಾಧವ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಒಟ್ಟು 175 ವಿಧಾನಸಭಾ ಕ್ಷೇತ್ರಗಳಲ್ಲಿ ಸಮಿತಿ ರಚಿಸಲಾಗಿದೆ. ಅಲ್ಲದೇ 16 ಹೆಚ್ಚುವರಿ ಸಮಿತಿ ರಚಿಸಿದ್ದು, ಪ್ರಸಕ್ತ 191 ಬಗರ್ ಹುಕುಂ ಸಮಿತಿಗಳಿವೆ. ಬೈಂದೂರು ಮತ್ತು ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಸಮಿತಿಗಳಿಗೆ ಸಂಬಂಧಿಸಿ ಪ್ರಕರಣಗಳು ನ್ಯಾಯಾಲಯದಲ್ಲಿವೆ ಎಂದರು. ಮೊದಲು ತಾಲೂಕುವಾರು ಸಮಿತಿ ರಚನೆ ಮಾಡಲಾಗುತ್ತಿತ್ತು. ಈಗ ವಿಧಾನಸಭಾ ಕ್ಷೇತ್ರವಾರು ಸಮಿತಿ ರಚಿಸಲಾಗುತ್ತಿದೆ. ಒಂದು ವೇಳೆ ಹೆಚ್ಚುವರಿ ಸಮಿತಿಯ ಅಗತ್ಯವಿದ್ದರೆ ಹೆಚ್ಚುವರಿ ಸಮಿತಿ ರಚಿಸುವುದಕ್ಕೂ ಅವಕಾಶವಿದೆ ಎಂದರು.

ಉತ್ತರ ನೀಡದ ಅಧಿಕಾರಿಗಳ ಅಮಾನತು

•ವಿಧಾನಸಭೆ: ಸದನದಲ್ಲಿ ಕೇಳಲಾಗುವ ಲಿಖಿತ ಪ್ರಶ್ನೆಗಳಿಗೆ ವಿವಿಧ ಇಲಾಖೆಗಳಿಂದ ಬರುವ ಉತ್ತರಗಳಲ್ಲಿ ವಿಳಂಬ ಆಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಉತ್ತರ ನೀಡುವಲ್ಲಿ ವಿಳಂಬ ಮಾಡುವ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದರು.



ಉತ್ತರದಲ್ಲಿ ಆಗುತ್ತಿರುವ ವಿಳಂಬಕ್ಕೆ ಸಭಾಧ್ಯಕ್ಷರು ಅಸಮಾಧಾನಗೊಂಡ ಬೆಳಗ್ಗೆ ಸಭಾತ್ಯಾಗ ಮಾಡಿದ್ದ ಬಗ್ಗೆ ಮಧ್ಯಾಹ್ನದ ನಂತರ ಕಲಾಪ ಆರಂಭವಾಗುತ್ತಿದಂತೆ ಸರ್ಕಾರದ ಪರವಾಗಿ ಉತ್ತರಿಸಿದ ಪರಮೇಶ್ವರ ಅವರು, ಸಭಾಧ್ಯಕ್ಷರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ, ನೋಟಿಸ್ ನೀಡುವಂತೆ ಮುಖ್ಯಕಾರ್ಯದರ್ಶಿಗೆ ಹೇಳಿದ್ದು, ತುಂಬಾ ಪ್ರಶ್ನೆಗಳು ಅವರಲ್ಲೇ ಉಳಿದುಕೊಂಡಿದ್ದರೆ ಅವರನ್ನು ಅಮಾನತು ಮಾಡಿ ಎಂದು ಹೇಳಿದ್ದಾರೆ ಎಂದು ತಿಳಿಸಿದರು.

ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ, ಕಂದಾಯ ಇಲಾಖೆಯ 91 ಪ್ರಶ್ನೆಗಳಲ್ಲಿ 29 ಉತ್ತರಗಳು ಮಾತ್ರ ಬಂದಿವೆ. ಮುಂದೆ ಇಂತಹ ಬೆಳವಣಿಗೆ ನಡೆಯದಂತೆ ಸೂಕ್ತ ಸಮಯದಲ್ಲಿ ಉತ್ತರ ನೀಡಲಿದೆ ಎಂದು ಸರ್ಕಾರದ ಪರವಾಗಿ ಭರವಸೆ ನೀಡಲಾಗುವುದು ಎಂದರು.

ಸಭಾಧ್ಯಕ್ಷರ ತೀರ್ಮಾನವನ್ನು ಸ್ವಾಗತಿಸುವೆ, ಸಚಿವರು ಅಧಿಕಾರಿಗಳಿಗೆ ಜವಾಬ್ದಾರಿ ನಿಗದಿಮಾಡಬೇಕು, ಅಧಿಕಾರಿಗಳ ವಿರುದ್ಧ ಕ್ರಮ ಆಗಬೇಕು, ಕೆಲವು ಅಧಿಕಾರಿಗಳು ಸದನಕ್ಕೆ ಬರುವುದಿಲ್ಲ, ಅಧಿಕಾರಿಗಳಿಗೆ ಗಂಭೀರತೆ ಇಲ್ಲ, ಮುಖ್ಯಕಾರ್ಯದರ್ಶಿಗಳು ಅಧಿಕಾರಿಗಳ ಸಭೆ ಕರೆಯಬೇಕು, ಅವರು ಕೈ ಚಲ್ಲಿ ಕೂತಿದ್ದಾರೆ, ಸದನದಲ್ಲಿ ಏನು ಮಾಡಿದೆ ಎಂದು ಕ್ಷೇತ್ರದ ಜನ ನಮ್ಮನ್ನು ಕೇಳುತ್ತಾರೆ. ವಿಳಂಬ ಮಾಡುವ ಅಧಿಕಾರಿಗಳನ್ನು ಅಮಾನತು ಮಾಡಬೇಕು. ಕೆಲವು ಐಎಎಸ್ ಅಧಿಕಾರಿಗಳು 8 ರಿಂದ 10 ತಿಂಗಳು ಕಚೇರಿಗೆ ಬಂದೇ ಇಲ್ಲ, ಅವರಿಗೆ ಗಾಲ್ಫ್ ಆಡುವುದಕ್ಕೆ ಸಮಯ ಇರುತ್ತೆ ಸದನಕ್ಕೆ ಬರಲು ಸಮಯ ಇರಲ್ಲ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಅಸಮಾಧಾನ ವ್ಯಕ್ತಪಡಿಸಿದರು.

ಟಿ-20 ವಿಶ್ವಕಪ್‌ನಲ್ಲಿ ಭಾರತ ತಂಡಕ್ಕೆ ಜಯ: ಶ್ಲಾಘನೆ

•ವಿಧಾನಪರಿಷತ್: ಇತ್ತೀಚೆಗೆ ಟಿ-20 ವಿಶ್ವಕಪ್‌ನಲ್ಲಿ ಜಯ ಗಳಿಸಿದ ಭಾರತ ತಂಡಕ್ಕೆ ಸೋಮವಾರ ಮೇಲ್ಮನೆಯಲ್ಲಿ ಸದಸ್ಯರೆಲ್ಲರೂ ಶ್ಲಾಘನೀಯ ವ್ಯಕ್ತಪಡಿಸಿದರು. ಸದನದಲ್ಲಿ ಸದಸ್ಯ ಡಿ.ಎಸ್. ಅರುಣ್ ಅವರು ಈ ವಿಷಯವನ್ನು ಪ್ರಸ್ತಾಪಿಸಿದ್ದು, ಟಿ-20 ವಿಶ್ವಕಪ್‌ನಲ್ಲಿ ಭಾರತ ಗೆಲುವು ಸಾಧಿಸಿದೆ. ಆದ್ದರಿಂದ ಈ ಗೆಲುವಿನ ಗರಿಯನ್ನು ಮುಡಿಗೇರಿಸಿಕೊಂಡಿರುವ ನಮ್ಮ ಭಾರತ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ನಂತರ ಸದನದ ಸದಸ್ಯರೆಲ್ಲರೂ ಮೇಜು ತಟ್ಟಿ ಭಾರತ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಆಗ ಸಭಾಪತಿ ಪೀಠದಲ್ಲಿದ್ದ ಎಂ.ಕೆ. ಪ್ರಾಣೇಶ್ ಅವರು ಅಭಿನಂದನಾ ಪತ್ರವನ್ನು ಬಿಸಿಸಿಐ ಸಂಸ್ಥೆಗೆ ಕಳುಹಿಸಲಾಗುವುದು ಎಂದು ಹೇಳಿದರು.

ಕರ್ನಾಟಕ ಪೊಲೀಸು ತಿದ್ದುಪಡಿ ವಿಧೇಯಕ ಅಂಗೀಕಾರ

•ವಿಧಾನಸಭೆ: 2026ನೇ ಸಾಲಿನ ಕರ್ನಾಟಕ ಪೊಲೀಸು ತಿದ್ದುಪಡಿ ವಿಧೇಯಕವು ವಿಧಾನಸಭೆಯಲ್ಲಿ ಅಂಗೀಕಾರಗೊಂಡಿತು. ವಿಧೇಯಕವನ್ನು ಮಂಡಿಸಿ ಮಾತನಾಡಿದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು, ಪೊಲೀಸ್ ಸಿಬ್ಬಂದಿ ಅಥವಾ ಅಧಿಕಾರಿಯು ದುರ್ನಡತೆ ಅಥವಾ ಅಸಮರ್ಪಕ ಕಾರ್ಯವೈಖರಿಯಿಂದ ಅವರನ್ನು ವರ್ಗಾವಣೆ ಮಾಡಬೇಕಾದಲ್ಲಿ ಸರ್ಕಾರದ ಅನುಮತಿ ಬೇಕಾಗಿತ್ತು ಈ ವಿಧೇಯಕದಿಂದ ಪೊಲೀಸ್ ಸಿಬ್ಬಂದಿ ಅಥವಾ ಅಧಿಕಾರಿಯ ವರ್ಗಾವಣೆಯನ್ನು ಪೊಲೀಸ್ ಅನುಷ್ಠಾನ ಮಂಡಳಿಗೆ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ಪಿಇಬಿಗೆ ವರ್ಗಾವಣೆ ಅಧಿಕಾರ: ಕರ್ತವ್ಯ ಲೋಪ, ದುರ್ನಡತೆ ಅಥವಾ ಅಶಿಸ್ತು ತೋರುವ ಡಿವೈಎಸ್ಪಿ ಶ್ರೇಣಿಯವರೆಗಿನ ಅಧಿಕಾರಿಗಳನ್ನು ಸರ್ಕಾರದ ಪೂರ್ವಾನುಮತಿಗಾಗಿ ಕಾಯದೆ ನೇರವಾಗಿ ವರ್ಗಾವಣೆ ಮಾಡುವ ಅಧಿಕಾರವನ್ನು ಪೊಲೀಸ್ ಅನುಷ್ಠಾನ ಮಂಡಳಿಗೆ (ಪಿಇಬಿ) ನೀಡಲು ಉದ್ದೇಶಿಸಲಾಗಿದೆ. ಈ ಮೊದಲು ಯಾವುದೇ ಅಧಿಕಾರಿಯನ್ನು ವರ್ಗಾಯಿಸಲು ಕನಿಷ್ಠ 2 ವರ್ಷಗಳ ಕಾಲಾವಕಾಶ ಇರಬೇಕಿತ್ತು. ಆದರೆ ಹೊಸ ತಿದ್ದುಪಡಿಯ ಪ್ರಕಾರ, ಗಂಭೀರ ಲೋಪಗಳು ಕಂಡುಬಂದಲ್ಲಿ ಈ ಕನಿಷ್ಠ ಅವಧಿಯ ನಿಯಮ ಅನ್ವಯಿಸುವುದಿಲ್ಲ.

ಅನಧಿಕೃತ ಜಾಹೀರಾತು ಪ್ಲಾಸ್ಟಿಕ್ ಬಳಕೆಗೆ ದಂಡ

•ವಿಧಾನಸಭೆ: ಅನಧಿಕೃತವಾಗಿ ಜಾಹೀರಾತು ಅಳವಡಿಸಿದಲ್ಲಿ ದಂಡ ಹಾಕಲಾಗುವುದು, ಪ್ಲಾಸ್ಟಿಕ್ ಬಳಕೆ ಮಾಡಿದರೆ ದಂಡ ಹಾಕಲಾಗುವುದು, ತಂತ್ರಜ್ಞಾನದ ನೆರವಿನಿಂದ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳನ್ನು ಗುರುತಿಸಿ ತೆರವುಗೊಳಿಸುವ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ವಿಧೇಯಕವು ವಿಧಾನಸಭೆಯಲ್ಲಿ ಅಂಗೀಕಾರವಾಯಿತು.

ಈ ತಿದ್ದುಪಡಿ ವಿಧೇಯಕದಲ್ಲಿ ನಗರಸಭೆ ವ್ಯಾಪ್ತಿಯ ಸಾರ್ವನಿಕ ಇಲ್ಲವೇ ಖಾಸಗಿ ಸ್ಥಳಗಳಲ್ಲಿ ಜಾಹೀರಾತು ಪ್ರದರ್ಶಿಸಲು ಶುಲ್ಕ ಪಾವತಿ ಮಾಡಬೇಕಿದ್ದು, ಸ್ಥಳೀಯ ಪೌರ ಪಾಲಿಕೆಯ ಅನುಮತಿ ಇಲ್ಲದೇ ಪಾಲಿಕೆ ಪ್ರದೇಶದ ವ್ಯಾಪ್ತಿಯಲ್ಲಿ ಜಾಹೀರಾತು ಪ್ರದರ್ಶಿಸುವಂತಿಲ್ಲ. ಜಾಹೀರಾತು ಉಲ್ಲಂಘನೆ ಮತ್ತು ಶುಲ್ಕ ಬಾಕಿ ಇದ್ದಲ್ಲಿ ಅನುಮತಿ ಸಿಗುವುದಿಲ್ಲ.

ಅನಧಿಕೃತ ಜಾಹೀರಾತುಗಳ ತೆರವು: ಅನುಮತಿ ಮುಕ್ತಾಯದ ನಂತರವೂ ಜಾಹೀರಾತು ಪ್ರದರ್ಶಿಸಿದಲ್ಲಿ ಅದನ್ನು ತೆರವುಗೊಳಿಸಬಹುದಾಗಿದ್ದು, ಅಧಿಕೃತ ಮತ್ತು ಅನಧಿಕೃತ ಜಾಹೀರಾತು ಶುಲ್ಕವನ್ನು ಪಾವತಿಸದಿದ್ದಲ್ಲಿ ಶುಲ್ಕ ಅಥವಾ ದಂಡದ ಬಾಕಿ ದಿನದಿಂದ ಪಾವತಿವರೆಗೆ ವಾರ್ಷಿಕ ಶೇ.18ರ ಬಡ್ಡಿ ದರದಲ್ಲಿ ದಂಡ ವಿಧಸಬಹುದಾಗಿದೆ. ಜಾಹೀರಾತು ಆಕಾರದ ಮೇಲೆ ಶುಲ್ಕ ನಿಗದಿ ಮಾಡಲಾಗುತ್ತಿದೆ.

ವಿಧೇಯಕವನ್ನು ಮಂಡಿಸಿ ಮಾತನಾಡಿದ ಸಚಿವ ಬೈರತಿ ಸುರೇಶ್ ಅವರು, ಜಾಹೀರಾತಿಗೆ ಶುಲ್ಕ ವಿಧಿಸುವ ಕುರಿತಾದ ಈ ತಿದ್ದುಪಡಿ ವಿಧೇಯಕದಲ್ಲಿ ಸ್ವಂತ ಜಾಗದಲ್ಲಿ ಫಲಕ ಅಳವಡಿಸುವುದು, ಸರ್ಕಾರಿ ಜಾಗದಲ್ಲಿ ಖಾಸಗಿ ಫಲಕ ಅಳವಡಿಸುವುದು ಹಾಗೂ ಸರ್ಕಾರಿ ಜಾಗದಲ್ಲಿ ಸರ್ಕಾರಿ ಫಲಕ ಅಳವಡಿಸಲು ಶುಲ್ಕ ನಿಗದಿಪಡಿಸಲಾಗುವುದು ಎಂದರು.

ಪ್ಲಾಸ್ಟಿಕ್ ಬಳಸಿದರೆ ದಂಡ: ಸಾರ್ವಜನಿಕರಿಗೆ ತೊಂದರೆ ಆಗದ ಜಾಗದಲ್ಲಿ ಜಾಹೀರಾತು ಹಾಕಲು ಅವಕಾಶ ನೀಡಲಾಗುವುದು, ಜಾಹೀರಾತಿನ ವಿನ್ಯಾಸದ ಆಧಾರದ ಮೇಲೆ ಶುಲ್ಕ ನಿಗದಿಪಡಿಸಲಾಗುವುದು. ಫ್ಲೆಕ್ಸ್, ಬ್ಯಾನರ್ ಕೂಡಾ ತಿದ್ದುಪಡಿ ವಿಧೇಯಕದಲ್ಲಿ ಬರಲಿದ್ದು, ಅನಧಿಕೃತವಾಗಿ ಜಾಹೀರಾತು ಅಳವಡಿಸಿದಲ್ಲಿ ದಂಡ ಹಾಕಲಾಗುವುದು, ಪ್ಲಾಸ್ಟಿಕ್ ಬಳಕೆ ಮಾಡಿದರೆ ದಂಡ ಹಾಕಲಾಗುವುದು, ತಂತ್ರಜ್ಞಾನದ ನೆರವಿನಿಂದ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳನ್ನು ಗುರುತಿಸಿ ತೆರವುಗೊಳಿಸಲಾಗುವುದು ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಕಳವಳ

ಅರೆ ವೈದ್ಯಕೀಯ ಕಾಲೇಜು ಮುಚ್ಚುವ ಭೀತಿ

•ವಿಧಾನಪರಿಷತ್: ನ್ಯಾಷನಲ್ ಕಮೀಷನ್ ಫಾರ್ ಅಲೈಡ್ ಆ್ಯಂಡ್ ಹೆಲ್ತ್ ಕೇರ್ ಪ್ರೊಫೆಶನ್ಸ್ (ಎನ್‌ಸಿಎಎಚ್‌ಪಿ) ಸುತ್ತೋಲೆಯಿಂದಾಗಿ ರಾಜ್ಯದಲ್ಲಿರುವ ಪ್ಯಾರಾ ಮೆಡಿಕಲ್ ಕಾಲೇಜುಗಳು ಮುಚ್ಚುವ ಭೀತಿ ಉಂಟಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಕಳವಳ ವ್ಯಕ್ತಪಡಿಸಿದ್ದಾರೆ.

ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ಐವಾನ್ ಡಿಸೋಜಾ ಅವರು ಈ ಬಗ್ಗೆ ಪ್ರಸ್ತಾಪಿಸಿದ್ದು, ಎಸ್‌ಎಸ್‌ಎಲ್‌ಸಿ ನಂತರ ಈ ಕೋರ್ಸ್ ಅನ್ನು ರಾಜ್ಯದಲ್ಲಿ ಸಾವಿರಾರು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಈಗ ಪಿಯುಸಿಯಲ್ಲಿ ವಿಜ್ಞಾನ ತಗೆದುಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದರು.

ಡಿಪ್ಲೊಮಾ ಕೋರ್ಸ್‌ಗಳನ್ನು ಪದವಿಗೆ ಸಮವಾಗಿ ಮೇಲ್ದರ್ಜೆಗೆ ಏರಿಸಬೇಕು ಎಂಬ ನಿಯಮ ಅಳವಡಿಸಲು ತೀರ್ಮಾನಿಸಲಾಗಿದೆ. ಆದರೆ, ಈ ನಿಯಮಗಳನ್ನು ಸರಳೀಕರಿಸುವಂತೆ ಆಯೋಗದ ಅಧ್ಯಕ್ಷರೊಂದಿಗೆ ಮಾತನಾಡಿದ್ದೇವೆ. ಅವರು, ಈ ಬಗ್ಗೆ ಸಭೆ ಕರೆದು ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ. ಇದು ದೇಶವ್ಯಾಪಿ ಜಾರಿಗೆ ಬರುವ ನಿಯಮ ಎಂದು ಸಚಿವರು ಹೇಳಿದರು.

ನೀಟ್ ತರಬೇತಿಗೆ ಒತ್ತು



•ವಿಧಾನಪರಿಷತ್: ನೀಟ್ ಪರೀಕ್ಷೆಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇನ್ನಷ್ಟು ಪರಿಣಾಮಕಾರಿಯಾದ ತರಬೇತಿ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ವಿವಿಧ ಉಪಕ್ರಮಗಳನ್ನು ಕೈಗೊಳ್ಳಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಮೇಲ್ಮನೆ ಕಾಂಗ್ರೆಸ್ ಸದಸ್ಯ ಐವಾನ್ ಡಿಸೋಜಾ, ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳು 3 ಲಕ್ಷ ರೂ. ಶುಲ್ಕ ನೀಡಿ ನೀಟ್ ತರಬೇತಿ ಪಡೆದುಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಶರಣಪ್ರಕಾಶ್ ಪಾಟೀಲ, ನೀಟ್ ವ್ಯವಸ್ಥೆಯಿಂದ ರಾಜ್ಯದ ಸೀಟ್‌ಗಳಿಗೆ ಯಾವ ಕೊರತೆ ಇಲ್ಲ. ನೀಟ್ ಸೀಲ್‌ಗಳ ಸಂಖ್ಯೆ ಕಡಿಮೆಯಾಗಿಲ್ಲ. ನೀಟ್ ವ್ಯವಸ್ಥೆಯನ್ನು ರದ್ದುಗೊಳಿಸಬೇಕು ಎಂದು ನಾವು ನಿರ್ಣಯವನ್ನಷ್ಟೇ ಸ್ವೀಕರಿಸಿದ್ದೇವೆ. ಆದರೆ, ಸುಪ್ರೀಂಕೋರ್ಟ್ ನೀಟ್ ವ್ಯವಸ್ಥೆಯ ಪರವಾಗಿ ತೀರ್ಪು ನೀಡಿದೆ. ಹೀಗಾಗಿ ಸರ್ಕಾರ ಹಲವು ಉಪಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಇದಕ್ಕೂ ಮೊದಲು ಐವಾನ್ ಡಿಸೋಜಾ, ಈವರೆಗೂ ಎಸ್‌ಎಸ್‌ಎಲ್‌ಸಿ ನಂತರ ವೈದ್ಯಕೀಯ ಕ್ಷೇತ್ರದ ತರಬೇತಿ ಪಡೆಯಲು ಅವಕಾಶವಿತ್ತು. ಆದರೆ, ಇನ್ನೂ ಮುಂದೆ ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾದವರಿಗೆ ಮಾತ್ರ ಪ್ರವೇಶ ಎಂದು ನಿಯಮ ರೂಪಿಸಿರುವುದು ಹೊಸ ಶೈಕ್ಷಣಿಕ ಬಿಕ್ಕಟ್ಟಿಗೆ ನಾಂದಿಯಾಗಿದೆ. ಈ ನೂತನ ನಿಯಮವನ್ನು 2026-27ನೇ ಸಾಲಿನಿಂದಲೇ ಜಾರಿಗೆ ತರಲು ಸೂಚಿಸಿದೆ. ಇದರಿಂದ ರಾಜ್ಯದಲ್ಲಿ ಪ್ರಸ್ತುತ 32 ಸರ್ಕಾರಿ ಹಾಗೂ 608 ಖಾಸಗಿ ಕಾಲೇಜು ಸೇರಿ 640 ಪ್ಯಾರಾ ಮೆಡಿಕಲ್ ಶಿಕ್ಷಣ ಸಂಸ್ಥೆಗಳಿವೆ. ಹೊಸ ನಿಯಮ ಜಾರಿಯಾದರೆ 450 ರಿಂದ 500 ಕಾಲೇಜುಗಳಿಗೆ ಅರ್ಹ ಅಭ್ಯರ್ಥಿಗಳ ಕೊರತೆ ಉಂಟಾಗಲಿದೆ ಎಂದು ತಿಳಿಸಿದರು.

ಸದನಕ್ಕೆ ಸಚಿವರೇ ಬರಲ್ಲ: ಛಲವಾದಿ ನಾರಾಯಣಸ್ವಾಮಿ

•ವಿಧಾನಪರಿಷತ್: ಸದನಕ್ಕೆ ಕಡ್ಡಾಯ ಹಾಜರಾತಿ ಇದ್ದರೂ, ಸಚಿವರು ಹಾಜರಾಗಿಲ್ಲ, ಅಧಿಕಾರಿಗಳೇ ಇಲ್ಲದಿದ್ದರೆ ಹೇಗೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸಭಾಪತಿಗಳನ್ನು ಪ್ರಶ್ನಿಸಿದರು.



ಸದಸ್ಯರ 126 ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲವೆಂದು ತಿಳಿದು ಬಂದಿದೆ. ನಮ್ಮ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು, ಯಾವಾಗ ಪ್ರಶ್ನೆ ಕೇಳಿದರೂ ಅವರಿಗೆ ಸಮರ್ಪಕವಾಗಿ ಉತ್ತರ ಬಂದಿಲ್ಲ, ಇಲ್ಲಿವರೆಗೂ ಪ್ರಶ್ನೆ ಮಾಡುತ್ತಿದ್ದಾರೆ. ನಾವು ಉತ್ತರ ಕೊಡಲಾರದ ಪ್ರಶ್ನೆಯನ್ನು ಕೇಳುತ್ತಿದ್ದೀವಾ? ಎಂದು ಛಲವಾದಿ ಗರಂಆದರು. ಸದಸ್ಯ ಭೋಜೆಗೌಡ ಅವರು, ಕೆಳಮನೆಯಲ್ಲಿ ಸ್ಪೀಕರ್ ಗರಂ ಆಗಿದ್ದರು. ಅಧಿಕಾರಿಗಳ, ಸಚಿವರ ವರ್ತನೆಗೆ ಬೇಸರ ವ್ಯಕ್ತಪಡಿಸಿದ್ದಾರೆ. ನಮ್ಮಲ್ಲೂ ಉತ್ತರ ಸಿಕ್ಕಿಲ್ಲ, ಗಂಭೀರವಾಗಿ ವಿಚಾರ ತೆಗೆದುಕೊಂಡಿಲ್ಲ, ಹೀಗಾದರೆ ಏನು ಮಾಡಬೇಕು ಎಂದು ಅಸಮಾಧಾನ ಹೊರಹಾಕಿದರು.

ಇದಕ್ಕೆ ಬೇಸರ ವ್ಯಕ್ತಪಡಿಸಿದ ಸಭಾಪತಿ, ನಾನೂ ಈ ಬಗ್ಗೆ ಸರ್ಕಾರಕ್ಕೆ ಹೇಳಿದ್ದೇನೆ. ಸರ್ಕಾರ ಕ್ರಮ ಕೈಗೊಳ್ಳಬೇಕು, ಉತ್ತರನೀಡಲುಕೆಲ ಸಚಿವರು ಒಂದು ತಿಂಗಳು ಕಾಲಾವಕಾಶ ಕೇಳುತ್ತಾರೆ. ಸದನ ನಡೆಯುವಾಗ ಮಾಹಿತಿ ಪಡೆಯಬೇಕಲ್ಲವೇ ಎಂದರು.

ಸಭಾನಾಯಕ ಬೋಸರಾಜು ಮಾತನಾಡಿ, ಸಮಸ್ಯೆ ಸರಿಪಡಿಸುವ ಪ್ರಯತ್ನ ಮಾಡಲಾಗುತ್ತದೆ. ಸಿಎಂ ಗಮನಕ್ಕೂ ತರಲಾಗುತ್ತದೆ. ಮುಂದೆ ಹೀಗಾಗದಂತೆ ನೋಡಿಕೊಳ್ಳಲಾಗುತ್ತದೆ ಎಂದರು. ಮತ್ತೆ ಸಭಾಪತಿ ಪ್ರತಿಕ್ರಿಯಿಸಿ, ಉತ್ತರ ನೀಡದ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.

ಶಿಶುಪಾಲನಾ ರಜೆ: 15 ದಿನಗೊಳಗೆ ಮಂಜೂರು

•ವಿಧಾನಪರಿಷತ್: ಶಿಕ್ಷಕಿಯರು ಮಾತೃತ್ವ ರಜೆಯೊಂದಿಗೆ ಶಿಶುಪಾಲನಾ ರಜೆಯನ್ನು ಸಂಯೋಜಿಸಿ ಉಪಯೋಗಿಸಿಕೊಳ್ಳಲು ಇಚ್ಛಿಸಿದ್ದಲ್ಲಿ ಅಥವಾ ಶಿಶುಪಾಲನಾ ರಜೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ರಜಾ ಮನವಿ ಸ್ವೀಕೃತವಾದ 15 ದಿನಗೊಳಗೆ ರಜೆಯನ್ನು ಮಂಜೂರು ಮಾಡಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ವೈ.ಎಂ. ಸತೀಶ್ ಅವರು ಶಿಕ್ಷಕಿಯರಿಗೆ ಶಿಶುಪಾಲನಾ ರಜೆ ಮಂಜೂರು ಮಾಡಲಿರುವ ಮಾನದಂಡಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾತೃತ್ವದ ವರ್ಗಾವಣೆಗೆ ಹೊಸ ಕೆಟಗರಿಯೊಂದನ್ನು ಪ್ರಾರಂಭಿಸಲಾಗುವುದು. ಮಾತೃತ್ವ ರಜಾ ಮನವಿ ಸ್ವೀಕೃತಗೊಂಡ 15 ದಿನಗಳೊಳಗೆ ಸಕ್ಷಮ ಪ್ರಾಧಿಕಾರದಿಂದ ಮಾತೃತ್ವ ರಜೆಯನ್ನು ಮಂಜೂರು ಮಾಡುವ ನೀತಿಯನ್ನು ರೂಪಿಸುತ್ತೇವೆ ಎಂದು ಸಚಿವರು ಭರವಸೆ ನೀಡಿದರು.

ಸಂಪಾದಕೀಯ

ವಿಧಾನಸಭಾ ಮತಸಮರ

ಕೊಲ್ಲಿಯಲ್ಲಿ ನಡೆದಿರುವ ಸಶಸ್ತ್ರ ಯುದ್ಧವು ಭಾರತದಲ್ಲೂ ಕಂಪನವನ್ನೆಬ್ಬಿಸಿ, ಜನಜೀವನದ ಮೇಲೆ ಪರಿಣಾಮ ಬೀರಿರುವ ಮಧ್ಯೆಯೇ ನಾಲ್ಕು ರಾಜ್ಯಗಳಲ್ಲಿ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಇದೀಗ 'ಮತಯುದ್ಧ'ಕ್ಕೆ ಸನ್ನದ್ಧತೆ ನಡೆದಿದೆ. ಅಸ್ಸಾಂ, ಪಶ್ಚಿಮ ಬಂಗಾಳ, ಕೇರಳ ಮತ್ತು ತಮಿಳ್ನಾಡು ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ವಿಧಾನಸಭಾ ಚುನಾವಣೆ ನಡೆಸಲು ದಿನಾಂಕಗಳನ್ನು ಪ್ರಕಟಿಸಲಾಗಿದೆ. ಅದರ ಜತೆಗೇ ಕರ್ನಾಟಕದಲ್ಲಿ ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆಯೂ ನಡೆಯಲಿದೆ. ಮೇ 4ರಂದು ಈ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಲಿದೆ.

ಕೆಲವೊಮ್ಮೆ ಹಲರಾಜ್ಯಗಳ ವಿಧಾನಸಭಾ ಚುನಾವಣೆಗಳು ಲೋಕಸಭಾ ಚುನಾವಣೆಗೆ ಸೆಮಿಫೈನಲ್ ಎಂಬಂತೆ ಬಣ್ಣಿಸಲ್ಪಡುವುದಿದೆ. ಆದರೆ ಈ ಬಾರಿ ಅಂತಹ ಆಯಾಮಗಳೇನೂ ಇಲ್ಲದಿದ್ದರೂ ಪ್ರತಿಯೊಂದು ರಾಜ್ಯದ ಚುನಾವಣೆಯೂ ಅದರದ್ದೇ ಆದ ಕಾರಣಗಳಿಗಾಗಿ ಮಹತ್ವ ಪಡೆದಿರುವುದು ಸುಳ್ಳಲ್ಲ. ಈ ನಿಟ್ಟಿನಲ್ಲಿ ಪ.ಬಂಗಾಳ ಚುನಾವಣೆಯು ಇಡೀ ದೇಶದಲ್ಲೇ ಎಲ್ಲರ ಕುತೂಹಲ ಕೆರಳಿಸಿದೆ. 15 ವರ್ಷಗಳಿಂದ ಅಧಿಕಾರದಲ್ಲಿರುವ



ಮಮತಾ ಬ್ಯಾನರ್ಜಿ ಇನ್ನೊಂದು ಅವಧಿಗೆ ಅಧಿಕಾರದಲ್ಲಿ ಮುಂದುವರಿಯುವರೆ ಅಥವಾ ಈ ಬಾರಿಯಾದರೂ ಎನ್‌ಡಿಎ ಕೂಟವು ಆಕೆಯನ್ನು ಅಧಿಕಾರದಿಂದ ಕೆಳಗಿಳಿಸಲು ಶಕ್ತವಾಗುವುದೆ ಎಂಬ ನಿಟ್ಟಿನಲ್ಲಿ ಈ ಕುತೂಹಲ ಉಂಟಾಗಿದೆ. ಪಶ್ಚಿಮ ಬಂಗಾಳದಲ್ಲಿ ನಡೆಸಿರುವ ಚುನಾವಣಾ ಮತಪಟ್ಟಿಯ ವಿಶೇಷ ಪರಿಷ್ಕರಣೆಯು(ಎಸ್‌ಐಆರ್) ಫಲಿತಾಂಶದ ಮೇಲೆ ಬೀರಲಿರುವ ಪರಿಣಾಮದ ಕುರಿತಂತೆಯೂ ಲೆಕ್ಕಾಚಾರಗಳು ನಡೆದಿವೆ. ಈ ಎಸ್‌ಐಆರ್ ಮಮತಾ ಅವರ ಓಲೈಕೆ ರಾಜಕಾರಣಕ್ಕೆ ದೊಡ್ಡ ಹೊಡೆತ ನೀಡಲಿದೆ ಎಂಬ ಮಾತುಗಳು ಕೇಳಿಬರುತ್ತಿದ್ದು ಅದರ ಸತ್ಯಾಸತ್ಯತೆ ಚುನಾವಣೆಯಿಂದ ಸಾಬೀತಾಗಲಿದೆ.

ತಮಿಳುನಾಡು ಮತ್ತು ಕೇರಳದಲ್ಲಿ ಆಡಳಿತ ಬದಲಾವಣೆಯಾಗುವುದೆ ಅಥವಾ ಆಡಳಿತಾರೂಢ ಪಕ್ಷಗಳೇ ಅಧಿಕಾರಕ್ಕೇರುವವೆ ಎಂಬ ಜಿಜ್ಞಾಸೆ ಆರಂಭವಾಗಿದೆ. ತಮಿಳುನಾಡಲ್ಲಿ ಆಳುವ ಡಿಎಂಕೆ ವಿರುದ್ಧ ಆಡಳಿತ ವಿರೋಧಿ ಅಲೆ ಎದ್ದಿರುವುದು ಸುಳ್ಳಲ್ಲ. ಅಣ್ಣಾಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟವು ಅದರ ಲಾಭ ಪಡೆಯಲು ಯತ್ನಿಸುತ್ತಿವೆ. ಇದರ ಮಧ್ಯೆಯೆ ಚಿತ್ರನಟ ವಿಜಯ್ ಅವರ ಹೊಸ ಪಕ್ಷವು ಯಾವ ಪಕ್ಷಕ್ಕೆ ಹೆಚ್ಚು ಹೊಡೆತ ನೀಡಲು ಸಫಲವಾಗುವುದೆಂಬ ಲೆಕ್ಕಾಚಾರಗಳೂ ಆರಂಭವಾಗಿವೆ. ನಿರೀಕ್ಷೆಯಂತೆ ಡಿಎಂಕೆಗೇ ಅದರ ಹೊಡೆತ ಹೆಚ್ಚಾದರೆ ಅದು ಅಣ್ಣಾಡಿಎಂಕೆ ಗೆಲುವನ್ನು ಸುಗಮಗೊಳಿಸಬಹುದು. ಕೇರಳದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಕೂಡಾ ಆಡಳಿತವಿರೋಧಿ ಅಲೆ ಎದುರಿಸುತ್ತಿದ್ದು, ಈ ಬಾರಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರ ಕಬಳಿಸಿಕೊಂಡರೂ ಅಚ್ಚರಿ ಪಡಬೇಕಾಗಿಲ್ಲ. ಅಸ್ಸಾಂನಲ್ಲಿ ಬಿಜೆಪಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಅವರು ಜನಪ್ರಿಯತೆಯ ತುತ್ತತುದಿಯಲ್ಲಿರುವುದರಿಂದ ಅವರು ಮತ್ತೊಂದು ಅವಧಿಗೆ ಅಧಿಕಾರ ಹಿಡಿಯುವುದು ಖಚಿತ ಎಂಬಂತಹ ಸ್ಥಿತಿಯಿದೆ. ಪುದುಚೇರಿಯಲ್ಲಿ ಕೂಡಾ ಬಿಜೆಪಿ ಬೆಂಬಲದೊಂದಿಗೆ ಸರಕಾರ ನಡೆಸುತ್ತಿರುವ ಎಐಎನ್‌ಆರ್‌ಸಿ ಇನ್ನೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವುದು ಅದು ಅಧಿಕಾರದಲ್ಲಿ ಮುಂದುವರಿಯಲು ನೆರವೀಯಬಹುದು.

ಒಟ್ಟಿನಲ್ಲಿ ಮುಂಬರುವ ಈ ವಿಧಾನಸಭಾ ಚುನಾವಣೆಗಳು ರಾಷ್ಟ್ರೀಯ ಪಕ್ಷಗಳ ಜತೆಗೇ ಕೆಲವು ಪ್ರಾದೇಶಿಕ ಪಕ್ಷಗಳಿಗೂ ಅತ್ಯಂತ ಮಹತ್ವದ್ದಾಗಿವೆ.

ಧೈರ್ಯವನ್ನು ಬಿಡುವುದಿಲ್ಲ

ಲೋಕೇऽನಂತಾನಿ ಕಷ್ಟಾನಿ ನೋಜ್ಝೇದ್ ಧೈರ್ಯಂ ತಥಾಪಿ ವಾ।
ಅರಣ್ಯಾನಿ ವಹನ್ ಶೈಲಃ ಸ್ಥಿರತಾಂ ನೈವ ಮುಂಚತಿ॥ –ಸುವಚನ ಶತಕಂ

ಈ ಪ್ರಪಂಚದಲ್ಲಿ ಕೊನೆಯಿಲ್ಲದ ಎಷ್ಟೋ ಕಷ್ಟಗಳಿವೆ. ಆದರೂ ಮನುಷ್ಯನು ಧೈರ್ಯವನ್ನು ಬಿಡಬಾರದು. ಬೆಟ್ಟವು ದೊಡ್ಡ ಅಡವಿಯನ್ನು ಹೊತ್ತಾಗಲೂ ತನ್ನ ಸ್ಥೈರ್ಯವನ್ನು ಬಿಡುವುದಿಲ್ಲ –ಎಂಬುದು ಶ್ಲೋಕಾರ್ಥ.

ಕಷ್ಟಕ್ಕೆ ಕೊನೆಯೆಂಬುದಿಲ್ಲ. ಜೀವನದುದ್ದಕ್ಕೂ ಅನೇಕ ಬಗೆಯ ಕಷ್ಟಗಳು ಎದುರಾಗುತ್ತವೆ. ಕಷ್ಟಕ್ಕೆ ಅಂಜಿ ಬದುಕುವವನ ಇಷ್ಟಾರ್ಥ ಸಿದ್ಧಿಸುವುದಲ್ಲ. ಕಷ್ಟಕ್ಕೆ ಮುಖಾಮುಖಿಯಾಗಬೇಕೇ ವಿನಾ ಬೆನ್ನು ಹಾಕಬಾರದು. ಕಷ್ಟವನ್ನು ಮೆಟ್ಟಿ ಬದುಕುವುದೇ ನಿಜವಾದ ಬದುಕು.



ಮೂರ್ಖತ್ವವೇ ಕಷ್ಟ. ಯೌವನದಲ್ಲಿ ಬಡತನ ಇನ್ನೊಂದು ಬಗೆಯ ಕಷ್ಟ. ಪರಾನ್ನ, ಪರಗೃಹವಾಸ ಇನ್ನೂ ಕಷ್ಟ. 'ಕಷ್ಟಾ ಖಲು ಆತ್ಮಶಂಕಾ ನಾಮ' ತನಗೆ ತನ್ನ ಮೇಲೆ ವಿಶ್ವಾಸವಿಲ್ಲದಿರುವುದು ನಿಜಕ್ಕೂ ಕಷ್ಟ. ಇನ್ನೊಬ್ಬರ ಅಧೀನದಲ್ಲಿ ಕೆಲಸ ಮಾಡುವುದು ಕಷ್ಟ. ಹೀಗೆ ಹೇಳುತ್ತಾ ಹೋದರೆ ಎಲ್ಲವೂ ಕಷ್ಟವೇ. ಇವೆಲ್ಲವೂ ಕಷ್ಟವನ್ನು ಎದುರಿಸುವ ತಾಕತ್ತಿಲ್ಲದವರಿಗೆ ಮಾತ್ರ. ಉತ್ಸಾಹಿಯಾದ ಮನುಷ್ಯ ದುಸ್ಸಾಧ್ಯವನ್ನೂ ಸಾಧ್ಯವಾಗಿಸಬಲ್ಲ. ಅಂತಹ ಸ್ವ ತಾಕತ್ತನ್ನು ಎಲ್ಲರೂ ಬೆಳೆಸಿಕೊಳ್ಳಲು ಪ್ರಯತ್ನಿಸಬೇಕು. ಪ್ರಯತ್ನಶೀಲನಿಗೆ ಅಸಾಧ್ಯವೆಂಬುದಿಲ್ಲ.

ಕಷ್ಟಕ್ಕೆ ಅಂಜುವವನು ಮನುಷ್ಯನಾಗಲು ಯೋಗ್ಯನಲ್ಲ. ವಿಷಮ ಸ್ಥಿತಿಯಲ್ಲಿಯೂ ಕಷ್ಟಕ್ಕಂಜಬಾರದು. ಧೈರ್ಯದಿಂದ ಮುನ್ನುಗ್ಗಿ ಎದುರಿಸಬೇಕು. ಲೋಕದಲ್ಲಿ ಯಾರಿಗೂ ಕೇವಲ ಕಷ್ಟವಾಗಲಿ ಕೇವಲ ಸುಖವಾಗಲಿ ಇಲ್ಲವೇ ಇಲ್ಲ. ಜೀವನವೇ ಕಷ್ಟ–ಸುಖಗಳ ಮಿಶ್ರಣ. ಕಷ್ಟವನ್ನೂ ಸುಖಾಂತಗೊಳಿಸುವವನೇ ಜೀವನದಲ್ಲಿ ಸುಖದ ಕ್ಷಣಗಳನ್ನು ಅನುಭವಿಸಬಲ್ಲ.

ಇದಕ್ಕೆ ಕವಿಯು ಕೊಡುವುದು ಬೆಟ್ಟಗಳ ಉದಾಹರಣೆಯನ್ನು. ಯಾವುದೇ ಬೆಟ್ಟವನ್ನು ನೋಡಿದರೂ ಅಲ್ಲಿ ಸಾಕಷ್ಟು ಕಲ್ಲು ಬಂಡೆಗಳಿವೆ. ಹೆಮ್ಮರಗಳು ಬೆಳೆದು ನಿಂತಿವೆ. ಇವುಗಳನ್ನು ಹೊತ್ತಾಗಲೂ ಬೆಟ್ಟವೆಂದೂ ಮಿಸುಕುವುದಿಲ್ಲ, ವ್ಯಥೆ ಪಡುವುದಿಲ್ಲ. ಧೈರ್ಯದಿಂದ ಅವೆಲ್ಲವನ್ನೂ ಹೊತ್ತುಕೊಳ್ಳುತ್ತದೆ. ಬೇಸರದ ಛಾಯೆಯೇ ಇಲ್ಲ. ಸ್ಥಿರತೆಯನ್ನು ಕಳೆದುಕೊಳ್ಳುವುದಿಲ್ಲ. ನಾವು ಶಾಂತವಾಗಿ ಸುತ್ತಲೂ ಕಣ್ಣಾಡಿಸಿದಾಗ ಇಂತಹ ಹತ್ತಾರು ದೃಷ್ಟಾಂತಗಳು ಸಿಗುತ್ತವೆ. ಘಟನೆಗಳ ಗೋಚರವಾಗುತ್ತವೆ. ಇವುಗಳಿಂದ ಪಾಠ ಕಲಿತವನೇ ಜಾಣ. ಮನುಷ್ಯ ಪ್ರಕೃತಿಯಿಂದ ಪಾಠ ಕಲಿಯಬೇಕು. ಪ್ರಕೃತಿ ಕಲಿಸಿದ ಪಾಠ ಜೀವನೋತ್ಕರ್ಷಕ್ಕೆ ಕಾರಣವಾಗುತ್ತದೆ.

'ಧೈರ್ಯಂ ಸರ್ವತ್ರ ಸಾಧನಮ್' ಎಂಬ ಲೋಕೋಕ್ತಿ ಹುಟ್ಟಿಕೊಂಡಿರುವುದೇ ಈ ಕಾರಣಕ್ಕಾಗಿ. ಬದುಕನ್ನು ಧೈರ್ಯದ ಆಧಾರದಲ್ಲಿ ಕಟ್ಟಿಕೊಳ್ಳಬೇಕು. ಎಂತಹ ಕಠಿಣ ಪರಿಸ್ಥಿತಿಯಲ್ಲೂ ಎದೆಗುಂದಬಾರದು. ವ್ಯಥೆ ಪಡಬಾರದು. ಸಾಧನಾ ಪಥದಲ್ಲಿ ಭಗವಂತನಿತ್ತ ಸವಾಲು ಎಂಬುದಾಗಿ ಸ್ವೀಕರಿಸಿ ಮುಂದುವರಿಯಬೇಕು.

ವಜ್ರದ ವ್ಯಾಪಾರಿಯ ಅಪ್ರತಿಮ ಗೋಸೇವೆ



ದೇಶದಲ್ಲಿ ಸಾವಯವ ಕೃಷಿ, ನೈಸರ್ಗಿಕ ಕೃಷಿ ಹಾಗೂ ಶೂನ್ಯ ಬಂಡವಾಳದ ಕೃಷಿಯಲ್ಲಿ ತೊಡಗಿಸಿಕೊಂಡ ಬಹುತೇಕ ರೈತರಿಗೆ ಗುಜರಾತ್‌ನ ಬನ್ಸಿ ಗೀರ್ ಗೋಶಾಲೆಯ ಸಂಸ್ಥಾಪಕರಾದ ಗೋಪಾಲ್ ಸುತಾರಿಯಾ ಅತ್ಯಂತ ಚಿರಪರಿಚಿತರು. ಭಾರತದ ಪ್ರಾಚೀನ ಕೃಷಿ ಸಂಪ್ರದಾಯಗಳನ್ನು ಪುನರುಜ್ಜೀವನಗೊಳಿಸುತ್ತಿರುವ ಇವರ ಕಾರ್ಯ ಅತ್ಯಂತ ಶ್ಲಾಘನೀಯವಾದ್ದು. ಪಾರಂಪರಿಕ ಕೃಷಿಯನ್ನು ಜೀವಂತಗೊಳಿಸುವ ಮತ್ತು ಉತ್ತೇಜಿಸುವ ನಿಟ್ಟಿನಲ್ಲಿ ಇವರ ಸಂಶೋಧನೆಯ ಫಲವೇ ಗೋಕೃಪಾಮೃತ ಎಂಬುದು ಬಹುತೇಕ ಕೃಷಿಕರಿಗೆ ತಿಳಿದ ವಿಚಾರ. ಹೀಗೆ ಕೃಷಿಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡುತ್ತಿರುವ ಈ ದ್ರಾವಣದ ಪಿತಾಮಹರಾದ ಇವರ ಗೋಪಾಲನೆಯ ಕುರಿತ ಒಂದು ಸಣ್ಣ ಪರಿಚಯದ ಪ್ರಯತ್ನವಿದು.

ಗೋಕೃಪಾಮೃತ ಎಂಬ ಒಂದು ದ್ರಾವಣವೇ ಗೋಪಾಲ್ ಸುತಾರಿಯ ಇಚ್ಛಿಸಿದ್ದಲ್ಲಿ ದೇಶದ ಶ್ರೀಮಂತರ ಪಟ್ಟಿಯಲ್ಲಿ ಇವರನ್ನು ಒಬ್ಬರನ್ನಾಗಿಸುತ್ತಿತ್ತು. ಆದರೆ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಇವರು ಗೋವುಗಳ ಮತ್ತು ರೈತರ ಹಿತಕ್ಕಾಗಿ ಇದನ್ನು ಸಂಪೂರ್ಣ ಉಚಿತವಾಗಿ ನೀಡುವ ಸಂಕಲ್ಪವನ್ನು ಮಾಡಿದ್ದಾರೆ. ಇವರ ಈ ಸಂಕಲ್ಪಕ್ಕೆ ಕನೇರಿ ಮಠದ ಕಾಡಸಿದ್ದೇಶ್ವರ ಸ್ವಾಮಿಗಳು ಸೇರಿದಂತೆ ಸಾಕಷ್ಟು ಮಠಾಧಿಪತಿಗಳು, ಸಮಾಜದ ಗಣ್ಯ ವ್ಯಕ್ತಿಗಳು ಹಾಗೂ ರೈತರು ಕೈಜೋಡಿಸುತ್ತಿರುವುದು ಇವರ ಪರಿಶ್ರಮಕ್ಕೆ ಸಾರ್ಥಕತೆಯನ್ನು ತಂದಿದೆ. ಇವರು ಹಿಂದೆ ಒಬ್ಬ ವಜ್ರದ ವ್ಯಾಪಾರಿಯಾಗಿದ್ದು, ಗುಜರಾತ್‌ನ ಗೋಸೇವಾ ಆಯೋಗದ ಡೈರೆಕ್ಟರ್ ಸಹ ಆಗಿದ್ದರು. ಹತ್ತು ತಲೆಮಾರು ಕುಳಿತು ತಿಂದರೂ ಕರಗದಷ್ಟು ಸಂಪತ್ತು ಇಂದಿಗೂ ಇವರಲ್ಲಿದೆ. ಆದರೆ ಇವರಿಗೇಕೋ ಈ ಸಂಪತ್ತು ಗೋಸಂಪತ್ತಿನ ಮುಂದೆ ಕ್ಷುಲ್ಲಕವೆನಿಸಿದೆ. ಸನಾತನ ಭಾರತೀಯ ಪರಂಪರೆಗಳಲ್ಲಿನ ವೈಜ್ಞಾನಿಕ ತಳಹದಿ ಇವರ ಅಂತರಾಳವನ್ನು ಬಡಿದೆಬ್ಬಿಸಿದೆ. ಈ ಕಾರಣದಿಂದಲೇ ಇವರು ಗೋಆಧಾರಿತ ವ್ಯವಸ್ಥೆಯೊಂದಿಗೆ ಗೋಶಾಲೆ ಮತ್ತು ಗುರುಕುಲವನ್ನು ಸ್ಥಾಪಿಸಿ ಗೋಪಾಲನೆ, ಧರ್ಮಪಾಲನೆ ಮಾಡುವ ಮೂಲಕ, ಭೂತಾಯಿಯ ಒಡಲನ್ನು ವಿಷಮುಕ್ತವನ್ನಾಗಿಸುವ ಶ್ರೇಷ್ಠ ಕಾರ್ಯವನ್ನು ಮಾಡುತ್ತಿದ್ದಾರೆ. ಇವರಿಗೆ ಈ ದೇಶದ ಸಂಪ್ರದಾಯ ಮತ್ತು ಜೀವನಶೈಲಿಯೊಂದಿಗಿನ ಆಧ್ಯಾತ್ಮಿಕ ಚಿಂತನೆಯ ಬಗ್ಗೆ ಗಾಢವಾದ ಒಲವಿದೆ. ಅಷ್ಟೇ ಬೇಸರ ಇತ್ತೀಚಿನ ಆಧುನಿಕ ಸಂಪ್ರದಾಯದ ಮೇಲೆಯೂ ಇದೆ. ನಮ್ಮ ಹಿರಿಯರು ನಾವು ಬದುಕುವ ಜೀವನದೊಂದಿಗೆ ಒಂದು ಆಧ್ಯಾತ್ಮಿಕ ಚಿಂತನೆಯನ್ನು ಅಳವಡಿಸಿದ್ದರು. ಗೋವಿನ ಮಹತ್ವದ ಅರಿವು ಅವರಿಗೆ ಅಂದೇ ಇದ್ದದ್ದರಿಂದ ಅದನ್ನು ಜೀವನದೊಂದಿಗೆ ಜೋಡಿಸಿದ್ದರು ಮತ್ತು ಗೋವಿನ ಉಪಉತ್ಪನ್ನಗಳಿಂದ ಕೃಷಿಯನ್ನು ಮಾಡಿ ಆರೋಗ್ಯಯುತ ಜೀವನವನ್ನು ತಮ್ಮದಾಗಿಸಿಕೊಂಡಿದ್ದರು ಎಂಬೆಲ್ಲಾ ನಿಲುವು ಗಟ್ಟಿಯಾಗಿ ಇವರಲ್ಲಿ ಬೇರೂರಿದೆ.

ನಾವಿಂದು ನಮ್ಮ ಹಿರಿಯರು ಹಾಕಿಕೊಟ್ಟ ಆ ಎಲ್ಲಾ ಬದುಕಿಗೆ ಪೂರಕವಾಗುವ ಅಂಶಗಳನ್ನು ಕಡೆಗಣಿಸಿ ಗೋಮಾತೆಯನ್ನು ನಿರ್ಲಕ್ಷಿಸಿದ್ದೇವೆ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸಿ ಭೂಮಾತೆಯನ್ನು ಅಪವಿತ್ರಗೊಳಿಸುತ್ತಿದ್ದೇವೆ. ನಾವು ವಿಷವನ್ನು ತಿನ್ನುವುದರೊಂದಿಗೆ ಇಡೀ ವಿಶ್ವಕ್ಕೆ ವಿಷವನ್ನು ಉಣಬಡಿಸುತ್ತಿದ್ದೇವೆ. ನಮ್ಮ ಹಿರಿಯರು ತೋರಿಸಿದ ದಾರಿಯಲ್ಲಿ ನಮಗೇಕೆ ಸಾಗಲಾಗುತ್ತಿಲ್ಲ, ಎಂದೆಲ್ಲಾ ಚಿಂತನೆ ಮಾಡಿದಾಗ ಇವರಿಗೆ ಸತ್ಯದ ದರ್ಶನವಾಗಿದೆ. ಕೂಡಲೇ ತಮ್ಮ ವ್ಯಾಪಾರಕ್ಕೆ ತಾರ್ಕಿಕ ಅಂತ್ಯ ಹಾಡಿ, ಒಂದಷ್ಟು ಗೀರ್ ಜಾತಿಯ ಗೋವುಗಳನ್ನು ತಂದು ಒಂದೆಡೆ ಸಾಕಲು ಪ್ರಾರಂಭಿಸುತ್ತಾರೆ. ಗೋವುಗಳನ್ನು ಕಟ್ಟಿಹಾಕಿ ಸಾಕುವುದು ಸಹ ಒಂದು ರೀತಿಯ ಶೋಷಣೆಯೆಂದು ಭಾವಿಸಿ, ಎಲ್ಲಾ ಗೋವುಗಳನ್ನು ಕಟ್ಟಿಹಾಕದೆ ಮುಕ್ತವಾಗಿ ಬಿಟ್ಟು ಸಾಕಲಾರಂಭಿಸುತ್ತಾರೆ. ಬೇಕೆಂದಾಗ ಅವುಗಳೇ ಹೋಗಿ ಮೇವು ತಿಂದು, ನೀರು ಕುಡಿದು ಬರುವ ವ್ಯವಸ್ಥೆಯನ್ನು ಕಲ್ಪಿಸುತ್ತಾರೆ.

ಇವರು ಹೇಳುವಂತೆ, ಗೋವುಗಳಿಗೆ ಅತಿ ಹೆಚ್ಚು ತಿನ್ನಿಸಿದಷ್ಟು ಹೆಚ್ಚೆಚ್ಚು ಹಾಲನ್ನು ನೀಡುತ್ತವೆ ಎಂಬ ತಪ್ಪು ಕಲ್ಪನೆ ನಮ್ಮಲ್ಲಿದೆಯಂತೆ. ಆದರೆ ನಮ್ಮ ಸನಾತನ ಸಂಸ್ಕೃತಿಯಲ್ಲಿ ಗೋವುಗಳಿಗೆ ಹೊಟ್ಟೆ ತುಂಬಾ ಮೇವನ್ನು ಕೊಟ್ಟ ನಂತರ, ಅದು ಎಷ್ಟು ಹಾಲನ್ನು ನೀಡಬೇಕು ಎಂಬುದನ್ನು ಅದೇ ಸ್ವತಃ ನಿರ್ಧರಿಸುತ್ತದೆ. ಈ ಕಾರಣದಿಂದ ವೇದಗಳಲ್ಲಿ ಹೇಳಿರುವಂತೆ ಗೋವಿನ ಕೆಚ್ಚಲಿನ ಮೇಲೆ ಮೊದಲಿಗೆ ಅದರ ಕರುವಿಗೆ ಮಾತ್ರ ಅಧಿಕಾರವಿದೆ. ಆನಂತರವೇ ಮನುಷ್ಯನಿಗೆ ಎಂಬ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ, ಗೋವಿನ ಕೆಚ್ಚಲಿನ ತೊಟ್ಟಲ್ಲಿ ಎರಡು ಅದರ ಕರುವಿಗೆ ಬಿಟ್ಟು, ಇನ್ನೆರಡು ತೊಟ್ಟುಗಳಲ್ಲಿರುವ ಹಾಲನ್ನು ಮಾತ್ರ ಕರೆಯುವ ವ್ಯವಸ್ಥೆಯನ್ನು ರೂಪಿಸಿದ್ದಾರೆ. ತಮ್ಮಲ್ಲಿ ದೊರೆಯುವ ಗೋವಿನ ಸಗಣಿ, ಗೋಮೂತ್ರದೊಂದಿಗೆ ಸ್ಲರಿಯನ್ನು ಬಳಸಿ ಅವಶ್ಯಕವಾದ ಮೇವನ್ನು ಬೆಳೆದುಕೊಳ್ಳುತ್ತಿದ್ದಾರೆ.



ಸಾಮಾನ್ಯವಾಗಿ ವಿಶ್ವದಾದ್ಯಂತ ಗೋವುಗಳನ್ನು ಒಂದೆರಡು ಕರು ಹಾಕಿದ ನಂತರ ಕಸಾಯಿಖಾನೆಗೆ ಕಳುಹಿಸಲಾಗುತ್ತದೆ. ಭಾರತದಲ್ಲಿ ಈ ಪ್ರಮಾಣ ಕೊಂಚ ಕಡಿಮೆ ಇದ್ದು, ಇಲ್ಲಿ ನಾಲ್ಕೈದು ಕರು ಹಾಕಿದ ನಂತರ ಆ ಗೋವು ಕಡಿಮೆ ಹಾಲು ನೀಡುತ್ತದೆ ಎಂಬ ನೆಪವೊಡ್ಡಿ ಕಸಾಯಿಖಾನೆಗೆ ಅಟ್ಟಲಾಗುತ್ತದೆ. ಆದರೆ ಇವರಲ್ಲಿರುವ ಗೋವುಗಳ ಆಯುಷ್ಯದ ಬಗ್ಗೆ ತಿಳಿದರೆ ನೀವು ಬೆಕ್ಕಸ ಬೆರಗಾಗುತ್ತೀರಿ. ಇಲ್ಲಿ ಕೆಲವೊಂದು ಗೋವುಗಳು ಸುಮಾರು 15 ಕರು ಹಾಕಿದ ನಂತರವೂ ಇಂದಿಗೂ 20ರಿಂದ 30 ಲೀಟರ್ ಹಾಲನ್ನು ಪ್ರತಿನಿತ್ಯ ನೀಡುತ್ತಿವೆ. ಇವು ನೀಡುತ್ತಿರುವ ಹಾಲಿನಲ್ಲಿ ದೇಹಕ್ಕೆ ಅತ್ಯವಶ್ಯಕವಾದ ಕೊಬ್ಬಿನಾಂಶ ಹೆಚ್ಚಿರುವುದು ವೈಜ್ಞಾನಿಕವಾಗಿ ಸಾಬೀತಾಗಿದೆ. ವಿದೇಶಿ ತಳಿಗಳ 50 ಲೀಟರ್ ಹಾಲಿನಲ್ಲಿರುವಂತಹ ಕೊಬ್ಬಿನಾಂಶ ಇವರಲ್ಲಿನ ಗೋವುಗಳ 30 ಲೀಟರ್ ಹಾಲಿನಲ್ಲಿಯೇ ಸಿಗುತ್ತಿದೆ. ಯಾವುದೇ ಗೋವಿನಿಂದ ಬಲವಂತವಾಗಿ ಹಾಲನ್ನು ಕರೆಯುವ ಪರಿಪಾಠವೇ ಇಲ್ಲಿಲ್ಲ. ಹೆಸರು ಕರೆದ ಕೂಡಲೇ ಆಯಾ ಗೋವುಗಳು ಹಾಲು ಕರೆಯುವ ಸ್ಥಳಕ್ಕೆ ಖುದ್ದಾಗಿ ಹೋಗಿ ಹಾಲನ್ನು ನೀಡಿ ಬರುತ್ತವೆ. ಹೀಗೆ ಮನಸೋ ಇಚ್ಛೆ ನೀಡುತ್ತಿರುವ ಈ ಹಾಲಿಗೆ ಸಾಕಷ್ಟು ಬೇಡಿಕೆಯಿದೆ. ಅಚ್ಚರಿ ಎಂದರೆ ವೇದಗಳಲ್ಲಿ ಹೇಳಿರುವಂತೆ ಗೋವು ಸಾಯುವವರೆಗೂ ಹಾಲನ್ನು ನೀಡುತ್ತಿದ್ದ ಚಿತ್ರಣವನ್ನು ಇಲ್ಲಿ ಪುನರ್ಜೀವಗೊಳಿಸುವ ನಿಟ್ಟಿನಲ್ಲಿ ಕಾರ್ಯ ನಡೆಯುತ್ತಿದೆ.

ಇಲ್ಲಿಯ ಪ್ರತಿಯೊಂದು ಗೋವು ಪ್ರಕೃತಿದತ್ತವಾಗಿ ಬೆಳವಣಿಗೆ ಕಾಣುತ್ತಿದೆ. ಇಲ್ಲಿಯ ಎರಡು ವರ್ಷದ ಗೋವಿನ ದೇಹದಾರ್ಢ್ಯತೆ ಬೇರೆಡೆಯಲ್ಲಿನ ಸುಮಾರು ಐದು ವರ್ಷದ ಗೋವಿಗೆ ಸರಿಸಮಾನದಂತೆ ಕಂಡುಬರುತ್ತದೆ. ಇಲ್ಲಿಯ ಯಾವುದೇ ಗೋವಿಗೆ ಇಂದಿನವರೆಗೂ ಆಧುನಿಕ ವಿಜ್ಞಾನ ಹೇಳುವಂತಹ ಯಾವುದೇ ಅಲೋಪತಿ ಔಷಧಿಯನ್ನು ಕೊಟ್ಟಿಲ್ಲ. ಸಾಮಾನ್ಯವಾಗಿ ಕೊಡಲೇಬೇಕಾದ ಹೊಟ್ಟೆ ಹುಳದ ಔಷಧಿಯನ್ನು ನೀಡಿಯೇ ಇಲ್ಲ. 15 ದಿನಕ್ಕೊಮ್ಮೆ ಬೇವಿನ ಮರದ ಸೊಪ್ಪನ್ನು ಗೋವುಗಳಿಗೆ ತಿನ್ನಿಸುವ ವ್ಯವಸ್ಥೆ ಇದೆ. ಅನಾರೋಗ್ಯದಿಂದ ಬಳಲುವ ಗೋವುಗಳು ಈ ಸೊಪ್ಪನ್ನು ತಿಂದು ಆರೋಗ್ಯವಂತವಾಗುತ್ತಿವೆ. ಇದರಿಂದ ಗೋವುಗಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿರುವುದು ಅನಂತರ ಬೆಳಕಿಗೆ ಬಂದಿದೆ.

ಗೋಪಾಲ್ ಸುತಾರಿಯಾ ಹೇಳುವಂತೆ ಗೀರ್ ಜಾತಿಯ ಗೋವಿನಲ್ಲಿ ಸುಮಾರು 15 ವಿವಿಧ ಗೋತ್ರಗಳಿವೆ. ಇಂತಹ ಸುಮಾರು 12 ವಿವಿಧ ಗೋತ್ರದ ಗೋವುಗಳನ್ನು ಇವರಲ್ಲಿ ಕಾಣಬಹುದು. ಇಂದು ವಿಶ್ವದಲ್ಲಿಯೇ ಅತಿ ಹೆಚ್ಚು ಗೀರ್ ತಳಿಗಳನ್ನು ಹೊಂದಿರುವ ಬ್ರೆಜಿಲ್‌ನಲ್ಲಿಯೂ ಕೇವಲ ಒಂದೇ ಗೋತ್ರದ ತಳಿಗಳಿವೆ. ಮನುಷ್ಯರಂತೆ ಇಲ್ಲಿಯೂ ಸಹ ತಳಿ ಅಭಿವೃದ್ಧಿ ಗೋತ್ರದ ಜೋಡಣೆಯೊಂದಿಗೆ ಆಗುತ್ತಿದೆ. ಈ ಕಾರಣಕ್ಕಾಗಿಯೇ ಪ್ರತಿಯೊಂದು ತಳಿಯ ಹಿಂದಿನ ಐದಾರು ತಲೆಮಾರಿನ ಮಾಹಿತಿಯನ್ನು ಸಂಗ್ರಹಿಸಿ ಇಡಲಾಗಿದೆ. ಯಾವ ಗೋತ್ರದ ಗೋವಿಗೆ ಮತ್ತಿನ್ಯಾವ ಗೋತ್ರದ ತಳಿಯೊಂದಿಗೆ ಸೇರಿಸಬೇಕು ಎಂಬುದು ಒಂದು ವರ್ಷದ ಮೊದಲೇ ನಿರ್ಧರಿಸಲಾಗಿರುತ್ತದೆ. ಹೀಗೆ ಅವುಗಳ ವಂಶವಾಹಿಯ ಮೇಲೆಯೇ ಇಲ್ಲಿ ತಳಿ ಸಂವರ್ಧನೆಯ ಕಾರ್ಯ ಸಾಗುತ್ತಿದೆ.

ಇಲ್ಲಿಯ ಹಾಲು ಮತ್ತು ತುಪ್ಪಕ್ಕೆ ಸಾಕಷ್ಟು ಬೇಡಿಕೆಯಿದೆ. ಇಲ್ಲಿಯ ಗೋಉತ್ಪನ್ನಗಳಿಂದ ಕೆಲವೊಂದಿಷ್ಟು ಔಷಧಿಗಳನ್ನು ತಯಾರಿಸಲಾಗುತ್ತಿದೆ. ಇವರ ಈ ಗೋತೀರ್ಥ ವಿದ್ಯಾಪೀಠದಲ್ಲಿ ಸಂವರ್ಧನೆಗೊಂಡ ತಳಿಗಳಿಗೆ ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ಬೇಡಿಕೆ ಇದೆ. ಆದರೆ ಮೂಲತಃ ವಜ್ರದ ವ್ಯಾಪಾರಿಯಾಗಿರುವ ಇವರು, ಇದರಿಂದ ಹಣ ಮಾಡುವ ಉದ್ದೇಶವಿಲ್ಲದೆ ಇಂತಹ ಅವಕಾಶಗಳೆಲ್ಲವನ್ನು ತಿರಸ್ಕರಿಸಿದ್ದಾರೆ. ಗುಜರಾತ್‌ನ ಈ ಪರಿಪೂರ್ಣ ಗೋಶಾಲೆಯನ್ನು ಮತ್ತು ಇವರನ್ನು ನೋಡಲು ದೇಶದ ಮೂಲೆ ಮೂಲೆಗಳಿಂದ ಜನ ಪ್ರತಿನಿತ್ಯ ಬಂದು ಹೋಗುತ್ತಿದ್ದಾರೆ. ಹೀಗೆ ಬಂದವರೆಲ್ಲರಿಗೂ ಗೋವಿನ ಸಾಕಾಣಿಕೆಯ ಕುರಿತ ಸಂಪೂರ್ಣ ಮಾಹಿತಿಯನ್ನು ಉಚಿತವಾಗಿ ನೀಡಲಾಗುತ್ತಿದೆ. ಸ್ವತಃ ಗೋಪಾಲ್ ಸುತಾರಿಯಾರವರೇ ಕೆಲವೊಮ್ಮೆ ಬಂದಂತ ಆಸಕ್ತರಿಗೆ ಗೋಪಾಲನೆ ಮತ್ತು ಕೃಷಿಯ ಕುರಿತಂತೆ ಸಮಗ್ರವಾಗಿ ವಿವರಿಸುವುದು ಇದೆ. ಇದೆಲ್ಲದರ ಜೊತೆಗೆ ಇಲ್ಲೊಂದು ವಿಶೇಷವಾದ ಗುರುಕುಲ ವ್ಯವಸ್ಥೆ ಸದ್ದಿಲ್ಲದೇ ಗೋಆಧಾರಿತವಾಗಿಯೇ ನಡೆಯುತ್ತಿದೆ.

ಭಾರತ ಪ್ರವರ್ಧಮಾನಕ್ಕೆ ಬರುವುದನ್ನು ಅಮೆರಿಕ ಸಹಿಸದು

ಉತ್ಪಲ್ ಕುಮಾರ್

ಇತ್ತೀಚೆಗೆ ದಿಲ್ಲಿಯಲ್ಲಿ ನಡೆದ ರೈಸಿನಾ ಸಂವಾದ ಕಾರ್ಯಕ್ರಮದಲ್ಲಿ ಅಮೆರಿಕದ ವಿದೇಶಾಂಗ ಸಹಕಾರ್ಯದರ್ಶಿ ಕ್ರಿಸ್ಟೋಫರ್ ಲಾಂಡ್ ರಾಜತಾಂತ್ರಿಕತೆಯ ಪಾಲಿಗೆ ನಿಷ್ಠುರವೇ ಎನಿಸಬಹುದಾದ ಮಾತುಗಳನ್ನಾಡಿದರು. ''ನಾವು 20 ವರ್ಷಗಳ ಹಿಂದೆ ಚೀನಾಕ್ಕೆ ಸಂಬಂಧಿಸಿ ಎಸಗಿದ ತಪ್ಪುಗಳನ್ನು ಈಗ ಭಾರತಕ್ಕೆ ಸಂಬಂಧಿಸಿ ಮತ್ತೆ ಎಸಗಲಾರೆವು ಎಂಬುದನ್ನು ಭಾರತವು ಅರಿತುಕೊಳ್ಳಬೇಕು'' ಎಂದು ಅವರು ಹೇಳಿದರು. ಅದನ್ನು ಮತ್ತಷ್ಟು ವಿವರಿಸಿದ ಅವರು, ''ನಾವು ನಿಮಗೆ ಎಲ್ಲಾ ಬಗೆಯ ಮಾರುಕಟ್ಟೆಯ ಅಭಿವೃದ್ಧಿಗೆ ನೆರವು ನೀಡುತ್ತೇವೆ. ಆದರೆ ಕೊನೆಗೆ ಹಲವಾರು ವಾಣಿಜ್ಯಿಕ ವಿಷಯಗಳಲ್ಲಿ ನಮ್ಮನ್ನೇ ಸೋಲಿಸುತ್ತೀರಿ. ಅದಕ್ಕಿನ್ನು ಅವಕಾಶ ನೀಡುವುದಿಲ್ಲ'' ಎಂದರು.

ಯಾವುದೇ ರಾಜತಾಂತ್ರಿಕ ನಯವಿನಯವಿಲ್ಲದ ಈ ಮಾತಿನ ಸಂದೇಶವು ಸ್ಪಷ್ಟವಾಗಿದೆ. ಚೀನಾ ತನ್ನ ವಿರೋಧಿಯಾಗಿ ಬೆಳೆಯಲು ತಾನೇ ಅವಕಾಶ ಮಾಡಿಕೊಟ್ಟಿರುವುದಾಗಿ ಅಮೆರಿಕ ನಂಬುತ್ತಿದೆ ಹಾಗೂ ಅದೇ ತಪ್ಪನ್ನು ಭಾರತಕ್ಕೆ ಸಂಬಂಧಿಸಿ ಎಸಗಬಾರದು ಎಂದು ಭಾವಿಸಿದೆ. ಭಾರತದ ನೀತಿ ನಿರೂಪಕರು ಈ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ ಹಾಗೂ ಹೆಚ್ಚು ಆಳವಾಗಿ ವಿಶ್ಲೇಷಣೆ ಮಾಡಬೇಕಾಗಿದೆ. ಏಕೆಂದರೆ ಇದರ ಹಿಂದೆ ಜಾಗತಿಕ 'ಶಕ್ತಿ ರಾಜಕೀಯ'ದ ಕಹಿಸತ್ಯ ಅಡಗಿದೆ. ಯಾವುದೇ ಸೂಪರ್ ಪವರ್ ಇನ್ನೊಂದು ರಾಷ್ಟ್ರದೊಂದಿಗೆ ಎಷ್ಟೇ ಉತ್ತಮ ಸಂಬಂಧ ಹೊಂದಿದ್ದರೂ ಆ ರಾಷ್ಟ್ರವು ಸೂಪರ್‌ಪವರ್ ಆಗಿ ಬೆಳೆಯಲು ತಾನಾಗಿ ಅವಕಾಶ ನೀಡಲಾರದು ಎಂಬುದು ಇದರ ಹಿಂದಿನ ಸಂದೇಶವಾಗಿದೆ.

ಕೆಲವಾರು ದಶಕಗಳಿಂದ ಅಮೆರಿಕದ ನೀತಿನಿರೂಪಕರು ಚೀನಾವು ಎಷ್ಟೇ ಶಕ್ತಿಶಾಲಿಯಾಗಿ ಬೆಳೆದರೂ ಅದನ್ನು ತಾವು ನಿಯಂತ್ರಿಸಬಹುದು ಎಂದು ಭಾವಿಸಿಕೊಂಡು ಬಂದಿದ್ದರು. ಡೆಂಗ್ ಕ್ಸಿಯೋಪಿಂಗ್ ಚೀನಾದ್ದು ಶಾಂತಿಯುತ ಬೆಳವಣಿಗೆ ಎಂದು ಜಗತ್ತಿಗೆ ನಂಬಿಸಿದ್ದರು. ಆದರೆ ಅಂತರ್ಯದಲ್ಲಿ ''ನಿಮ್ಮ ಸಾಮರ್ಥ್ಯವನ್ನು ಯಾರ ಕಣ್ಣಿಗೂ ಕಾಣದಂತೆ ಅಡಗಿಸಿಡಿ, ಸಮಯ ಬಂದಾಗ ಅದನ್ನು ಪ್ರದರ್ಶಿಸಿ'' ಎಂಬುದು ಅವರ ನೀತಿಯಾಗಿತ್ತು. ಬಳಿಕ ಚೀನಾ ಈ ನೀತಿಯನ್ನು ಅಕ್ಷರಶಃ ಪಾಲಿಸಿಕೊಂಡು ಬಂದಿತು. ಮೂರು ದಶಕಗಳಿಂದ ಸದ್ದಿಲ್ಲದೆ ಪಾಶ್ಚಿಮಾತ್ಯ ತಂತ್ರಜ್ಞಾನವನ್ನು, ಬಂಡವಾಳವನ್ನು ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಬೆಳೆಸಿಕೊಂಡು ಬಂದಿತು. ಅದರ ಪರಿಣಾಮವು ಎಲ್ಲರ ಕಣ್ಣಿಗೆ ಗೋಚರಿಸುವ ವೇಳೆಗೆ, ಚೀನಾವು ವಿಶ್ವದ ಎರಡನೇ ಅತ್ಯಂತ ದೊಡ್ಡ ಆರ್ಥಿಕಶಕ್ತಿಯಾಗಿ ಹಾಗೂ ಅಮೆರಿಕಕ್ಕೆ ಸಮರ್ಥ ತಂತ್ರಜ್ಞಾನ ವಿರೋಧಿಯಾಗಿ ಬೆಳೆದು ನಿಂತಾಗಿತ್ತು.

ಪಾಶ್ಚಿಮಾತ್ಯ ರಾಷ್ಟ್ರಗಳೇ ನಿರ್ಮಿಸಿದ ವ್ಯವಸ್ಥೆಯೊಳಗೆ ಚೀನಾವು ಅತ್ಯಂತ ಶಕ್ತಿಶಾಲಿಯಾಗಿ ಬೆಳೆಯಲು ತಾವೇ ಅವಕಾಶ ಮಾಡಿಕೊಟ್ಟೆವೆ ಎಂಬುದಾಗಿ ಅಮೆರಿಕ ಈಗ ಭಾವಿಸಿದೆ. ಭಾರತವನ್ನು ಕೂಡಾ ಅಮೆರಿಕ ಈಗ ಅದೇ ಆಯಾಮದಿಂದ ನೋಡುತ್ತಿದೆ.

ಜಪಾನ್‌ನ ನಿದರ್ಶನ

ಯಾವುದಾದರೊಂದು ದೇಶವು ಪ್ರಬಲವಾಗಿ ಬೆಳೆಯದಂತೆ ಮಾಡಲು ಅಮೆರಿಕವು ಏನು ಮಾಡಲೂ ಸಿದ್ಧ ಎಂಬುದನ್ನು ಅರಿಯಬೇಕಾದರೆ ಜಪಾನ್‌ನತ್ತ ನೋಡಬೇಕು. 1980ರ ದಶಕದಲ್ಲಿ ಜಪಾನ್ ಅತ್ಯಂತ ವೇಗವಾಗಿ ಬೆಳೆಯುತ್ತಿತ್ತು. ಅದನ್ನು ಯಾರೂ ತಡೆಯುವಂತಿರಲಿಲ್ಲ. ಜಾಗತಿಕ ಮಾರುಕಟ್ಟೆಯಲ್ಲಿ ಜಪಾನಿ ಆಟೋಮೊಬೈಲ್‌ಗಳು, ಎಲೆಕ್ಟ್ರಾನಿಕ್ಸ್ ಮೇಲುಗೈ ಸಾಧಿಸಿದ್ದವು. ಮುಂದಿನ ದಿನಗಳಲ್ಲಿ ಜಪಾನ್ ಸೂಪರ್‌ಪವರ್ ಆಗಿ ಬೆಳೆದು ಅಮೆರಿಕದ ಕೈಗಾರಿಕೆಗಳು ಕುಗ್ಗಲಿದೆ ಎಂಬುದಾಗಿ ಅಮೆರಿಕನ್ ಪತ್ರಿಕೆಗಳೆಲ್ಲಾ ಬರೆಯುತ್ತಿದ್ದವು.



ಇದನ್ನು ಕಂಡ ಅಮೆರಿಕವು 1985ರಲ್ಲಿ ಜಪಾನ್‌ನೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದ ಜಪಾನ್ ಪಾಲಿಗೆ ಮಾರಕವಾಯಿತು. ಇದರ ಕಾರಣದಿಂದಾಗಿ ಜಪಾನಿನ ಕರೆನ್ಸಿಯ ಬೆಲೆ ಕುಸಿಯಿತು. ಅವುಗಳ ಉಪಕರಣಗಳ ಬೆಲೆ ಮಾರುಕಟ್ಟೆಯಲ್ಲಿ ಏರುವಂತಾಯಿತು. ಈ ಬೆಳವಣಿಗೆ ಜಪಾನಿನ ಅಭಿವೃದ್ಧಿಯ ಬಲೂನಿಗೆ ಸೂಜಿಯಿಂದ ಚುಚ್ಚಿದಂತಾಯಿತು. ಅಲ್ಲಿಂದ ಬಳಿಕ ಜಪಾನಿನ ಆರ್ಥಿಕ ಪ್ರಗತಿ ಸ್ಥಗಿತಗೊಂಡಿತು. ಕೆಲವು ದಶಕಗಳ ಕಾಲ ಜಪಾನ್ ಇದೇ ರೀತಿಯ ಆರ್ಥಿಕ ಸ್ಥಾಗಿತ್ಯವನ್ನು ಅನುಭವಿಸಿತು.

ಜಪಾನಿನ ಪ್ರಗತಿಯನ್ನು ಯಾವುದೇ ಯುದ್ಧ ಅಥವಾ ನಿರ್ಬಂಧಗಳು ತಡೆದುದಲ್ಲ. ಸ್ನೇಹಯುತ ರಾಜತಾಂತ್ರಿಕತೆ ಮತ್ತು ಆರ್ಥಿಕ ಕುಟಿಲತೆಯ ಮೂಲಕ ಅಮೆರಿಕ ಇದನ್ನು ಸಾಧಿಸಿತು.

ಅಮೆರಿಕ -ಭಾರತ ಸಂಬಂಧ ಸರಳವಲ್ಲ

ಅಮೆರಿಕದೊಂದಿಗಿನ ಭಾರತದ ಸಂಬಂಧವು ಎಂದಿಗೂ ಸರಳವಾಗಿರಲಿಲ್ಲ. ಅದು ಸಂಕೀರ್ಣವಾಗಿದೆ. ಹಲವಾರು ಏಳುಬೀಳುಗಳನ್ನು ಕಾಣುತ್ತಲೇ ಬಂದಿದೆ. ಅಮೆರಿಕವು ತನ್ನ ಹಿತಾಸಕ್ತಿಗೆ ಅನುಗುಣವಾಗಿ ಯಾವುದೇ ದೇಶದೊಂದಿಗಿನ ಸಂಬಂಧವನ್ನು ತನಗೆ ಬೇಕಾದಂತೆ ಬದಲಿಸುತ್ತದೆ. ''ಅಮೆರಿಕದ ಜತೆ ಕೈಜೋಡಿಸಿ ಸಾಗುವುದೆಂದರೆ ಗ್ಲಾಸ್ ಚೂರುಗಳ ಮೇಲೆ ನಡೆದಂತೆ. ಯಾವಾಗ ಗಾಜಿನ ಚೂರೊಂದು ಚುಚ್ಚುವುದೆಂದು ಹೇಳಲಾಗದು'' ಎಂಬುದಾಗಿ ಖ್ಯಾತ ಲೇಖಕರೊಬ್ಬರು ಬಣ್ಣಿಸುತ್ತಾರೆ.

ಅಮೆರಿಕವು ಭಾರತವನ್ನು ಚೀನಾದ ಪಟ್ಟಕದ ಮೂಲಕವೇ ನೋಡುತ್ತದೆ. ಚೀನಾಕ್ಕೆ ಪ್ರತಿಶಕ್ತಿಯಾಗಿ ಭಾರತವು ಬೆಳೆಯಬೇಕು ಎಂಬುದು ಅಮೆರಿಕದ ಇಂಗಿತ. ಆದರೆ ಭಾರತವು ಅಮೆರಿಕಕ್ಕಿಂತ ಬಲಿಷ್ಠವಾಗಿ ಬೆಳೆಯುವುದನ್ನು ಅದು ಸಹಿಸದು. ಕ್ರಿಸ್ಟೋಫರ್ ಹೇಳಿದಂತೆ ಬಲಿಷ್ಠ ಭಾರತವು ಅಮೆರಿಕಕ್ಕೆ ಒಂದು ಸಮಸ್ಯೆಯನ್ನು ಪರಿಹರಿಸಬಲ್ಲುದಾದರೂ ಮತ್ತೊಂದು ಸಮಸ್ಯೆಯನ್ನು ಸೃಷ್ಟಿಸಬಲ್ಲುದು.

ಭಾರತದ ಅಭಿವೃದ್ಧಿಯು ಪಾಶ್ಚಾತ್ಯ ರಣತಂತ್ರ ವ್ಯವಸ್ಥೆಯಲ್ಲಿ ಕೆಲಮಟ್ಟಿನ ಅಸಹನೆಯನ್ನು ಸೃಷ್ಟಿಸಿದೆ. ''ಯಾವಾಗಲೂ ಬಂದೂಕು ಹಿಡಿದವನೇ ನಮ್ಮ ವೈರಿಯಾಗಿರುವುದಿಲ್ಲ. ಕೆಲವೊಮ್ಮೆ ನಗು ಚೆಲ್ಲುತ್ತಾ ಕೊಡುಗೆಯನ್ನು ಕೈಯಲ್ಲಿ ಹಿಡಿದವನು ನಮ್ಮ ವೈರಿಯಾಗಿರುವ ಸಾಧ್ಯತೆಗಳಿವೆ'' ಎಂದು ಮಾಜಿ ಗುಪ್ತಚರ ಮುಖ್ಯಸ್ಥ ವಿಕ್ರಮ್ ಸೂದ್ ಹೇಳುತ್ತಾರೆ. ಅದು ಅಮೆರಿಕಕ್ಕೆ ಅನ್ವಯಿಸುತ್ತದೆ. ಸೂದ್ ಹೇಳುತ್ತಾರೆ ''ಭಾರತದ ಆತ್ಮನಿರ್ಭರ ರಾಷ್ಟ್ರೀಯತೆಯೆಂಬುದು ಪಾಶ್ಚಿಮಾತ್ಯ ಅಧಿಕಾರದ ಕಾರಿಡಾರ್‌ನಲ್ಲಿ ಸಹ್ಯವೆನಿಸದ ವಿಷಯವಾಗಿದೆ. ಆರ್ಥಿಕ ಶಕ್ತಿ, ಮಿಲಿಟರಿ ಶಕ್ತಿ ಮತ್ತು ಪರಮಾಣು ಶಕ್ತಿ ಹೊಂದಿರುವ ಎರಡು ಸ್ವಾವಲಂಬಿಯಾದ ಹಾಗೂ ಸ್ವತಂತ್ರವಾದ ರಾಷ್ಟ್ರಗಳು ಏಷ್ಯಾದಲ್ಲಿ ಬೆಳೆಯುವುದು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಭೀತಿ ಸೃಷ್ಟಿಸುತ್ತದೆ. ಪಾಶ್ಚಿಮಾತ್ಯ ಕಾರ್ಪೋರೇಟ್ ಜಗತ್ತಂತೂ ಆ ಬೆಳವಣಿಗೆಯನ್ನು ಆತಂಕದಿಂದಲೇ ನೋಡುತ್ತದೆ''

ಹಿಂದೊಮ್ಮೆ ಚೀನಾ ಬೆಳೆಯಲು ಅವಕಾಶ ಮಾಡಿಕೊಟ್ಟು ಈಗ ಅದರಿಂದಲೇ ಬೆದರಿಕೆಗೊಳಗಾಗಿರುವ ಅಮೆರಿಕವು ಭಾರತವನ್ನು ಅದೇ ತಕ್ಕಡಿಯಲ್ಲಿ ತೂಗಲಾರದಾದರೂ ಸದ್ಯಕ್ಕೆ ಭಾರತ–ಪಾಕಿಸ್ತಾನ ಸಂಬಂಧದ ಕುರಿತಂತೆ ತನ್ನ ದ್ವಂದ್ವ ನೀತಿ ಮುಂದುವರಿಸುವುದು ಖಂಡಿತ. ಭಾರತವು ಸದಾ ಪಾಕಿಸ್ತಾನದೆಡೆಗೆ ಅನುಮಾನದಿಂದ ನೋಡುವಂತೆ ಮಾಡಲು ಪಾಕಿಸ್ತಾನಕ್ಕೆ ಕುಮ್ಮಕ್ಕು ನೀಡಬಹುದು. ಇದೇ ವೇಳೆ ಭಾರತವು ತನ್ನ ಮಾರುಕಟ್ಟೆಯನ್ನು ಅಮೆರಿಕನ್ ಉತ್ಪನ್ನಗಳಿಗೆ ಮುಕ್ತಗೊಳಿಸುವಂತೆ ಒತ್ತಡ ಹೇರಬಹುದು ಎಂದು ಅವರು ನುಡಿಯುತ್ತಾರೆ.

ಆದರೆ ಸಂಪೂರ್ಣವಾಗಿ ಭಾರತದ ವಿರೋಧ ಕಟ್ಟಿಕೊಳ್ಳುವುದನ್ನು ಅಮೆರಿಕ ಬಯಸಲಾರದು ಎಂದೂ ಹೇಳಲಾಗುತ್ತದೆ. ಅಧಿಕಾರಕೇಂದ್ರವು ಪೂರ್ವದೆಡೆಗೆ ವಾಲುತ್ತಿರುವಾಗ ಭಾರತವನ್ನು ಸಂಪೂರ್ಣ ಕಡೆಗಣಿಸುವ ತಪ್ಪನ್ನು ಅಮೆರಿಕ ಮಾಡಲಾರದು. ಕಳೆದ 300 ವರ್ಷಗಳಲ್ಲಿ ಇದೇ ಮೊದಲ ಬಾರಿ ಯಾವುದೇ ಐರೋಪ್ಯ ದೇಶವು ಜಗತ್ತಿನ ಅತೀ ದೊಡ್ಡ ಮೂರು ಆರ್ಥಿಕ ಶಕ್ತಿಗಳಲ್ಲಿ ಇಲ್ಲವಾಗಿರುವುದನ್ನು ಗಮನಿಸಬೇಕು.

ಭಾರತದ ಮಹತ್ವ ಇರುವುದು ಅದರ ಆರ್ಥಿಕ ಸಾಮರ್ಥ್ಯದಲ್ಲಿ ಮಾತ್ರವಷ್ಟೇ ಅಲ್ಲ, ಅದು ಹೊಂದಿರುವ ವ್ಯೂಹಾತ್ಮಕ ಭೌಗೋಳಿಕ ಕ್ಷೇತ್ರದಲ್ಲಿಯೂ. ಇಂಡೋ ಪೆಸಿಫಿಕ್ ವಲಯದಲ್ಲಿ ಚೀನಾದ ಪ್ರಭಾವವನ್ನು ತಗ್ಗಿಸಬೇಕಾದರೆ ಅಮೆರಿಕಕ್ಕೆ ಭಾರತದ ಅಗತ್ಯವಿದೆ. ಈಗಿನ ಜಾಗತಿಕ ಚದುರಂಗದ ಹಾಸಿನಲ್ಲಿ ಭಾರತವು ಪಾಲುದಾರನೂ ಆಗಬಲ್ಲುದು, ಸಮರ್ಥ ವೈರಿಯೂ ಆಗಬಲ್ಲುದು.

ಸವಾಲಿರುವುದು ಭಾರತದಲ್ಲೆ

ಈಗ ಚೀನಾದ ಆರ್ಥಿಕತೆಯು ನಿಧಾನಗೊಂಡಿರುವುದರಿಂದ ತಾವು ಭಾರತವನ್ನು ನಿಭಾಯಿಸುವಲ್ಲಿ ಹೆಚ್ಚಿನ ನಿಯಂತ್ರಣ ಹೊಂದಿರುವುದಾಗಿ ಅಮೆರಿಕನ್ನರು ಭಾವಿಸಿದ್ದಾರೆ. ಚೀನಾದ ಕುಸಿಯುತ್ತಿರುವ ಆರ್ಥಿಕತೆಯ ಕಾರಣದಿಂದ ಅಮೆರಿಕಕ್ಕೆ ತನ್ನ ಪ್ರಾಬಲ್ಯ ಉಳಿಸಿಕೊಳ್ಳಲು ಸಾಧ್ಯವಾಗಲಿದೆ ಎಂದವರು ಭಾವಿಸುತ್ತಿದ್ದಾರೆ.

ಈ ನಿಟ್ಟಿನಲ್ಲಿ ಮುಂದಿನ ಎರಡು ದಶಕಗಳು ಅತ್ಯಂತ ಮಹತ್ವದ್ದಾಗಿವೆ. ಭಾರತದ ಭವಿಷ್ಯವನ್ನು ನಿರ್ಧರಿಸುವುದು ಅಮೆರಿಕ ಅಥವಾ ಚೀನಾಗಳಲ್ಲ. ಬದಲಾಗಿ ಭಾರತದಲ್ಲೇ ಇದು ನಿರ್ಧರಿಸಲ್ಪಡುವುದು. ಭಾರತವು ತನ್ನ ಆರ್ಥಿಕತೆ ಮತ್ತು ಶಿಕ್ಷಣದಲ್ಲಿ ಭಾರೀ ಸುಧಾರಣೆ ತರಬೇಕಾಗಿದೆ. ಇದು ನಾವು ಸೂಪರ್‌ಪವರ್ ಹಾದಿಯಲ್ಲಿ ಸಾಗುತ್ತೇವೆಯೇ ಅಥವಾ ಜಪಾನ್‌ನಂತೆ ಸ್ಥಗಿತಗೊಳ್ಳುತ್ತೇವೆಯೇ ಎಂಬುದನ್ನು ನಿರ್ಧರಿಸಲಿದೆ. ರಾಜಕೀಯದಲ್ಲಿ ಉಚಿತ ಕೊಡುಗೆಗಳ ಚಾಳಿ ಕೊನೆಗೊಳ್ಳಬೇಕು. ಅದೇರೀತಿ ಶಿಕ್ಷಣದಲ್ಲಿ ಮೆರಿಟ್‌ಗೆ ಹೆಚ್ಚು ಆದ್ಯತೆ ಸಿಗುವಂತಾಗಬೇಕು.

'ಅಮೆರಿಕವು ಭಾರತವನ್ನು ಚೀನಾದ ವಿರುದ್ಧವಾಗಿ ತನ್ನ ಪಾಲುದಾರನಾಗಿರಲು ಬಯಸುತ್ತದೆ. ಆದರೆ ಭಾರತವು ಮತ್ತೊಂದು ಚೀನಾವಾಗಿ ರೂಪುಗೊಳ್ಳುವುದನ್ನು ಬಯಸುವುದಿಲ್ಲ' ಎಂಬುದನ್ನು ಕ್ರಿಸ್ಟೋಫರ್ ಲಾಂಡ್ ಅವರ ಹೇಳಿಕೆಯು ಸ್ಪಷ್ಟಪಡಿಸಿದೆ.

ಭಾರತಕ್ಕೆ ಇಲ್ಲಿನ ಸಂದೇಶ ಸರಳವಾಗಿದೆ ಮತ್ತು ಸ್ಪಷ್ಟವಾಗಿದೆ. ಯಾವುದೇ ಸೂಪರ್‌ಪವರ್ ತನಗೆ ಪ್ರತಿಸ್ಪರ್ಧಿ ಬೆಳೆಯುವುದನ್ನು ಇಷ್ಟಪಡುವುದಿಲ್ಲ. ಭಾರತವು 21ನೇ ಶತಮಾನದ ನಿರ್ಣಾಯಕ ಶಕ್ತಿಯಾಗಿ ಬೆಳೆಯಬೇಕಾಗಿರುವುದು ಜಾಗತಿಕ ಸಹಕಾರಕ್ಕಿಂತಲೂ ಹೆಚ್ಚಾಗಿ ತನ್ನದೇ ಸ್ವಸಾಮರ್ಥ್ಯದಿಂದ !

ವಿಜ್ಞಾನ ಮತ್ತು ಧಾರ್ಮಿಕತೆಯ ಸಂಯೋಗ...

ಜೆ. ನಂದಕುಮಾರ್

ಕೃತಕ ಬುದ್ಧಿಮತ್ತೆಯನ್ನು ಭವಿಷ್ಯದ ತಂತ್ರಜ್ಞಾನ ಎಂದು ಈಗ ಪರಿಗಣಿಸಲಾಗುತ್ತದೆ. ಆದರೆ ಚಾಟ್ ಜಿಪಿಟಿಯಂತಹ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಇತ್ತೀಚೆಗೆ ಉಂಟಾಗಿರುವ ಕೆಲವು ಅನೂಹ್ಯ ಬೆಳವಣಿಗೆಗಳು ವೈಜ್ಞಾನಿಕ ಸಮುದಾಯ ಮತ್ತು ನಾಗರಿಕ ಸಮಾಜವನ್ನು ಅಲ್ಲಾಡಿಸಿದೆ. ಕೃತಕ ಬುದ್ಧಿಮತ್ತೆಯನ್ನು ಅನೈತಿಕ ಉದ್ದೇಶಗಳಿಗಾಗಿ ಬಳಸಬಹುದೇ, ಅದು ಮಾನವ ಬುದ್ಧಿಮತ್ತೆಗೇ ಅಂತ್ಯ ಹಾಡಬಹುದೇ ಎಂಬ ಪ್ರಶ್ನೆಗಳು ಉದಿಸಲಾರಂಭಿಸಿವೆ. ಈ ಪ್ರಶ್ನೆಗಳೆಲ್ಲ ನಮ್ಮ ವಿಜ್ಞಾನ ಸಮುದಾಯದ ಪರಿಗಣನೆಗೆ ಬರಬೇಕಾದ ವಿಷಯಗಳು ಹಾಗೂ ಅವರು ಇದಕ್ಕೆ ಸ್ಪಷ್ಟ ಉತ್ತರ ಕಂಡುಕೊಳ್ಳಬೇಕಾಗಿದೆ. ಇವೆಲ್ಲದರ ಹೊರತಾಗಿಯೂ ನನ್ನಂತಹ ಸಾಮಾನ್ಯ ಜನರು, ಮುಂದೊಂದು ದಿನ ಕೃತಕ ಬುದ್ಧಿಮತ್ತೆಯು ಮಾನವ ಬುದ್ಧಿಮತ್ತೆಯನ್ನು ಮೀರಿ ಬೆಳೆಯಬಹುದೆಂಬ ಆತಂಕಕ್ಕೆ ಒಳಗಾಗಿರುವುದು ಸುಳ್ಳಲ್ಲ.

ಈವರೆಗೆ ಕೃತಕ ಬುದ್ಧಿಮತ್ತೆಯು ಮನುಷ್ಯನ ಬುದ್ಧಿವಂತಿಕೆಯ ಇನ್ನೊಂದು ಸ್ತರದ ಅಭಿವೃದ್ಧಿಯೆಂದು ಭಾವಿಸಲಾಗಿತ್ತು. ವಿಜ್ಞಾನ, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಮನುಕುಲವು ಈಗ ತನ್ನ ಜೈವಿಕ ಮಿತಿಯನ್ನು ಮೀರಿ ಜೀವನಿಯಮವನ್ನೇ ಬದಲಿಸಲು ಹಾಗೂ ಆ ಮೂಲಕ 'ಕೃತಕ ಜೀವಿ'ಗಳನ್ನು ಸೃಷ್ಟಿಸಲು ಯತ್ನಿಸುತ್ತಿದೆ. ಮಾನವ ಬುದ್ಧಿಮತ್ತೆಯು ನಶಿಸಿಹೋದ ಭವಿಷ್ಯದ ಜಗತ್ತೊಂದನ್ನು ಕಲ್ಪಿಸಿಕೊಳ್ಳುವುದೆಂದರೆ ಅದು ಒಂದು ರೀತಿಯಲ್ಲಿ ಮನುಕುಲದ ವಿನಾಶದಂತೆಯೂ ಕಂಡುಬರುತ್ತದೆ. ಕೃತಕ ಬುದ್ಧಿಮತ್ತೆಯು ಅಧಿಕ ಶಕ್ತಿಯ ಯಂತ್ರಮಾನವರನ್ನು ಅಥವಾ ಡೇಟಾ ಪ್ರೊಸೆಸರ್‌ಗಳನ್ನು ಸೃಷ್ಟಿಸಿ ಮನುಷ್ಯರನ್ನೇ ಮೀರಿ ಸಾಗಬಹುದು.

ಈ ಯುಗದಲ್ಲೇ ನಾವು ತಂತ್ರಜ್ಞಾನವು ನಮ್ಮನ್ನು ಶೋಷಿಸಲು ಅವಕಾಶ ಮಾಡಿಕೊಟ್ಟಿದ್ದೇವೆ. ನಮ್ಮ ಆರೋಗ್ಯ, ಸಂಪತ್ತು ಮತ್ತು ದೈನಂದಿನ ವ್ಯವಹಾರದ ಕುರಿತಂತೆ ಈ ಮೊದಲು ವೈದ್ಯರು, ಆರ್ಥಿಕ ತಜ್ಞರು, ಸೇವಾ ಕ್ಷೇತ್ರದವರು ನಿರ್ಧಾರ ತೆಗೆದುಕೊಳ್ಳುತ್ತಿದ್ದರೆ ಈಗ ಅವೆಲ್ಲವನ್ನು ಆ್ಯಲ್ಗರಿದಮ್‌ಗಳು ನಿರ್ಧರಿಸುತ್ತವೆ. ಕೃತಕ ಬುದ್ಧಿಮತ್ತೆ ಆಧರಿತ ಆಲ್ಗರಿದಮ್‌ಗಳು ಮನುಷ್ಯನ ಪ್ರಗತಿಗೆ ಬಹಳಷ್ಟು ಕೊಡುಗೆ ನೀಡುತ್ತವಾದರೂ ಅವುಗಳ ವರ್ತನೆಯ ಅಶ್ಚಿತತೆಯು ಬೆದರಿಕೆಯನ್ನೂ ಒಡ್ಡಿರುವುದು ಸುಳ್ಳಲ್ಲ. ಡಾ. ಫ್ರಾಂಕ್‌ಸ್ಟೈನ್‌ನ ಕಲ್ಪನೆಯು ಈಗ ಕೇವಲ ಫ್ಯಾಂಟಸಿಯಾಗಿ ಉಳಿದಿಲ್ಲ. 'ಡೇಟಾಯಿಸಂ' ಅಥವಾ 'ಡೇಟಾ ರಿಲಿಜನ್' ರೂಪು ಪಡೆಯುವುದರೊಂದಿಗೆ ಇದು ಅಪಾಯದ ಹಾದಿ ತುಳಿದಿದೆ.

ಡೇಟಾ ರಿಲಿಜನ್ ಜೀವಿಗಳನ್ನು ಕೂಡಾ ಬಯೋಕೆಮಿಕಲ್ ಆಲ್ಗರಿದಮ್‌ನಂತೆಯೆ ಪರಿಗಣಿಸುತ್ತದೆ. ತಜ್ಞನೊಬ್ಬ ಹೇಳುವ ಪ್ರಕಾರ 'ಡೇಟಾಯಿಸಂ ಪ್ರಾಣಿಗಳು ಮತ್ತು ಯಂತ್ರಗಳ ನಡುವಿನ ಭೇದವನ್ನು ಅಳಿಸಿಹಾಕುತ್ತದೆ. ಅಂತಿಮವಾಗಿ ಅದು ಬಯೋಕೆಮಿಕಲ್ ಆಲ್ಗರಿದಮ್‌ಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬೇಕೆಂದು ನಿರೀಕ್ಷಿಸುತ್ತದೆ'' ಡೇಟಾಯಿಸಂ ಎಂಬುದು ಮಾನವ ಜನಾಂಗದ ಅಸ್ತಿತ್ವವನ್ನೆ ನಾಶಗೊಳಿಸುವ ಬೆದರಿಕೆಯಂತೆ ಕಂಡುಬರುತ್ತದೆ. ಮಾನವ ಬುದ್ಧಿಮತ್ತೆಯ ಜಾಗದಲ್ಲಿ ಕೃತಕ ಬುದ್ಧಿಮತ್ತೆಯನ್ನು ನೆಲೆಗೊಳಿಸಬೇಕೆಂದು ಬಯಸುತ್ತದೆ. ಮಾನವಕೇಂದ್ರಿತ ಜಗತ್ತು ಡೇಟಾ ಕೇಂದ್ರಿತ ಜಗತ್ತಾಗಿ ಪರಿವರ್ತನೆಗೊಂಡಾಗ ಎಲ್ಲ ಡೇಟಾಗಳ ಸಂಸ್ಕರಣೆ ಮತ್ತು ನಿರ್ಧಾರ ತಾಳುವ ಪ್ರಕ್ರಿಯೆನ್ನು ಒಂದು ಕೇಂದ್ರೀಯ ಪ್ರೊಸೆಸರ್ ನಡೆಸುತ್ತದೆ. ಇಂತಹ ನರಕಸ್ವರೂಪಿ ವ್ಯವಸ್ಥೆಯು ಒಂದು ರೀತಿಯಲ್ಲಿ ಕಮ್ಯುನಿಸ್ಟ್ ವ್ಯವಸ್ಥೆಯೇ ಆಗಿದೆ ಎಂದು ತಜ್ಞರು ಹೇಳುತ್ತಾರೆ.

ಇಂತಹ ಸ್ವ–ವಿನಾಶಿ ಪರಿಸ್ಥಿತಿಯಿಂದ ಹೇಗೆ ಪಾರಾಗುವುದು ಎಂಬುದನ್ನು ಚಿಂತಿಸುವುದು ತಂತ್ರಜ್ಞರು ಮತ್ತು ವಿಜ್ಞಾನಿಗಳ ಕಾರ್ಯವಾದರೂ ಇಂತಹುದೊಂದು ವಕ್ರಹಾದಿ ತುಳಿಯಲು ಕಾರಣವೇನು ಎಂಬುದನ್ನು ತಿಳಿಯುವುದು ನಮ್ಮ ಕರ್ತವ್ಯವಾಗಿದೆ.

ನಿಜವಾದ ಸಮಸ್ಯೆಯಿರುವುದು ಮನುಷ್ಯನ ಜ್ಞಾನವನ್ನು ವಿಭಾಗೀಕರಣಗೊಳಿಸಿರುವುದರಲ್ಲಿ ಹಾಗೂ ಮಾನವನ ಧಾರ್ಮಿಕ ಆಯಾಮವನ್ನು ಕಡೆಗಣಿಸಿ ಆತನನ್ನು ಕೇವಲ ಬಯೋಕೆಮಿಕಲ್ ವಸ್ತು ಎಂಬಂತೆ ಪರಿಗಣಿಸಿರುವಲ್ಲಿ. ಕೃತಕ ಬುದ್ಧಿಮತ್ತೆಯು ಮನುಷ್ಯನ ಬುದ್ಧಿಮತ್ತೆಗೆ ಸವಾಲೊಡ್ಡುವಂತೆ ಬೆಳೆದರೆ, ಅದಕ್ಕೆ ಹಿಂದೂ ಚಿಂತನೆಯ ಪ್ರಕಾರ ಪರಿಹಾರ ಮಾರ್ಗವೆಂದರೆ ಉನ್ನತ ಮಾನಸಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು. ಈ ನಿಟ್ಟಿನಲ್ಲಿ ಪುರಾತನ ಹಿಂದು ಜ್ಞಾನ ಮತ್ತು ಆಧುನಿಕ ವಿಜ್ಞಾನವನ್ನು ಮೇಳೈಸಿದ ಶ್ರೀ ಅರವಿಂದರ ಚಿಂತನೆ ನೆರವಿಗೆ ಬರಬಲ್ಲುದು. ಇದು ಒಂದು ರೀತಿಯಲ್ಲಿ ವಿಕಾಸವಾದಿ ಧಾರ್ಮಿಕತೆ ಎಂದು ಹೇಳಬಹುದು.

ಅರವಿಂದರು ಪ್ರಜ್ಞಾವಂತಿಕೆಯನ್ನು ಕೇವಲ ಬುದ್ಧಿವಂತಿಕೆಗೆ ಸೀಮಿತಗೊಳಿಸುವುದಿಲ್ಲ. ಮನಸ್ಸೆಂಬುದು ಪ್ರಜ್ಞೆಯೆಂದು ಕರೆಯಲ್ಪಡುವ ಬಹುಸ್ತರದ ವಾಸ್ತವತೆಯ ಒಂದು ಸ್ತರ ಮಾತ್ರ ಎನ್ನುತ್ತಾರವರು. ''ಪ್ರಸಕ್ತ ಮನುಕುಲವು ವಿಕಾಸವಾದಿ ಬಿಕ್ಕಟ್ಟು ಎದುರಿಸುತ್ತಿದೆ. ಮಾನವನು ಎಂತಹ ನಾಗರಿಕತೆ ವ್ಯವಸ್ಥೆಯನ್ನು ಸ್ಥಾಪಿಸಿದ್ದಾನೆಂದರೆ ಅದು ಆತನ ಸೀಮಿತ ಮಾನಸಿಕ ಸಾಮರ್ಥ್ಯಕ್ಕೆ ಮತ್ತು ಅರಿವಿಗೆ ಎಟುಕದ್ದಾಗಿದೆ. ಆತನ ಧಾರ್ಮಿಕ ಮತ್ತು ನೈತಿಕ ತಿಳಿವಿಗೂ ಸಿಲುಕದ್ದಾಗಿದೆ'' ಎನ್ನುತ್ತಾರವರು.

ಕೃತಕ ಬುದ್ಧಿಮತ್ತೆ ಮನುಷ್ಯನ ಮೇಲೆಯೆ ನಿಯಂತ್ರಣ ಸಾಧಿಸುವುದನ್ನು ತಡೆಯಲು ಇರುವ ಸಾಧನೀಯ ದಾರಿಯೆಂದರೆ ನಮ್ಮ ಮಾನವ ಬುದ್ಧಿಶಕ್ತಿಯನ್ನೆ ಇನ್ನೊಂದು ಸ್ತರ ಮೇಲಕ್ಕೆ ಕೊಂಡೊಯ್ಯುವುದು ಹಾಗೂ ಸುಪರ್‌ಮೈಂಡ್‌ನ ಅಪರಿಮಿತ ಶಕ್ತಿಯ ಸಾಧ್ಯತೆಗಳನ್ನು ಪರಿಶೀಲಿಸುವುದು. ಇದರ ಸರಳ ಅರ್ಥವೆಂದರೆ ನಮ್ಮ ಮನಸ್ಸನ್ನು ಮತ್ತು ಬುದ್ಧಿಮತ್ತೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದು ಹಾಗೂ ಅದನ್ನು ಯಂತ್ರದ ಬುದ್ಧಿಮತ್ತೆಗಿಂತ ಹೆಚ್ಚು ಶಕ್ತಿಶಾಲಿ ಮತ್ತು ವಿಶಾಲವನ್ನಾಗಿಸುವುದು.

ಅರವಿಂದರು ಹೇಳುವ ಪ್ರಕಾರ ಸುಪರ್‌ಮೈಂಡ್ ಎನ್ನುವುದು ಎಲ್ಲದರ ಬಗ್ಗೆಯೂ ಸಂಪೂರ್ಣ ಅರಿವಿರುವ ಪರಿಪೂರ್ಣ ಹಾಗೂ ಸಮಗ್ರ ಜ್ಞಾನ. ಮನುಷ್ಯ ತನ್ನ ಈಗಿನ ಸೀಮಿತ ಬುದ್ಧಿಮತ್ತೆಯಿಂದ ಈ ಹಂತಕ್ಕೆ ಮೇಲೇರಲು ಸಾಧ್ಯವಿದೆ. ಪ್ರಜ್ಞಾವಂತಿಕೆಯನ್ನು ಬೆಳೆಸುವ ಮೂಲಕ ಹಾಗೂ ಬದುಕಿನಲ್ಲಿ ಧಾರ್ಮಿಕ ಪ್ರಗತಿ ಸಾಧಿಸುವ ಮೂಲಕ ಮಾನವ ಬುದ್ಧಿವಂತಿಕೆಯ ಸದುಪಯೋಗ ಪಡೆದುಕೊಳ್ಳಬಹುದು. ಇದು ಕೃತಕ ಬುದ್ಧಿಮತ್ತೆಯು ಒಡ್ಡುವ ಸವಾಲುಗಳನ್ನು ಮತ್ತು ಅಪಾಯಗಳನ್ನು ಎದುರಿಸಲು ನಮಗೆ ನೆರವೀಯಬಲ್ಲುದು.

ಮಧ್ಯಪ್ರಾಚ್ಯ ಯುದ್ಧ ತೀವ್ರ: ಹಾರ್ಮುಜ್ ಸಾಗರದ ಮಾರ್ಗ ತಡೆ

ಯುದ್ಧ ನೌಕೆಗಳನ್ನು ಕಳುಹಿಸಲು ಒಗ್ಗೊಡದ ಮಿತ್ರದೇಶಗಳು

ಬೈರೂತ್: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ತೀವ್ರಗೊಳ್ಳುತ್ತಿರುವ ಹಿನ್ನೆಲೆ ಜಾಗತಿಕ ಇಂಧನ ಸಂಕಷ್ಟದ ಭೀತಿ ಹೆಚ್ಚಾಗಿದೆ. ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ಬಳಿಕ ಇರಾನ್ ಪ್ರತಿ ದಾಳಿ ನಡೆಸುತ್ತಿದ್ದು, ಪ್ರಮುಖ ಸಾಗಣೆ ಮಾರ್ಗವಾದ ಹಾರ್ಮುಜ್ ಜಲಸಂಧಿಯಲ್ಲಿ ಸಾಗಣೆ ಸ್ಥಗಿತಗೊಂಡಿದೆ. ಈ ಮಾರ್ಗದ ಮೂಲಕ ವಿಶ್ವದ ಸುಮಾರು ಐದನೇ ಭಾಗದ ತೈಲ ಸಾಗಣೆ ನಡೆಯುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆ ಕಂಡುಬಂದಿದೆ.

ಏತನ್ಮಧ್ಯೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾರ್ಮುಜ್ ಮಾರ್ಗವನ್ನು ಸುರಕ್ಷಿತಗೊಳಿಸಲು ಹಲವು ದೇಶಗಳಿಗೆ ಯುದ್ಧ ನೌಕೆಗಳನ್ನು ಕಳುಹಿಸುವಂತೆ ಮನವಿ ಮಾಡಿದ್ದಾರೆ. ಆದರೆ ಇದುವರೆಗೆ ಯಾವುದೇ ದೇಶ ಸ್ಪಷ್ಟವಾಗಿ ಒಪ್ಪಿಗೆ ನೀಡಿಲ್ಲ. ಇದೇ ವೇಳೆ ಸಹಾಯ ಮಾಡದ ದೇಶಗಳನ್ನು ನಾವು ನೆನಪಿಟ್ಟುಕೊಳ್ಳುತ್ತೇವೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಇನ್ನೊಂದೆಡೆ, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಯುದ್ಧ ವಿರಾಮ ಅಥವಾ ಮಾತುಕತೆ ಸಾಧ್ಯತೆಗಳ ಕುರಿತು ಹೊರಬರುತ್ತಿರುವ ವರದಿಗಳನ್ನು ತಳ್ಳಿಹಾಕಿದ್ದಾರೆ.

ಇರಾನ್ ದಾಳಿಗಳ ಭೀತಿಯಿಂದ ಹಾರ್ಮುಜ್ ಜಲಸಂಧಿಯಲ್ಲಿ ವ್ಯಾಪಾರ ಹಡಗುಗಳ ಸಂಚಾರ ಬಹುತೇಕ ನಿಂತಿದೆ. ಈ ಮಾರ್ಗದ ಮೂಲಕ ವಿಶ್ವದ ಸುಮಾರು 20% ತೈಲ ಸಾಗಣೆ ನಡೆಯುತ್ತದೆ.

ಈ ಪರಿಸ್ಥಿತಿಯಿಂದ ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 100 ಡಾಲರ್ ಮೀರಿದ್ದು, ಸೋಮವಾರ ಆರಂಭಿಕ ವಹಿವಾಟಿನಲ್ಲಿ 104 ಡಾಲರ್‌ಗೆ ಏರಿಕೆಯಾಗಿದೆ. ಫೆಬ್ರವರಿ 28ರಿಂದ ಇದು ಸುಮಾರು 45% ಏರಿಕೆಯಾಗಿದೆ.



ಜಾಗತಿಕ ಆರ್ಥಿಕತೆಗೆ ಹೊಡೆತ

ಈ ಯುದ್ಧದಿಂದ ಇಂಧನ ಮತ್ತು ರಸಗೊಬ್ಬರ ಬೆಲೆ ಏರಿಕೆ ಕಂಡುಬರುತ್ತಿದ್ದು, ಬಡ ರಾಷ್ಟ್ರಗಳಲ್ಲಿ ಆಹಾರ ಕೊರತೆ ಉಂಟಾಗುವ ಆತಂಕ ವ್ಯಕ್ತವಾಗಿದೆ. ಜಾಗತಿಕ ಆರ್ಥಿಕತೆಗೂ ಇದರ ಪರಿಣಾಮ ಬೀರುವ ಸಾಧ್ಯತೆ ಇದೆ.

ಜಾಗತಿಕ ಇಂಧನ ಸಂಕಷ್ಟ ಭೀತಿ

ಚಬಹಾರ್ ಸಮೀಪದ ಮಿಲಿಟರಿ ನೆಲೆಗಳ ಮೇಲೆ ಅಮೆರಿಕ ದಾಳಿ

ಇರಾನ್‌ನ ವ್ಯೂಹಾತ್ಮಕ ಚಬಹಾರ್ ಮುಕ್ತ ವ್ಯಾಪಾರ-ಕೈಗಾರಿಕಾ ವಲಯದ(ಸಿಎಫ್ ಝೆಡ್) ಸಮೀಪವಿರುವ ಮಿಲಿಟರಿ ನೆಲೆಗಳ ಮೇಲೆ ಅಮೆರಿಕದ ಫೈಟರ್ ಜೆಟ್‌ಗಳು ದಾಳಿ ನಡೆಸಿವೆ ಎಂದು ವರದಿಯಾಗಿದೆ. ಸಂಘರ್ಷ ಮೂರನೇ ವಾರಕ್ಕೆ ಕಾಲಿಡುತ್ತಿದ್ದಂತೆ, ಸಿಸ್ತಾನ್ ಮತ್ತು ಬಲೂಚಿಸ್ತಾನ್ ಪ್ರಾಂತ್ಯದ ಈ ವ್ಯಾಪಾರ ಕೇಂದ್ರದ ಹಿಂಭಾಗದಲ್ಲಿ ಭೀಕರ ಸ್ಫೋಟದ ಶಬ್ದ ಕೇಳಿಬಂದಿದೆ, ಎಂದು ವಾಯ್ಸ್ ಆಫ್ ಅಮೇರಿಕಾ ವರದಿ ಮಾಡಿದೆ.

ಮಧ್ಯ ಏಷ್ಯಾವನ್ನು ಹಿಂದೂ ಮಹಾಸಾಗರಕ್ಕೆ ಸಂಪರ್ಕಿಸುವ ಅತ್ಯಂತ ಪ್ರಮುಖ ತೆರಿಗೆ ಮುಕ್ತ ಕೇಂದ್ರದ ಸಮೀಪವಿರುವ ಪ್ರದೇಶಗಳನ್ನು ಈ ದಾಳಿಯಲ್ಲಿ ಗುರಿಪಡಿಸಲಾಗಿದೆ. ಹಾರ್ಮುಜ್ ಜಲಸಂಧಿಯನ್ನು ಬಳಸದೆಯೇ ನೇರ ಸಮುದ್ರ ಮಾರ್ಗವನ್ನು ಒದಗಿಸುವ ಈ ವಲಯ ಇರಾನ್‌ಗೆ ಅತ್ಯಂತ ನಿರ್ಣಾಯಕ. ಒಂದು ವೇಳೆ ಗಲ್ಫ್ ಹಡಗು ಸಂಚಾರಕ್ಕೆ ಇರಾನ್ ಅಡ್ಡಿಪಡಿಸುವುದನ್ನು ಮುಂದುವರಿಸಿದರೆ, ಈ ದಾಳಿಗಳನ್ನು ಇಂಧನ ಮೂಲಸೌಕರ್ಯಗಳಿಗೂ ವಿಸ್ತರಿಸಲಾಗುವುದು, ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

550ಕ್ಕೂ ಹೆಚ್ಚು ಪ್ರಯಾಣಿಕರ ಸ್ಥಳಾಂತರ



ಹೊಸದಿಲ್ಲಿ: ಭಾರತವು ತನ್ನ 550ಕ್ಕೂ ಹೆಚ್ಚು ಪ್ರಜೆಗಳನ್ನು ಇರಾನ್‌ನಿಂದ ಅರ್ಮೇನಿಯಾದ ಮೂಲಕ ಸ್ಥಳಾಂತರಿಸಿದೆ. ಇದಕ್ಕೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಅರ್ಮೇನಿಯಾಗೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಧನ್ಯವಾದ ಹೇಳಿದ್ದಾರೆ.

ಸುಮಾರು 9,000 ಭಾರತೀಯರು ಇರಾನ್‌ನಲ್ಲಿ ನೆಲೆಸಿದ್ದಾರೆ. ಅಜರ್‌ಬೈಜಾನ್ ಮತ್ತು ಅರ್ಮೇನಿಯಾಗೆ ಪ್ರಯಾಣಿಸಲು ಬಯಸುವವರಿಗೆ ಭಾರತ ಸರ್ಕಾರವು ಸಹಾಯ ಮಾಡುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಇರಾನ್ ತೈಲ ಕೇಂದ್ರದ ವಶಕ್ಕೆ ಅಮೆರಿಕ ಚಿಂತನೆ



ವಾಷಿಂಗ್ಟನ್: ಟೆಹ್ರಾನ್‌ನ ಕಡಲ ದಿಗ್ಬಂಧನವನ್ನು ಭೇದಿಸಿ ಉಲ್ಬಣಗೊಳ್ಳುತ್ತಿರುವ ಜಾಗತಿಕ ಇಂಧನ ಬಿಕ್ಕಟ್ಟನ್ನು ಪರಿಹರಿಸಲು ಖಾರ್ಗ್ ದ್ವೀಪದ ಮೇಲೆ ಮಿಲಿಟರಿ ಹಸ್ತಕ್ಷೇಪ ಮಾಡುವ ಬಗ್ಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರಿಶೀಲಿಸುತ್ತಿದ್ದಾರೆ ಎನ್ನಲಾಗಿದೆ. ಪರ್ಷಿಯನ್ ಕೊಲ್ಲಿಯಲ್ಲಿ ತೈಲ ಟ್ಯಾಂಕರ್‌ಗಳ ಸಂಚಾರ ಸ್ಥಗಿತಗೊಂಡ ಹಿನ್ನೆಲೆಯಲ್ಲಿ ಇರಾನ್‌ನ ಪ್ರಮುಖ ತೈಲ ರಫ್ತು ಕೇಂದ್ರವನ್ನು ವಶಪಡಿಸಿಕೊಳ್ಳುವ ಸಾಧ್ಯತೆಯಿದೆ, ಎಂದು ಮೂಲಗಳು ತಿಳಿಸಿವೆ. ಟ್ರಂಪ್, ಅತ್ಯಮೂಲ್ಯ ರತ್ನ ಎಂದೇ ವ್ಯಾಖ್ಯಾನಿಸುವ ಖಾರ್ಗ್ ದ್ವೀಪವನ್ನು ಅಮೆರಿಕದ ಅಧಿಕಾರಿಗಳು ನಿರ್ಣಾಯಕ ಗುರಿಯೆಂದು ಪರಿಗಣಿಸಿದ್ದಾರೆ. ಈ ಸೌಲಭ್ಯದ ಮೇಲಿನ ನಿಯಂತ್ರಣ ಸಾಧಿಸಿ, ಇರಾನ್ ಆಡಳಿತದ ಆರ್ಥಿಕ ಮೂಲವನ್ನೇ ಕಡಿತಗೊಳಿಸುವ ಯೋಜನೆ ಅವರದ್ದು ಎಂದು ನಂಬಲಾಗಿದೆ.


ದ್ವೀಪದ ಮೇಲಿರುವ ಮಿಲಿಟರಿ ನೆಲೆಗಳ ಮೇಲೆ ಈಗಾಗಲೇ ದಾಳಿ ನಡೆಸಲು ಆದೇಶಿಸಲಾಗಿದ್ದರೂ, ಭೂಸೇನೆಯನ್ನು ನಿಯೋಜಿಸುವುದು ಹೆಚ್ಚಿನ ಅಪಾಯದ ಕ್ರಮವೆಂದು ಪರಿಗಣಿಸಲಾಗಿದೆ. ನೆರೆಯ ಕೊಲ್ಲಿ ರಾಷ್ಟ್ರಗಳ ತೈಲ ಮೂಲಸೌಕರ್ಯಗಳ ಮೇಲೆ ಪ್ರತೀಕಾರದ ದಾಳಿಗಳು ನಡೆಯಬಹುದು ಎಂಬ ಆತಂಕ ವ್ಯಕ್ತವಾಗಿದೆ. ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಪ್ರಮುಖ ಮಿತ್ರರಾಷ್ಟ್ರವಾದ ಇಸ್ರೇಲ್, ಇರಾನ್‌ನಲ್ಲಿ ಸದ್ಯಕ್ಕೆ ನೇರ ಭೂಸೇನಾ ಕಾರ್ಯಾಚರಣೆಗೆ ಇಳಿಯಲು ಒಲವು ಹೊಂದಿಲ್ಲ ಎನ್ನಲಾಗಿದೆ.

ದುಬೈ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ

ಸೋಮವಾರ ಬೆಳಗ್ಗೆ ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದ ಇಂಧನ ಟ್ಯಾಂಕ್ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ ಪರಿಣಾಮ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಕೆಲ ಗಂಟೆಗಳ ಕಾಲ ವಿಮಾನ ಸಂಚಾರ ಸ್ಥಗಿತಗೊಂಡು ಬಳಿಕ ಪುನರಾರಂಭವಾಯಿತು. ಯಾವುದೇ ಗಾಯಗಳ ವರದಿ ಇಲ್ಲ. ಇದಕ್ಕೂ ಮುನ್ನ ಅಬುಧಾಬಿಯಲ್ಲಿ ಇರಾನ್ ಕ್ಷಿಪಣಿ ದಾಳಿಯಿಂದ ಒಂದು ವಾಹನಕ್ಕೆ ಹಾನಿಯಾದ ಪರಿಣಾಮ ಒಬ್ಬರು ಮೃತಪಟ್ಟಿದ್ದಾರೆ. ಫುಜೈರಾ ಪ್ರದೇಶದ ತೈಲ ಘಟಕದಲ್ಲೂ ಡ್ರೋನ್ ದಾಳಿಯಿಂದ ಬೆಂಕಿ ಕಾಣಿಸಿಕೊಂಡಿದೆ.

ಬೈರೂತ್, ಟೆಹ್ರಾನ್ ಮೇಲೆ ಇಸ್ರೇಲ್ ದಾಳಿ

ಇಸ್ರೇಲ್ ಸೇನೆ ಲೆಬನಾನ್ ರಾಜಧಾನಿ ಬೈರೂತ್‌ನಲ್ಲಿ ಹೆಜ್ಬೊಲ್ಲಾ ಸಂಘಟನೆಯ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಹೊಸ ದಾಳಿಗಳನ್ನು ನಡೆಸಿದೆ. ಈ ದಾಳಿಯಿಂದ ದಕ್ಷಿಣ ಲೆಬನಾನ್‌ನಲ್ಲಿ ಕನಿಷ್ಠ ಏಳು ಮಂದಿ ಮೃತಪಟ್ಟಿದ್ದಾರೆ. ಇದುವರೆಗೆ ಲೆಬನಾನ್‌ನಲ್ಲಿ 850ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಸುಮಾರು 8 ಲಕ್ಷ ಜನರು ಸ್ಥಳಾಂತರಗೊಂಡಿದ್ದಾರೆ. ಟೆಹ್ರಾನ್ ಮೇಲೂ ಇಸ್ರೇಲ್ ಹೊಸ ದಾಳಿಗಳನ್ನು ನಡೆಸಿದ್ದು, ಹಲವು ಸ್ಫೋಟಗಳ ಶಬ್ದಗಳು ಕೇಳಿಬಂದಿವೆ. ಇತ್ತೀಚಿನ ಯುದ್ಧದಲ್ಲಿ ಇರಾನ್‌ನಲ್ಲಿ 1300ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.





ಭಾರತೀಯರಿಗೆ ಸಲಹೆ

ಪ್ರಸ್ತುತ ಇರಾನ್‌ನಲ್ಲಿರುವ ತನ್ನ ನಾಗರಿಕರು ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೊಂದಿಗೆ ಪೂರ್ವಭಾವಿ ಮತ್ತು ಸ್ಪಷ್ಟ ಮಾಹಿತಿ ಇಲ್ಲದೆ ಯಾವುದೇ ಭೂ ಗಡಿ ದಾಟಲು ಪ್ರಯತ್ನಿಸಬೇಡಿ ಎಂದು ಭಾರತವು ಸೋಮವಾರ ಮತ್ತೊಂದು ಸಲಹೆ ನೀಡಿದೆ. ಇರಾನ್‌ಗೆ ಮಾರ್ಗದರ್ಶನವಿಲ್ಲದೆ ಭೂ ಗಡಿಗಳ ಮೂಲಕ ಹೊರಡಲು ಪ್ರಯತ್ನಿಸುವ ಭಾರತೀಯ ಪ್ರಜೆಗಳು ಗಂಭೀರ ಸಾರಿಗೆ ಮತ್ತು ವಲಸೆ ತೊಂದರೆಗಳನ್ನು ಎದುರಿಸುವ ಸಾಧ್ಯತೆಯಿದೆ ಎಂದು ರಾಯಭಾರ ಕಚೇರಿಯು ಹೇಳಿದೆ.

4,300ಕ್ಕೂ ಹೆಚ್ಚು ವಿಮಾನಗಳು ರದ್ದು

ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಭಾರತೀಯ ವಿಮಾನಯಾನ ಸಂಸ್ಥೆಗಳು ಈವರೆಗೆ 4,335 ವಿಮಾನಗಳನ್ನು ಮತ್ತು ವಿದೇಶಿ ವಿಮಾನಯಾನ ಸಂಸ್ಥೆಗಳು 1,187 ವಿಮಾನಗಳನ್ನು ರದ್ದುಗೊಳಿಸಿವೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮ್‌ಮೋಹನ್ ನಾಯ್ಡು ಸೋಮವಾರ ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ. ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ವಾಯುಪ್ರದೇಶದ ಮುಚ್ಚುವಿಕೆಯಿಂದಾಗಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ಒಳಗೊಂಡ ಉಲ್ಬಣಗೊಳ್ಳುತ್ತಿರುವ ಸಂಘರ್ಷವು ವಿಮಾನ ಕಾರ್ಯಾಚರಣೆಯನ್ನು ಗಮನಾರ್ಹವಾಗಿ ಅಡ್ಡಿಪಡಿಸಿದೆ. ಪ್ರಶ್ನೋತ್ತರದ ಸಮಯದಲ್ಲಿ ಪೂರಕ ಪ್ರಶ್ನೆಗೆ ಉತ್ತರಿಸಿದ ನಾಯ್ಡು, ವಿಮಾನಯಾನ ಕಾರ್ಯಾಚರಣೆಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಪ್ರತಿಪಾದಿಸಿದರು.

ಮೋದಿ ಇಸ್ರೇಲ್ ಭೇಟಿಗೂ ಸಮರಕ್ಕೂ ಸಂಬಂಧವಿಲ್ಲ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಇಸ್ರೇಲ್ ಭೇಟಿ ಮುಗಿಸಿ ಭಾರತಕ್ಕೆ ಮರಳಿದ 2 ದಿನ ನಂತರ ಇರಾನ್ ವಿರುದ್ಧ ಮಿಲಿಟರಿ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ. ಪ್ರಧಾನಿ ಮೋದಿ ಪ್ರವಾಸವನ್ನು ದಾಳಿ ಕಾರ್ಯಾಚರಣೆ ಜತೆ ತಳುಕು ಹಾಕುವುದು ತಪ್ಪು ಎಂದು ಇಸ್ರೇಲ್‌ನ ಭಾರತ ರಾಯಭಾರಿ ರುವೆನ್ ಅಝರ್ ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಧಾನಿ ಮೋದಿ ಭೇಟಿಗೆ ಮುನ್ನ ವಲಯದಲ್ಲಿ ಸನ್ನಿವೇಶ ಅತ್ಯಂತ ಪ್ರಕ್ಷುಬ್ಧವಾಗಿತ್ತು. ಪ್ರಧಾನಿ ಮೋದಿ ಇಸ್ರೇಲ್‌ನಿಂದ ನಿರ್ಗಮಿಸಿದ ಬಳಿಕವೇ ಇರಾನ್ ವಿರುದ್ಧ ಮಿಲಿಟರಿ ಕಾರ್ಯಾಚರಣೆಗಳ ಶುರು ಮಾಡಲಾಗಿತ್ತು. ಪ್ರಧಾನಿ ಮೋದಿ ಇಸ್ರೇಲ್‌ನಿಂದ ನಿರ್ಗಮಿಸಿದ ಎರಡು ದಿನಗಳ ತರುವಾಯ, ಕಾರ್ಯಾಚರಣೆ ನಿರ್ಧಾರವನ್ನು ಇಸ್ರೇಲ್ ಸಂಪುಟವು ಕೈಗೊಂಡಿತು. ಈ ಹಿನ್ನೆಲೆಯಲ್ಲಿ ಮೋದಿಯವರ ಇಸ್ರೇಲ್ ಪ್ರವಾಸವನ್ನು ಮಿಲಿಟರಿ ಕಾರ್ಯಾಚರಣೆಯೊಂದಿಗೆ ಜೋಡಿಸುವುದು ಸರಿಯಲ್ಲವೆಂದು ಅಝರ್ ಪುನರುಚ್ಚರಿಸಿದ್ದಾರೆ.

ಕಳೆದ 9 ವರ್ಷಗಳಲ್ಲಿ ದ್ವಿತೀಯ ಬಾರಿ ಫೆ.25ರಂದು ಪ್ರಧಾನಿ ಮೋದಿ ಇಸ್ರೇಲ್‌ಗೆ ಭೇಟಿ ನೀಡಿದ್ದರು. ಅಧ್ಯಕ್ಷ ಬೆಂಜಮಿನ್ ನೆತನ್ಯಾಹು ಜತೆ ಮಾತುಕತೆ ಬಳಿಕ ಮರುದಿನ ಭಾರತಕ್ಕೆ ವಾಪಸ್ಸಾಗಿದ್ದರು. ಫೆ.28ರಂದು ಮುಂಜಾನೆ ಅಮೆರಿಕ ಸಹಕಾರದೊಂದಿಗೆ ಇಸ್ರೇಲ್ ಇರಾನ್ ವಿರುದ್ಧ ಭಾರೀ ಮಿಲಿಟರಿ ಕಾರ್ಯಾಚರಣೆ ನಡೆಸಿತ್ತು. ಸಂಭಾವ್ಯ ಪರಮಾಣು ಒಪ್ಪಂದ ಕುರಿತ ಮಾತುಕತೆಗಳು ನಡೆದಿರುವಂತೆಯೇ, ಟೆಹ್ರಾನ್ ಅಣ್ವಸ್ತ್ರ ತಯಾರಿಗೆ ಮುಂದಾಗಿರುವುದು ತೀರಾ ತಪ್ಪೆಂಬುದು ಇಸ್ರೇಲ್ ಆರೋಪವಾಗಿದೆ.

ಕಿರುಸುದ್ದಿ

ಸಿಪಿಐಗೆ ರಾಜೀನಾಮೆ ನೀಡಿದ್ದ ಶಾಸಕ ಬಿಜೆಪಿಗೆ

ತ್ರಿಶೂರ್: ಕೇರಳದಲ್ಲಿ ರಾಜಕೀಯ ಬದಲಾವಣೆಗಳು ತೀವ್ರಗೊಳ್ಳುತ್ತಿದ್ದು, ಇತ್ತೀಚೆಗೆ ಸಿಪಿಐಗೆ ರಾಜೀನಾಮೆ ನೀಡಿದ್ದ ನಾಟ್ಟಿಕಾ ಶಾಸಕ ಸಿ.ಸಿ.ಮುಕುಂದನ್ ಅವರು ಸೋಮವಾರ ಬಿಜೆಪಿ ಸೇರಿದ್ದಾರೆ. ಜಿಲ್ಲಾ ಬಿಜೆಪಿ ಕಚೇರಿಗೆ ಆಗಮಿಸಿದ ಮುಕುಂದನ್ ಅವರು ಅಲ್ಲಿ ಬಿಜೆಪಿ ಸದಸ್ಯತ್ವ ಸ್ವೀಕರಿಸಿದ್ದು, ಅವರನ್ನು ನಾಟ್ಟಿಕಾ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸುವ ನಿರೀಕ್ಷೆಯಿದೆ. ತಾನು ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಪ್ರಕಟಿಸಿದ ಬಳಿಕ ಅವರನ್ನು ಪಕ್ಷದಿಂದ ಉಚ್ಚಾಟಿಸಿರುವುದಾಗಿ ಸಿಪಿಐ ಹೇಳಿಕೊಂಡಿತ್ತು.

ಬೆಂಕಿ ಅವಘಡದಲ್ಲಿ 10 ರೋಗಿಗಳ ಸಾವು

ಭುವನೇಶ್ವರ: ಸರ್ಕಾರಿ ಸ್ವಾಮ್ಯದ ಎಸ್‌ಸಿಬಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಐಸಿಯುನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ 10 ರೋಗಿಗಳು ಮೃತಪಟ್ಟಿದ್ದು, 11 ಮಂದಿ ಗಾಯಗೊಂಡಿದ್ದಾರೆ. ಮೃತರ ಕುಟುಂಬಗಳಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ತಲಾ 25 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಣೆ ಮಾಡಿದರು. ಪ್ರಧಾನಿ ಮೋದಿ ಮೃತರ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ.

ಭಾರತದ ಫೆಬ್ರವರಿ ತಿಂಗಳ ಸರಕು ರಫ್ತಲ್ಲಿ ಅಲ್ಪ ಕುಸಿತ

ಹೊಸದಿಲ್ಲಿ: ಭಾರತದ ಸರಕು ರಫ್ತು ಫೆಬ್ರವರಿಯಲ್ಲಿ ಶೇ. 0.81 ರಷ್ಟು ಕುಸಿದು 36.61 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ. ವ್ಯಾಪಾರ ಕೊರತೆ ಕಳೆದ ತಿಂಗಳಿಗಿಂತ 27.1 ಬಿಲಿಯನ್ ಡಾಲರ್‌ಗಳಿಗೆ ಇಳಿಕೆಯಾಗಿದೆ.

ವ್ಯಾಪಾರ ಕೊರತೆ ಜನವರಿಯ 34.68 ಬಿಲಿಯನ್ ಡಾಲರ್‌ಗಳಿಗೆ ಹೋಲಿಸಿದರೆ ಕಡಿಮೆಯಾಗಿದೆ, ಆದರೆ ಕಳೆದ ವರ್ಷದ ಫೆಬ್ರವರಿಯ 14.05 ಬಿಲಿಯನ್ ಡಾಲರ್‌ಗಳಿಗೆ ಹೋಲಿಸಿದರೆ ಹೆಚ್ಚಾಗಿದೆ. ಚಿನ್ನದ ಆಮದು ಶೇ. 218.55 ಮತ್ತು ಬೆಳ್ಳಿ ಆಮದು ಶೇ. 285.23 ರಷ್ಟು ಏರಿಕೆಯಾದ ಕಾರಣ, ಒಟ್ಟು ಆಮದು ಶೇ. 24.11 ರಷ್ಟು ಹೆಚ್ಚಾಗಿ 63.71 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ.

ಸರಕು ಸಾಗಣೆ ವೆಚ್ಚದ ಬಿಸಿ: ಫೆಬ್ರವರಿ 28 ರಂದು ಆರಂಭವಾದ ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಮಾರ್ಚ್ ತಿಂಗಳ ರಫ್ತು ಕುಸಿಯುವ ಸಾಧ್ಯತೆಯಿದೆ ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ತಿಳಿಸಿದ್ದಾರೆ. ಹೆಚ್ಚುತ್ತಿರುವ ತೈಲ ಬೆಲೆಗಳು ಮತ್ತು ಅಸ್ತವ್ಯಸ್ತಗೊಂಡಿರುವ ಕಡಲ ಮಾರ್ಗಗಳು ಸರಕು ಸಾಗಣೆ ವೆಚ್ಚವನ್ನು ಗಣನೀಯವಾಗಿ ಹೆಚ್ಚಿಸಿವೆ.

ಜಾಗತಿಕ ಸವಾಲುಗಳ ನಡುವೆಯೂ ಏಪ್ರಿಲ್-ಫೆಬ್ರವರಿ ಅವಧಿಯ ಒಟ್ಟು ರಫ್ತು ಶೇ. 1.84 ರಷ್ಟು ಏರಿಕೆಯಾಗಿ 402.93 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ. ರಫ್ತುದಾರರು ಎದುರಿಸುತ್ತಿರುವ ಸಾಗಾಣಿಕೆ ಅಡಚಣೆಗಳನ್ನು ಪರಿಹರಿಸಲು ಸರ್ಕಾರ ನಿರಂತರ ಪ್ರಯತ್ನಗಳನ್ನು ಮಾಡುತ್ತಿದೆ.

ಮುರ್ಮು ಭೇಟಿಗಾಗಿ ಟಿಎಂಸಿ ಮತ್ತೆ ಮನವಿ

ಹೊಸದಿಲ್ಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕಾರ್ಯಕ್ರಮ ಮತ್ತು ಪ್ರೋಟೋಕಾಲ್ ವಿಚಾರದಲ್ಲಿ ವಿವಾದ ಮೈಗೆತ್ತಿಸಿಕೊಂಡಿರುವ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಮತ್ತೊಮ್ಮೆ ಅವರ ಭೇಟಿಗೆ ಸಮಯ ಕೋರಿದೆ. ಈಗಾಗಲೇ ಎರಡು ಬಾರಿ ಈ ಸಂಬಂಧ ಸಲ್ಲಿಕೆಯಾಗಿದ್ದ ಮನವಿಯನ್ನು ರಾಷ್ಟ್ರಪತಿ ಕಾರ್ಯಾಲಯ ತಿರಸ್ಕರಿಸಿದೆ. ಸದ್ಯ ಸಮಯಾಭಾವ ಇರುವುದರಿಂದ ಭೇಟಿ ಸಾಧ್ಯವಿಲ್ಲ ಎಂದಿದೆ. ಇದರ ನಡುವೆಯೂ ಮೂರನೇ ಬಾರಿಗೆ ಮನವಿ ಸಲ್ಲಿಕೆ ಮಾಡಿದ್ದು, ಭೇಟಿಗೆ ಅವಕಾಶ ಕೇಳಿದೆ. ಪಶ್ಚಿಮ ಬಂಗಾಳ ಸರ್ಕಾರ ಕೈಗೊಂಡಿರುವ ಕಲ್ಯಾಣ ಯೋಜನೆಗಳ ಕುರಿತು ವಿವರಿಸಲು ಸಮಯ ನೀಡುವಂತೆ ಪತ್ರ ಬರೆದಿದೆ. ಮಾ. 9ರಂದು ಟಿಎಂಸಿಯ ಹಿರಿಯ ನಾಯಕರು ರಾಷ್ಟ್ರಪತಿಗೆ ಮೊದಲ ಪತ್ರ ಬರೆದು, ಸಂಸದರು ಹಾಗೂ ರಾಜ್ಯ ಸಚಿವರು ಸೇರಿರುವ 12-15 ಸದಸ್ಯರ ಪ್ರತಿನಿಧಿ ಮಂಡಳಿಗೆ ಭೇಟಿಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದರು. ಪಶ್ಚಿಮ ಬಂಗಾಳ ಸರ್ಕಾರವು ಸಮಾಜದ ಎಲ್ಲಾ ವರ್ಗಗಳ ಸಮಗ್ರ ಅಭಿವೃದ್ಧಿಗಾಗಿ ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ರಾಷ್ಟ್ರಪತಿಗೆ ವಿವರಿಸಲು ಈ ಭೇಟಿಯನ್ನು ಕೇಳಲಾಗಿದೆ ಎಂದು ಪತ್ರದಲ್ಲಿ ತಿಳಿಸಲಾಗಿತ್ತು. ಮತ್ತೆ ಮಾ.11ರಂದು ಪತ್ರ ಬರೆಯಲಾಗಿತ್ತು. ಮಾ.7ರಂದು ಪಶ್ಚಿಮ ಬಂಗಾಳ ಭೇಟಿ ವೇಳೆ ಸಿಎಂ ಮಮತಾ ಬ್ಯಾನರ್ಜಿ ಅವರು ರಾಷ್ಟ್ರಪತಿಗಳನ್ನು ಸ್ವಾಗತಿಸಲು ಹೋಗಿರಲಿಲ್ಲ, ಅಲ್ಲದೆ, ಹಿರಿಯ ಅಧಿಕಾರಿಗಳೂ ತೆರಳಿರಲಿಲ್ಲ, ಇದಾದ ಬಳಿಕ ರಾಷ್ಟ್ರಪತಿಗಳ ಭೇಟಿಗಾಗಿ ಟಿಎಂಸಿ ಪದೇ ಪದೆ ಮನವಿ ಸಲ್ಲಿಕೆ ಮಾಡುತ್ತಿದೆ.

ಪಬಂ: ಸಿಎಸ್, ಡಿಜಿಪಿ ಸೇರಿ ಏಳು ಅಧಿಕಾರಿಗಳ ವರ್ಗ

ಕೋಲ್ಕತ್ತಾ: ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಸರ್ಕಾರದ ಅಂದಾದುಂದಿ ಆಡಳಿತ ಮುಂದುವರಿದಿರುವಂತೆಯೇ, ಚುನಾವಣಾ ಆಯೋಗ ಆ ರಾಜ್ಯದಲ್ಲಿ ಹಿಂಸಾಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಾತ್ರಿಪಡಿಸುವುದಕ್ಕಾಗಿ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಮತ್ತು ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಅವರ ಸ್ಥಾನದಿಂದ ಪದಚ್ಯುತಗೊಳಿಸಿ ಅವರ ಸ್ಥಾನಗಳಿಗೆ ದಕ್ಷ, ಅನುಭವೀ ಅಧಿಕಾರಿಗಳನ್ನು ನಿಯೋಜಿಸಿದೆ. ರಾಜ್ಯದಲ್ಲಿ 2 ಹಂತಗಳ ಚುನಾವಣೆ ಘೋಷಣೆಯಾದ ಬೆನ್ನಿಗೇ, ಪಶ್ಚಿಮ ಬಂಗಾಲದಲ್ಲಿ ಉನ್ನತ ಆಡಳಿತ ಮತ್ತು ಪೊಲೀಸ್ ಆಡಳಿತವ್ಯವಸ್ಥೆಯನ್ನು ಪುನರ್‌ರಚಿಸಿರುವ ಚುನಾವಣಾ ಆಯೋಗ ಕಟ್ಟುನಿಟ್ಟಿನ ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ಮುಖ್ಯ ಕಾರ್ಯದರ್ಶಿ ನಂದಿನಿ ಚಕ್ರವರ್ತಿ, ಗೃಹಕಾರ್ಯದರ್ಶಿ ಜಗದೀಶ್ ಪ್ರಸಾದ್ ಮೀನಾ, ಡಿಜಿಪಿ ಪೀಯೂಷ್ ಪಾಂಡೆ, ಕೋಲ್ಕತಾ ಪೊಲೀಸ್ ಕಮಿಷನರ್ ಆಗಿರುವ ಸುಪ್ರತಿಮ್ ಸರ್ಕಾರ್ ಸೇರಿದಂತೆ ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಬದಲಿಸಿದೆ. ಮುಖ್ಯ ಕಾರ್ಯದರ್ಶಿಯಾಗಿ ದಕ್ಷ ಮತ್ತು ಅನುಭವಿ ಅಧಿಕಾರಿ ಎಂದೇ ಗುರುತಿಸಲ್ಪಟ್ಟ ದುಷ್ಯಂತ್ ನಾರಿಯಾಲ ಅವರನ್ನು ನೇಮಿಸಿದೆ. ಹಾಗೆಯೇ ನೂತನ ಗೃಹಕಾರ್ಯದರ್ಶಿಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಸಂಘಮಿತ್ರಾ ಘೋಷ್ ಅವರನ್ನು ನೇಮಿಸಿದೆ. ಹೊಸ ಪೊಲೀಸ್ ಮಹಾನಿರ್ದೇಶಕರಾಗಿ ಹಿರಿಯ ಐಪಿಎಸ್ ಅಧಿಕಾರಿ ಸಿದ್ಧ್ ನಾಥ್ ಗುಪ್ತಾ ಅವರನ್ನು ಮತ್ತು ಕೋಲ್ಕತಾ ಪೊಲೀಸ್ ಆಯುಕ್ತರನ್ನಾಗಿ ಅಜಯ್ ಕುಮಾರ್, ನಂದಾ, ಕಾನೂನು ಸುವ್ಯವಸ್ಥೆಯ ಎಡಿಜಿ ವಿನೀತ್ ಗೋಯಲ್ ಅವರ ಸ್ಥಾನಕ್ಕೆ ಅಜಯ್ ಮುಕುಂದ್ ರಾನಡೆ ಅವರನ್ನು, ನಟರಾಜನ್ ರಮೇಶ್ ಬಾಬು ಅವರನ್ನು ಸುಧಾರಣಾ ಸೇವೆಗಳ ಡಿಜಿ ಆಗಿ ನೇಮಿಸಿದೆ.

ಜೆಫ್ರಿ ಎಪ್‌ಸ್ಟೀನ್: ಪುರಿ ಪುತ್ರಿಯಿಂದ ಮಾನನಷ್ಟ ಕೇಸ್



ಹೊಸದಿಲ್ಲಿ: ಜೆಫ್ರಿ ಎಪ್‌ಸ್ಟೀನ್ ಕ್ರಿಮಿನಲ್ ಚಟುವಟಿಕೆಗಳಿಗೆ ಮತ್ತು ತಮಗೂ ನಂಟು ಕಲ್ಪಿಸುವ ಮಾನಹಾನಿಕರ ವಿಷಯ ಹರಡಿದ್ದಕ್ಕಾಗಿ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರ ಪುತ್ರಿ ಹಿಮಾಯನಿ ಪುರಿ ಅವರು ಹಲವಾರು ವ್ಯಕ್ತಿಗಳು ಮತ್ತು ಆನ್‌ಲೈನ್ ಪ್ಲಾಟ್‌ಫಾಮ್‌ಗಳ ವಿರುದ್ಧ 10 ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಇವರು ದಿಲ್ಲಿ ಹೈಕೋರ್ಟ್‌ನಲ್ಲಿ 10 ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡಿದ್ದು, ತಮ್ಮ ವಿರುದ್ಧ ವಿಷಯವನ್ನು ಪ್ರಕಟಿಸದಂತೆ ಶಾಶ್ವತ ಮತ್ತು ಕಡ್ಡಾಯ ತಡೆಯಾಜ್ಞೆ, 10 ಕೋಟಿ ರೂ. ಪರಿಹಾರ ಮತ್ತು ಬೇಷರತ್ತಾದ ಕ್ಷಮೆಯಾಚನೆ ಕೋರಿದ್ದಾರೆ. ಈ ಪ್ರಕರಣವನ್ನು ಮಂಗಳವಾರ ವಿಚಾರಣೆ ನಡೆಸುವ ಸಾಧ್ಯತೆಯಿದೆ.

ಜಾತಿವಾದದಿಂದ ಸಾಮಾಜಿಕ ಚೌಕಟ್ಟು ದುರ್ಬಲ

ಧರ್ಮಕ್ಕಿದೆ ಸಂಘಟಿಸುವ ಶಕ್ತಿ

ಜೈಪುರ: ಜಾತಿ ವ್ಯವಸ್ಥೆ ಸಮಾಜ ಸಂಘಟನೆಗಾಗಿ ಮಾಡಿಕೊಂಡ ವ್ಯವಸ್ಥೆಯಾಗಿದೆ. ಜಾತೀಯವಾದವು ಸಾಮಾಜಿಕ ಚೌಕಟ್ಟನ್ನು ದುರ್ಬಲಗೊಳಿಸುತ್ತದೆ ಮತ್ತು ರಾಷ್ಟ್ರವನ್ನು ಒಡೆಯುತ್ತದೆ ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಎಚ್ಚರಿಸಿದ್ದಾರೆ. ಧರ್ಮವು ಸಮಾಜವನ್ನು ಸಂಘಟಿಸುವ ಶಕ್ತಿಯಾಗಬೇಕೆಂದು ಅವರು ನುಡಿದರು. ಜಲೋರ್‌ನ ಸೈರೆ ಕ್ಷೇತ್ರದಲ್ಲಿನ ಕಾರ್ಯಕ್ರಮದಲ್ಲಿ ಆದಿತ್ಯನಾಥ್ ಪಾಲ್ಗೊಂಡರು.



ಸಮಾಜ ವ್ಯವಸ್ಥಿತವಾಗಿ ಮುನ್ನಡೆಯಲು ಜಾತಿ ವ್ಯವಸ್ಥೆ ಮಾಧ್ಯಮವಾಗಬೇಕು. ಜಾತಿವಾದವು ಈ ವ್ಯವಸ್ಥೆಯನ್ನು ಹಾಳುಗೆಡಹುವಂತದ್ದು. ಹಿಂದಿನ ಸರ್ಕಾರಗಳು ಜನರನ್ನು ಧರ್ಮ, ಜಾತಿ, ಭಾಷೆಗಳ ಹೆಸರಲ್ಲಿ ಒಡೆದ ಪರಿಣಾಮ ದೇಶವು ದುರ್ಬಲಗೊಂಡಿತ್ತು ಮತ್ತು ಕಾಶ್ಮೀರ ಅರಾಜಕತೆ, ನಕ್ಸಲ್ ಪಿಡುಗುಗಳಂತಹ ಸವಾಲುಗಳು, ಭಾಷಾ ಸಂಬಂಧಿತ ವಿವಾದಗಳು ಹಾಗೂ ಜಾತಿ ಸಂಘರ್ಷಗಳಿಗೆ ನಾಂದಿ ಹಾಡಿತ್ತು. ಮಾತ್ರವಲ್ಲ, ಸರ್ಕಾರದ ಯೋಜನೆಗಳ ಪ್ರಯೋಜನಗಳು ದಲಿತರು, ಕಡುಬಡವರು ಹಾಗೂ ಇತರ ಶೋಷಿತ ವರ್ಗಗಳನ್ನು ತಲುಪುವಲ್ಲಿ ವಿಫಲವಾಗಿತ್ತು.

ಇಂದಿನ ಭಾರತವಾಗಲಿದೆ ವಿಶ್ವದ ಪ್ರಬಲ ಶಕ್ತಿ: ಆದರೆ, ಇಂದು ಭಾರತವು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ವಿಶ್ವದ ಪ್ರಮುಖ ಶಕ್ತಿಯಾಗುವತ್ತ ದಾಪುಗಾಲಿಕ್ಕಿದೆ. ಮೋದಿ ನಾಯಕತ್ವದಲ್ಲಿ ದೇಶವನ್ನು ಒಗ್ಗಟ್ಟಾಗಿಸಲಾಗಿದೆ. ಕಾಶ್ಮೀರ ಸಮಸ್ಯೆ, ನಕ್ಸಲ್ ಪಿಡುಗುಗಳ ಮಟ್ಟಹಾಕಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸರ್ಕಾರದ ಯೋಜನೆಗಳ ಪ್ರಯೋಜನಗಳು ಯಾವುದೇ ತಾರತಮ್ಯ ರಹಿತವಾಗಿ ಜನರನ್ನು ತಲುಪುತ್ತಿವೆ. ದೇಶಾದ್ಯಂತ ಮೂಲಸೌಕರ್ಯಗಳು ಮತ್ತು ಸಾರ್ವಜನಿಕ ಸೌಲಭ್ಯಗಳ ವಿಸ್ತರಣೆಗೆ ಸರಕಾರ ಆದ್ಯತೆ ನೀಡಿದೆ ಎಂದು ಸಿಎಂ ಯೋಗಿ ವಿವರಿಸಿದರು.

ರಾಮನ ಅಸ್ತಿತ್ವವನ್ನೇ ಶಂಕಿಸಿತ್ತು ಯುಪಿಎ

ಹಿಂದಿನ ಯುಪಿಎ ಸರ್ಕಾರ ಭಾರತದ ಆಧ್ಯಾತ್ಮಿಕ ಪರಂಪರೆಗಳನ್ನು ಕಡೆಗಣಿಸಿತ್ತು. ಆದರೆ ನಮ್ಮ ಧರ್ಮ ಶ್ರದ್ಧೆಗಳು ಸನಾತನ ಧರ್ಮಾಧಾರಿತ ಮತ್ತು ಸಮಾಜದೊಂದಿಗೆ ಗಾಢವಾಗಿ ಬೆರೆತಿವೆ. ಭಕ್ತಿ- ಶ್ರದ್ಧೆ ವಿನಾ ನಾವು ಪ್ರಗತಿ ಸಾಧಿಸಲಾಗದು ಎಂಬ ಅಚಲ ನಂಬಿಕೆ ಪ್ರಸ್ತುತ ನಾಯಕತ್ವದ್ದು. ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮನ ಮಂದಿರ ನಿರ್ಮಾಣ ದಶಕಗಳ ಹಿಂದೆಯೇ ಸಾಕಾರಗೊಳ್ಳಬೇಕಿತ್ತು. ಆದರೆ, ಹಿಂದಿನ ಸರ್ಕಾರಗಳು ಈ ನಿಟ್ಟಿನಲ್ಲಿ ಪ್ರಯತ್ನಿಸಲೇ ಇಲ್ಲ, ಬದಲಾಗಿ ಶ್ರೀರಾಮನ ತೀರಾ ಅಸ್ತಿತ್ವವನ್ನೇ ಶಂಕಿಸಿದ್ದವು ಎಂದು ಸಿಎಂ ಯೋಗಿ ಆರೋಪಿಸಿದರು. ಇಂದೀಗ ಶ್ರೀರಾಮ ಮಂದಿರ ಅತ್ಯದ್ಭುತವಾಗಿ ಪ್ರಗತಿ ಹೊಂದುತ್ತಿದೆ. ಜನರು ದೃಢ ಸಂಕಲ್ಪದೊಂದಿಗೆ ಒಗ್ಗಟ್ಟಾದಾಗ ಶ್ರೀರಾಮ ಮಂದಿರದಂತಹ ಸಾಧನೆಗಳು ಸುಲಭವಾಗಿ ಸಾಕಾರಗೊಳ್ಳುವುದು ಎಂದು ಸಿಎಂ ಯೋಗಿ ವಿಶ್ವಾಸ ವ್ಯಕ್ತಪಡಿಸಿದರು.

ಪಶ್ಚಿಮ ಬಂಗಾಳ, ಕೇರಳ ಚುನಾವಣೆ: ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಮಮತಾ ವಿರುದ್ಧ ಬಿಜೆಪಿಯ ಸುವೇಂದು ಸ್ಪರ್ಧೆ

ಹೊಸದಿಲ್ಲಿ: ಪಂಚರಾಜ್ಯ ವಿಧಾನಸಭೆ ಚುನಾವಣೆಗೆ ಭರ್ಜರಿ ತಯಾರಿ ನಡೆಸಿರುವ ಬಿಜೆಪಿ, ಚುನಾವಣೆ ಘೋಷಣೆಯಾದ ಮರುದಿನವೇ ಪಶ್ಚಿಮ ಬಂಗಾಳ ಹಾಗೂ ಕೇರಳಕ್ಕೆ ತನ್ನ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಮೊದಲ ಹಂತದಲ್ಲಿ ಪಶ್ಚಿಮ ಬಂಗಾಳದಲ್ಲಿ 144 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿರುವ ಬಿಜೆಪಿ, ಭವಾನಿಪುರ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಎದುರಾಳಿಯಾಗಿ ಸುವೇಂದು ಅಧಿಕಾರಿ ಅವರನ್ನು ಕಣಕ್ಕಿಳಿಸಿದೆ. ನಂದಿಗ್ರಾಮ ಕ್ಷೇತ್ರದಿಂದಲೂ ಸುವೇಂದು ಸ್ಪರ್ಧಿಸಲಿದ್ದಾರೆ. ಇನ್ನು ಕೇರಳ ವಿಧಾನಸಭೆಗೆ 47 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ನೇಮಮ್ ಕ್ಷೇತ್ರದಿಂದ ರಾಜೀವ್ ಚಂದ್ರಶೇಖರ್ ಅವರನ್ನು ಬಿಜೆಪಿ ಅಭ್ಯರ್ಥಿಯಾಗಿ ಘೋಷಿಸಿದೆ. ಅದೇ ರೀತಿ ಕಂಜಿರಪ್ಪಳ್ಳಿ ಕ್ಷೇತ್ರದಿಂದ ಕೇಂದ್ರ ಮಾಜಿ ಸಚಿವ ಜಾರ್ಜ್ ಕುರಿಯನ್ ಅವರನ್ನು ಪಕ್ಷ ಸ್ಪರ್ಧೆಗೆ ಇಳಿಸಿದೆ.

ಕೇರಳದಲ್ಲಿ ಏ.9ರಂದು ಒಂದೇ ದಿನ ಮತದಾನ ನಡೆಯಲಿದೆ. ಪಶ್ಚಿಮ ಬಂಗಾಳದ 294 ವಿಧಾನಸಭಾ ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ಏ.23 ಮತ್ತು ಏ.29ರಂದು ಮತದಾನ ನಡೆಯಲಿದೆ. ಎರಡೂ ರಾಜ್ಯಗಳ ಮತ ಎಣಿಕೆ ಮೇ 4ರಂದು ನಡೆಯಲಿದೆ.



ನೇಮಮ್ ಕ್ಷೇತ್ರದಿಂದ ರಾಜೀವ್ ಕಣಕ್ಕೆ: ನೇಮಮ್ ಮತ್ತು ಕಳಕೂಟ್ಟಂ ಕ್ಷೇತ್ರಗಳಿಗೆ ಕ್ರಮವಾಗಿ ಕೇಂದ್ರದ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಹಾಗೂ ವಿ.ಮುರಳೀಧರನ್ ಒಳಗೊಂಡತೆ, ಮುಂದಿನ ವಿಧಾನಸಭಾ ಚುನಾವಣೆಗೆ 47 ಅಭ್ಯರ್ಥಿಗಳ ಪ್ರಥಮ ಪಟ್ಟಿಯನ್ನು ಕೇರಳ ಬಿಜೆಪಿ ಬಿಡುಗಡೆ ಮಾಡಿದೆ.

ಕೇಂದ್ರದ ಮಾಜಿ ಸಚಿವ ಜಾರ್ಜ್ ಕುರಿಯನ್ ಕಾಂಜಿರಪಳ್ಳಿ ಕ್ಷೇತ್ರದಿಂದ ಸ್ಪರ್ಧಾ ಕಣಕ್ಕಿಳಿಯುವರು. ಪೂಂಜಾರ್ ಕ್ಷೇತ್ರಕ್ಕೆ ಪಿ.ಸಿ.ಜಾರ್ಜ್ ಅಭ್ಯರ್ಥಿಯಾದರೆ, ಆರ್.ಶ್ರೀಲೇಖಾ ವಟ್ಟಿಯೂರ್‌ಕಾವು ಕ್ಷೇತ್ರದಿಂದ, ತ್ರಿಶೂರ್‌ನಿಂದ ಪದ್ಮಜಾ ವೇಣುಗೋಪಾಲ್ ಸ್ಪರ್ಧಾ ಕಣಕ್ಕಿಳಿಯಲಿದ್ದಾರೆ. ಪ.ಜಾತಿಗೆ ಮೀಸಲಾಗಿರುವ ಕುನ್ನತ್ತೂರ್ ಕ್ಷೇತ್ರದಿಂದ ರಾಜಿ ಪ್ರಸಾದ್ ಸ್ಪರ್ಧಿಸಲಿದ್ದಾರೆ. ಕೊಟ್ಟಾರಕ್ಕರ ಕ್ಷೇತ್ರಕ್ಕೆ ಆರ್. ರಶ್ಮಿ, ಶೋಭಾ ಸುರೇಂದ್ರನ್ ಪಾಲಕ್ಕಾಡ್‌ನಿಂದ, ನವ್ಯಾ ಹರಿದಾಸ್ ಕೋಯಿಕ್ಕೋಡ್ ಉತ್ತರ ಕ್ಷೇತ್ರ ಮತ್ತು ಮೀಸಲು ಕ್ಷೇತ್ರ ಸುಲ್ತಾನ್ ಬತ್ತೇರಿಯಿಂದ ಕವಿತಾ ಕೆ.ಎಸ್.ಸ್ಪರ್ಧಾಕಣದಲ್ಲಿರುವರು.

ಪ.ಬಂಗಾಳಕ್ಕೆ ಬಿಜೆಪಿ 144 ಅಭ್ಯರ್ಥಿ ಪಟ್ಟಿ ಬಿಡುಗಡೆ: ಸುವೇಂದು ಅಧಿಕಾರಿ ಮತ್ತು ದಿಲೀಪ್ ಘೋಷ್ ಸಹಿತ ಹಲವು ಪ್ರಮುಖ ನಾಯಕರು ಸ್ಪರ್ಧಾ ಕಣದಲ್ಲಿರುವ 144 ಅಭ್ಯರ್ಥಿಗಳನ್ನು ಒಳಗೊಂಡ ಪ್ರಥಮ ಪಟ್ಟಿಯನ್ನು ಪ.ಬಂಗಾಳ ಬಿಜೆಪಿ ಬಿಡುಗಡೆ ಮಾಡಿದೆ. ದಿಲೀಪ್ ಘೋಷ್ ಖರಗ್‌ಪುರ ಸದರ್‌ನಿಂದ ಸ್ಪರ್ಧಿಸಲಿದ್ದು, ಸುವೇಂದು ಅಧಿಕಾರಿ ಭವಾನಿಪುರ ಮತ್ತು ನಂದಿಗ್ರಾಮ ಕ್ಷೇತ್ರಗಳಿಂದ ಸ್ಪರ್ಧಾ ಕಣದಲ್ಲಿರುವರು.

ಕಿರುಸುದ್ದಿ

ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ



ಕುಕನೂರು: ಒಂದು ಸಮಾಜದ ನಿರ್ಮಾಣದಲ್ಲಿ ಗುರುವಿನ ಅರಿವು ಮುಖ್ಯವಾಗಿದೆ ಗ್ಯಾರಂಟಿ ಸಮಿತಿ ಅಧ್ಯಕ್ಷ ಸುಧೀರ್ ಕೊರ್ಲಹಳ್ಳಿ ಹೇಳಿದರು. ತಾಲೂಕಿನ ಕಲ್ಲೂರು ಗ್ರಾಮದಲ್ಲಿ ವೀರಮಹೇಶ್ವರ ಜಂಗಮ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಭಾನುವಾರ ನಡೆದ ಶ್ರೀಜಗದ್ಗುರು ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ ಹಾಗೂ ತಾಲೂಕು ಸಮಾವೇಶ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಒಂದು ಸಮಾಜದ ಸರ್ವೋತೋಮುಖ ಅಭಿವೃದ್ಧಿಯಾಗಬೇಕೆಂದರೆ ಗುರುವಿನ ಅರಿವು ಬಹಳ ಮುಖ್ಯವಾಗಿದೆ. ಅಂತಹ ಅರಿವು ಮುಡಿಸುವ ಕಾರ್ಯಕ್ರಮಗಳು ಜಂಗಮ ಸಮಾಜದಿಂದ ಜಗತ್ತಿನಲ್ಲಿ ಬಹಳಷ್ಟಾಗಿವೆ ಅದರಲ್ಲಿ ರೇಣುಕಾಚಾರ್ಯರು ಕೂಡ ಈ ಜಗತ್ತಿಗೆ ಅಪಾರವಾದ ಕೊಡುಗೆ ನೀಡಿದ ಮಹಾನ್ ಚೇತನರಾಗಿದ್ದಾರೆ ಅಂತಹ ಚೇತನರ ತತ್ವದರ್ಶನಗಳನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ನಂತರ ಬ್ಲಾಕ್ ಕಾಂಗ್ರೆಸ್ ತಾಲೂಕ ಅಧ್ಯಕ್ಷ ಕೇರಿಬಸಪ್ಪ ನಿಡಗುಂದಿ ಮಾತನಾಡಿ, ಜಂಗಮರು ಇಲ್ಲದೆ ಜೀವನವಿಲ್ಲಾ ಅದೇ ರೀತಿಯಾಗಿ ಜಗತ್ತಿನಲ್ಲಿ ರೇಣುಕಾಚಾರ್ಯರ ಕುಡುಗೆಯು ಅಪಾರವಾಗಿದೆ. ಅಂತವರ ನಿರ್ದಶನಗಳು ಇಂದಿನ ಯುವ ಪೀಳಿಗೆ ಮಾದರಿಯಾಗಿದೆ ಎಂದರು. ದಿವ್ಯ ಸಾನಿಧ್ಯ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಸಂಸ್ಥಾನ, ಯಲಬುರ್ಗಾ ವಹಿಸಿದ್ದರು. ಶರಣಪ್ಪ ಗಾಂಜಿ, ಶಿವನಗೌಡ ದಾನರೆಡ್ಡಿ,ಅಂದನಯ್ಯ ಶ್ಯಾಡಲಗೇರಿಮಠ, ಕೇರಿಬಸಪ್ಪ ನಿಡಗುಂದಿ, ಸುಧೀರ್ ಕೊರ್ಲಹಳ್ಳಿ, ಪಂಪಯ್ಯಸ್ವಾಮಿ ಹಿರೇಮಠ, ಸಿದ್ದಯ್ಯ ಕಳ್ಳಿಮಠ ಅಧ್ಯಕ್ಷರು ಜಂಗಮ ಸಮಾಜ, ಮಲ್ಲು ಜಂಕ್ಲಿ, ಸೋಮಲಿಂಗ ಹಿರೇಮಠ್, ಈಶಯ್ಯ ಶಿರೂರುಮಠ ಹಾಗೂ ಇತರರು ಇದ್ದರು.

ಘನತ್ಯಾಜ್ಯ ವಸ್ತು ವಿಲೇವಾರಿ ಘಟಕ ಸ್ಥಳಾಂತರಿಸಲು ಮನವಿ

ಸಿರುಗುಪ್ಪ: ಜನರ ಆರೋಗ್ಯದ ದೃಷ್ಟಿಯಿಂದ ನಗರದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕವನ್ನು ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿ ಟಿ.ಎಸ್. ಎಚ್.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿಬ್ಬಂದಿಗಳು ನಗರಸಭೆ ಪೌರಾಯುಕ್ತ ಗಂಗಾಧರ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಾಲೇಜು ಪ್ರಾಚಾರ್ಯ ಕೊಟ್ರಪ್ಪ ಮಾತನಾಡಿ, ಸಿರುಗುಪ್ಪ ನಗರಸಭೆ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕವು ನಮ್ಮ ಕಾಲೇಜಿಗೆ ಕೇವಲ 10ಅಡಿ ಅಂತರದಲ್ಲಿದೆ. ಬಿ.ಸಿ.ಎಂ. ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ವಸತಿನಿಲಯಗಳು ಇದ್ದು ಇದರಿಂದಾಗಿ ನಮ್ಮ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಸಾವಿರಾರು ವಿದ್ಯಾರ್ಥಿಗಳು ಮತ್ತು ವಸತಿನಿಲಯಗಳಲ್ಲಿ ವಾಸವಿರುವ ವಿದ್ಯಾರ್ಥಿಗಳಿಗೆ, ಬೋಧಕ ಸಿಬ್ಬಂದಿ ವರ್ಗದವರಿಗೆ ಘನತ್ಯಾಜ್ಯ ವಸ್ತು ಘಟಕದಿಂದ ಬರುವ ಮಲೀನ ಮತ್ತು ಕಲ್ಮಷವಾದ ಗಾಳಿಯಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ಕೂಡಲೇ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕವನ್ನು ಸ್ಥಳಾಂತರಿಸುವಂತೆ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿ ಭಾಗವಹಿಸಿದ್ದರು.

ಸೇತುವೆ ಕಾಮಗಾರಿ ಪರಿಶೀಲನೆ | ಶಾಸಕ ಪ್ರಭು ಚವ್ಹಾಣ ಎಚ್ಚರಿಕೆ

ಗುಣಮಟ್ಟದಲ್ಲಿ ಲೋಪವಾದರೆ ಸಹಿಸಲ್ಲ

ಬೀದರ್: ಔರಾದ(ಬಿ) ತಾಲೂಕಿನ ಯನಗುಂದಾ ಗ್ರಾಮದ ಬಳಿ 3 ಕೋಟಿ ವೆಚ್ಚದಲ್ಲಿ ನಡೆಯುತ್ತಿರುವ ಸೇತುವೆ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಶಾಸಕ ಪ್ರಭು ಬಿ.ಚವ್ಹಾಣ ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಕಾಮಗಾರಿಯ ಪ್ರಗತಿಯ ಕುರಿತಂತೆ ಗ್ರಾಮಸ್ಥರೊಂದಿಗೆ ಚರ್ಚಿಸಿದರು. ಮಹಾರಾಷ್ಟ್ರ ಗಡಿಯಿಂದ ಚಿಂತಾಕಿ, ಖಾಶೆಂಪೂರ, ಯನಗುಂದಾ, ತೇಗಂಪೂರ, ಮಮದಾಪೂರ, ಔರಾದ ಜನರಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದ್ದು, ಕಾಮಗಾರಿ ಅಂದಾಜು ಪತ್ರಿಕೆಯಲ್ಲಿರುವಂತೆ ಸೇತುವೆ ನಿರ್ಮಾಣವಾಗಬೇಕು. ಕಬ್ಬಿಣದ ಬಳಕೆ, ಸಿಮೆಂಟ್ ಹಾಗೂ ಮತ್ತಿತರೆ ಸಲಕರಣೆಗಳನ್ನು ಸರಿಯಾದ ಪ್ರಮಾಣದಲ್ಲಿ ಬಳಕೆ ಮಾಡಬೇಕು. ಗುಣಮಟ್ಟದ ವಿಷಯದಲ್ಲಿ ಲೋಪಗಳು ಕಾಣಿಸಿದರೆ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲವೆಂದು ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು.

ಕಳೆದ ಮಳೆಗಾಲದಲ್ಲಿ ಭೀಕರ ಮಳೆಯಿಂದಾಗಿ ಸೇತುವೆ ಸಂಪೂರ್ಣ ಕೊಚ್ಚಿಕೊಂಡು ಹೋಗಿ ತಾಲೂಕು ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ಏಕೈಕ ಪ್ರಮುಖ ಮಾರ್ಗವು ಅನೇಕ ದಿನಗಳ ವರೆಗೆ ಸ್ಥಗಿತಗೊಂಡಿತ್ತು. ಸ್ಥಳಕ್ಕೆ ಭೇಟಿ ನೀಡಿದಾಗ ಗ್ರಾಮಸ್ಥರು ಹೊಸ ಸೇತುವೆ ಮಾಡಿಕೊಡಬೇಕೆಂದು ಒತ್ತಾಯಿಸಿದ್ದರು.

ಗ್ರಾಮ ಸಂಚಾರದ ವೇಳೆಯೂ ಈ ಬಗ್ಗೆ ಬೇಡಿಕೆ ಸಲ್ಲಿಸಿದ್ದರು. ಆದ್ದರಿಂದ 3 ಕೋಟಿ ಅನುದಾನ ಒದಗಿಸಿ ಸೇತುವೆ ಕಾಮಗಾರಿ ನಿರ್ಮಿಸಲಾಗುತ್ತಿದೆ.



ಬಹುದಿನಗಳ ಸಮಸ್ಯೆಗೆ ಪರಿಹಾರ

ಬಹುಬೇಡಿಕೆಯಾಗಿದ್ದ ಸೇತುವೆ ಕಾಮಗಾರಿ ನಿರ್ಮಿಸುತ್ತಿರುವುದರಿಂದ ಬಹುದಿನಗಳ ಸಮಸ್ಯೆಗೆ ಪರಿಹಾರ ಸಿಕ್ಕಿದೆ. ಪ್ರತಿ ಮಳೆಗಾಲದ ಸಂದರ್ಭದಲ್ಲಿ ರಸ್ತೆ ಮುಚ್ಚುವ ಭೀತಿ ಎದುರಾಗುತ್ತಿತ್ತು. ನೀರು ಬತ್ತಿ ಹೋಗುವ ವರೆಗೆ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ರೈತರು ತಮ್ಮ ಬೆಳೆ ಕಾಳುಗಳನ್ನು ಮಾರಾಟ ಮಾಡಲು ಮತ್ತು ಸಾರ್ವಜನಿಕರು ನಿತ್ಯ ವ್ಯವಹಾರಗಳಿಗೆ ಓಡಾಡಲು ಸಾಕಷ್ಟು ಅನಾನುಕೂಲ ಎದುರಿಸುತ್ತಿದ್ದರು. ನಮ್ಮ ಮನವಿಗೆ ಸ್ಪಂದಿಸಿ ಹೊಸ ಸೇತುವೆ ನಿರ್ಮಿಸುತ್ತಿರುವುದಕ್ಕೆ ಇದೇ ವೇಳೆ ಗ್ರಾಮಸ್ಥರು ಶಾಸಕರಿಗೆ ಧನ್ಯವಾದ ಸಲ್ಲಿಸಿದರು.

ಇನ್ನು ಮುಂದೆ ಮಳೆಯಿಂದಾಗಿ ರಸ್ತೆ ಸಂಚಾರಕ್ಕೆ ಅಡ್ಡಿಯಾಗುವುದಿಲ್ಲ. ಈ ಭಾಗದ ಗ್ರಾಮಗಳ ದೀರ್ಘಕಾಲದ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದು ಶಾಸಕರು ಹೇಳಿದರು.

ಗ್ರಾಮದ ಮುಖಂಡರಾದ ಶಿವರಾಜ ಅಲ್ಮಾಜೆ, ರಾಮಶೆಟ್ಟಿ ಪನ್ನಾಳೆ, ಪ್ರತೀಕ ಚವ್ಹಾಣ, ಸುಜಿತ ರಾಠೋಡ, ವಿಲಾಸ ಚವ್ಹಾಣ, ಶ್ರೀಕಾಂತ ಮಜಗೆ, ಸಂಗಮೇಶ ಪಾಟೀಲ, ಜಗದೀಶ ಪಾಟೀಲ, ಗೋಪಾಲರೆಡ್ಡಿ, ರಾಜಕುಮಾರ, ಶಂಕರ ರೆಡ್ಡಿ, ಅಶೋಕ ಹಂಗರಗೆ, ಗಣಪತಿ, ಸಂತೋಷ ಪಾಟೀಲ, ಬಸವರಾಜ ಶೇಟಕಾರ್, ಬಸಗೊಂಡ, ಚಂದ್ರಪ್ಪಾ, ಜಗನಾಥ, ಅಶೋಕ, ಗಣಪತಿ, ಶೇಷಾರಾವ್, ಯನಗುಂದಾ ಗ್ರಾಮದ ಮುಖಂಡರು, ಅನೇಕ ಗ್ರಾಮಸ್ಥರು ಇದ್ದರು.

ಸಿರಗುಪ್ಪ: ತಾಲೂಕು ಬಿಜೆಪಿ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ಎರಡನೇ ಅವಧಿಗೆ ಆಯ್ಕೆ ಹಾಗೂ ಸಿರಗುಪ್ಪ ತಾಲೂಕು ಅಲ್ಪಸಂಖ್ಯಾತ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ರೈಮಾನ್ ಅವರನ್ನು ಆಯ್ಕೆ ಮಾಡಿದ ಹಿನ್ನೆಲೆ ಸಹಕರಿಸಿದ ಕ್ಷೇತ್ರದ ಜನಪ್ರಿಯ ಮಾಜಿ ಶಾಸಕ ಎಂ. ಎಸ್. ಸೋಮಲಿಂಗಪ್ಪ ಅವರನ್ನು ಸೋಮವಾರ ಭೇಟಿ ಮಾಡಿ ನೂತನ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದರು.



ಜೋಳ ಖರೀದಿ ವಿಳಂಬ: ಹೋರಾಟಕ್ಕೆ ಸಿದ್ಧತೆ

ಎಚ್.ಕೆ.ಬಡಿಗೇರ್



ದಿಗಂತ ವಿಶೇಷ

ಸಿಂಧನೂರು: ಬೆಂಬಲ ಬೆಲೆ ಯೋಜನೆಯಡಿ ಹೈಬ್ರಿಡ್ ಜೋಳ ಖರೀದಿ ಪ್ರಕ್ರಿಯೆ ವಿಳಂಬವಾಗುತ್ತಿರುವುದರಿಂದ, ಕರ್ನಾಟಕ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ಜೋಳ ಬೆಳೆಗಾರರು ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಹೋರಾಟಕ್ಕೆ ನಿರ್ಧರಿಸಲಾಗಿದೆ ಎಂದು ಸಂಘಟನೆಗಳ ಮುಖಂಡರು ತಿಳಿಸಿದ್ದಾರೆ.

2025-26ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಯ ರೈತರಿಂದ ಬಿಳಿ ಜೋಳವನ್ನು ಖರೀದಿಸುವ ಪ್ರಕ್ರಿಯೆ ಹಿನ್ನೆಲೆಯಲ್ಲಿ ನೋಂದಣಿ ಕಾರ್ಯ ಪೂರ್ಣಗೊಂಡಿದೆ.ಆದರೆ ಖರೀದಿ ಪ್ರಕ್ರಿಯೆ ಮಾತ್ರ ದಿನದಿಂದ ದಿನಕ್ಕೆ ವಿಳಂಬವಾಗುತ್ತಿದೆ. ಖರೀದಿ ಪ್ರಕ್ರಿಯೆ ವಿಳಂಬವಾದಂತೆ ರೈತರು ಜೋಳ ಸಂಗ್ರಹಣೆ ಮಾಡಿಟ್ಟುಕೊಳ್ಳಲು ಸಮಸ್ಯೆಯಾಗುತ್ತಿದೆ. ಹುಳು, ಕೀಟ ಸೇರಿ ನುಸಿಭಾದೆಯಿಂದ ಜೋಳ ಹಾಳಾಗುವ ಸಾಧ್ಯತೆ ಇದ್ದು, ವಿಳಂಬ ಮಾಡದೇ ಖರೀದಿ ಪ್ರಕ್ರಿಯೆ ಆರಂಭಿಸಬೇಕೆನ್ನುವ ಎಂಬ ನಿಟ್ಟಿನಲ್ಲಿ ಜಿಲ್ಲಾಡಳಿತ ಮತ್ತು ಸರ್ಕಾರಕ್ಕೆ ಹಕ್ಕೊತ್ತಾಯಿಸಲಾಗುತ್ತದೆ ಎಂದು ತಿಳಿದು ಬಂದಿದೆ.

ಪಾರದರ್ಶಕ ಖರೀದಿಗೆ ಆದ್ಯತೆ ನೀಡಿ: ಸಣ್ಣ, ಅತಿಸಣ್ಣ ರೈತರು ಹಾಗೂ ಸರ್ಕಾರದ ಮಾನದಂಡಗಳ ಪಾರದರ್ಶಕ ನಿಯಮಗಳ ಅನ್ವಯ ಯಾವೊಬ್ಬ ರೈತರಿಗೂ ಅನ್ಯಾಯವಾಗದಂತೆ ಖರೀದಿ ಪ್ರಕ್ರಿಯೆ ನಡೆಸಬೇಕು. ಎಂಎಸ್‌ಪಿ ಲಾಭ ಪಡೆಯಲು ಗದ್ದೆಗಳ ಪಹಣಿಯನ್ನು ನೀಡಲಾಗಿದೆ. ಕೆಲವರು ಗದ್ದೆಗಳ ಪಹಣಿಗಳನ್ನು ಹೊಂದಿಸಿಕೊಂಡು ರೈತರಿಂದ ಬಹಳಷ್ಟು ಪ್ರಮಾಣದ ಜೋಳ ಖರೀದಿಸಿಟ್ಟುಕೊಂಡಿದ್ದಾರೆ. ಮಾನ್ವಿ ದೇವದುರ್ಗ ತಾಲೂಕಿನ ಕೆಲವರೂ ಸಹ ಸಿಂಧನೂರು ತಾಲೂಕಿನ ಖರೀದಿ ಕೇಂದ್ರಗಳಲ್ಲಿ ನೋಂದಾಯಿಸಿದ್ದಾರೆ ಹೀಗೆ ಹಲವು ವಿಷಯಗಳು ರೈತ ಸಮೂಹದಲ್ಲಿ ಚರ್ಚಿತವಾಗುತ್ತಿದ್ದು, ಈಗಾಗಲೇ ಸಂಬಂಧಿಸಿದ ಇಲಾಖೆಯವರು ತನಿಖೆ ಮುಂದಾಗಿದ್ದಾರೆ.ಈ ಕುರಿತು ಇಲಾಖೆಯವರು ಹಾಗೂ ಸರ್ಕಾರ ಸ್ಪಷ್ಟ ತೀರ್ಮಾನಕ್ಕೆ ಬಂದು ರೈತರ ಹಿತ ಕಾಯಬೇಕು. ವಿವಿಧ ಕಾರಣಗಳ ನೆಪವೊಡ್ಡಿ ಅರ್ಹ ಫಲಾನುಭವಿಗಳಿಗೆ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಹೋರಾಟದ ಎಚ್ಚರಿಕೆ: ಮಾ.20ರಂದು ಮೊದಲ ಹಂತದ ಭಾಗವಾಗಿ, ಜೋಳ ಖರೀದಿ ಪ್ರಕ್ರಿಯೆ ಕುರಿತಂತೆ ರೈತರ ವಿವಿಧ ಹಕ್ಕೊತ್ತಾಯವುಳ್ಳ ಮನವಿಯನ್ನು ತಹಶೀಲ್ದಾರ್ ಮೂಲಕ, ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತಕ್ಕೆ ಸಲ್ಲಿಸಲಾಗುವುದು. ಸರ್ಕಾರದ ಸ್ಪಂದನೆಯನ್ನು ಗಮನಿಸಿ ಮುಂದಿನ ಹೋರಾಟಕ್ಕೆ ನಿರ್ಧರಿಸಲಾಗುವುದು ಎಂಬ ಮಾಹಿತಿ ಗೊತ್ತಾಗಿದೆ.

ಸರ್ಕಾರಿ ಗೌರವದೊಂದಿಗೆ ಅಧಿಕಾರಿ ಅಂತ್ಯಕ್ರಿಯೆ

ಕಾರಟಗಿ: ಚಿತ್ರದುರ್ಗ ಜಿಲ್ಲೆ ಹಿರಿಯೂರು ಬಳಿ ನಡೆದ ಲಾರಿ-ಕಾರ್ ನಡುವಿನ ಅಪಘಾತದಲ್ಲಿ ಮೃತಪಟ್ಟಿದ್ದ ಮೂವರು ಪೊಲೀಸ್ ಅಧಿಕಾರಿಗಳ ಪೈಕಿ ಒಬ್ಬರಾದ ಆರ್ ಎಸ್‌ಐ ಮಂಜುನಾಥ ದಾರಿಮನಿ ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವದೊಂದಿಗೆ ಸೋಮವಾರ ನೆರವೇರಿತು. ಕಾರಟಗಿಯ ಆರ್‌ಎಸ್‌ಐ ಮಂಜುನಾಥ ದಾರಿಮನಿ ಪಾರ್ಥಿವ ಶರೀರವನ್ನು ಚಳ್ಳಕೆರೆಯಿಂದ ಭಾನುವಾರ ರಾತ್ರಿ ಪಟ್ಟಣಕ್ಕೆ ತರಲಾಯಿತು. ಪಾರ್ಥಿವ ಶರೀರ ಬರುವ ಸುದ್ದಿ ತಿಳಿಯುತ್ತಿದ್ದಂತೆಯೇ ಸಾವಿರಾರು ಜನ ಕನಕದಾಸ ವೃತ್ತದಲ್ಲಿ ಜಮಾಯಿಸಿದ್ದರು. ಅತ್ಯಂತ ನೋವಿನಿಂದ ಪಾರ್ಥಿವ ಶರೀರ ಹೊತ್ತೊಯ್ಯುತ್ತಿದ್ದ ವಾಹನ ಹಿಂಬಾಲಿಸಿ, ಮನೆಯವರೆಗೆ ತೆರಳಿದರು. ಆಕ್ರಂದನ: ಪೊಲೀಸ್ ಅಧಿಕಾರಿ ಮಂಜುನಾಥ ಪಾರ್ಥಿವ ಶರೀರ ಮನೆಗೆ ಬಂದಾಗ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ರಾತ್ರಿ ಇಡೀ ಅಧಿಕಾರಿಯ ತಂದೆ ಪರಸಪ್ಪ ದಾರಿಮನಿ, ತಾಯಿ ಬಸಮ್ಮ ಸೇರಿ ಕುಟುಂಬ ಸದಸ್ಯರು ಶೋಕ ಸಾಗರದಲ್ಲಿ ಮುಳುಗಿದ್ದರು.

ಸೋಮವಾರ ಬೆಳಗ್ಗೆ 9 ಗಂಟೆಗೆ ಇಲ್ಲಿನ ಸಿದ್ದೇಶ್ವರ ರಂಗಮಂದಿರದಲ್ಲಿ ಪಾರ್ಥಿವ ಶರೀರ ಅಂತಿಮ ದರ್ಶನಕ್ಕೆ ತರಲಾಯಿತು. ಡಿವೈಎಸ್‌ಪಿ ಜಾಯಪ್ಪ ನ್ಯಾಮಗೌಡರ್, ಪಿಐ ಸುಧೀರಕುಮಾರ್ ಬೆಂಕಿ, ಪಿಎಸ್‌ಐ ಕಾಮಣ್ಣ, ಪುರಸಭೆ ಅಧ್ಯಕ್ಷ ಮಂಜುನಾಥ ಮೇಗೂರು ಹಾಗೂ ಸದಸ್ಯರು, ಮುಖ್ಯಾಧಿಕಾರಿ ಸಾಬಣ್ಣ ಕಟ್ಟಿಕಾರ, ಮಾಜಿ ಸದಸ್ಯ ವೀರೇಶ ಸಾಲೋಣಿ, ವಿಶೇಷ ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಶಿವರೆಡ್ಡಿ ನಾಯಕ, ಜಿಪಂ ಮಾಜಿ ಅಧ್ಯಕ್ಷ ಅಮರೇಶ ಕುಳಗಿ, ಹಾಗೂ ದಲಾಲಿ ವರ್ತಕರ ಸಂಘ, ಲಾರಿ ಮಾಲೀಕರ ಸಂಘ ಸೇರಿದಂತೆ ನಾನಾ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಅಂತಿಮ ನಮನ ಸಲ್ಲಿಸಿದರು. ನಂತರ ಪೊಲೀಸ್ ಇಲಾಖೆಯಿಂದ ಮೂರು ಸುತ್ತು ಗುಂಡು ಹಾರಿಸುವ ಮೂಲಕ ಸಕಲ ಸರ್ಕಾರಿ ಗೌರವದೊಂದಿಗೆ ಪಟ್ಟಣದ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನಡೆಸಲಾಯಿತು.



ಅಂಗನವಾಡಿ ನೌಕರರ ಬೇಡಿಕೆ ಈಡೇರಿಸಲು ಮನವಿ

ಯಲಬುರ್ಗಾ : ಪಟ್ಟಣದ ಅಂಗನವಾಡಿ ನೌಕರರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಅಂಗನವಾಡಿ ನೌಕರರ ಸಂಘದ ತಾಲೂಕು ಘಟಕದ ಸದಸ್ಯರು ತಾಲೂಕಿನ ಶಾಸಕರ ಆಪ್ತ ಸಹಾಯಕ ರಮೇಶ್ ಕೊಣ್ಣೂರ ಅವರ ಮೂಲಕ ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರಿಗೆ ಮನವಿ ಸಲ್ಲಿಸಿದರು.



ಬಳಿಕ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಲಲಿತಾ ಅರಳಿ ಮಾತನಾಡಿ, ಶಿಶು ಅಭಿವೃದ್ಧಿ ಯೋಜನೆ ಆರಂಭವಾಗಿ ಸುಮಾರು 50 ವರ್ಷವಾದರೂ ಇನ್ನೂ ಸೇವೆಯಲ್ಲಿ ಕೆಲಸ ಮಾಡಿದ ನೌಕರರಿಗೆ ಸೌಲಭ್ಯ ನೀಡುವಲ್ಲಿ ಸರ್ಕಾರ ನಿರ್ಲಕ್ಷ್ಯ ತೋರಿದ್ದಾರೆ. ಅಂಗನವಾಡಿ ಕೇಂದ್ರದ ಮೂಲಕ ಆರು ವರ್ಷದೊಳಗಿನ ಮಕ್ಕಳಿಗೆ ಪೌಷ್ಟಿಕ ಆಹಾರ, ಆರೋಗ್ಯ ಸೇವೆ ಹಾಗೂ ಪ್ರಾಥಮಿಕ ಶಿಕ್ಷಣ ನೀಡುವ ಮಹತ್ವದ ಕೆಲಸ ನೌಕರರು ಮಾಡುತ್ತಿದ್ದಾರೆ. ಆದರೂ ಸರ್ಕಾರ ಅವರ ಸಮಸ್ಯೆ ಪರಿಹಾರಕ್ಕೆ ಸಮರ್ಪಕ ಗಮನ ಹರಿಸುತ್ತಿಲ್ಲ ಇನ್ನಾದರೂ ಸರ್ಕಾರ ಎಚ್ಚೆತ್ತುಕೊಂಡು ನೌಕರರಿಗೆ ಕೂಡಲೇ ಸೌಲಭ್ಯ ನೀಡಬೇಕು ಎಂದು ಆಗ್ರಹಿಸಿದರು. ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ ಹಾಗೂ ಯುಕೆಜಿ ತರಗತಿ ಆರಂಭಿಸಲು ಸರ್ಕಾರ ಆದೇಶಿಸಿ ಬಜೆಟ್‌ನಲ್ಲಿ ಅಗತ್ಯ ಅನುದಾನ ಒದಗಿಸಬೇಕು. ಖಾಲಿ ಇರುವ ಹುದ್ದೆ ಕೂಡಲೇ ಭರ್ತಿ ಮಾಡಬೇಕು. ಚುನಾವಣಾ ವೇಳೆ ಬಿಎಲ್‌ಒ ಕರ್ತವ್ಯಗಳಿಗೆ ಅಂಗನವಾಡಿ ನೌಕರರನ್ನು ಬಿಡುಗಡೆ ಮಾಡಬೇಕು. ಎಲ್ಲ ಅಂಗನವಾಡಿ ನೌಕರರಿಗೆ ಇಎಸ್‌ಐ ಹಾಗೂ ಪಿಎಫ್ ಸೌಲಭ್ಯ ಕಲ್ಪಿಸಿ ಕನಿಷ್ಠ ವೇತನ ಹೆಚ್ಚಳ ಮಾಡಬೇಕು ಎಂದು ಆಗ್ರಹಿಸಿದರು.

ಸಂಘದ ಪದಾಧಿಕಾರಿಗಳಾದ ಪಾರ್ವತಿ ಛಲವಾದಿ, ಬಸಮ್ಮ ಉಣಚಗೇರಿ, ಯಲ್ಲುಬಾಯಿ ಮ್ಯಾಗೇರಿ, ರತ್ನ ವಜ್ರಬಂಡಿ, ಸಾವಿತ್ರಿ ಅಂಗಡಿ, ಪ್ರೇಮಾ ಹುಬ್ಬಳ್ಳಿ, ಗೌರಮ್ಮ ಬೇಲೇರಿ, ನೀಲಮ್ಮ ಗಿರೆಡ್ಡಿ, ವೇದಾ ದೇಸಾಯಿ, ಅನುಸೂಯಾ ಚವಡಿ, ಸುಜಾತಾ ಛಲವಾದಿ ಸೇರಿದಂತೆ ಅನೇಕ ಅಂಗನವಾಡಿ ನೌಕರರು ಇದ್ದರು.

ಶ್ರೀಗಂಧ ಮರಗಳ ಕಳ್ಳತನ: ಕಠಿಣ ಕ್ರಮಕ್ಕೆ ಒತ್ತಾಯ

ಬಳ್ಳಾರಿ: ಜಿಲ್ಲೆಯ ಕಂಪ್ಲಿ ತಾಲೂಕಿನ ಶ್ರೀರಾಮರಂಗಾಪುರ ಗ್ರಾಮದಲ್ಲಿ ನಡೆದ ಶ್ರೀಗಂಧ ಮರಗಳ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಕೂಡಲೇ ತನಿಖೆ ನಡೆಸಿ, ತಪ್ಪಿತಸ್ಥರು ಯಾರೇ ಇರಲಿ ಅವರನ್ನು ಕೂಡಲೇ ಬಂಧಿಸಿ, ಕಠಿಣ ಕ್ರಮ ಕೈಗೊಳ್ಳಬೇಕು, ಮತ್ತೆ ಇಂತಹ ಘಟನೆಗಳು ನಡೆಯದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಗಣಪಾಲ ಐನಾಥ ರೆಡ್ಡಿ ಅವರ ನೇತೃತ್ವದಲ್ಲಿ ರೈತರು ಎಸ್ಪಿ ಡಾ.ಸುಮನ್ ಪೆನ್ನೇಕರ್ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು.



ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಗಣಪಾಲ ಐನಾಥ ರೆಡ್ಡಿ ಮಾತನಾಡಿ, ಜಿಲ್ಲೆಯ ಕಂಪ್ಲಿ ತಾಲೂಕಿನ ಶ್ರೀರಾಮರಂಗಾಪುರ ಗ್ರಾಮದಲ್ಲಿ ನಡೆದ ಶ್ರೀಗಂಧ ಮರಗಳ ಕಳ್ಳತನ ಪ್ರಕರಣವನ್ನು ಕೂಡಲೇ ಪೊಲೀಸರು ಭೇದಿಸಬೇಕು. ಕೃತ್ಯ ಎಸಗಿದ ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಇಂತಹ ಪ್ರಕರಣಗಳು ಮತ್ತೆ ಮರುಕಳಿಸದಂತೆ ಅಗತ್ಯ ಕ್ರಮಗಳನ್ನು ಅಧಿಕಾರಿಗಳು ಕೈಗೆತ್ತಿಕೊಳ್ಳಬೇಕು ಎಂದು ಒತ್ತಾಯಿಸಿದರು.

ರೈತರು ಒಂದೇ ಬೆಳೆ ಬೆಳೆಯುತ್ತಿದ್ದು, ಹೆಚ್ಚಿನ ಆದಾಯ ನಿರೀಕ್ಷಿಸಿ ರೈತರು ಈ ರೀತಿ ಶ್ರೀಗಂಧ ಮರಗಳನ್ನು ಬೆಳೆಯಲು ಮುಂದಾಗಿದ್ದಾರೆ. ಸುಮಾರು 10 ವರ್ಷಗಳ ಅವಧಿವರೆಗೆ ಮರಗಳನ್ನು ಮಗುವಿನಂತೆ ನಮ್ಮ ರೈತರು ಆರೈಕೆ ಮಾಡಿ ಬೆಳೆಸಿದ್ದಾರೆ. ಈ ರೀತಿ ಕಳ್ಳತನವಾದರೆ ರೈತರ ಪರಿಸ್ಥಿತಿ ಏನು.

ಈಗಾಗಲೇ ಜಿಲ್ಲೆಯ ರೈತರು ಆರ್ಥಿಕವಾಗಿ ಹಿಮ್ಮುಖದಲ್ಲಿದ್ದು, ಇಂತಹ ಕಳ್ಳತನ ಪ್ರಕರಣಗಳಿಂದ ನಮ್ಮ ರೈತರು ಕಂಗಾಲಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ 2026-27 ನೇ ಸಾಲಿನ ಬಜೆಟ್ ನಲ್ಲಿ ಶ್ರೀಗಂಧ ಬೆಳೆಯನ್ನು ಪ್ರೋತ್ಸಾಹಿಸಲು ಹೆಚ್ಚಿನ ಆದ್ಯತೆ ನೀಡಿದೆ. ಆದರೆ, ಈ ಘಟನೆಯಿಂದ ರೈತರಿಗೆ ದಿಕ್ಕು ತೋಚದಂತಾಗಿದೆ, ಗಾಯದ ಮೇಲೆ ಬರೆ ಎಳೆದಂತಾಗಿದೆ. ಕೂಡಲೇ ಇಂತಹ ಪ್ರಕರಣಗಳಿಗೆ ಪೊಲೀಸ್ ಇಲಾಖೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮನವಿ ಸ್ವೀಕರಿಸಿದ ಜಿಲ್ಲಾ ವರಿಷ್ಠಾಧಿಕಾರಿಗಳು ಕೃತ್ಯಕ್ಕೆ ಸಂಬಂಧಿಸಿ ಶೀಘ್ರದಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು.

ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ನಾಗರಾಜ್ ಕೆ.ಎಂ., ಬಿಜೆಪಿ ರೈತ ಮೋರ್ಚಾ ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಶರಣ ಬಸವನಗೌಡ ಉಪ್ಪಾರ ಹೊಸಳ್ಳಿ, ಎರ್ರಗುಡಿ ಲಿಂಗಾರೆಡ್ಡಿ, ಬಿ.ಹನುಮನ ಗೌಡ, ಬಾದನಹಟ್ಟಿ ಶರಣಬಸಪ್ಪ, ಬಾದನಹಟ್ಟಿ ನಾಗರಾಜ, ಕೋಳೂರು ರುದ್ರಪ್ಪ, ಕುಡುತಿನಿ ಪ್ರಕಾಶ್ ಬಾಬು, ವದ್ದಟ್ಟಿ ಡಿ.ಕೆ. ಕರಿಬಸಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕ್ರೀಡೆ ಸ್ಪರ್ಧೆಯಲ್ಲ, ಆರೋಗ್ಯ ಕಾಪಾಡುವ ಅಸ್ತ್ರ

ವಿಜಯನಗರ: ಕ್ರೀಡೆಯೆಂದರೆ ಕೇವಲ ಸ್ಪರ್ಧೆಯಲ್ಲ, ಅದು ಆರೋಗ್ಯವನ್ನು ಕಾಪಾಡುವ ಒಂದು ಅಸ್ತ್ರವಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಕಾಧಿಕಾರಿ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ ಹೇಳಿದರು.

ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಪಂಚಾಯತ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಸೋಮವಾರ ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಿಬ್ಬಂದಿಗಳಿಗೆ ವಾರ್ಷಿಕ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೈನಂದಿನ ಕೆಲಸದ ಒತ್ತಡದಲ್ಲಿ ಕ್ರೀಡೆಯು ದೈಹಿಕ ಮತ್ತು ಮಾನಸಿಕ ಸದೃಢತೆಗೆ ಸಹಕಾರಿಯಾಗಿದೆ. ಆರೋಗ್ಯವಂತ ದೇಹದಲ್ಲಿ ಆರೋಗ್ಯಯುತವಾದ ಮನಸ್ಸು ನೆಲೆಸಿರುತ್ತದೆ ಎಂಬ ನಾಣ್ಣುಡಿಯಂತೆ ಸಿಬ್ಬಂದಿ ಸಹ ಸದೃಢವಾಗಿದ್ದಾಗ ಮಾತ್ರ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಲು ಸಾಧ್ಯ. ಕ್ರೀಡೆಯೆಂಬುವುದು ಸ್ಫೂರ್ತಿ, ಶಿಸ್ತು ಮತ್ತು ಆರೋಗ್ಯಕರ ಸ್ಪರ್ಧೆಯನ್ನು ತೋರಿಸುವ ಒಂದು ಉತ್ತಮ ವೇದಿಕೆಯಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಮಾತನಾಡಿದರು.

ಜಿಪಂ ಉಪಕಾರ್ಯದರ್ಶಿ ಕೆ.ತಿಮ್ಮಪ್ಪ ಕ್ರೀಡಾ ಪ್ರತಿಜ್ಞಾ ವಿಧಿ ಬೋಧಿಸಿದರು.



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಗ್ರಾಮೀಣಾಭಿವೃದ್ಧಿ ಹಾಗೂ ಜಿಲ್ಲಾ ಪಂಚಾಯತ್‌ಯಿಂದ ನಡೆದ ಜಿಲ್ಲಾ ಮಟ್ಟದ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಜಿಪಂ ಸಿಇಓ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಎಡಿಸಿ ಇ.ಬಾಲಕೃಷ್ಣ ಚಾಲನೆ ನೀಡಿದರು. ಎಸ್ಪಿ ಎಸ್. ಜಾಹ್ನವಿ, ಮುಖ್ಯ ಯೋಜನಾಧಿಕಾರಿ ಜೆ.ಎಂ.ಅನ್ನದಾನಸ್ವಾಮಿ, ಲೆಕ್ಕಾಧಿಕಾರಿ ರುದ್ರಪ್ಪ ಅಕ್ಕಿ, ತಾಪಂ ಮುಖ್ಯ ಕಾರ್ಯನಿರ್ವಹಕಾಧಿಕಾರಿ ಆಲಂ ಬಾಷಾ ಸೇರಿದಂತೆ ಜಿಪಂ, ತಾಪಂ, ಗ್ರಾಪಂ ಸೇರಿದಂತೆ ಪಿ.ಆರ್.ಇ.ಡಿ, ಕೆ.ಆರ್.ಐ.ಡಿ.ಎಲ್ ಮತ್ತು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಗಳ ಅಧಿಕಾರಿಗಳು ಇದ್ದರು.

ಮಾ.26ಕ್ಕೆ ಒಳಮೀಸಲಾತಿಗೆ ಆಗ್ರಹಿಸಿ ಅರೆಬೆತ್ತಲೆ ಪ್ರತಿಭಟನೆ

ಗಂಗಾವತಿ: ಮಾದಿಗ ಸಮಾಜಕ್ಕೆ ಒಳಮೀಸಲಾತಿಯನ್ನು ನೀಡಬೇಕು ಎಂದು ಅಖಿಲ ಭಾರತ ಮಾದಿಗ ದಂಡೋರ ಸಮಿತಿಯ ವತಿಯಿಂದ ಕೊಪ್ಪಳದಲ್ಲಿ ಮಾ.26ರಂದು ಅರೆ ಬೆತ್ತಲೆಯಾಗಿ ಪ್ರತಿಭಟನೆ ಮಾಡಲಾಗುವುದು ಎಂದು ಸಮಿತಿಯ ರಾಜ್ಯಾಧ್ಯಕ್ಷರಾದ ಹುಸೇನಪ್ಪ ಸ್ವಾಮಿ ಮಾದಿಗ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಅಖಿಲ ಭಾರತ ಮಾದಿಗ ದಂಡೋರ ಸಮಿತಿಯ ವತಿಯಿಂದ ಸೋಮವಾರ ಹಮ್ಮಿಕೊಂಡ ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು.

ಮಾದಿಗ ಸಮಾಜವು ಒಳಮೀಸಲಾತಿಯನ್ನು ನೀಡಬೇಕು ಎಂದು ಸುಮಾರು 40 ವರ್ಷಗಳಿಂದ ಹೋರಾಟವನ್ನು ಮಾಡಿಕೊಂಡು ಬರುತ್ತಿದೆ. ಹೋರಾಟಕ್ಕೆ ರಾಜ್ಯದ ಯಾವ ಸರಕಾರಗಳು ಸ್ಪಂಧನೆಯನ್ನು ಮಾಡುತ್ತಿಲ್ಲ, ಪ್ರತಿ ಭಾರಿಯ ಚುನಾವಣೆಯಲ್ಲಿ ಮಾದಿಗ ಸಮಾಜದವರಿಗೆ ಒಳಮೀಸಲಾತಿ ನೀಡಲಾಗುವುದು ಎಂದು ಮೂಗಿದೆ ತುಪ್ಪ ಸವರುವ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಕಾಂಗ್ರೆಸ್ ಸರಕಾರ ಕೂಡ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೊದಲನೇ ಅಧಿವೇಶನದಲ್ಲಿಯೇ ಒಳ ಮೀಸಲಾತಿಯನ್ನು ಜಾರಿ ಮಾಡಲಾಗುವುದು ಎಂದು ಪ್ರಣಾಳಿಕೆಯನ್ನು ಕಾಂಗ್ರೆಸ್ ಸರಕಾರ ಘೋಷಣೆ ಮಾಡಿತ್ತು. ಸರಕಾರ ಅಧಿಕಾರಕ್ಕೆ ಬಂದು 2 ವರ್ಷಗಳು ಕಳೆದರೂ ಕಾಂಗ್ರೆಸ್ ಸರಕಾರ ಒಳಮೀಸಲಾತಿಯನ್ನು ಜಾರಿ ಮಾಡಲು ಪ್ರಮಾಣಿಕ ಪ್ರಯತ್ನವನ್ನು ಸಹ ಮಾಡಲು ಮುಂದಾಗುತ್ತಿಲ್ಲ. ಸದಾಶಿವ ಆಯೋಗದ ವರದಿಯ ಪ್ರಕಾರ ಸುಪ್ರೀಂ ಕೋರ್ಟ್ ಆದೇಶ ಮಾಡಿದ್ದರು. ಸರಕಾರ ಆದೇಶವನ್ನು ಪಾಲನೆ ಮಾಡದೆ ಮಾದಿಗ ಸಮಾಜಕ್ಕೆ ವಂಚನೆಯನ್ನು ಮಾಡಲು ಮುಂದಾಗುತ್ತಿದೆ. ಮಾದಿಗ ಸಮಾಜವು ಹಿಂದುಳಿದ ಸಮಾಜವಾಗಿದ್ದು, ಒಳ ಮೀಸಲಾತಿಯನ್ನು ನೀಡಿದರೆ ಮಾದಿಗ ಸಮಾಜದ ವಿದ್ಯಾರ್ಥಿಗಳಿಗೆ ಸರಕಾರಿ ಉದ್ಯೋಗಗಳ ಅವಕಾಶಗಳು ದೊರೆಯುತ್ತವೆ. ಜೊತೆಗೆ ಸಮಾಜದಲ್ಲಿ ಮಾದಿಗ ಸಮಾಜದವರು ಮುಖ್ಯ ವಾಹಿನಿಗೆ ಬರಲು ಸಹಾಯವಾಗುತ್ತದೆ. ಆದರೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು 2 ವರ್ಷಗಳು ಕಳೆದಿದ್ದರು ಸಹ ಒಳಮೀಸಲಾತಿಯನ್ನು ಜಾರಿ ಮಾಡದೆ ನಿರ್ಲಕ್ಷ್ಯ ತೋರಿಸುತ್ತಿರುವುದನ್ನು ಖಂಡಿಸಿ, ಸಮಿತಿಯ ವತಿಯಿಂದ ಅರೆ ಬೆತ್ತಲೆಯಾಗಿ ಪ್ರತಿಭಟನೆಯನ್ನು ನಡೆಸಲಾಗುವುದು. ಮಾ.26ರಂದು ಕೊಪ್ಪಳದ ಅಶೋಕ ಸರ್ಕಲ್‌ನಿಂದ ಡಿಸಿ ಕಚೇರಿಯವರೆಗೆ ಅರೆ ಬೆತ್ತಲೆಯಾಗಿ ಪ್ರತಿಭಟನೆ ನಡೆಸಲಾಗುವುದು ಎಂದರು. ಸಮಿತಿಯ ಮುಖಂಡರಾದ ಹಂಪೇಶ ಹರಿಗೋಲ, ಶಿವಪ್ಪ ಮಾದಿಗ, ಶರಣಪ್ಪ ಕನಕಗಿರಿ, ಕನಕಪ್ಪ, ಯಮನೂರಪ್ಪ ಗೋನಾಳ, ಹನುಮಂತಪ್ಪ ಅಯೋಧ್ಯೆ, ನಾಗರಾಜ ಮರಳಿ, ಹುಲಗಪ್ಪ ಚಿಕ್ಕ ಬೆಣಕಲ್, ಯಮನೂರಪ್ಪ ಇತರರಿದ್ದರು.



ಸುಭಾಷ್ ಗುತ್ತೇದಾರ ಆರೋಪ ಸತ್ಯಕ್ಕೆ ದೂರ

ಕಲಬುರಗಿ: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲನುಭವಿಸಿದ ಹಿನ್ನೆಲೆ ಆಳಂದ ಮಾಜಿ ಶಾಸಕ ಸುಭಾಷ್ ಗುತ್ತೇದಾರ ಸಂಪೂರ್ಣವಾಗಿ ಹತಾಶೆಗೊಂಡು, ಮಾಧ್ಯಮದ ಮುಂದೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಶಾಸಕ ಬಿ.ಆರ್.ಪಾಟೀಲ ಬೆಂಗಲಿಗರು, ಕಾಂಗ್ರೆಸ್ ಮುಖಂಡರು ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಆಳಂದ ತಾಲೂಕಿನ ರೈತರ, ಸಾರ್ವಜನಿಕರ ಅನುಕೂಲಕ್ಕಾಗಿ ಶಾಸಕ ಬಿ.ಆರ್.ಪಾಟೀಲರು ಹಗಲಿರುಳು ಶ್ರಮಿಸಿ, ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇದನ್ನು ಸಹಿಸದ ಮಾಜಿ ಶಾಸಕರು ಸರ್ಕಾರದ ಹಣವನ್ನು ಕಾಮಗಾರಿ ಹೆಸರಿನಲ್ಲಿ ಲೂಟಿ ಹೊಡೆಯುತ್ತಿದ್ದಾರೆ ಎಂಬ ಮಾತು ಸತ್ಯಕ್ಕೆ ದೂರವಾದ ಮಾತಾಗಿದ್ದು ,ಮಾಧ್ಯಮದ ಮುಂದೆ ಮಾತನಾಡುವ ಮುನ್ನ ವಸ್ತುಸ್ಥಿತಿ ತಿಳಿದುಕೊಳ್ಳಬೇಕು ಎಂದರು. ಮುಖ್ಯಮಂತ್ರಿಗಳ ಅನುದಾನದಲ್ಲಿ ಕಡಗಂಚಿ- ದಂಗಾಪುರ ರಸ್ತೆ, ಪಡಸಾವಳಗಿ-ಸರಸಂಬ ರಸ್ತೆ, ತೆಲಕುಣಿ-ತೀರ್ಥ ರಸ್ತೆ ಮತ್ತು ಕವಲಗಾ ಇಕ್ಕಳಕಿ ರಸ್ತೆ ಹೀಗೆ 10 ಕೋಟಿಯಲ್ಲಿ 5 ಕೋಟಿ ಮಾತ್ರ ರಸ್ತೆಗೆ ವಿನಿಮಯ ಮಾಡಿದ್ದಾರೆ. ಉಳಿದ 5 ಕೋಟಿ ಹಣ ಬೇರೆ ಬೇರೆ ಸಮುದಾಯದ ಭವನಗಳಿಗೆ ನೀಡಲಾಗಿದೆ. ತಾಲೂಕಿನಲ್ಲಿ ಸಣ್ಣ ರೈತರಿಗಾಗಿ ಮನರೇಗಾ ಯೋಜನೆಯಡಿ ಸುಮಾರು 500 ಬಾವಿ ಮಂಜೂರಾಗಿ ಕಾಮಗಾರಿ ಪ್ರಾರಂಭವಾದ ಹಿನ್ನೆಲೆ ರೈತರು ಸಂತಸ ವ್ಯಕ್ತಪಡಿಸಿದ್ದು,ಈ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಗಾಲು ಹಾಕಿ ಕಾಮಗಾರಿ ನಿಲ್ಲಿಸಿದ್ದಾರೆ ಎಂದು ಆರೋಪಿಸಿದರು.



ಕಾಂಗ್ರೆಸ್ ಮುಖಂಡರಾದ ಶಿವಪುತ್ರಪ್ಪ ಪಾಟೀಲ್, ಅಶೋಕ್ ಸವಳೇಶ್ವರ,ಸಿದ್ದರಾಮ ಪ್ಯಾಟಿ, ಗುರುಲಿಂಗ ಜಂಗಮ ಪಾಟೀಲ್, ಶರಣಬಸಪ್ಪಾ ಪಾಟೀಲ್, ಚನ್ನಬಸಪ್ಪ ಪಾಟೀಲ್, ಗುರುಶಾಂತಪ್ಪ ಪಾಟೀಲ್ ನಿಂಬಾಳ, ಸತೀಶ್ ಕಡಗಂಚಿ ಸೇರಿದಂತೆ ಇತರರಿದ್ದರು.

> **ಖಾಸಗಿ ಸಂಸ್ಥೆಯಿಂದ 2 ಹಿಟಾಚಿ ಖರೀದಿಸಲಾಗಿದೆ.ಇಲ್ಲಿಯವರೆಗೆ 3 ಕೋಟಿ ರಸ್ತೆ ಕಾಮಗಾರಿ ಮಾಡಲಾಗಿದೆ.45 ಕೀ.ಮೀ.ರಸ್ತೆ ಕಾಮಗಾರಿ ಮಾಡಲಾಗಿದ್ದು, ಸತ್ಯಾಸತ್ಯತೆ ಅರಿಯದೆ ಸುಳ್ಳು ಆರೋಪ ಮಾಡುವುದು ಬಿಡಬೇಕು.ಸರಕಾರದ ಹಣವನ್ನು ಕಾಮಗಾರಿ ಹೆಸರಿನಲ್ಲಿ ಲೂಟಿ ಹೊಡೆದಿದ್ದಾರೆ ಎಂದು ಹೇಳಿರುವ ಮಾಜಿ ಶಾಸಕರು ಕೂಡಲೇ ತಾಲೂಕಿನ ಜನತೆಗೆ ಕ್ಷಮೆ ಕೇಳಬೇಕು.**
>
> **■ ಶಿವಪುತ್ರಪ್ಪ ಪಾಟೀಲ, ಕಾಂಗ್ರೆಸ್ ಮುಖಂಡ**

CHANGE OF NAME

I, **SHANTA KAMMAR** (old name) Resident of 492, Badiger Street, Hirehonnihalli, Tq Kalghatgi, Dist: Dharwad - 580114, Karnataka, India, have changed my name as **SHANTA UDAY BADIGER** (new name) henceforth I will be called and recognized by new name for all future purposes, dated: 16/03/2026.

CHANGE OF NAME

I, **NAGARAJ HUNAGUND** (old name) Resident of Deengaleshwar Nagar 1 Yaliwal Post Bommanahalli Dist Haveri 581203 (address), have changed my name as **NAGARAJ FAKKIRAPPA HUNAGUND** (new name) henceforth I will be called and recognized by new name for all future purposes, dated: 16/03/2026.

CHANGE OF NAME

I, **SHAKUNTALA** (old name) Resident of H No: 414 18 Ward Kamalapura Manmatha Keri Bellary 583221 (address), have changed my name as **SHAKUNTHALA KIRANA KUMAR** (new name) henceforth I will be called and recognized by new name for all future purposes, dated: 16/03/2026.

CHANGE OF NAME

I, **NASREEN BANU EKLASPUR** (old name) Resident of Ward No 14, Roshan Darwaza, Asar Galli,District: Vijayapura, State: Karnataka, Pin Code: 586101, have changed my name as **NASREEN KALADGI** (new name) henceforth I will be called and recognized by new name for all future purposes, dated: 16/03/2026.

CHANGE OF NAME

I, **SUMEET SURESH KANDKUR** (old name) Resident of 71-72, Vriddhi Bunglow Laxmi Basaveshwar Nagar, Opp Decathlon Gokul Road, Hubli - 580030, have changed my name as **SUMEET KANDKUR** (new name) henceforth I will be called and recognized by new name for all future purposes, dated: 16/03/2026.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರರವರ ಕಚೇರಿ ಕನೀನಿನಿ.
ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ-591116
ತಾಲೂಕು: ಸವದತ್ತಿ. ಜಿಲ್ಲಾ : ಬೆಳಗಾವಿ. ರಾಜ್ಯ: ಕರ್ನಾಟಕ
Dn e-mail : eewandmdivision@gmail.com

ಸಂಖ್ಯೆ/ಕಾ & ಯಾ/ಪಿಬಿ-1/ಇ-ಟೆಂಡರ/1027 ದಿನಾಂಕ: 16/3/2026

ಅಲ್ಪಾವಧಿ ಟೆಂಡರ ಪ್ರಕಟಣೆ (3ನೇ ಕರೆ)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ)
(ಏಕ ಲಕೋಟೆ ಪದ್ದತಿಯಲ್ಲಿ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಾರ್ಯಗಾರ ಮತ್ತು ಯಾಂತ್ರಿಕ ವಿಭಾಗದಡಿಯಲ್ಲಿ 2701 ಲೆಕ್ಕ ಶೀರ್ಷಿಕೆಯಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರಿನ ಕಾಮಗಾರಿಗೆ ಶೇಕಡವಾರು ಟೆಂಡರನ್ನು ಏಕ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

ಇಂಡೆಂಟ್ ನಂ: 3648
ಕಾಮಗಾರಿಯ ಅಂದಾಜು ಮೊತ್ತ: ರೂ.37.31 ಲಕ್ಷ
ಇ.ಎಂ.ಡಿ ಮೊತ್ತ : ರೂ. 66500.00

ಇ-ಪೋರ್ಟಲ್ ಮೂಲಕ ಟೆಂಡರನ್ನು ದಿನಾಂಕ: 26/3/2026 ರಂದು ಸಂಜೆ 4.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. ಬಿಡ್ ತೆರೆಯುವ ದಿನಾಂಕ:27/3/2026 ರಂದು ಸಂಜೆ 5.00 ಘಂಟೆ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka .gov.in ಪಡೆಯಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ,
ಕನೀನಿನಿ.ಕಾರ್ಯಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ.

DIPR/BGM/RO-NO-2080/KSMCA/2025-26

CHANGE OF NAME

I, **OMKAR MARUTI BORE** (old name) Resident of 4143D/14/2, Nidasoshi Road, Adarsh Nagar 3 Cross, Sankeshwar, Belagavi - 591313, have changed my name as **OMKAR YUVARAJ MARUTI BORE** (new name) henceforth I will be called and recognized by new name for all future purposes, dated: 16/03/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ|| ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು-560029.
ಫೋನ್: 26096832/26096910 ಫ್ಯಾಕ್ಸ್: 080-25536105 ಇಮೇಲ್: purchase@kmf.coop

ಸಂ. ಕಹಾಮ/ಖರೀದಿ/ಟೆಂಡರ್-887/2025-26 ದಿನಾಂಕ: 16.03.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಗೆ ತಿಳಿಸಿದ ಸಾಮಗ್ರಿಯ ಸರಬರಾಜಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Item Description	Qty (No/kg)	EMD (Rs.)
1	Supply of EVP Flex Boards to KMF Central Office and KMF Milk Unions.	6259 No	42,000/-
2	Supply of Formaldehyde to KMF Cattle Feed Plant Hassan for a Period of Three months.	25000 Kg	18,000/-

ಇ-ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಮೂಲಕ ಟೆಂಡರ್ ಅನ್ನು ದಿನಾಂಕ: **30.03.2026** ರಂದು **05.00** ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.

ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಯೋಜನಾ ವಿಭಾಗ,
1-11-264 ಎರಡನೇ ಮಹಡಿ ಎ.ಟಿ.ಎಂ. ಸರ್ಕಲ್, ನಿಜಲಿಂಗಪ್ಪ ಕಾಲೋನಿ ರಾಯಚೂರು-584101
e-mail: eekrrdarcr@gmail.com

ಸಂ.:ಕಾನಿಅ/ಯೋ.ವಿ.ರಾ/ಪಿ.ಬಿ/2025-26/935 ದಿನಾಂಕ:13.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ-01

ಕರ್ನಾಟಕ ರಾಜ್ಯದ ರಾಜ್ಯ ಪಾಲರ ಪರವಾಗಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅಡಿಯಲ್ಲಿ ಮಸ್ಕಿ ವಿಧಾನ ಸಭಾ ಕ್ಷೇತ್ರದ ಕಾಮಗಾರಿಗಳನ್ನು KW-3, KW-4 ಮಾನದಂಡಗಳನ್ನು ಅನುಸರಿಸಿ ಐಟಂ ರೇಟ್ ದರಗಳನ್ನು KPPP ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.

ಟೆಂಡರ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ

1) **E.M.D.:** As per KPPP portal **2)** ಟೆಂಡರ್ ಇಂಡೆಂಟ್ ನಂಬರಗಳು: KRRDA/2025-26/RD/WORK_INDENT331, KRRDA/2025-26/RD/WORK_INDENT332, KRRDA/2025-26/RD/WORK_INDENT334, KRRDA/2025-26/RD/WORK_INDENT335, KRRDA/2025-26/RD/WORK_INDENT338, KRRDA/2025-26/RD/WORK_INDENT 339 , **3) e-procurement portal** ನಲ್ಲಿ ಟೆಂಡರ್ ಬಿಡ್ ದಾಖಲಾತಿಗಳನ್ನು ನೋಡಬಹುದಾದ ದಿನಾಂಕ, **Date of commencement of downloading of bidding document:** 16-03-2026 4) ತಾಂತ್ರಿಕ ಬಿಡ್‌ಗಳನ್ನು **online** ಆನ್‌ಲೈನ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ, **last date to submit bid on E-portal:** 30-03-2026 (17.00 Hours) **5)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 01-04-2026 (10:30 Hours) **6)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು. 7) ಟೆಂಡರ್ ಗುತ್ತಿಗೆದಾರರ ದರ್ಜೆ: KPPP ತಂತ್ರಾಂಶದಲ್ಲಿ ಸೂಚಿಸಿದಂತೆ **8)** ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ ರಾಯಚೂರು **9)** ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ನೋಡಬಹುದು: https://www. kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಯೋಜನಾ ವಿಭಾಗ, ರಾಯಚೂರು.

DIP/RCR/765/KSMCA/768/2025-26

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ದೂರವಾಣಿ ಸಂ: 08352-259855, ಇ-ಮೇಲ್: ka.vijayapura.dudc@gmail.com
ವೆಬ್‌ಸೈಟ್: www.vijayapuradudc.mrc.gov.in

ಕ್ರ.ಸಂ:ಜಿನಕೊ-5/CMIDP/2025-26 ದಿನಾಂಕ:13.03.2026

ಟೆಂಡರ್ ಅಧಿಸೂಚನೆ

ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಸನ್ 2025-26 ನೇ ಸಾಲಿನ ಅನುದಾನದಲ್ಲಿ ಸಿಂದಗಿ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಿಂದಗಿ ನಗರಸಭೆಗೆ ಹಂಚಿಕೆಯಾದ ಅನುದಾನದಲ್ಲಿ ಮಂಜೂರಾದ ಕಾಮಗಾರಿಗಳಿಗೆ KW-2 ಡಾಕ್ಯುಮೆಂಟ್ ಉಪಯೋಗಿಸಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವೀ-ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಟೆಂಡರ್ ಅಹ್ವಾನಿಸಲಾಗಿದೆ. ಇಂಡೆಂಟ್ ವಿವರ ಈ ಕೆಳಗಿನಂತಿದೆ.

1. DMA/2025-26/RD/WORK_INDENT54999/CALL-2

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು ಇ-ಪ್ರೋಕರ್‌ಮೆಂಟ್ ಪೋರ್ಟಲ್ ವೆಬಸೈಟ್ www.kppp.karnataka.gov.in ಮೂಲಕ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಕೆಲಸದ ಕುರಿತು ಯಾವುದೇ ವಿವರಗಳನ್ನು ಕಛೇರಿಯ ವೇಳೆಯಲ್ಲಿ ಈ ಕಾರ್ಯಾಲಯದ ಕಾ.ಅ/ಸ.ಕಾ.ಅ ಇವರನ್ನು ಸಂಪರ್ಕಿಸಬಹುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 23.03.2026 ರಂದು 16.30 ಘಂಟೆಯವರೆಗೆ.
2) ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್) ದಿನಾಂಕ: 24.03.2026 ರಂದು 17.30 ಘಂಟೆಗೆ.
3) ಟೆಂಡರ್ ತೆರೆಯುವ ದಿನಾಂಕ (ಆರ್ಥಿಕ ಬಿಡ್) ದಿನಾಂಕ: 27.03.2026 ರಂದು 11.00 ಘಂಟೆ ನಂತರ

ಅವಧಿ ವಿಸ್ತರಣೆ ಮತ್ತು ತಿದ್ದುಪಡಿ ಇದ್ದಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ- ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ವಾಸಾಸಂಇ/ವಿಜಯಪುರ/810/ಕೆಎಸ್‌ಎಂಸಿಎ/2025-26

ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ನಂ.ಎಫ್.ಬಿ.8, 1ನೇ ಮಹಡಿ, ಜಿಲ್ಲಾಡಳಿತ ಭವನ,
ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ. ದೂರವಾಣಿ ಸಂಖ್ಯೆ: 08156-277113. Email:dcpocbpur@gmail.com

ಸಂಖ್ಯೆ: ಜಿಮರಘ/ಚಿಪುರ/ಬಾ.ವಾ.ದ/2025-26
ದಿನಾಂಕ: 10.03.2026

ಬಾಹ್ಯ ಮೂಲದಿಂದ ವಾಹನ ಸೇವೆ ಪಡೆಯಲು ದರಪಟ್ಟಿ ಆಹ್ವಾನಿಸಿರುವ ಬಗ್ಗೆ

2026-27ನೇ ಸಾಲಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಿಕ್ಕಬಳ್ಳಾಪುರ ಕಛೇರಿಗೆ ಪಾಲನೆ, ಪೋಷಣೆ, ರಕ್ಷಣೆ ಅಗತ್ಯವಿರುವ ಅಥವಾ ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳನ್ನು ಸಂರಕ್ಷಿಸುವ ಸಲುವಾಗಿ, ಮಕ್ಕಳಾ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಲು ಜಿಲ್ಲಾದ್ಯಂತ ಮಿಷನ್ ವಾತ್ಸಲ್ಯ ಯೋಜನೆಯಡಿ ಬರುವ ವಿವಿಧ ಯೋಜನೆಗಳ ಮತ್ತು ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಹಾಗೂ ಕಛೇರಿಯ ಉಪಯೋಗಕ್ಕಾಗಿ ಬಾಹ್ಯಮೂಲದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (KTPP)1999 ನಿಯಮಗಳು 2000ರ ಪ್ರಕಾರ ವಾಹನ ಸೇವೆ ಪಡೆಯಲು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ.

(1) ದರಪಟ್ಟಿ ಪ್ರಾರಂಭಿಸುವ ದಿನಾಂಕ: 11.03.2026 (2) ದರಪಟ್ಟಿ ಸಲ್ಲಿಸಲು ಕೊನೆಯ ದಿನಾಂಕ: 10.04.2026 ಸಂಜೆ 05:30 ಕ್ಕೆ (3) ತಾಂತ್ರಿಕ ದರಪಟ್ಟಿ ತೆರೆಯುವ ದಿನಾಂಕ: 13.04.2026 ಬೆಳಗ್ಗೆ 11:00 ಕ್ಕೆ (4) ಆರ್ಥಿಕ ದರಪಟ್ಟಿ ತೆರೆಯುವ ದಿನಾಂಕ: 16.04.2026 ಬೆಳಗ್ಗೆ 11:00 ಕ್ಕೆ. (5) ಅಂದಾಜು ಮೊತ್ತ: ರೂ. 4.99 ಲಕ್ಷ. (6) ಇ.ಎಂ.ಡಿ ಮೊತ್ತ: ರೂ. 12,500/- ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಿಕ್ಕಬಳ್ಳಾಪುರ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 08156-277113.

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಚಿಕ್ಕಬಳ್ಳಾಪುರ.

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:484/ಕೆಎಸ್‌ಎಂಸಿಎ/2025-26

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
ಮಿನಿ ವಿಧಾನ ಸೌಧ ಪಕ್ಕದಲ್ಲಿ, ಸ್ಟೇಶನ್ ಮುಖ್ಯ ರಸ್ತೆ, ಕಲಬುರಗಿ-585102
Email:commissionergda@gmail.com/Phone No. 08472-221214

ಸಂಖ್ಯೆ :ನಪ್ರಾಕ/ನ.ಯೋ.ಸ/ಭೂಉಬ /ಆನ್‌ಲೈನ್-10362/2025-26/3475/1 ದಿನಾಂಕ: 13-03-2026

-: ಪ್ರಕಟಣೆ :-

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ರ ಪ್ರಕಾರ)

ಕಲಬುರಗಿ ನಗರದ ಸ್ಥಳೀಯ ಯೋಜನಾ ಕ್ಷೇತ್ರಕ್ಕೆ ಅನುಮೋದಿತ ಪರಿಷ್ಕೃತ-2 ಮಹಾಯೋಜನೆ ನಕ್ಷೆಯಲ್ಲಿ ಬರುವ ಈ ಕೆಳಕಂಡ ಗ್ರಾಮದ ಸರ್ವೆ ನಂಬರ **ಕೃಷಿ** ಉದ್ದೇಶದಿಂದ **ವಸತಿ** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗಾಗಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

1) ಜಮೀನು ವಿವರ : **ಶೇಖರೋಜಾ ಸರ್ವೆ ನಂ. 82/*/7**, 2) ವಿಸ್ತೀರ್ಣ ಎ-ಗುಂ : **01-20**, 3) ಮಹಾ ಯೋಜನೆಯಲ್ಲಿ ಕಾಯ್ದಿರಿಸಿದ ಉದ್ದೇಶ : **ಕೃಷಿ**, 4) ಅರ್ಜಿದಾರರು ಕೇಳಿರುವ ಉದ್ದೇಶ : **ವಸತಿ**, 5) ಅರ್ಜಿದಾರರ ಹೆಸರು : **ಶ್ರೀಮತಿ ಅಂಬಿಕಾ ಗಂಡ ಪ್ರಕಾಶ ಪ್ಯಾಟಿ**, 6) ಅರ್ಜಿದಾರರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅಂಶಗಳು : 1) ಸಾರ್ವಜನಿಕರಿಗೆ ನಿವೇಶನಗಳು ದೊರಕುವುದು, 2) ನಗರ ಯೋಜಿತ ಬೆಳವಣಿಗೆ ಸಾಧ್ಯ, 3) ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು, 4) ವಿನ್ಯಾಸ ಅನುಮೋದನೆ ದೊರೆತರೆ ಕಾರ್ಮಿಕರಿಗೆ ಕೆಲಸ ಸಿಗುವುದು

ಆದ್ದರಿಂದ ಸದರಿ ಪ್ರಸ್ತಾವನೆ ಕುರಿತು ಸಾರ್ವಜನಿಕ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳ ಒಳಗಾಗಿ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ ರವರ ಕಛೇರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1181/ಕೆ.ಎಸ್.ಎಂ.ಸಿ.&ಎ/2025-26

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
ಮಿನಿ ವಿಧಾನ ಸೌಧ ಪಕ್ಕದಲ್ಲಿ, ಸ್ಟೇಶನ್ ಮುಖ್ಯ ರಸ್ತೆ, ಕಲಬುರಗಿ-02, ಇ-ಮೇಲ್:commissionergda@gmail.com

ಸಂ.ನಪ್ರಾಕ/ನ.ಯೋ.ಸ./ಭೂಉನಿ/ಆನ್‌ಲೈನ್-10308/2025-26/3480 ದಿನಾಂಕ : 13-03-2026

ಭೂ-ಉಪಯೋಗ ನಿಗಧಿಗೊಳಿಸುವ ಪ್ರಕಟಣೆ

ಈ ಕೆಳಕಂಡ ಭೂ ಉಪಯೋಗ ನಿಗಧಿಗೊಳಿಸುವ ಪ್ರಕಟಣೆಯ ವಿವರವು ಇಂತಿದೆ. ಶ್ರೀ ಪ್ರವೀಣಕುಮಾರ ಪಾಟೀಲ, ತಂದೆ ಅಣ್ಣಪ್ಪಗೌಡ ಪಾಟೀಲ, ಮೇ॥ ಭಾಗ್ಯವಂತಿ ಡೆವಲಪರ್ಸ್ ಸಾ॥ ಕಲಬುರಗಿ ಇವರು ಕಲಬುರಗಿ ಜಿಲ್ಲೆ ಕಲಬುರಗಿ ತಾಲೂಕಿನ ಕೋಟನೂರ-ಡಿ. ಗ್ರಾಮದ ಸರ್ವೆ ನಂ. 40/*/7 ರಲ್ಲಿಯ 09 ಎಕರೆ 08 ಗುಂಟೆ ಪೈಕಿ 04 ಎಕರೆ 24 ಗುಂಟೆ ಜಮೀನಿಗೆ ಉದ್ಯಾನವನ ವಲಯದಿಂದ ವಸತಿ ಉಪಯೋಗಕ್ಕೆ ನಿಗಧಿಗೊಳಿಸುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಅನುಮೋದನೆಯಾದ ಪರಿಷ್ಕೃತ -2 ಮಹಾಯೋಜನೆಯಲ್ಲಿ ಉದ್ಯಾನವನ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿದೆ. ಕಲಬುರಗಿ ನಗರಕ್ಕೆ ಮಹಾಯೋಜನೆಯು ಅನುಮೋದನೆಯಾಗಿ ಸುಮಾರು 05 ವರ್ಷಗಳಾಗಿದ್ದು, ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 69(2) ರ ಪ್ರಕಾರ ಸದರಿ ಜಮೀನನ್ನು ಪ್ರಾಧಿಕಾರ ಸ್ವಾಧಿನಪಡಿಸಿಕೊಂಡಿಲ್ಲವಾದ್ದರಿಂದ ಹಾಲಿ ಭೂ ಉಪಯೋಗವು (ಲ್ಯಾಪ್ಸ್) ರದ್ದಾಗಿರುತ್ತದೆ. ಸದರಿ ಜಮೀನಿಗೆ ಹಾಲಿ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಅರ್ಜಿದಾರರು ಸದರಿ ಭೂ ಉಪಯೋಗ ನಿಗಧಿಕರಣದಿಂದ 1) ಸಾರ್ವಜನಿಕರಿಗೆ ನಿವೇಶನಗಳು ದೊರಕುವುದು, 2) ನಗರ ಯೋಜಿತ ಬೆಳವಣಿಗೆ ಸಾಧ್ಯ 3) ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು ಹಾಗೂ 4) ವಿನ್ಯಾಸ ಅನುಮೋದನೆ ದೊರೆತರೆ ಕಾರ್ಮಿಕರಿಗೆ ಕೆಲಸ ಸಿಗುವುದು ಎಂದು ಸಾರ್ವಜನಿಕ ಹಿತಾಸಕ್ತಿ ಅಂಶಗಳನ್ನು ಸಲ್ಲಿಸಿರುತ್ತಾರೆ ಹಾಗೂ ತಮ್ಮ ಜಮೀನಿನ ಸುತ್ತಲೂ ವಸತಿ ಹಾಗೂ ಇತರ ಅಭಿವೃದ್ಧಿ ಬರುತ್ತಿದ್ದು, ಅವುಗಳಿಗೆ ಪೂರ್ವಕವಾಗಿ ತಮ್ಮ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವ ಸದುದ್ದೇಶ ಹೊಂದಿರುತ್ತೇನೆ ಎಂದು ತಿಳಿಸಿ ಭೂ ಉಪಯೋಗ ನಿಗದಿಗೊಳಿಸುವಂತೆ ಕೋರಿರುತ್ತಾರೆ.

ಕ್ರ.ಸಂ.1) ಅರ್ಜಿದಾರರ ಹೆಸರು: ಶ್ರೀ ಪ್ರವೀಣಕುಮಾರ ಪಾಟೀಲ ತಂದೆ ಅಪ್ಪಣ್ಣಗೌಡ ಪಾಟೀಲ, ಮೇ॥ ಭಾಗ್ಯವಂತಿ ಡೆವಲಪರ್ಸ್, ಗ್ರಾಮ: ಕೋಟನೂರ-ಡಿ, ಸರ್ವೆ ನಂ. 40/*/7 ಕ್ಷೇತ್ರ ಎ-ಗುಂ 09-08 ಪೈಕಿ 04-24 ಜಮೀನಿನ ಹಾಲಿ ಭೂ ಉಪಯೋಗದ ವಿವರ : ಉದ್ಯಾನವನ, ಅರ್ಜಿದಾರರು ಬಯಸಿದ ಭೂ-ಉಪಯೋಗ : ವಸತಿ.

ಆದ್ದರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(2) ರಂತೆ ಭೂ ಉಪಯೋಗ ನಿಗಧಿಪಡಿಸುವ ಕುರಿತು ಸಾರ್ವಜನಿಕರು ಆಕ್ಷೇಪಣೆಗಳೇನಾದರು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನಾಂಕ ದಿಂದ 15 ದಿವಸಗಳ ಒಳಗಾಗಿ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ ರವರ ಕಚೇರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರದ ಯಾವುದೇ ಆಕ್ಷೇಪಣೆಗಳ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.

ಸಹಿ/- ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ,
ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/1177/ದೇಶಪಾಂಡೆ ಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ
eepredkpl@gmail.com,

ಸಂ.ಪಂರಾಇಂ/ ವಿಕೊ/ತಾ.ಶಾ/ಸ.ಇಂ/ಟೆಂಡರ/2025-26/3173 ದಿನಾಂಕ: 12/03/2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW- 1, 2, 3 ಮತ್ತು 4ರ ಪ್ರಕಾರ ನಿಯಮ ಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್/ಪಿ.ಡಬ್ಲೂ.ಡಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "kppp.karnataka.gov.in ಪೋರ್ಟಲ್" ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2025-26 ನೇ ಸಾಲಿನ, ಮಾನ್ಯ ಮುಖ್ಯ ಮಂತ್ರಿಗಳ ಮೂಲಕಸೌಕರ್ಯ ಅಭಿವೃದ್ಧಿ ಇನ್ನಿತರೆ ಅನುದಾನ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು "kppp.karnataka.gov.in ಪೋರ್ಟಲ್" ಮುಖಾಂತರ ಭಾಗವಹಿಸಬಹುದು. ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಟೆಂಡರ ಆಹ್ವಾನಿಸಲಾಗಿದೆ.

1) ಕುಕನೂರು ತಾಲೂಕಿನ ಮಂಡಲಗೇರಿ -ಮಾಳೇಕೊಪ್ಪ ರಸ್ತೆ ನಿರ್ಮಾಣ.CALL-3 INDENT NO:21285 ಟೆಂಡರಗಿಟ್ಟ ಮೊತ್ತ ರೂ79.57 ಲಕ್ಷ ,ಇಎಂಡಿ159500.00 6ತಿಂಗಳು
2) ಕುಕನೂರು ತಾಲೂಕಿನ ಮನ್ನಾಪುರ ಗ್ರಾಮದಿಂದ ಹಳ್ಳಿಕೇರಿವರೆಗೆ ರಸ್ತೆ ನಿರ್ಮಾಣ.CALL-2 INDENT NO:21022 ಟೆಂಡರಗಿಟ್ಟ ಮೊತ್ತ ರೂ 127.35 ಲಕ್ಷ ,ಇಎಂಡಿ 191000.00 6ತಿಂಗಳು

ಸಾಮಾನ್ಯ ಸೂಚನೆಗಳು:- 1)ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2)ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪಮಾಣ ಪತ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3)ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ kppp.karnataka.gov.in portal ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ ವಿವರ: ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **17.03.2026** ಸಮಯ 10.00 ಗಂಟೆ ನಂತರ ದಿಂದ **26.03.2026** ಸಮಯ 16.00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **17.03.2026** ಸಮಯ 11.00 ಗಂಟೆ ನಂತರ ದಿಂದ: **26.03.2026** ಸಮಯ 16.30 ಗಂಟೆವರೆಗೆ ಟೆಂಡರ್ ತೆರೆಯುವ ದಿನಾಂಕ: **27.03.2026** ಕಚೇರಿ ಸಮಯದಲ್ಲಿ ಕೆಡಬ್ಲೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು. ಸೂಚನೆ:ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ ಕೊಪ್ಪಳ.

ಡಿಐಪಿಆರ್/ಕೊಪ್ಪಳ/758/ಕೆಎಸ್‌ಎಂಸಿಎ/2025-26

ಪೌರಾಡಳಿತ ಇಲಾಖೆ
ಪಟ್ಟಣ ಪಂಚಾಯತ ಕಾರ್ಯಾಲಯ ಮುಳಗುಂದ - 582117
(ಜಿಲ್ಲೆ: ಗದಗ, ರಾಜ್ಯ: ಕರ್ನಾಟಕ)

ಸಂ:ಪಪಂಮು/ತಾಂ.ವಿ./ಯು.ಆಯ್.ಡಿ.ಎಸ್.ಎಸ್.ಎಂ.ಟಿ./ಟೆಂಡರ್/ವಹಿ-/2025-26
ದಿನಾಂಕ:-13-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ಇವರಿಂದ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ-2000ರ ಪ್ರಕಾರ **"ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್"** ಪದ್ಧತಿಯಲ್ಲಿ 10ನೇ ಹಣಕಾಸು, 12ನೇ ಹಣಕಾಸು ಯು.ಆಯ್.ಡಿ.ಎಸ್.ಎಸ್.ಎಂ.ಟಿ. ಹಾಗೂ ಎಸ್.ಎಫ್.ಸಿ. ಅನುದಾನದಡಿ ನಿರ್ಮಿಸಿದ ವಾಣಿಜ್ಯ ಮಳಿಗೆಗಳ ಮಾಸಿಕ ಬಾಡಿಗೆ ಮೊತ್ತದ ಅನುದಾನದಡಿ **ಇಂಡೆಂಟ್ ನಂಬರ್‌ಗಳ ಸಂಖ್ಯೆಗಳು**-DMA/2025-26/BD/WORK_INDENT42311ನೇದ್ದರ **ವಿವಿಧ ಭಾಗಗಳಲ್ಲಿರುವ ಮಳಿಗೆಗಳ ರಿಪೇರಿ** ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ.1/2/3 ದಸ್ತಾವೇಜನಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಚಾಲ್ತಿ ಸಾಲಿನ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ ದಾಖಲೆಗಳಿಗಾಗಿ **http://kppp.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

1) ಇ-ಪ್ರೊಕ್ಯೂರ್‌ಮೆಂಟ್ ಪದ್ದತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 23-03-2026 ಸಂಜೆ:4.00 ಗಂಟೆಗೆ**
2) ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಬಿಡ್ ತೆರೆಯುವ **ದಿನಾಂಕ: 24-03-2026 ಸಂಜೆ:4:30 ಗಂಟೆಗೆ**

ನಿಗದಿ ಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ ಕಾಮಗಾರಿ ಇ.ಎಂ.ಡಿ. ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್ **http://www.mulagundatown.mrc.gov.in** ಹಾಗೂ ಕಚೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ-ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರ ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

ಸಹಿ/-	ಸಹಿ/-
(ಶ್ರೀ.ಮಂಜುನಾಥ ಪಿ ಗುಳೇದ)	(ಶ್ರೀನಿವಾಸಮೂರ್ತಿ ಕುಲಕರ್ಣಿ)
ಮುಖ್ಯಾಧಿಕಾರಿ	ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯತ ಮುಳಗುಂದ	ಪಟ್ಟಣ ಪಂಚಾಯತ ಮುಳಗುಂದ ತಹಶೀಲ್ದಾರ ಹಾಗೂ ತಾಲೂಕಾ ದಂಡಾಧಿಕಾರಿಗಳು ಗದಗ

ವಾ.ಸಾ.ಇ/ಗದಗ/707/ದೇಶಪಾಂಡೆಪಬ್ಲಿಸಿಟಿ/2025-26

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಉರ್ವಾಸ್ಟೋರ್ಸ್, ಅಶೋಕನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಸಂಖ್ಯೆ: ಮನಪ್ರಾ: ತಾಂತ್ರಿಕ : ಜೆಇ(309) : 2025-26 ದಿನಾಂಕ: 16-03-2026

ಟೆಂಡರು ಪ್ರಕಟಣೆ(2ನೇ ಕರೆ)

ಈ ಕೆಳಗೆ ತಿಳಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ಇ-ಟೆಂಡರನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ **http://kppp.karnataka.gov.in** ನಲ್ಲಿ ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ **Standard Tender Document KW-4** ರ ಪ್ರಕಾರ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ್ ನಿಯಮಾವಳಿಯಂತೆ ಕನಿಷ್ಟ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಟೆಂಡರುದಾರರು ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. ಟೆಂಡರುದಾರರು ಈ ಕೆಳಗೆ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ. ಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬೇಕಾಗಿರುತ್ತದೆ. ಇಂಡೆಟ್ ಸಂಖ್ಯೆ **84/CALL-2, 85/CALL-2, 86/CALL-2** ರ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **25-03-2026** ಅಪರಾಹ್ನ **5.00** ಗಂಟೆ **(17-00** ಗಂಟೆ) ಒಳಗೆ ಸಲ್ಲಿಸತಕ್ಕದ್ದು ಹಾಗೂ ಇಂಡೆಟ್ ಸಂಖ್ಯೆ **82/CALL-2** ಮತ್ತು **83/CALL-2** ರ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **07-04-2026** ಅಪರಾಹ್ನ **5.00** ಗಂಟೆ **(17-00** ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದಾದರೂ ಇದ್ದರೆ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಿಸಲಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

DIPR/DK/KSMCA/1758/25-26 dt.16.03.2026

ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್

ನೋಂದಾಯಿತ ಕಚೇರಿ: ಟೈಮ್ಸ್ ಸ್ಕ್ವೇರ್, ಯುನಿಟ್ ನಂ. 3ಬಿ, 2ನೇ ಮಹಡಿ, ಮಿತ್ತಲ್ ಇಂಡಸ್ಟ್ರಿಯಲ್ ಎಸ್ಟೇಟ್ ಎದುರು, ಅಂಧೇರಿ- ಕುರ್ಲಾ ರಸ್ತೆ, ಮರೋಲ್ ನಾಕಾ, ಅಂಧೇರಿ ಪೂರ್ವ, ಮುಂಬೈ- 400059. **ಶಾಖಾ ಕಚೇರಿ:** 2/4, ಶಿರೂರು ಪಾರ್ಕ್, ಮೋಡೆ ಹಾಸ್ಟೆಲ್ ಪಕ್ಕ, ವಿದ್ಯಾನಗರ, ಹುಬ್ಬಳ್ಳಿ- 580031

ಸೆಕ್ಯುರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕನ್ ಆಫ್ ಫೈನಾನ್ಶಿಯಲ್ ಅಸೆಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002ರ ಸೆಕ್ಷನ್ 13 (2) ಅಡಿಯಲ್ಲಿ ಡಿಮ್ಯಾಂಡ್ ನೋಟಿಸ್

ಈ ಕೆಳಗೆ ಸಹಿ ಮಾಡಿರುವ ಮೆಸರ್ಸ್ ಮಿನಿಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು, ತಮ್ಮ ಹೊಣೆಗಾರಿಕೆಯನ್ನು ನಿಭಾಯಿಸಲು ಅಂದರೆ ಪಡೆದ ಆಸ್ತಿಗಳನ್ನು ಅಡಮಾನ ಮಾಡಿ ಮೆಸರ್ಸ್ ಮಿನಿಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್‌ನಿಂದ ಪಡೆದ ಸಾಲ (ಗಳು) ಮೂಲ ಸಾಲ ಮೊತ್ತ ಹಾಗೂ ಬಡ್ಡಿಯನ್ನು ಮತ್ತು ಕ್ರೋಢೀಕೃತವಾಗಿರುವ ಇತರ ಶುಲ್ಕಗಳನ್ನು ಪಾವತಿಸಲು ವಿಫಲರಾಗಿರುವ ಪರಿಣಾಮವಾಗಿ ಇವುಗಳನ್ನು ಅನುತ್ಪಾದಕ ಆಸ್ತಿ (ಎನ್‌ಪಿಎ) ಎಂದು ಪರಿಗಣಿಸಿ, ಸೆಕ್ಯುರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002ರ ಸೆಕ್ಷನ್ 13(2) ಅಡಿಯಲ್ಲಿ ಮತ್ತು ಆ ಬಳಿಕ ಜಾರಿಗೆ ಬಂದಿರುವ ನಿಯಮಾವಳಿಗಳ ಅನ್ವಯ ಅವರ ಕೊನೆಯದಾಗಿ ತಿಳಿದಿರುವ ವಿಳಾಸಗಳಿಗೆ ನೋಟಿಸ್ ನೀಡಿರುತ್ತಾರೆ. ಆದಾಗ್ಯೂ ಅದು ವಿತರಣೆಯಾಗದೇ ವಾಪಾಸು ಬಂದಿರುವುದರಿಂದ ಇಂಥ ಸಾಲಗಾರ(ರು)/ಸಹಸಾಲಗಾರ(ರು)ರಿಗೆ ಈ ನೋಟಿಸ್ ಪ್ರಕಟಿಸುವ ಮೂಲಕ ಕಾಲಕಾಲಕ್ಕೆ ಪಡೆದ ಸಾಲಸೌಲಭ್ಯದ ತಮ್ಮ ಬಾಕಿ ಮೊತ್ತವನ್ನು ಮರುಪಾವತಿ ಮಾಡುವಂತೆ ಸೂಚಿಸಲಾಗಿದೆ.

ಸಾಲ ಖಾತೆ ಸಂಖ್ಯೆ/ ಸಾಲಗಾರ(ರ) ಹೆಸರು/ ಸಹಸಾಲಗಾರ(ರ) ಹೆಸರು/ ಜಾಮೀನುದಾರ(ರ) ಹೆಸರು & ವಿಳಾಸ	ಜಾರಿಯಾಗಲಿರುವ ಭದ್ರತಾ/ ಅಡಮಾನ ಮಾಡಲಾದ ಸ್ಥಿರಾಸ್ತಿ/ ಆಸ್ತಿ ವಿಳಾಸ	ಡಿಮ್ಯಾಂಡ್ ನೋಟಿಸ್ ದಿನಾಂಕ ಮತ್ತು ಮೊತ್ತ
1. ಸಾಲ ಖಾತೆ ಸಂಖ್ಯೆ ವಿಟಿ0003276 1. ಧನಲಕ್ಷ್ಮಿ ಸಾವಜಿ ಖಾನಾವಳಿ 395, ಮಯೂರ್ ನಗರ, ಆನಂದನಗರ ರಸ್ತೆ, ಹುಬ್ಬಳ್ಳಿ-ಧಾರವಾಡ, ಕರ್ನಾಟಕ- 580024 2.ಪೃಥ್ವಿರಾಜ್ ಪಿ.ಮೆಹರ್ವಾಡೆ 902, ಕೊನೆಯ ನೀರಿನ ಟ್ಯಾಂಕ್ ಬಳಿ, ಆನಂದನಗರ, ಹುಬ್ಬಳ್ಳಿ-ಧಾರವಾಡ, ಕರ್ನಾಟಕ- 580024 3. ಶಿಲ್ಪಾ ಮೆಹರ್ವಾಡೆ 902, ಕೊನೆಯ ನೀರಿನ ಟ್ಯಾಂಕ್ ಬಳಿ, ಆನಂದನಗರ, ಹುಬ್ಬಳ್ಳಿ-ಧಾರವಾಡ, ಕರ್ನಾಟಕ- 580024 4. ವಿನಾಯಕ ಪಿ.ಮೆಹರ್ವಾಡೆ 902, ಕೊನೆಯ ನೀರಿನ ಟ್ಯಾಂಕ್ ಬಳಿ, ಆನಂದನಗರ, ಹುಬ್ಬಳ್ಳಿ-ಧಾರವಾಡ, ಕರ್ನಾಟಕ- 580024 5. ದೀಪಾ ಮೆಹರ್ವಾಡೆ 2ನೇ ನೀರಿನ ಟ್ಯಾಂಕ್ ಬಳಿ, ಆನಂದನಗರ, ಹುಬ್ಬಳ್ಳಿ-ಧಾರವಾಡ, ಕರ್ನಾಟಕ- 580024	ವಸತಿ ನಿವೇಶನದಲ್ಲಿ ನಿರ್ಮಿಸಲಾದ ಆರ್‌ಸಿಸಿ ಮನೆ, ವಾಣಿಜ್ಯ ಮಳಿಗೆ ಮತ್ತು ಉಳಿಕೆ ಖಾಲಿ ಭೂಮಿಯ ಸಹಿತ ಸ್ಥಿರಾಸ್ತಿಯ ಎಲ್ಲ ತುಂಡು ಮತ್ತು ತುಣುಕುಗಳು. ಎಚ್‌ಡಿಎಂಸಿ ಮುನ್ಸಿಪಲ್ ಖಾತೆ ಸಂಖ್ಯೆ 36-5-21-0209, ಪಿಐಡಿ ನಂ. 201874 (ಹಳೆ ಪಿಐಡಿ ಸಂಖ್ಯೆ 36ಎ/1878), ಅಳತೆ 25X30 ಅಡಿ, ಒಟ್ಟು ವಿಸ್ತೀರ್ಣ 750 ಚದರ ಅಡಿ. ಅದರಲ್ಲಿ 24.48 ಚದರ ಮೀಟರ್‌ನ ಆರ್‌ಸಿಸಿ ಮನೆ, 12.27 ಚದರ ಮೀಟರ್‌ನ ವಾಣಿಜ್ಯ ಮಳಿಗೆಗಳು ಮತ್ತು ಉಳಿಕೆ ಖಾಲಿ ಭೂಮಿ. ಇದನ್ನು ಕೃಷ್ಣಾಪುರ ಗ್ರಾಮ, ಮಯೂರ್‌ನಗರ, ಆನಂದನಗರ, ಹಳೆಹುಬ್ಬಳ್ಳಿ, ತಾಲೂಕು ಹುಬ್ಬಳ್ಳಿ, ಜಿಲ್ಲೆ ಧಾರವಾಡ- ಜಮೀನಿನಲ್ಲಿ ನಿರ್ಮಿಸಲಾಗಿದೆ. ಇದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದು, ವಿಳಾಸ (ಆಸ್ತಿಯ ಸ್ಥಳ) ಪ್ಲಾಟ್ ನಂ. 394, ಆರ್‌ಎಸ್‌ನಂ. 92, ಪಿಐಡಿ ಸಂಖ್ಯೆ 36ಎ/1878, ಶಕ್ತಿ ದೇವಸ್ಥಾನ ಬಳಿ, ಮಯೂರ್‌ನಗರ, ಆನಂದನಗರ ರಸ್ತೆ, ಕೃಷ್ಣಾಪುರ ಗ್ರಾಮ, ಹುಬ್ಬಳ್ಳಿ ತಾಲೂಕು, ಧಾರವಾಡ ಜಿಲ್ಲೆ- 580030. ಗಡಿಗಳು (ಡಾಕ್ಯುಮೆಂಟ್/ನಿವೇಶನದ ಪ್ರಕಾರ): ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 391, ದಕ್ಷಿಣಕ್ಕೆ: ಪ್ಲಾಟ್ ನಂ 393, ಉತ್ತರಕ್ಕೆ: ಪ್ಲಾಟ್ ನಂ. 395.	11/03/2026 ರೂ. 38,68,880.72/- (ರೂಪಾಯಿ ಮೂವತ್ತೆಂಟು ಲಕ್ಷದ ಅರುವತ್ತೆಂಟು ಸಾವಿರದ ಎಂಟು ನೂರ ಎಂಬತ್ತು ಮತ್ತು ಪೈಸೆ ಎಪ್ಪತ್ತೆರಡು ಮಾತ್ರ)

ಪೂರಕ ಸರ್ವಿಸ್ ನೋಟಿಸ್‌ಗೆ ಕ್ರಮ ಕೈಗೊಳ್ಳಲಾಗುವುದು. ಮೇಲ್ಕಂಡ ಸಾಲಗಾರರು/ ಸಹಸಾಲಗಾರರು ಮತ್ತು ಜಾಮೀನುದಾರಿಗೆ ಈ ಮೂಲಕ ಸಲಹೆ ಮಾಡುವುದೇನೆಂದರೆ ಬಾಕಿ ಮೊತ್ತದ ಪಾವತಿಯನ್ನು ಭವಿಷ್ಯ ಬಡ್ಡಿಯ ಸಹಿತ ಈ ನೋಟಿಸ್ ಪ್ರಕಟಿಸಿದ 60 ದಿನಗಳ ಒಳಗಾಗಿ ಸಂಪೂರ್ಣವಾಗಿ ಪಾವತಿಸುವಂತೆ ಸೂಚಿಸಲಾಗಿದೆ. ತಪ್ಪಿದಲ್ಲಿ, (ಯಾವುದೇ ಪೂರ್ವಗ್ರಹಪೀಡಿತವಿಲ್ಲದೆ ಬಜಾಜ್ ಫೈನಾನ್ಸ್ ಲಿಮಿಟೆಡ್‌ಗೆ ಯಾವುದೇ ಸೂಕ್ತ ಪರಿಹಾರ ಇಲ್ಲದ ಹಿನ್ನೆಲೆಯಲ್ಲಿ) ಭದ್ರತಾ ಆಸ್ತಿ/ ಅಡಮಾನ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಿನ ಕ್ರಮವನ್ನು ಸೆಕ್ಯುರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕನ್ ಆಫ್ ಫೈನಾನ್ಶಿಯಲ್ ಅಸೆಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002ರ ಸೆಕ್ಷನ್ 13 (4) ಅಡಿಯಲ್ಲಿ ಕೈಗೊಳ್ಳಬೇಕಾಗುತ್ತದೆ. ಮೇಲೆ ಹೆಸರಿಸಿದ ವ್ಯಕ್ತಿಗಳು ಮೇಲೆ ಉಲ್ಲೇಖಿಸಿದ ಆಸ್ತಿಗಳಿಂದ ವಿಮುಖರಾಗದಂತೆ, ಮೂರನೇ ಪಾರ್ಟಿಯ ಹಿತಾಸಕ್ತಿ ಸೃಷ್ಟಿಸದಂತೆ ಕೂಡಾ ಸಲಹೆ ಮಾಡಲಾಗಿದೆ. ಇದರ ಮೇಲೆ ಮಿನಿಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್ ತನ್ನ ಚಾರ್ಜ್ ಹೊಂದಿರುತ್ತದೆ.

ದಿನಾಂಕ: 17.03.2026 ಸ್ಥಳ: ಧಾರವಾಡ
ಅಧಿಕೃತ ಅಧಿಕಾರಿ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	3521	6016
ಕಡಲೆಬೇಳೆ	6400	6900
ಕಡಲೆಕಾಳು	1101	5400
ಉದ್ದಿನಬೇಳೆ	13600	13600
ಉದ್ದಿನಕಾಳು	1919	5511
ಚಪ್ಪರದವರೆ	2525	3021
ಒಣ ಮೆಣಸಿನಕಾಯಿ	1500	48988
ಹೆಸರುಕಾಳು	1250	7066
ನೆಲಗಡಲೆ (ಶೇಂಗಾ)	4317	7001
ಹುರುಳಿ ಕಾಳು	2700	3314
ಬೆಲ್ಲ	5350	5350
ಜೋಳ	1875	4500
ಮೆಕ್ಕೆಜೋಳ	1406	1814
ಮಡಿಕೆ (ಮಟಕಿ)	9425	12831
ಸಾಸುವೆ	4825	4825
ಈರುಳ್ಳಿ	500	2200
ಆಲೂಗಡ್ಡೆ	1300	1800
ಕುಸುಬೆ	4509	5111
ಸಾಮೆ/ಸಾವಿ	4211	4211
ಸೋಯಾಬಿನ್	4770	5462
ತೊಗರಿ	3211	4489
ತೊಗರಿ ಬೇಳೆ	9400	11200
ಗೋಧಿ	1610	4816

ಪ್ರಾಮಾಣಿಕತೆ ಮೆರೆದ ಗೃಹರಕ್ಷಕ ಸಿಬ್ಬಂದಿ

ಗೋಕರ್ಣ: ಇಲ್ಲಿ ಕರ್ತವ್ಯ ನಿರ್ವಹಿಸುವ ಗೃಹರಕ್ಷಕ ಸಿಬ್ಬಂದಿಗೆ ರಸ್ತೆಯಲ್ಲಿ ಸಿಕ್ಕಿದ ಬ್ಯಾಗನ್ ವಾರಸುದಾರರನ್ನ ಗುರುತಿಸಿ ಅವರಿಗೆ ನೀಡಿ ಪ್ರಾಮಾಣಿಕತೆ ಮೆರೆದಿದ್ದಾರೆ.

ಏಕಮುಖ ಸಂಚಾರದ ಪಾಯಿಂಟ್‌ನಲ್ಲಿ ಕರ್ತವ್ಯ ನಿರತರಾಗಿದ್ದ ಹರೀಶ ಗೌಡರವರಿಗೆ ಬ್ಯಾಗ್ ದೊರೆತ್ತಿತ್ತು,ದ್ವಿಚಕ್ರವಾಹನದ ನೊಂದಣಿ ಸಂಖ್ಯೆಯ ಆಧಾರದ ಮೇಲೆ ವಾರಸುದಾರರನ್ನ ಪತ್ತೆ ಮಾಡಿದ್ದು, ಮಹಾಬಲೇಶ್ವರ ಮಂದಿರದ ಪೊಲೀಸ್ ಹೊರ ಠಾಣೆಯಲ್ಲಿ ಬ್ಯಾಗ್ ಹಸ್ತಾಂತರಿಸಿದ್ದಾರೆ.

ಯಲ್ಲಾಪುರದ ದಂಪತಿಗಳು ಇಲ್ಲಿಗೆ ಬಂದಿದ್ದು ಬೈಕ್‌ನಲ್ಲಿ ತೆರಳುವಾಗ ಬ್ಯಾಗ್ ಜಾರಿ ಬಿದ್ದಿತ್ತು ಎಂದು ನಂತರ ತಿಳಿದು ಬಂದಿದೆ. ಅಗತ್ಯ ದಾಖಲೆಗಳು ಹಾಗೂ ಹಣವಿದ್ದ ಬ್ಯಾಗ್‌ನ್ ಸುರಕ್ಷಿತವಾಗಿ ಮರಳಿಸಿದ ಗೃಹರಕ್ಷಕ ಸಿಬ್ಬಂದಿ ಹಾಗೂ ಸಹಕರಿಸಿದಪೊಲೀಸ್ ಸಿಬ್ಬಂದಿಗೆ ಪ್ರವಾಸಿಗರು ಕೃತಜ್ಞತೆ ಸಲ್ಲಿಸಿ ತೆರಳಿದ್ದಾರೆ. ಈ ವೇಳೆ ಹೊರಠಾಣೆಯ ಹವಾಲ್ದಾರ ಜಟ್ಟಪ್ಪ ನಾಯ್ಕ, ಸಿಬ್ಬಂದಿ ಮಹೇಶ ನಾಯ್ಕ ಉಪಸ್ಥಿತರಿದ್ದರು.



ಗುರುಕುಲದಲ್ಲಿ ಕಲಿತ ವಿದ್ಯೆ ಮರೆಯಬೇಡಿ: ಶ್ರೀಗಳು



ಗೋಕರ್ಣ : ಗುರುಕುಲದಲ್ಲಿ ಕಲಿತ ವಿದ್ಯೆ, ಗುಣಗಳನ್ನು ಯಾವ ಕಾಲಕ್ಕೂ ಮರೆಯಬಾರದು. ಒಳ್ಳೆಯ ಸ್ವಭಾವ ಬೆಳೆಸಿಕೊಳ್ಳಿ ಎಂದು ರಾಘವೇಶ್ವರ ಭಾರತೀ ಮಹಾಸ್ವಾಮಿ ಆಶಯ ವ್ಯಕ್ತಪಡಿಸಿದರು.

ಅವರು ಸೋಮವಾರ ಅಶೋಕೆಯ ಸಾರ್ವಭೌಮ ಗುರುಕುಲದ 10 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳ ಮುಂದಿನ ಬದುಕಿಗೆ ಶುಭಾಶಂಸನೆಯೀಯುವ ಕಾರ್ಯಕ್ರಮ ಸ್ವಸ್ತ್ಯಯನಮ್‌ನಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಇಲ್ಲಿಂದ ಸಮಾಜಕ್ಕೆ ಹೋದಾಗ ನೀವು ಗುರುಕುಲವನ್ನು ಪ್ರತಿನಿಧಿಸುವವರಾಗಿರುತ್ತೀರಿ. ಗುರುಕುಲ ಹಾಗೂ ವಿದ್ಯಾರ್ಥಿಗಳ ನಡುವಿನ ಬಂಧ ಹೆಣ್ಣು ಮಕ್ಕಳ ಮತ್ತವರ ತವರಿನ ಬಾಂಧವ್ಯದಂತೆ. ಅಷ್ಟೇ ಅಲ್ಲದೇ ಹೆಣ್ಣಿಗೆ ಹೇಗೆ ತವರು ಮನೆಯ ಸಂಬಂಧ ಎಂದೂ ಕಡಿದು ಹೋಗದೊ ಹಾಗೆ ಗುರುಕುಲದ ಜೊತೆ ನಿಮ್ಮ ಬಂಧ ಶಾಶ್ವತವಾಗಿರಲಿ ಎಂದು ಅನುಗ್ರಹಿಸಿದರು.

ವಿದ್ಯಾರ್ಥಿಗಳಿಗೆ ಪ್ರಾಚೀನ ಗುರುಕುಲದ ಪದ್ಧತಿಯಂತೆ ಆಚಾರ್ಯೋಪದೇಶವನ್ನು ಮಾಡಿದ ವಿದ್ವಾನ್ ನರಸಿಂಹ ಭಟ್ ಮಾತನಾಡಿ, ವಿದ್ಯೆ ಎಂದರೆ ಆಧ್ಯಾತ್ಮವಿದ್ಯೆ ಮಾತ್ರ. ಅಂತಹ ವಿದ್ಯೆ ಶಾಶ್ವತ ಎಂದರು.

ವಿಷ್ಣುಗುಪ್ತ ವಿಶ್ವವಿದ್ಯಾಪೀಠದ ಆಡಳಿತಾಧಿಕಾರಿ ಡಾ.ಪ್ರಸನ್ನಕುಮಾರ್ ಮಾತನಾಡಿ, ಶ್ರೀಗಳ ಗುರಿ ಆದರ್ಶ ವಿದ್ಯಾಲಯ ಹಾಗೂ ಆದರ್ಶ ಭಾರತ. ಅದನ್ನು ಸಾಕಾರ ಮಾಡುವ ಕಡೆ ನಮ್ಮೆಲ್ಲ ಪ್ರಯತ್ನ ನಿರಂತರವಾಗಿ ಇರಲಿದೆ ಎಂದರು.

ಗುರುಕುಲದ ಆಡಳಿತ ಮಂಡಳಿಯ ಕಾರ್ಯದರ್ಶಿ ಗಣೇಶಿ ಜೋಶಿ ಮಾತನಾಡಿ, ಯುಗಾದಿಯ ಆರಂಭದಲ್ಲಿ ಪರೀಕ್ಷೆಯಯನ್ನು ಬರೆಯುತ್ತಿದ್ದೀರಿ. ನಿಮ್ಮ ಜೀವನಕ್ಕೂ ವಿನೂತನ ಆರಂಭ ಸಿಗಲಿ ಎಂದರು.

ಸಭೆಗೂ ಮೊದಲು ವಿ.ವಿ.ಯ ಶಿವಗುರುಕುಲದ ಪ್ರಾಚಾರ್ಯ ಮಂಜುನಾಥ ಭಟ್ಟ ಇವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಮಾತಾ-ಪಿತೃಗಳ ಪಾದಪೂಜೆಯನ್ನು ನೆರವೇರಿಸಿದರು. ಸ್ವಸ್ತಿ ಸೂಕ -ದೀಪಜ್ವಲನದಿಂದ ಸಭೆ ಆರಂಭವಾಗಿತ್ತು. ವಿದ್ವಾನ್ ಲೋಹಿತ್ ಹೆಬ್ಬಾರ್ ಇವರು ಮಕ್ಕಳಿಗೆ ಗುರುಕುಲದ ಪ್ರತಿಜ್ಞೆ ಮಾಡಿಸಿದರು.

ಮುಖ್ಯಾಧ್ಯಾಪಕಿ ಸೌಭಾಗ್ಯಾ ಭಟ್ ಸ್ವಾಗತಿಸಿ,ಪ್ರಾಸ್ತಾವಿಕ ಮಾತನಾಡಿದರು. ಮಂಜುನಾಥ ಭಟ್ ನಿರ್ವಹಿಸಿದರು. ಸಭೆಯ ನಂತರ ಗುರುಕುಲದ ಮಕ್ಕಳಿಂದ ಕಳರಿಪಯಟ್ ಪ್ರದರ್ಶನ ನಡೆಯಿತು. ಶುಭಾಶಂಸನೆಯ ಗೀತೆಯೊಂದಿಗೆ 10 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳು ತಮ್ಮ ಹಸ್ತಾಕ್ಷರದ ಸವಿ ನೆನಪನ್ನು ವೃಕ್ಷ ಮತ್ತು ಫಲದ ಸಾಂಕೇತಿಕ ಚಿತ್ರದಲ್ಲಿ ಮೂಡಿಸಿದರು. ಈ ವೇಳೆ ವಿದ್ಯಾರ್ಥಿಗಳ ಪಾಲಕರು, ಅಧ್ಯಾಪಕವೃಂದ, ಕ್ಷೇಮಪಾಲಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಖಮೇನಿ ಭಾವಚಿತ್ರ ತೆರವುಗೊಳಿಸಲು ಮುತಾಲಿಕ್ ಆಗ್ರಹ

ಬೆಳಗಾವಿ: ಇರಾನ್-ಭಾರತದ ನಡುವೆ ಯುದ್ಧ ಆರಂಭವಾದರೆ ಮುಸ್ಲಿಮರು ಯಾರ ಪರ ನಿಲ್ಲುತ್ತಾರೆ ಎನ್ನುವ ಸ್ಪಷ್ಟ ಸಂದೇಶವನ್ನು ರವಾನಿಸುವುದರ ಮೂಲಕ ಖಮೇನಿ ಭಾವಚಿತ್ರ ಅಳವಡಿಸಿರುವುದನ್ನು ತೆರವುಗೊಳಿಸಬೇಕು ಎಂದು ಪ್ರಮೋದ ಮುತಾಲಿಕ್ ಆಕ್ರೋಶ ವ್ಯಕ್ತಪಡಿಸಿದರು.

ಸೋಮವಾರ ಸರ್ಕಿಟ್ ಹೌಸ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸರು ಅಫಜಲ್‌ಖಾನ್ ಹಾಗೂ ಶಾಹೀದ್ ಶಿಖಾನ್ ಫೋಟೋ ಅಳವಡಿಸಲು ವಿರೋಧ ವ್ಯಕ್ತಪಡಿಸಿದ್ದಾರೆ. ಭಾನು ಮುಸ್ತಾಕ್ ಚಪ್ಪಲಿ ಧರಿಸಿಕೊಂಡೇ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿರುವುದು ಅಸಭ್ಯ ಮತ್ತು ಅವಮಾನಕರ ಸಂಗತಿ ಎಂದು ಕೆಂಡ ಕಾರಿದರು.



ಚಪ್ಪಲಿ ತೆಗೆದು ನಮನ ಸಲ್ಲಿಸಿ ಎಂದು ಕೆಲವರು ಹೇಳಿದಾಗ ಚಪ್ಪಲಿ ನಮ್ಮ ಮನೆ ದೇವರು ಎಂದು ಹೇಳಿರುವುದು ಇನ್ನಷ್ಟು ಆಕ್ರೋಶಕ್ಕೆ ಕಾರಣವಾಗಿದೆ. ಚಪ್ಪಲಿ ನಿಮ್ಮ ಮನೆಯ ದೇವರಾಗಿದ್ದರೆ, ಅದನ್ನು ಕೊರಳಿಗೆ, ತಲೆಗೆ ಹಾಕಿಕೊಳ್ಳಿ ಇದು ದಲಿತ ಸಮುದಾಯಕ್ಕೂ, ಅಂಬೇಡ್ಕರ್ ಅವರಿಗೆ ಮಾತ್ರ ಮಾಡಿದ ಅವಮಾನವಲ್ಲ ಇಡೀ ಹಿಂದೂ ಸಮಾಜಕ್ಕೆ ಮಾಡಿದ ಅವಮಾನ. ಭಾನು ಮುಸ್ತಾಕ್ ಕೂಡಲೇ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ದಸರಾಕಾರ್ಯಕ್ರಮದಉದ್ಘಾಟನೆಗೆಕಾಂಗ್ರೆಸ್ ಸರ್ಕಾರ ಅವಕಾಶ ನೀಡಿರುವುದರಿಂದಲೇ ಇಂತಹ ಧೈರ್ಯ ಬಂದಿದೆ. ಇಂತವರಿಗೆ ಸರ್ಕಾರ ಅವಕಾಶ ಕೊಟ್ಟಿದಕ್ಕೆ ನಾಚಿಕೆಯಾಗಬೇಕು. ಕೂಡಲೇ ಕ್ಷಮೆ ಕೇಳಬೇಕು ಇಲ್ಲವಾದಲ್ಲಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ದಾವಣಗೆರೆ ಉಪಚುನಾವಣೆಯಲ್ಲಿ ಮುಸ್ಲಿಂ ಸಮಾಜಕ್ಕೆ ಯಾವುದೇ ಟಿಕೆಟ್ ಕೊಡಬಾರದು. ಒಂದು ವೇಳೆ ನೀಡಿದರೆ ಶ್ರೀರಾಮ್ ಸೇನೆ ಬಂದು ಸೋಲಿಸುತ್ತದೆ ಎಂದರು.

ಕಡಲೆಕಾಳು ರಾಶಿ ಬೆಂಕಿಗಾಹುತಿ

ರಾಣೇಬೆನ್ನೂರ: ಒಕ್ಕಲಿಗೆ ಕೂಡಿಟ್ಟಿದ್ದ ಕಡಲೆಕಾಳು ಗಿಡದ ರಾಶಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ ಪರಿಣಾಮ ಕಡಲೆಕಾಳು ಗಿಡದ ರಾಶಿ ಸಂಪೂರ್ಣ ಸುಟ್ಟು ಕರಕಲಾದ ಘಟನೆ ತಾಲೂಕಿನ ಚೌಡಯ್ಯದಾನಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಧು ದೇವೇಂದ್ರಪ್ಪ ಮಡಿವಾಳರ ಎಂಬ ರೈತನಿಗೆ ಸೇರಿದ ಕಡಲೆಕಾಳು ರಾಶಿ ಇದಾಗಿದ್ದು, ಈತನು ನಾಲ್ಕು ಎಕರೆ ಜಮೀನಿನಲ್ಲಿ ಕಡಲೆಕಾಳು ಬೆಳೆಯನ್ನು ಬೆಳೆದಿದ್ದನು. ಬೆಳೆ ಫಸಲು ಬಂದ ಪರಿಣಾಮ ಕೂಲಿ ಆಳುಗಳನ್ನು ಹಚ್ಚಿಕಡಲೆಗಿಡಗಳನ್ನು ಕೀಳಿಸಿ ಯಂತ್ರದ ಮೂಲಕ ಕಾಳುಗಳನ್ನು ಬೇರ್ಪಡಿಸಲು ಒಂದೆಡೆ ರಾಶಿಯಾಗಿ ಜಮೀನಿನಲ್ಲಿ ಸಂಗ್ರಹಿಸಿಟ್ಟಿದ್ದನು. ಮನೆಗೆ ಹೋಗಿ ಬಳಗ್ಗೆ ಬಂದು ನೋಡಿದಾಗ ದುಷ್ಕರ್ಮಿಗಳು ರಾಶಿಗೆ ಬೆಂಕಿ ಹಚ್ಚಿದ್ದಾರೆ.ಅಂದಾಜು ಲಕ್ಷಕ್ಕೂ ಅಧಿಕ ಮೌಲ್ಯದ ಕಡಲೆ ಹಾಗೂ ಬಿಳಿಜೋಳದ ಬಣವೆಯೂ ಸಹ ಸಂಪೂರ್ಣ ಸುಟ್ಟು ಕರಕಲಾಗಿದೆ. ಈ ಬಗ್ಗೆ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



IN THE COURT OF PRINCIPAL CIVIL JUDGE AND J.M.F.C. AT BALLARI
Crl.M.C. 192/2026

PETITIONERS:Smt. Yankamma D/o Yamunamma, Aged about 48 years.R/at 1st Ward, Ambedkar Colony. Emmiganur Village, Kampli Taluk. Ballari District.
... Petitioner

V/s

The Tahasildar-cum-Registrar of Births and Deaths, Kampli Taluk, Ballari District.
Respondent

TO WHOMSOEVER IT MAY CONCERN
Whereas the above named Petitioner has filed an application under Section 13(3) of the Registration of Births and Deaths Act, 1969, seeking registration of the delayed deaths of: Smt. Yamunamma W/o Talavar Pakkirappa, who died on 07/03/2016 at Emmiganur Village, Kampli Taluk, Ballari District; and Sri. Talavar Pakkirappa S/o Suguru Mareppa, who died on 06/08/2000 at Emmiganur Village, Kampli Taluk, Ballari District and seeking a direction to the Respondent to register the said deaths and issue Death Certificates.
Take notice that if anybody has any objection or claim against issuance of such direction to the Respondent for registration of the date of deaths of Smt. Yamunamma W/o Talavar Pakkirappa, who died on 07/03/2016 at Emmiganur Village, Kampli Taluk, Ballari District; and Sri.Talavar Pakkirappa S/o Suguru Mareppa, who died on 06/08/2000 at Emmiganur Village, Kampli Taluk, Ballari District
They are required to appear before this Court on 10th day of April - 2026 at 11.00 A.M and to produce on the said day all the documents in your possession or power upon which you based in your defense or claim.
Take notice that in default of any objections or claim on the day mentioned above the petition will be heard and determined in accordance with law.
Given under my hand and the seal of the Court, on this 16th day of March- 2026
By order of the court.
Chief Ministerial officer
Hon'ble P.C.J & J.M.F.C. Court Ballari.
Kademane Peerbasha
Advocate. Ballari

IN THE COURT OF THE HON'BLE CIVIL JUDGE AND J.M.F.C. AT KUDLIGI
Crl. Misc. No. 1782/2025

Between:1.Yekanthamma wife of late Anjinappa, aged about 62 years,
2. Smt. Manjamma D/o late Anjinappa, aged about 45 years,
3.Smt. Rekhamma D/o late Anjinappa, aged about 43 years,
4.Smt. Sakamma D/o late Anjinappa, wife of late Ganganna aged about 41 years,
5.Lakshmi D/o late Anjinappa, wife of late Chandakumara aged about 43 years,
6.Basavaraja S/o late Anjinappa, aged about 25 years, 7.Hanumesha son of late Anjinappa, aged about 23 years
All are Hindu, agriculturist, R/o Sanklapura Village, in Kudligi Taluk, Vijayangara district
....Petitioner

And

The Tahasildar Taluk Office, KUDLIGI
.....Respondent

SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.
Whereas the above petitioners have instituted above petition to get the death certificate of her deceased No-1's husband P-2 to 7's father by Name late Anjinappa s/o late Bolagatte Obaiah was died on 10.01.2001 at Sanklapura village in Kudligi Taluk and Vijayanagara District, On the file of the civil Judge & JMFC at Kudligi. The Tahasildar, Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 02.04.2026 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 16.03.2026
By Order of the court
Chief Ministerial Officer
Civil Judge (J.D) Court at Kudligi
Sri. M.Nagaraja
Advocate, Kudligi

IN THE COURT OF PRINCIPAL CIVIL JUDGE AND J.M.F.C. AT BALLARI
Crl.M.C. 217/2026

PETITIONERS:Sri. H. Rajappa and another .... Petitioners

V/s.

The Tahasildar-cum-Registrar of Births and Deaths, Taluk Office. Kampli ..Respondent
TO WHOMSOEVER IT MAY CONCERN
Whereas the above named Petitioners have filed an application under Section 13(3) of the Registration of Births and Deaths Act, 1969 for the registration of the date of death of Petitioner No. 1 mother and Petitioner No.2 wife by name SMT. SHANKRAMMA W/O SANNA BASAPPA, who died on 06/09/1980 at Emmiganur Village, Kampli Taluk, Ballari District, seeking direction of this Hon'ble Court to direct the Respondent to register the said date of death,
Take notice that if anybody having any objection or claim against issuing direction to the Respondent to register the date of death of SMT. SHANKRAMMA W/O SANNA BASAPPA, who died on 06/09/1980,
You are required to appear before this Court on 10th day of April - 2026 at 11.00 A.M and to produce on the said day all the documents in your possession or power upon which you based in your defense or claim.
Take further notice that in default of any objections or claim on the day mentioned above the petition will be heard and determined in accordance with law.
Given under my hand and the seal of the Court, on this 16th day of March- 2026
By order of the court.
Chief Ministerial officer
Hon'ble P.C.J & J.M.F.C. Court Ballari.
Kademane Peerbasha
Advocate. Ballari

IN THE COURT OF THE CIVIL JUDGE AND J.M.F.C AT: HAGARIBOMMANAHALLI.
O.S.No.158/2024

BETWEEN:-Smt. Rathni Bai & others
....Plaintiffs

V/s

Smt.Lakshmi Swamy and another
....Defendants

To,
The Defendant No.1:-Smt.Lakshmi Swamy W/o N.Subhashchandra Bosh, aged about 50 years, Housewife, R/o H.No.119/15, 3/16th ward, near KSPL School Basaveshwara Badavane Hosapete, in Hosapete Taluk, Vijayanagara district.
SUIT SUMMONS TO DEFENDANT No.1
Whereas the above named plaintiff No.1 Smt. Rathni Bai W/o Banakar Chandra Naik, Hindu, aged about 50 years, R/o Marabbihalu Thanda, in H.B.Halli Taluk, Vijayanagara district, has filed the suit against the you as defendants for declaring the sale deed executed by the defendant No.1 and 1/6th share in respect of the suit schedule property.
Therefore, take notice that the above case is posted on 21/04/2026 in the above court and you are directed to appear In person or through your counsel duly instructed On the above date without fail. Failing your appearance on the said date, and time the matter will be heard and determined ex-parte.
Given under my hand and seal of this Hon'ble court 09/03/2026.
By order of this court
Chief ministerial officer
Civil Judge & J.M.F.C Court H.B.Halli
SRI.LAKYA NAIK
Advocate, H.B.Halli

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

Notification No: KHB/AEF/STP/Suryanagara 4th Ph/ KHB/2025-26/ SE0355 Dated: 12.03.2026

ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ಮಿಸಲು ಉದ್ದೇಶಿಸಿರುವ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ/ಕಸಬಾ ಹೋಬಳಿಯ ಸೂರ್ಯನಗರ 4ನೇ ಹಂತದ ಕರ್ನಾಟಕ ಗೃಹ ಮಂಡಳಿ ಬಡಾವಣೆಯ ಬ್ಲಾಕ್-1 ರಲ್ಲಿ 20 MLD ಸಾಮರ್ಥ್ಯದ STP ಮತ್ತು ಬ್ಲಾಕ್ 12 ರಲ್ಲಿ 5 MLD ಸಾಮರ್ಥ್ಯದ ನಿರ್ಮಾಣ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಟೆಂಡರ್ ಅನ್ನು ಕರೆಯಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 25.03.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ./6284/ಆಕಾರ್/2025-26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-1/ಟೆಂಡರ/2025-26/8611 ದಿನಾಂಕ: 13/03/2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ ಅಡಿ 1 ಕಾಮಗಾರಿ ಇದ್ದು, ಗುತ್ತಿಗೆ ಇಟ್ಟ ಮೊತ್ತ ರೂ. 57.80 ಲಕ್ಷ ಇರುವ ಕಾಮಗಾರಿಗೆ KPP Portal ಮುಖಾಂತರ ನೊಂದಾಯಿತ ಕೆ.ಪಿ.ಡಬ್ಲ್ಯೂ.ಡಿ. ಎಂ.ಪ್ಯಾನಲ್ಡ/ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ Consultancy ರಿಂದ Services ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:20-03-2026 ರಂದು (11.00 ಗಂಟೆಗೆ),2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:23-03-2026 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ :25-03-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):27-03-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗ ದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-2086/KSMCA/2025-26

ನಗರಸಭಾ ಕಾರ್ಯಾಲಯ, ಹೂಟಗಳ್ಳಿ
ಎಸ್.ಆರ್.ಎಸ್.ಸ್ಟೇಷನ್ ಎದುರು, ಹೈಟೆನ್ಷನ್, ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ-570018
ಸಹಾಯವಾಣಿ ಸಂಖ್ಯೆ : 0821-2001737, E-Mail: ka.hootagalli.cmc@gmail.com

ಸಂಖ್ಯೆ: ನಸಹೂ/ತಾಂತ್ರಿಕ/ಟೆಂಡರ್ ಪ್ರಕಟಣೆ/ಸಿ.ಆರ್.18/2025-26 ದಿನಾಂಕ: 13.03.2026

ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ-04 ನಿಯಮದಂತೆ ಕೆ.ಪಿ.ಪಿ. ಪೋರ್ಟಲ್ ಮೂಲಕ ಕಾಮಗಾರಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಸಿವಿಲ್ ಲೋಕೋಪಯೋಗಿ ಇಲಾಖೆಯ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು https://kppp.karnataka.gov.in ಇ-ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಅರ್ಹ ಗುತ್ತಿಗೆದಾರರಿಂದ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 30.03.2026 ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:01.04.2026 ಬೆಳಗ್ಗೆ 11:00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ. ಪೂರ್ಣಗೊಂಡ ಕಾಮಗಾರಿಗೆ ನಗರಸಭೆ ನಿಧಿಯ ಅನುದಾನಕ್ಕೆ ಅನುಗುಣವಾಗಿ ಬಿಲ್ ಪಾವತಿಸಲಾಗುವುದು.

ಕ್ರ. ಸಂ.	ಕಾಮಗಾರಿಗಳ ಇಂಡೆಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)
01	DMA/2025-26/RD/WORK_INDENT56215	200.00	2,54,000/-

ಸಹಿ/- ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

ವಾಸಾಸಂಇ/ಮೈಸೂರು/ಶಿರಡಿಸಾಯಿ/1841/2025-26

(ಲೋಕೋಪಯೋಗಿ ಇಲಾಖೆ)
ಧಾರವಾಡ ವಿಭಾಗ, ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ಕ್ರಸಂ: ಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,3,4,5/2025-26/7151 ದಿನಾಂಕ: 13.03.2026

ಟೆಂಡರ್ ಪ್ರಕಟಣೆ
I.F.T-KW-1, 2, 3, 4
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-1,2,3,4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. (**kppp.karnataka.gov.in**) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ರೂ. 8.00 ಲಕ್ಷಗಳಿಂದ ಗರಿಷ್ಠ ರೂ. 500.00 ಲೆಕ್ಕಶೀರ್ಷಿಕೆ: 2025-26ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ, 2216-07-053-0-01-200 ಲೋಕೋಪಯೋಗಿ ವಸತಿ ಹಾಗೂ ನ್ಯಾಯಾಂಗ ವಸತಿ ಗೃಹಗಳ ದುರಸ್ತಿ/ನಿರ್ವಹಣೆ, 4059-80-051-0-60-422 ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ-ಪರಿಶಿಷ್ಟ ಜಾತಿ ಉಪಯೋಜನೆ, 3054-03-337-0-05-200 ರಾಜ್ಯ ಹೆದ್ದಾರಿ ನಿರ್ವಹಣೆ , 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 3054-04-337-1-10-200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಕಾಮಗಾರಿಗಳು & 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ಯೋಜನೆಯಡಿ ಟೆಂಡರ ಅಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಸಾಮಾನ್ಯ: **1)** PWD/2025-26/RD/WORK_INDENT33915, **2)** PWD/2025-26/RD/WORK_INDENT34417, **3)** PWD/2025-26/RD/WORK_INDENT33999, **4)** PWD/2025-26/RD/WORK_INDENT33899, **5)** PWD/2025-26/RD/WORK_INDENT33833, **6)** PWD/2025-26/RD/WORK_INDENT34043, **7)** PWD/2025-26/RD/WORK_INDENT33954, **8)** PWD/2025-26/RD/WORK_INDENT33900, **9)** PWD/2025-26/RD/WORK_INDENT33895, **10)** PWD/2025-26/RD/WORK_INDENT33958, **11)** PWD/2025-26/RD/WORK_INDENT34054, **12)** PWD/2025-26/BR/WORK_INDENT34256, **13)** PWD/2025-26/RD/WORK_INDENT31525, **14)** PWD/2025-26/RD/WORK_INDENT34077, **15)** PWD/2025-26/RD/WORK_INDENT34137, **16)** PWD/2025-26/RD/WORK_INDENT34356, **17)** PWD/2025-26/RD/WORK_INDENT34238, **18)** PWD/2025-26/BD/WORK_INDENT34412, **19)** PWD/2024-25/SE0244, **ಪರಿಶಿಷ್ಟ ಜಾತಿ:** 20) PWD/2025-26/RD/WORK_INDENT34243 **ಪ್ರವರ್ಗ-2ಎ:** 21) PWD/2025-26/RD/WORK_INDENT34382

Calander of Events: 1) ಪ್ರೀಬಿಡ್ / ಆಕ್ಷೇಪಣೆಯನ್ನು /ಸಲ್ಲಿಸುವ ಕೊನೆಯ ದಿನಾಂಕ: 25.03.2026 (ಬೆಳಿಗ್ಗೆ 12:30 ಗಂಟೆಯವರೆಗೆ). 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 26.03.2026 (ಸಾಯಂಕಾಲ 04:00 ಗಂಟೆಯವರೆಗೆ). 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.03.2026 (ಸಾಯಂಕಾಲ 04:30 ಗಂಟೆಯ ನಂತರ). 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.03.2026(ಸಾಯಂಕಾಲ 04:30 ಗಂಟೆಯ ನಂತರ)

ಕಾಮಗಾರಿಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ **http://www.kppp.karnataka.gov.in** ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಛೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ,
ಧಾರವಾಡ ವಿಭಾಗ, ಧಾರವಾಡ.

ವಾಸಾಸಂಇ/ಧಾರವಾಡ/ದಿಶಾ/1357/2025-26

ಕ್ರಿಮಿನಲ್ ಮಿಸ್ ನಂ: 32/2026
ಮಾನ್ಯ ಹಿರಿಯ ದಿವಾಣಿ ವ ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ ಇವರ ನ್ಯಾಯಾಲಯಕ್ಕೆ
ಅರ್ಜಿದಾರರು:ಶ್ರೀ ಧರಮಪ್ಪ ತಂದೆ ಹನುಮಂತಪ್ಪ ವಾಲ್ಮೀಕಿ ವಯಾ॥ 28 ವರ್ಷ, ಉದ್ಯೋಗ: ಕೂಲಿ ಸಾ॥ ಹಿರೇಮಲ್ಲೂರ ತಾ॥ ಶಿಗ್ಗಾಂವ ಜಿ॥ ಹಾವೇರಿ
ವಿರುದ್ಧ
ಎದುರುಗಾರರು: ಮೆ॥ ತಹಶೀಲ್ದಾರ ಶಿಗ್ಗಾಂವ ಜನನ ವ, ಮರಣ ನೋಂದಣಿ ಅಧಿಕಾರಿಗಳು ಶಿಗ್ಗಾಂವ, ತಾ॥ ಶಿಗ್ಗಾಂವ ಜಿ॥ ಹಾವೇರಿ
ಪತ್ರಿಕಾ ಪ್ರಕಟಣೆ
ಇದರಲ್ಲಿ ಅರ್ಜಿದಾರನ ಅಜ್ಜಿಯಾದ ಮಲ್ಲವ್ವ ಕೋಂ ಧರಮಪ್ಪ ವಾಲ್ಮೀಕಿ ಇವರು ದಿನಾಂಕ: 23-07-2016 ರಂದು ಹಾವೇರಿ ಜಿಲ್ಲಾ ಶಿಗ್ಗಾಂವ ತಾಲೂಕ ಶಿಗ್ಗಾಂವ ಹಿರೇಮಲ್ಲೂರ ಗ್ರಾಮದಲ್ಲಿ ಮೃತಿ ಆಗಿರುತ್ತಾರೆ. ಸದರಿ ಮೃತಿಗೆ ನಾನು ವಾರಸುದಾರ ಇದ್ದು, ಅವರ ವಾರಸಾ ಪಡೆಯಲು ಮೃತಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಈ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು, ಅದು ದಿನಾಂಕ:16-04-2026 ರಂದು ಮುದ್ದತ್ತು ನೇಮಿಸಿದ್ದು ಇದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ಈ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.
ನ್ಯಾಯಾಲಯದ ಆದೇಶ ಹಾಗೂ ಮೊಹರನೊಂದಿಗೆ ಹೊರಡಿಸಲಾಗಿತು.
ಶಿಗ್ಗಾಂವ
ದಿನಾಂಕ: 16-03-2026
ಶಿರಸ್ತೇದಾರ
ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ
ಅರ್ಜಿದಾರರ ಪರ ವಕೀಲರು
ಶ್ರೀ ಬಿ.ಎಸ್.ಜೇಕಿನಕಟ್ಟಿ ವಕೀಲರು, ಶಿಗ್ಗಾಂವ

ಸಾರ್ವಜನಿಕ ನೋಟಿಸು

ಶ್ರೀ ವಿಜಯಮಹಾಂತೇಶ ಬಸವರಾಜ ಹಿಂಡಿಹೋಳಿ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಸಾರ್ವಜನಿಕ ನೋಟಿಸು ಏನೆಂದರೆ ಬೆಳಗಾವಿ ಜಿಲ್ಲೆ ರಾಮದುರ್ಗ ಸಬ್ ರಜಿಸ್ಟರ್ ಹದ್ದಿಯ ಪೈಕಿ ರಾಮದುರ್ಗ ಪುರಸಭೆ ವ್ಯಾಪ್ತಿಯ ಸರಸ್ವತಿ ನಗರದ ಶ್ರೀಮತಿ ಶಾಂತಾಬಾಯಿ ಜೀವಾಜಿ ಕುಲಕರ್ಣಿ ಇವರಿಂದ ಖರೀದಿಸಿದ ಸಿಟಿಎಸ್ ನಂ:3342/ಎ1/ಎ2ಗೆ ಸಂಬಂಧ ಪಟ್ಟ 30-03-2007ರ ದಸ್ತಾವೇಜ್ ನಂ.SRO/.2393/2006-07 ನೊಂದಣಿಯಾಗಿದ್ದ ಅಸಲಿ ಖರೀದಿ ಪತ್ರಗಳು ದಿ. 15-02-2026 ರಂದು ರಾಮದುರ್ಗದ ಮನೆಯಿಂದ ಅಂಗಡಿಗೆ ಬರುವಾಗ ನಜರಚೂಕಿನಿಂದ ಕಳೆದುಕೊಂಡಿರುತ್ತಾರೆ. ಸದರಿ ಖರೀದಿ ಪತ್ರಗಳು ಯಾವದೇ ಸಂಘ ಸಂಸ್ಥೆಗಳಲ್ಲಿ ಅಡಮಾನವಾಗಿ ಇಟ್ಟಿರುವದಿಲ್ಲ. ಒಂದು ವೇಳೆ ಯಾರಿಗಾದರೂ ಸಿಕ್ಕಿದಲ್ಲಿ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಈ ನೋಟಸು ಪ್ರಕಟವಾದ 07 ದಿನಗಳ ಒಳಗಾಗಿ ಸಲ್ಲಿಸಬೇಕೆಂದು ಕೊಟ್ಟ ಸಾರ್ವಜನಿಕ ನೋಟಿಸು

ಸಹಿ/-
ರಾಜು ಎಸ್.ಕೋಪರ್ಡ, ವಕೀಲರು,
ಮನೆ.83 ರಾಧಾಪೂರ ಪೇಠ ರಾಮದುರ್ಗ
ಮೊಬೈಲ್:9448164495
ಸ್ಥಳ: ರಾಮದುರ್ಗ ದಿನಾಂಕ:10-3-2026

ಕ್ರಿ ಮಿ. ನಂ .397/2026
ರಾಣೇಬೆನ್ನೂರಿನ ಪ್ರಿ ಸಿನಿಯರ್ ಸಿವಿಲ್ ಜಡ್ಜ್ ವ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು :1. ಶ್ರೀ ಮೂರ್ತಿ ತಂದೆ ರಾಮಪ್ಪ ಲಮಾಣಿ ಹಾಗೂ ಇತರರು
ವಿರುದ್ಧ
ಎದುರುಗಾರರು : ಜನನ-ಮರಣ ನೋಂದಣಾಧಿಕಾರಿಗಳು ಉಪ-ತಹಶೀಲ್ದಾರ, ನಾಡಕಛೇರಿ, ಮೇಡ್ಲೇರಿ ತಾ: ರಾಣೇಬೆನ್ನೂರು, ಜಿಲ್ಲಾ : ಹಾವೇರಿ,
ಇಸ್ತಿಯಾರ ನಾಮಾ
ಇದರಲ್ಲಿ ನಾನು ನಾನು ಶ್ರೀ ಮೂರ್ತಿ ತಂದೆ ರಾಮಪ್ಪ ಲಮಾಣಿ ವಯಾ: 41 ವರ್ಷ, ಉ:ಕೂಲಿ ಕೆಲಸ, ಸಾ॥ ಅಂಕಸಾಪುರ, ತಾ॥ ರಾಣೇಬೆನ್ನೂರು ಜಿಲ್ಲಾ: ಹಾವೇರಿ 1 ರಿಂದ 3ನೇ ಅರ್ಜಿದಾರರ ತಾಯಿಯಾದ ಶ್ರೀಮತಿ ಕಾಳವ್ವ ಕೋಂ. ರಾಮಪ್ಪ ಲಮಾಣಿ (SMT KALAVVA W/O RAMAPPA LAMANI) ಇವರು ದಿನಾಂಕ: 20-07-2018ರಂದು ಅಂಕಸಾಪುರ ಗ್ರಾಮದಲ್ಲಿ ಮರಣ ಹೊಂದಿರುತ್ತಾಳೆ. ಸದರ ಅರ್ಜಿಯಲ್ಲಿ 1 ರಿಂದ 3ನೇದ್ದವರ ತಾಯಿಯ ಮರಣ ದಿನಾಂಕವನ್ನು ಎದುರುಗಾರರ ಕಛೇರಿಯ ಜನನ/ಮರಣ ನೋಂದಣಿ ದಾಖಲಾತಿಯಲ್ಲಿನೋಂದಣಿ ಮಾಡಿಸಿಕೊಳ್ಳುವುದು ಅತೀ ಅವಶ್ಯ ಇದ್ದು, ಇದರ ಬಗ್ಗೆ ಸಾರ್ವಜನಿಕರ ಯಾವುದೇ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ 18-4-26 ರಂದು ಬೆಳಿಗ್ಗೆ 11-00 ಗಂಟೆಗೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು ತಪ್ಪಿದಲ್ಲಿ, ಮಾನ್ಯ ನ್ಯಾಯಾಲಯವವರು ಮುಂದಿನ ಆದೇಶವನ್ನು ಮಡುತ್ತಾರೆ ಅಂತಾ ಕೊಟ್ಟ ಇಸ್ತಿಯಾರ ನಾಮಾ.
ಈ ದಿನ 11-3-2026ರಂದು ನ್ಯಾಯಾಲಯದವರು ಮೊಹರಿನೊಂದಿಗೆ ಕೊಡಲ್ಪಟ್ಟಿರುತ್ತದೆ.
ರಾಣೇಬೆನ್ನೂರು
ದಿ : 3-3-2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶವರವರ ನ್ಯಾಯಾಲಯ ರಾಣೇಬೆನ್ನೂರು
ಸಹಿ/-K. K. lamani
ಅರ್ಜಿದಾರರ ಪರ ವಕೀಲರು ರಾಣೇಬೆನ್ನೂರ

ಕ್ರಿ. ಮಿ. ನಂ. 38/2026
ಮಾನ್ಯ 2ನೇ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ ಹುಬ್ಬಳ್ಳಿ
ಅರ್ಜಿದಾರರು : ಶ್ರೀ ಮಲ್ಲಪ್ಪ ತಂದೆ ಗಂಗಪ್ಪ ಹೊಂಡದ ಹಾಗೂ ಇತರರು
ವಿರುದ್ಧ
ಎದುರುಗಾರರು : ಮಾನ್ಯ ತಹಶೀಲ್ದಾರರು, ಗ್ರಾಮೀಣ ತಹಶೀಲ್ದಾರ ಕಾರ್ಯಾಲಯ, ಜನನ ವ ಮರಣ ನೋಂದಣಾಧಿಕಾರಿಗಳು, ಹುಬ್ಬಳ್ಳಿ, ತಾ॥ ಹುಬ್ಬಳ್ಳಿ, ಜಿ॥ ಧಾರವಾಡ.
ನೋಟಿಸ್
ಈ ಮೂಲಕ ನೋಟಿಸು ಏನೆಂದರೆ, ಅರ್ಜಿದಾರರ ತಾಯಿಯಾದ ಶ್ರೀಮತಿ ನೀಲವ್ವ ಕೋಂ. ಗಂಗಪ್ಪ ಹೊಂಡದ" ಇವರು ದಿ: 23-06-2012 ರಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕ ನೂಲ್ವಿ ಗ್ರಾಮದ ಗಂಗಾಧರ ನಗರದ ಮನೆಯಲ್ಲಿ ಮರಣ ಹೊಂದಿರುತ್ತಾರೆ ಅಂತಾ ಕೋರಿ ಅರ್ಜಿ ಸಲ್ಲಿಸಿದ್ದು ಆ ಪ್ರಕಾರ ಮರಣ ಪ್ರಮಾಣ ಪತ್ರ ಪಡೆಯಲು ಮಾನ್ಯ ನ್ಯಾಯಾಲಯಕ್ಕೆ ಕೋರಿದ್ದು, ಸದರೀ ಮರಣ ದಾಖಲಾತಿಯ ಬಗ್ಗೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಸಂಬಂಧ ತಂಟೆ ವ ತಕರಾರು ವಗೈರೆ ಇದ್ದಲ್ಲಿ ಅಂತವರ ಹಾಜರಾತಿಗಾಗಿ ದಿ:17-04-2026 ರಂದು ಬೆಳಿಗ್ಗೆ 11-00 ಗಂಟೆಗೆ ಈ ನ್ಯಾಯಾಲಯದಲ್ಲಿ ಮುದ್ದತ್ತು ನೇಮಿಸಿದ್ದು ಇರುತ್ತದೆ.
ಕಾರಣ ಸದರೀ ಹಿತಾಸಕ್ತಿ ಹಾಗೂ ತಕರಾರು ಇರುವವರು ತಾವಾಗಲೀ ಅಥವಾ ತಮ್ಮಿಂದ ಮಾಹಿತಿ ವ ಹಕ್ಕು ಪಡೆದ ವಕೀಲರ ಮೂಲಕವಾಗಲೀ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರು ಹಾಜರಿಯಲ್ಲಿ ನಿರ್ಣಯಿಸಲಾಗುವುದು.
ನನ್ನ ಸಹಿಯೊಂದಿಗೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 10-03-2026 ರಂದು ಇದನ್ನು ಕೊಡಲಾಗಿದೆ.
ಹುಬ್ಬಳ್ಳಿ (ಕೋರ್ಟ ಮೊಹರು)
ದಿ: 10-03-2026
ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು
ಮಾನ್ಯ 2ನೇ ಜೆ.ಎಮ್.ಎಫ್.ಸಿ.,
ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ
ಶ್ರೀಮತಿ ಎಸ್.ಜಿ.ವಂದಕುದರಿ
ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ

IN THE COURT OF THE HON'BLE CIVIL JUDGE AND J.M.F.C. AT KUDLIGI
Crl. Misc. No. 1783/2025

Between:1.Srininvasa son of late Bolagatte Obaiah, aged about 50 years,
2. Smt. Hanumakka D/o late Bolagatte Obaiah, aged about 48 years,
3.Smt. Shakunthalamma D/o late Bolagatte Obaiah, aged about 46 years,
4.Smt. Yekanthamma wife of late Anjinappa, aged about 62 years,
5.Basavaraja S/o late Anjinappa, aged about 25 years,
6. All are Hindu, agriculturist, R/o Sanklapura Village, in Kudligi Taluk, Vijayangara district
.... Petitioner

And

The Tahasildar Taluk Office, KUDLIGI
.....Respondent

SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.
Whereas the above petitioners have instituted above petition to get the death certificate of her deceased No-1's husband P-2 to 7's father by Name late Bolagatte Obaiah s/o late Bheemappa was died on 23.02.2013 at Sanklapura village in Kudligi Taluk and Vijayanagara District, On the file of the civil Judge & JMFC at Kudligi. The Tahasildar, Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 02.04.2026 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 16.03.2026
By Order of the court
Chief Ministerial Officer
Civil Judge (J.D) Court at Kudligi
Sri. M.Nagaraja
Advocate, Kudligi

IN THE COURT OF THE PRINCIPAL CIVIL JUDGE AND J.M.F.C. AT BALLARI
Crl. Misc. No. 162/2026

Between:Shekshavali S/o Peersab & Others .....Petitioners

VERSUS

The Tahasildar-cum-Registrar of Births and Deaths, Kampli Taluk, Ballari District.
...Respondent

TO WHOMSOEVER IT MAY CONCERN
Whereas the above named Petitioners have filed an application under Section 13(3) of the Registration of Births and Deaths Act, 1969 for registration of the date of death of their relative by name: Sri Sheksab S/o Peeranna, who died on 10/10/2001 at Emmiganur Village, Kampli Taluk, Ballari District, seeking direction of this Hon'ble Court to direct the Respondent to register the date of death of Sri Sheksab S/o Peeranna, who died on 10/10/2001.
Take notice that if anybody having any objection or claim against issuing direction to the Respondent to register the date of death of Sri Sheksab S/o Peeranna, who died on 10/10/2001, you are required to appear before this Court on the 02nd day of April 2026 at 11:00 A.M. and to produce on the said day all documents in your possession or power upon which you base your objection or claim.
Take notice that in default of any objections or claim on the day mentioned above the petition will be heard and determined in accordance with law.
Given under my hand and the seal of this Court on this 09th day of March 2026.
By Order Of the Court
Shirestedar
Principal Civil Judge & JMFC Ballari
Moulasab
Advocate, Ballari

IN THE COURT OF THE PRINCIPAL CIVIL JUDGE AND J.M.F.C. AT BALLARI
Crl. Misc. No. 161/2026

Between:Shekshavali S/o Peersab & Others .....Petitioners
VERSUS
The Tahasildar-cum-Registrar of Births and Deaths, Kampli Taluk, Ballari District.
...Respondent

TO WHOMSOEVER IT MAY CONCERN
Whereas the above named Petitioners have filed the above petition under Section 13(3) of the Registration of Births and Deaths Act, 1969 seeking direction to the Respondent to register the death of Sri, Husensab S/o Late Peeranna, who died on 16/02/2016 at Emmiganur Village, Kampli Taluk, Ballari District. The Petitioners have stated that the said death was not registered within the prescribed period due to ignorance of statutory requirements and that registration can now be made only pursuant to an order of this Hon'ble Court.
Take notice that any person having objection or claim against issuing direction to the Respondent for registration of the death of Sri Husensab S/o Late Peeranna. who died on 16/02/2016, shall appear before this Court on the 02nd day of April 2026 at 11:00 A.M. and file objections, if any, along with relevant documents.
Take further notice that in default of any objection on the date mentioned above, the petition shall be heard and decided in accordance with law.
Given under my hand and the seal of this Court on this 09th day of March 2026.
By Order Of the Court
Shirestedar
Principal Civil Judge & JMFC Ballari
Moulasab
Advocate, Ballari

IN THE COURT OF THE CIVIL JUDGE AND J.M.F.C. AT KUDLIGI
Crl. Misc. No.2300/2025

Between:1. Smt. K.Ningamma D/o late Thindappa, aged about 70 years,
2.K.Basavaraja s/o late Thindappa, aged about 62 years,
3.K.Nagendrappa s/o late Thindappa, aged about60 years,
All are Hindu, agriculturist, R/o Chapparadahalli Village, Kottur Taluk, Vijayanagara district. .... Petitioners

And

The Tahasildar Taluk Office, Kottur
.... Respondent

SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.
Whereas the above petitioners have instituted above petition to get the death certificate of their deceased Father by Name late Thindappa s/o late Ningappa was died on 25.03.1998 at Chapparadahalli villagein Kottur Taluk, and Vijayanagara district On the file of the civil Judge & JMFC at Kudligi. The Tahasildar, Kottur is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 22/04/2026 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 16/03//2026
By Order of the court
Chief Ministerial Officer
Civil Judge (J.D) Court at Kudligi
Sri. M.Nagaraja
Advocate, Kudligi

ಕಿರುಸುದ್ದಿ

ರಾಷ್ಟ್ರಮಟ್ಟದ ವಾಲಿಬಾಲ್ ಸ್ಪರ್ಧೆಗೆ ಆಯ್ಕೆ



ನರೆಗಲ್: ಸ್ಥಳೀಯ ಕೊಡಿಕೊಪ್ಪದ ಚಂದ್ರಶೇಖರ ನಾಶಿಪುಡಿ ದೆಹಲಿಯಲ್ಲಿ ನಡೆಯುವ 2025-2026 ನೇ ಸಾಲಿನ ಸರ್ಕಾರಿ ನೌಕರರ ರಾಷ್ಟ್ರಮಟ್ಟದ ಅಖಿಲ ಭಾರತೀಯ ನಾಗರಿಕ ಸೇವಾ ವಾಲಿಬಾಲ್ ಸ್ಪರ್ಧೆಗೆ ಆಯ್ಕೆ ಆಗಿದ್ದಾರೆ. ಕೊಡಿಕೊಪ್ಪ-ನರೇಗಲ್ಲ ಗ್ರಾಮದ ಅಗ್ನಿಶಾಮಕ ಸಿಬ್ಬಂದಿಯಾಗಿ (ಗದಗ ಠಾಣೆ) ಕಾರ್ಯನಿರ್ವಹಿಸುತ್ತಿದ್ದು, ಮಾರ್ಚ್ 20ರಿಂದ ನಡೆಯಲಿರುವ ಸರ್ಕಾರಿ ನೌಕರರ ರಾಷ್ಟ್ರಮಟ್ಟದ ಅಖಿಲ ಭಾರತೀಯ ನಾಗರಿಕ ಸೇವಾ ವಾಲಿಬಾಲ್ ಕ್ರೀಡಾಕೂಟದಲ್ಲಿ ಕರ್ನಾಟಕ ವಾಲಿಬಾಲ್ ತಂಡದ ಪರವಾಗಿ ಪ್ರತಿನಿಧಿಸುತ್ತಿದ್ದಾರೆ.

ಅಪಘಾತ: ಮೂವರ ಸಾವು





ಚಿಕ್ಕೋಡಿ: ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ದರ್ಶನ ಮಾಡಿ ಗ್ರಾಮಕ್ಕೆ ಮರಳುತ್ತಿದ್ದ ತಾಲೂಕಿನ ಯಕ್ಸಂಬಾ ಪಟ್ಟಣದ ಮೂವರು, ಸೋಮವಾರ ಸಂಜೆ ನಡೆದ ಅಪಘಾತದಲ್ಲಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಯಕ್ಸಂಬಾ ಪಟ್ಟಣದ ನಿವಾಸಿಗಳಾದ ಅಜೀತ ಸಾತ್ವಾರ (28), ಗೌರವ ಶಹಾ (42), ಅಲಕಾ ಸಿಂಧೆ, (60) ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಆಂಧ್ರಪ್ರದೇಶ ರಾಜ್ಯದ ಮಾರಕಾಪೂರ ಜಿಲ್ಲೆಯ ಕಂಬಾಮಾ ಗ್ರಾಮದ ಬಳಿಯಲ್ಲಿ ಅಪಘಾತ ಸಂಭವಿಸಿದೆ. ಕ್ರೂಸರ್ ಹಾಗೂ ಲಾರಿ ನಡುವೆ ಮುಖಾಮುಖಿ ಡಿಕ್ಕಿಯಾಗಿದ್ದು, ಕ್ರೂಸರ್ ನಲ್ಲಿ ನಾಲ್ವರ ಸ್ಥಿತಿ ಗಂಭೀರವಾಗಿದೆ. 14 ಜನ ಕ್ರೂಸರ್‌ನಲ್ಲಿ ಪ್ರಯಾಣಿಸುತ್ತಿದ್ದರು. ಎಲ್ಲರೂ ಯಕ್ಸಂಬಾ ಪಟ್ಟಣದ ನಿವಾಸಿಗಳಾಗಿದ್ದಾರೆ.

ಸಾರಿಗೆ ಸಂಸ್ಥೆ ಬಸ್ ಹರಿದು ಮಹಿಳೆ ಸಾವು

ಸಿಂಧನೂರು: ನಗರದ ಬಸ್ ನಿಲ್ದಾಣದ ಪ್ರವೇಶ ದ್ವಾರದಲ್ಲಿ ಸಾರಿಗೆ ಸಂಸ್ಥೆಯ ಬಸ್ ಹರಿದು ಮಹಿಳೆಯೊಬ್ಬರು ಮೃತಪಟ್ಟ ಘಟನೆ ಸೋಮವಾರ ಮಧ್ಯಾಹ್ನ ನಡೆದಿದೆ.ಸಾರಿಗೆ ಸಂಸ್ಥೆಯ ಬಸ್ ಮಹಿಳೆಯ ತಲೆಮೇಲೆ ಹರಿದಿದ್ದರಿಂದ ಮಹಿಳೆಯ ತಲೆಬುರಡೆ, ಮೆದುಳಿನ ಭಾಗ ರಸ್ತೆಮೇಲೆ ಚೆಲ್ಲಾಪಿಲ್ಲಿಯಾದ ಭೀಕರ ದೃಶ್ಯ ಪ್ರತ್ಯಕ್ಷದರ್ಶಿಗಳ ಹೃದಯ ಕಲಕಿತು. ಬಸ್ ನಿಲ್ದಾಣದಲ್ಲಿ ಮೃತಪಟ್ಟಿರುವವರನ್ನು ಕಾರಟಗಿ ಪಟ್ಟಣದ ಬೇವಿನಾಳ ಗ್ರಾಮದ ದೊಡ್ಡ ಈರಮ್ಮ ಬಸಣ್ಣ ನಾಯಕ (38) ಎಂದು ಗುರುತಿಸಲಾಗಿದೆ. ರಾಯಚೂರಿನಿಂದ ಬಳ್ಳಾರಿಗೆ ಹೊರಟಿದ್ದ ರಾಯಚೂರು ಮೂರನೇ ಡಿಪೋಗೆ ಸೇರಿದ ಕೆಎ-36 ಎಫ್-1415 ಸಂಖ್ಯೆಯ ಬಸ್ ನಗರ ಬಸ್ ನಿಲ್ದಾಣಕ್ಕೆ ಪ್ರವೇಶಿಸುವ ವೇಳೆ ಮಹಿಳೆಯ ಮೇಲೆ ಹರಿದಿದೆ ಎಂದು ತಿಳಿದು ಬಂದಿದೆ. ಈ ಘಟನೆಯಲ್ಲಿ ಬಸ್ ಚಾಲಕನ ನಿರ್ಲಕ್ಷ್ಯ ಕಾರಣ ಎನ್ನಲಾಗಿದೆ.ಸ್ಥಳದಲ್ಲಿದ್ದ ಟ್ರಾಫಿಕ್ ಪಿಎಸ್ಐ ಚಂದ್ರಶೇಖರ ಹಿರೇಮಠ ಸೇರಿದಂತೆ ಸಂಚಾರಿ ಠಾಣೆಯ ಪೊಲೀಸರು ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ.ಈ ಕುರಿತು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟರ್ ಡಿಕ್ಕಿ : ವೃದ್ಧ ಸಾವು

ಭಟ್ಕಳ: ಎರಡು ದ್ವಿಚಕ್ರ ವಾಹನಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಓರ್ವ ಮೃತಪಟ್ಟ ಘಟನೆ ನವಾಯತ ಕಾಲೋನಿಯಲ್ಲಿ ನಡೆದಿದೆ. ಮೃತನನ್ನು ನವಾಯತ ಕಾಲೋನಿ ನಿವಾಸಿ ನಿಸಾರ್ ಅಲಿ ಡಾಟಾ (78) ಎಂದು ಗುರುತಿಸಲಾಗಿದೆ. ನವಾಯತ ಕಾಲೋನಿಯಿಂದ ತಮ್ಮ ಸುಜಿಕಿ ಎಕ್ಸೆಸ್ ಸ್ಕೂಟರಿನಲ್ಲಿ ನಮಾಜ್ ಮಾಡಲು ಹೋಗುತ್ತಿದ್ದ ನಿಸಾರ್ ಅಲಿ ಡಾಟಾ ಇವರ ಸ್ಕೂಟರಿಗೆ ಸಿಟಿ ಲೈಟ್ ಹೋಟೆಲ್ ಹತ್ತಿರ ರಾ.ಹೆ.66ರಲ್ಲಿ ರಸ್ತೆ ದಾಟುತ್ತಿದ್ದ ಸಂದರ್ಭದಲ್ಲಿ ಭಟ್ಕಳ ಕಡೆಯಿಂದ ವೇಗವಾಗಿ ಬಂದ ಸ್ಕೂಟರ್ ಇವರ ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದ್ದು ರಸ್ತೆಗೆ ಬಿದ್ದ ಇವರ ತಲೆಗೆ ತೀವ್ರ ಪೆಟ್ಟು ಬಿದ್ದಿದೆ. ತಕ್ಷಣ ಇವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಅಷ್ಟರಲ್ಲಿಯೇ ಅವರು ಕೊನೆಯುಸಿರೆಳೆದಿದ್ದರು. ಇನ್ನೊರ್ವ ಸ್ಕೂಟರ್ ಸವಾರ ವಸಂತ ನಾಯ್ಕ ಅವರಿಗೂ ಗಾಯಗಳಾಗಿದ್ದು ಚಿಕಿತ್ಸೆ ಪಡೆದಿದ್ದಾರೆ. ಈ ಕುರಿತು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಪೊಲೀಸರು ತನಿಖೆ ನಡೆಸಿದ್ದಾರೆ.

ಖಾಲಿಯಾಗುತ್ತಿರುವ ಹಿಪ್ಪರಗಿ ಜಲಾಶಯ

ಮಲ್ಲಿಕಾರ್ಜುನ ತುಂಗಳ

ದಿಗಂತ ವಿಶೇಷ



ರಬಕವಿ-ಬನಹಟ್ಟಿ: ಬೆಳಗಾವಿ, ವಿಜಯಪುರ ಹಾಗು ಬಾಗಲಕೋಟೆ ಜಿಲ್ಲೆಗಳ ಸಂಜೀವನಿಯಾಗಿರುವ ಹಿಪ್ಪರಗಿ ಜಲಾಶಯದಲ್ಲಿನ ನೀರು ಬೇಸಿಗೆಯ ಬಾಷ್ಪೀಕರಣ ಹೊಡೆತಕ್ಕೆ ಹಾಗೂ ಒಳ ಹರಿವು ಸಂಪೂರ್ಣ ಬಂದ್ ಆಗಿರುವ ಕಾರಣ ದಿನದಿಂದ ದಿನಕ್ಕೆ ಇಳಿಮುಖವಾಗುವಲ್ಲಿ ಕಾರಣವಾಗಿದ್ದು, ಸೋಮವಾರ 2.85 ಟಿಎಂಸಿಯಷ್ಟು ನೀರು ಮಾತ್ರ ಸಂಗ್ರಹವಿದೆ.

ಹಿಪ್ಪರಗಿ ಜಲಾಶಯದಿಂದ ದಿನಂಪ್ರತಿ 0.07 ಟಿಎಂಸಿಯಷ್ಟು ನೀರು ಖಾಲಿಯಾಗುತ್ತಿದೆ. ಇತ್ತ ಜನತೆ ಬಳಕೆಗೆ ಕಾರಣವಾದರೆ, ಮತ್ತೊಂದೆಡೆ ಬಿರು ಬಿಸಿಲಿನ ತಾಪಕ್ಕೆ ನೀರು ತೀವ್ರ ಕಡಿಮೆಯಾಗಲು ಕಾರಣವಾಗಿದೆ. ನೀರಿನ ಮಟ್ಟ ಕೆಲ ದಿನಗಳಲ್ಲಿ ದಿಢೀರ್ ಆಗಿ ಭಾರಿ ಕುಸಿತ ಕಂಡ ಹಿನ್ನೆಲೆಯಲ್ಲಿ ಜನರಿಗೆ ಬೇಸಿಗೆಯ ಆತಂಕ ಶುರುವಾಗಿದೆ. ಇದೇ ರೀತಿ ಪ್ರತಿ ದಿನ ಖಾಲಿಯಾದರೆ ಮೇ ಎರಡನೇ ವಾರದಲ್ಲಿ ನೀರು ಖಾಲಿಯಾಗಬಹುದೆಂದು ಅಂದಾಜಿಸಲಾಗಿದೆ.

ನೀರು ಬಿಡುಗಡೆಯಾಗದಿದ್ದರೆ ಕೊಂಚ ನಿರಾಳ: ಪ್ರತಿ ವರ್ಷ ಬೇಸಿಗೆ ಸಂದರ್ಭ ಹಿಪ್ಪರಗಿ ಜಲಾಶಯದಿಂದ ಮುಂಭಾಗಕ್ಕೆ ಅಂದಾಜು ಸುಮಾರು 0.5 ಟಿಎಂಸಿಯಷ್ಟು ನೀರನ್ನು ಜಮಖಂಡಿ ಭಾಗಕ್ಕೆ ಕುಡಿಯುವ ನೀರಿನ ಸಲುವಾಗಿ ಬಿಡುಗಡೆಗೊಳಿಸುತ್ತಿದ್ದರು. ಪ್ರಸಕ್ತ ವರ್ಷ ಗೇಟ್ ನಂ.22ರಲ್ಲಿ ಆಗಿರುವ ಅವಘಡದಿಂದ 2 ಟಿಎಂಸಿಯಷ್ಟು ನೀರು ಪೋಲಾಗಿದ್ದು, ಇದೇ ಪರಿಣಾಮವಾಗಿ ಹಿಪ್ಪರಗಿ ಬ್ಯಾರೇಜ್‌ನ ಹಿನ್ನೀರನಲ್ಲಿರುವ ನಗರ, ಗ್ರಾಮ ಹಾಗೂ ರೈತ-ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆಗಳಿವೆ. ಬೇಸಿಗೆ ಮುಗಿಯುವವರೆಗೂ ಇದೇ ನೀರು ನಿಯಂತ್ರಣದಲ್ಲಿದ್ದರೆ ಮಾತ್ರ ಮೇ ಮಧ್ಯಂತವರೆಗೆ ಅನುಕೂಲವಾಗುವುದು.

> ಹಿಪ್ಪರಗಿ ಜಲಾಶಯದಲ್ಲಿ ನೀರಿನ ಸಾಂಧ್ರತೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ನೀರನ್ನು ಕಾಳಜಿ ಪೂರ್ವಕ ಬಳಕೆ ನಾಗರಿಕರದ್ದಾಗಬೇಕು.
> ■ ವಿ.ಎಸ್. ನಾಯಕ, ಸಹಾಯಕ ಅಭಿಯಂತರ, ಹಿಪ್ಪರಗಿ

> ಕೃಷ್ಣಾ ನದಿ ನೀರು ಮೇ 15ರವರೆಗೆ ಬರಬಹುದು. ಆದರೂ ಮುಂಜಾಗೃತ ಕ್ರಮವಾಗಿ ನಗರಸಭೆ ಎಲ್ಲ ಸಿದ್ಧತೆಗಳನು ಮಾಡಿಕೊಂಡಿದೆ. ಕಾರಣ ಸಾರ್ವಜನಿಕರು ನೀರನ್ನು ಮಿತವ್ಯಯವಾಗಿ ಬಳಕೆ ಮಾಡಬೇಕು. ಕೃಷ್ಣಾ ನದಿಯಲ್ಲಿ ನೀರು ನಿಂತ ನೀರಾಗಿರುವುದರಿಂದ ಸಾರ್ವಜನಿಕರು ಆರೋಗ್ಯದ ದೃಷ್ಟಿಯಿಂದ ನೀರನ್ನು ಸೋಸಿ ಕಾಯಿಸಿ ಆರಿಸಿ ನೀರನ್ನು ಕುಡಿಯಬೇಕು.'
> ■ ರಮೇಶ ಜಾಧವ, ಪೌರಾಯುಕ್ತರು, ನಗರಸಭೆ ರಬಕವಿ-ಬನಹಟ್ಟಿ.

ಅವಕಾಶ ವಂಚಿತ ಮಹಿಳೆಯರಿಗೆ ಅವಕಾಶ ನೀಡಿ

ವಿಜಯಪುರ: ಅವಕಾಶ ವಂಚಿತ ಮಹಿಳೆಯರಿಗೆ ಅವಕಾಶ ನೀಡುವ ಮೂಲಕ ಅವರ ಯಶಸ್ಸಿಗೆ ಸಹಾಯ ಮಾಡಬೇಕು ಎಂದು ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಮತ್ತು ಅಂಜುಮನ್ ಕಾನೂನು ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಉಜ್ವಲಾ ಎ. ಸರನಾಡಗೌಡ ಹೇಳಿದ್ದಾರೆ.

ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರದಲ್ಲಿ ಸಬಲಾ - ಮಹಿಳಾ ಸಬಲೀಕರಣ ಘಟಕ ವತಿಯಿಂದ ಆಯೋಜಿಸಲಾದ ಅಂತಾರಾಷ್ಟ್ರೀಯ ಮಹಿಳಾ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಡಾ. ಅಶೋಕ ಪಾಟೀಲ ಮಾತನಾಡಿ, ಬಿ.ಎಲ್.ಡಿ.ಇ ಸಂಸ್ಥೆಯ ಮಹಿಳಾ ಸಿಬ್ಬಂದಿಯ ಸಮರ್ಪಣೆ, ಪರಿಶ್ರಮ ಮತ್ತು ನಿಷ್ಠೆ ಶ್ಲಾಘನೀಯವಾಗಿದೆ. ಅವರು ವೃತ್ತಿಪರ ಜವಾಬ್ದಾರಿಗಳ ಜೊತೆಗೆ ವೈಯಕ್ತಿಕ ಬದುಕಿನ ಹೊಣೆಗಾರಿಕೆಗಳನ್ನು ಸಮರ್ಥವಾಗಿ ನಿರ್ವಹಿಸುತ್ತ ಸಂಸ್ಥೆಯ ಯಶಸ್ಸಿನಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಅನುಸಂಧಾನ-2026 ರಾಷ್ಟ್ರೀಯ ಸಮ್ಮೇಳನದ ಮಾಹಿತಿ ಪತ್ರಿಕೆಯ ಬಿಡುಗಡೆ ಮಾಡಲಾಯಿತು. ಸಬಲಾ ಮಹಿಳಾ ಸಬಲೀಕರಣ ಘಟಕದ ಅಧ್ಯಕ್ಷೆ ಡಾ. ವಿಜಯಲಕ್ಷ್ಮಿ ಬೆನಕಟ್ಟಿ ಸ್ವಾಗತಿಸಿದರು. ಶಲ್ಯ ತಂತ್ರ ವಿಭಾಗದ ಪ್ರಾಧ್ಯಾಪಕ ಡಾ.ಪ್ರಸಾದಶಕ್ತಿ ಗನ್ನೂರ ಮಹಿಳಾ ಸಬಲೀಕರಣ ಘಟಕದ ವಾರ್ಷಿಕ ವರದಿ ಮಂಡಿಸಿದರು. ಸಬಲಾ ಸದಸ್ಯ ಕಾರ್ಯದರ್ಶಿ ಡಾ. ಅಶ್ವಿನಿ ನಿಂಬಾಳ ವಂದಿಸಿದರು. ಸಂಸ್ಥೆಯ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.



ಅಹಿಂಸೆ, ಸತ್ಯದ ಮಹತ್ವ ಸಾರಿದ ಗಾಂಧೀಜಿ



ರಾಮದುರ್ಗ : ಸತ್ಯ ಅಹಿಂಸೆಗಳೆಂಬ ಅಸ್ತ್ರಗಳನ್ನು ಹಿಡಿದು, ಶಾಂತಿಯ ಪಥದಲ್ಲಿ ಸಾಗಿ, ಬ್ರಿಟಿಷ್ ದಾಸ್ಯದಿಂದ ಭಾರತವನ್ನು ಬಿಡುಗಡೆಗೊಳಿಸಿದ ಮಹಾನ್ ಚೇತನ ಮಹಾತ್ಮ ಗಾಂಧೀಜಿ ಎಂದು ವಿಜಯಪುರ ಬೇನಾಳದ ರಾಷ್ಟ್ರಪಿತ ಮಹಾತ್ಮ ಗಾಂಧಿ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ನೇತಾಜಿ ಗಾಂಧಿ ಹೇಳಿದರು.

ರಾಮದುರ್ಗ ಪಟ್ಟಣದ ಐ.ಎಸ್. ಯಾದವಾಡ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಸೋಮವರ ಜರುಗಿದ ಗಾಂಧಿ ಸ್ಮೃತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಬಾಪೂಜಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಉಪನ್ಯಾಸ ನೀಡಿದ ಅವರು, ಸಾತ್ವಿಕ ಶಕ್ತಿಯ ನೈತಿಕ ಪ್ರಭೆಯಾದ ಮಹಾತ್ಮ ಗಾಂಧಿ, ತಮ್ಮ ತತ್ವ - ಸಿದ್ಧಾಂತಗಳಿಂದ ಮತ್ತು ಮಾನವೀಯ ಮೌಲ್ಯಗಳಿಂದ ಅಗಣಿತ ಜನರಿಗೆ ಆದರ್ಶ ಪ್ರಾಯರಾಗಿದ್ದಾರೆ ಎಂದರು.

ಸೌತ್ ಆಫ್ರಿಕೆಯ ನೆಲ್ಸನ್ ಮಂಡೇಲಾ, ಡೆಸ್ಮಂಡ್ ಟುಟು, ಆಲ್ಬರ್ಟ್ ಲೂತುಳಿ, ಅಮೆರಿಕೆಯ ಡಾ.ಮಾರ್ಟಿನ್ ಲೂಥರ್ ಕಿಂಗ್ ಜ್ಯುನಿಯರ್, ಬರ್ಮಾದ ಆಂಗ್ ಸಾನ್ ಸೂಕಿ, ಶ್ರೀಲಂಕಾದ ಅಹಂಗ್ ಮಾಗೇ ಟ್ಯೂಡರ್ ಆರಿಯರತ್ನೆ, ಬರಾಕ್ ಒಬಾಮಾ, ಖ್ಯಾತ ವಿಜ್ಞಾನಿ ಐನ್ ಸ್ಟಿನ್ ಸೇರಿದಂತೆ ಜಗತ್ತಿನ ಸಾವಿರಾರು ಜನನಾಯಕರ ಮೇಲೆ ಪ್ರಭಾವ ಬೀರಿದ್ದಾರೆ ಎಂದು ತಿಳಿಸಿದರು.

ಸಿ.ಡಿ.ಸಿ. ಸದಸ್ಯರಾದ ಎಸ್.ಜಿ. ಚಿಕ್ಕನರಗುಂದ ಮಾತನಾಡಿ ವಿಶ್ವಕವಿ ಗುರುದೇವ ಟ್ಯಾಗೋರ್ ರು ಗಾಂಧೀಜಿ ಯವರಿಗೆ 'ಮಹಾತ್ಮ' ಎಂದು ಗೌರವ ಬಿರುದು ನೀಡಿದರು. ನೇತಾಜಿ ಸುಭಾಸ್ ಚಂದ್ರ ಬೋಸ್ ರು 'ರಾಷ್ಟ್ರಪಿತ ' ಎಂದು ಉಪಾಧಿಯನ್ನು ನೀಡಿ ಗೌರವಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಎಂ. ಡಿ. ಕಮತಗಿ ಮಾತನಾಡಿ, ಮಹಾತ್ಮ ಗಾಂಧೀಜಿಯವರ ತತ್ವ - ಸಿದ್ಧಾಂತಗಳು ಸದಾ ಕಾಲಕ್ಕೂ ಪ್ರಸ್ತುತ, ಅವುಗಳಲ್ಲಿ ಕೆಲವನ್ನಾದರೂ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಸಿ.ಡಿ.ಸಿ.ಸದಸ್ಯರಾದ ಜಯರಾಮ್ ಕೋಣೆ, ಬಸವರಾಜ ಗಂಗಣ್ಣವರ, ಅಪ್ಪು ದಿಂಡವಾರ,

ಸುನಂದಾ ಸುರೇಬಾನ್, ಅಶೋಕ ಹುಲ್ಲಳ್ಳಿ, ಸಿದ್ದಾರೂಢ ಬಸಲಿಗುಂದಿ, ಪವನ್ ಮಹೇಂದ್ರ ಕರ, ಡಾ.ಮಂಜುಳಾ ಹಂಚಿನಾಳ, ಜೋತ್ಸ್ನಾ ವಾಳ್ವೇಕರ, ಶಿವಾನಂದ ಹಲಗತ್ತಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಗಾಂಧೀಜಿ ಕುರಿತು ಜರುಗಿದ ರಸಪ್ರಶ್ನೆಯಲ್ಲಿ ವಿಜೇತರಾದ ವಿದ್ಯಾರ್ಥಿ / ನಿಯರಿಗೆ ಗಾಂಧಿ ಪುಸ್ತಕ ಹಾಗೂ ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಯಿತು. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಬಾಲ್ಯ ಜೀವನ, ಹೋರಾಟ, ದೇಶದ ಸ್ವಾತಂತ್ರ್ಯ ಸಂಗ್ರಾಮ, ಪ್ರಪಂಚದ ಗಣ್ಯರು ಬಾಪೂಜಿ ಕುರಿತು ವ್ಯಕ್ತ ಪಡಿಸಿದ ಅನಿಸಿಕೆ - ಅಭಿಪ್ರಾಯಗಳ 50 ಛಾಯಾಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ವ್ಹಿ.ಎಸ್.ಲಕ್ಕನಗೌಡರ ಸ್ವಾಗತಿಸಿದರು. ಡಾ.ಅಪ್ಪಣ್ಣ ವಗ್ಗರ ಪ್ರಾಸ್ತಾವಿಕ ಮಾತನಾಡಿದರು. ಡಾ.ಎಂ.ಆರ್.ದೊಡ್ಡನಿ ನಿರೂಪಿಸಿದರು, ಮಾರುತಿ ಸೂಳಿಕೇರಿ ವಂದಿಸಿದರು.

ಭಕ್ತಿಗೆ ಬಮ್ಮಿಗಟ್ಟಿ ಹೆಸರುವಾಸಿ: ಜಗದೀಶ್ವರ ಸ್ವಾಮೀಜಿ



ಕಲಘಟಗಿ: ನಾಡಿನ ಎಲ್ಲ ಪೂಜ್ಯರ ಮೇಲೆ ಬಮ್ಮಿಗಟ್ಟಿ ಭಕ್ತರ ಭಕ್ತಿ ಅಪಾರವಾದದ್ದು ಎಂದು ಹರಿಹರ ಕುಮಾರಪಟ್ಟಣಂ ಪುಣ್ಯಕೋಟಿ ಮಠದ ಜಗದೀಶ್ವರ ಸ್ವಾಮೀಜಿ ಹೇಳಿದರು.

ತಾಲೂಕಿನ ಬಮ್ಮಿಗಟ್ಟಿ ಗ್ರಾಮದ ಭಕ್ತರನ್ನು ಉದ್ದೇಶಿಸಿ ಆಶೀರ್ವಚನ ನೀಡಿದ ಅವರು, ಲಿಂಗೈಕ್ಯ ಶಿವಲಿಂಗೇಶ್ವರರ ಪ್ರಭಾವದ ಪರಿಣಾಮ ಪೂಜ್ಯರನ್ನು ಅತ್ಯಂತ ಗೌರವ ಭಾವನೆಯಿಂದ ಇಲ್ಲಿನ ಜನತೆ ಕಾಣುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆಧ್ಯಾತ್ಮಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಮಕ್ಕಳಿಗೂ ಸಂಸ್ಕಾರ ನೀಡುವ ಕಾರ್ಯ ಮಾಡುತ್ತಿದ್ದಾರೆ. ಇದೇ ರೀತಿ ಗುರು ತೋರುವ ಮಾರ್ಗದಲ್ಲಿ ನಡೆಯಿರಿ. ಗ್ರಾಮದಲ್ಲಿ ಆಧ್ಯಾತ್ಮಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಲಿ. ಬಮ್ಮಿಗಟ್ಟಿ ಭಕ್ತರಗಟ್ಟಿಯಾಗಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ರುದ್ರಯ್ಯ ಚಿಕ್ಕಮಠ, ಬಸಪ್ಪ ಸಾದರ, ಬಸಪ್ಪ ಟವಳಿ, ಚಂಬಣ್ಣ ಮಾಚಾಪುರ, ಮಲ್ಲೇಶಪ್ಪ ಧಾರವಾಡ, ಬಸಯ್ಯ ಕೋರಿಮಠ ಬಾಲಾಜಿಸಿಂಗ ಪಾಂಡೆ, ಪ್ರಕಾಶ ಕಚ್ಚೂರಿ, ಶಂಕ್ರಪ್ಪ ಹೆಗ್ಗಣ್ಣವರ, ಈರಯ್ಯ ನೆಲ್ಲೂರಮಠ, ಶಂಕ್ರಪ್ಪ ವಾಲಿ, ಪರಪ್ಪ ಆದರಗುಂಚಿ, ಗುರುಸಿದ್ದಪ್ಪ ಮಾಚಾಪುರ, ಯಲ್ಲಪ್ಪ ಮಡಿವಾಳರ ಸೇರಿದಂತೆ ಮತ್ತಿತರರು ಇದ್ದರು.

ಏ.12ರಂದು ತುಂಗಭದ್ರಾರತಿ

ದಾವಣಗೆರೆ ಜಿಲ್ಲೆ ಹರಿಹರ ತಾಲೂಕಿನ ಕುಮಾರಪಟ್ಟಣಂ ಪುಣ್ಯಕೋಟಿ ಮಠದ ತುಂಗಾನದಿ ತೀರದಲ್ಲಿ ಏಪ್ರಿಲ್ 12ರಂದು ಸಂಜೆ 6 ಗಂಟೆಗೆ ನಡೆಯುವ 7ನೇ ವರ್ಷದ ತುಂಗಭದ್ರಾರತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿ ಎಂದು ಜಗದೀಶ್ವರ ಸ್ವಾಮೀಜಿ ತಿಳಿಸಿದರು.

ಕಬ್ಬೂರ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ



ಧಾರವಾಡ: ನಗರದ ಜನತಾ ಶಿಕ್ಷಣ ಸಮಿತಿಯ ಕೆ.ಎಚ್.ಕಬ್ಬೂರ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಭಾನುವಾರ ನಡೆಯಿತು.

ಮಹಿಳಾ ಸಬಲೀಕರಣ ಮತ್ತು ಸುರಕ್ಷತೆ ಕುರಿತು ವಕೀಲೆ ಗೀತಾಬಾಯಿ ವಿಶೇಷ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ಪ್ರಾಚಾರ್ಯೆ ವೇದಾವತಿ ತಿವಾರಿ ಹಾಗೂ ಪಿ.ಉಷಾದೇವಿ ಇದ್ದರು. ಕಾರ್ಯಕ್ರಮದಲ್ಲಿ ಭಾಗ್ಯಾಶ್ರೀ ಕೆ., ಚೈತ್ರಾ ಬಮ್ಮಿಗಟ್ಟಿ, ಮಹಿಳಾ ಸಿಬ್ಬಂದಿಗಳು ಪಾಲ್ಗೊಂಡಿದ್ದರು. ಸಂಜನಾ ಮತ್ತು ಭಾಗ್ಯವಂತಿ ನಿರೂಪಿಸಿದರು. ವಿಜಯಲಕ್ಷ್ಮೀ ವಂದಿಸದಿರು.

ವ್ಯಕ್ತಿ ಸಾವು

ಹುಬ್ಬಳ್ಳಿ: ಅಪರಿಚಿತ ವ್ಯಕ್ತಿಗೆ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ತಾಲೂಕಿನ ಪಾಲಿಕೊಪ್ಪ ಕ್ರಾಸ್‌ನ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. 60ರಿಂದ 65 ವರ್ಷದ ಮೃತಪಟ್ಟಿರುವ ವ್ಯಕ್ತಿ. ರಸ್ತೆಯಲ್ಲಿ ನಡೆದು ಹೋಗುವಾಗ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಇದರಿಂದ ಗಾಯಗೊಂಡ ವ್ಯಕ್ತಿ ಮೃತಪಟ್ಟಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರಣಿ ಬೈಕ್ ಕಳ್ಳತನ: ಐವರ ಬಂಧನ

ಮುಧೋಳ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಕಳೆದ ಹಲವು ದಿನಗಳಿಂದ ಸರಣಿ ಬೈಕ್ ಕಳ್ಳತನ ನಡೆಸುತ್ತಿದ್ದ ಐವರ ತಂಡವನ್ನು ಮುಧೋಳ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ಸುಮಾರು ರೂ.7.02 ಲಕ್ಷ ಮೌಲ್ಯದ ಒಟ್ಟು 17 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಕೂಡಗಿಯ ಶಾಹಿದ್ ಜಾಗೀರದಾರ (19) ಗದ್ದನಕೇರಿ ಕ್ರಾಸಿನ ಮಂಜುನಾಥ ಹೋಗಿನ (27) ಶಿವು ಮಡಿವಾಳರ (26) ಸೀಮಿಕೇರಿಯ ಪುನೀತ ಬೂದಿಹಾಳ(20) ಹಾಗೂ ಒಬ್ಬ ಅಪ್ರಾಪ್ತ ಬಾಲಕ ಇವರು ಗಿರಗಾಂವ್ ಆರ್.ಸಿ ಬಳಿ ಸಂಶಯಾಸ್ಪದವಾಗಿ ತಿರುಗಾಡುತ್ತಿದ್ದಾಗ ಪೋಲಿಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನದ ಜಾಲ ಬಯಲಾಗಿದೆ. ಆರೋಪಿಗಳು ರಸ್ತೆ ಬದಿ ಅಥವಾ ಮನೆಯ ಮುಂದೆ ನಿಲ್ಲಿಸಿದ ಬೈಕ್‌ಗಳನ್ನು ನಕಲಿ ಕೀಲಿ ಕೈ ಬಳಸಿ ಅಥವಾ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ

ಮಾಡುತ್ತಿದ್ದರು. ನಂತರ ದಾಖಲೆಗಳನ್ನು ಆಮೇಲೆ ಕೊಡುತ್ತೇವೆ ಎಂದು ನಂಬಿಸಿ ಸಾರ್ವಜನಿಕರಿಗೆ ಕಡಿಮೆ ಬೆಲೆಗೆ ಮಾರುತ್ತಿದ್ದರು. ಪೊಲೀಸರು ಕಳುವಾದ 17 ಬೈಕ್‌ಗಳ ಜೊತೆ ಕೃತ್ಯಕ್ಕೆ ಬಳಸಿದ್ದ 3 ಬೈಕ್‌ಗಳನ್ನು ಸಹ ವಶಪಡಿಸಿಕೊಂಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಮಾರ್ಗದರ್ಶನದಲ್ಲಿ ಸಿಪಿಐ ಎಂ.ಎನ್.ಶಿರಹಟ್ಟಿ, ಪಿಎಸ್ ಐಗಳಾದ ಅಜೀತಕುಮಾರ ಹೊಸಮನಿ ಹಾಗೂ ಪಿ.ಎಸ್.ಮುರನಾಳ ನೇತೃತ್ವದ ಈ ತಂಡ ಯಶಸ್ವಿ ಕಾರ್ಯಾಚರಣೆ ನಡೆಸಿದೆ. ಈ ತಂಡದ ಶ್ರಮ ಶ್ಲಾಘಿಸಿರುವ ಎಸ್‌ಪಿ ಸಿದ್ದಾರ್ಥ ಗೋಯಲ್ ಅವರು ವಿಶೇಷ ಬಹುಮಾನ ಘೋಷಿಸಿದ್ದಾರೆ.

ಈರುಳ್ಳಿ ತುಂಬಿದ ಲಾರಿ ಪಲ್ಟಿ: ಓರ್ವ ಸಾವು, ಇಬ್ಬರಿಗೆ ಗಾಯ



ಹಿರೇಬಾಗೇವಾಡಿ: ಬಣ್ಣದ ಚೀಲಗಳು ಮತ್ತು ಈರುಳ್ಳಿ ತುಂಬಿದ ಲಾರಿಗಳ ಪರಸ್ಪರ ಅಪಘಾತದಲ್ಲಿ ಓರ್ವ ಸ್ಥಳದಲ್ಲೇ ಮೃತಪಟ್ಟು ಇಬ್ಬರು ಗಾಯಗೊಂಡ ಘಟನೆ ಹೆದ್ದಾರಿ ಪಕ್ಕದ ಹಿರೇಬಾಗೇವಾಡಿಯ ಪ್ರೇರಣಾ ಸ್ಕೂಲ್ ಹತ್ತಿರ ಭಾನುವಾರ ತಡರಾತ್ರಿ ಸಂಭವಿಸಿದೆ.

ಕೊಲ್ಹಾಪೂರದಿಂದ ಕೇರಳಕ್ಕೆ ಈರುಳ್ಳಿ ಹೇರಿಕೊಂಡು ಹೊರಟಿದ್ದ ಲಾರಿಗೆ ಬಡೆಕೊಳ್ಳಮಠ ಇಳಿ ಜಾರಿನಲ್ಲಿ ನಿಯಂತ್ರಣ ತಪ್ಪಿ ಹಿಂದಿನಿಂದ ಬಣ್ಣದ ಚೀಲಗಳು ತುಂಬಿ ಬಂದ ಲಾರಿ ಅಪ್ಪಳಿಸಿದ್ದರಿಂದ ಆದರ ಕ್ಯಾಬಿನ್‌ನಲ್ಲಿ ಮಲಗಿದ್ದ ಮಹಾರಾಷ್ಟ್ರ ಮೂಲದ ಬೆಕನಾಳ ನಿವಾಸಿ ಅಪ್ಪಾಸಾಬ ಬಂಡು ಧಬಾಲೆ (50) ಮೃತಪಟ್ಟಿದ್ದಾರೆ.

ತಮಿಳುನಾಡು ಮೂಲದ ಪರಮಶಿವಂ ಮತ್ತು ಮೋಹನ ಎಂಬುವ ಇಬ್ಬರು ಗಾಯಗೊಂಡಿದ್ದಾರೆ.

ಅವರನ್ನು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ಸಾಗಿಸಲಾಗಿದೆ. ಅಪಘಾತದಿಂದ ಈರುಳ್ಳಿ ಚೀಲಗಳು ಚೆಲ್ಲಾಪಿಲ್ಲಿಯಾಗಿ ಕೆಲ ಹೊತ್ತು ಹೆದ್ದಾರಿ ಸಂಚಾರ ಸ್ಥಗಿತಗೊಂಡಿತ್ತು. ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಕ್ತದಾನ ಶಿಬಿರ ನಾಳೆ

ಬೀಳಗಿ: ಪಟ್ಟಣದ ಪುನೀತ ಮೆಮೋರಿಯಲ್ ಟ್ರಸ್ಟ್ ವತಿಯಿಂದ ಬಾಗಲಕೋಟೆಯ ಧನ್ವಂತರಿ ರಕ್ತನಿಧಿ ಸಹಯೋಗದಲ್ಲಿ ಡಾ.ಪುನೀತ ರಾಜಕುಮಾರರವರ 51ನೇ ಜನ್ಮ ದಿನದ ನಿಮಿತ್ತ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಪುನೀತ ಮೆಮೊರಿಯಲ್ ಟ್ರಸ್ಟ್ ಅಧ್ಯಕ್ಷೆ ಆಶಾ ಬೀಳಗಿ ತಿಳಿಸಿದ್ದಾರೆ. ನೀವು ಉಡುಗೊರೆಯಾಗಿ ನೀಡಲಿರುವ ರಕ್ತಕ್ಕಾಗಿ ಒಂದು ಜೀವ ಕಾಯುತ್ತಿದೆ. ರಕ್ತದಾನ-ಜೀವದಾನ ಎಂಬ ಧ್ಯೇಯದೊಂದಿಗೆ ಮಾ. 17 ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣ ಸಹಕಾರಿ ಬ್ಯಾಂಕ್ ರಸ್ತೆ, ಓಂ ಕ್ರಿಕೇಟ್ ಅಕಾಡೆಮಿಯಲ್ಲಿ ರಕ್ತದಾನ ಶಿಬಿರ ಜರುಗಲಿದೆ ಎಂದು ಪುನೀತ ಮೆಮೊರಿಯಲ್ ಟೆಸ್ಟ್ ಹಾಗೂ ಅಪ್ಪು ಫ್ಯಾನ್ ಕ್ಲಬ್ ಪದಾಧಿಕಾರಿಗಳು ವಿನಂತಿಸಿದ್ದಾರೆ.

ಗುರುವಿನ ಮಾರ್ಗದಲ್ಲಿ ನಡೆದರೆ ನೆಮ್ಮದಿ ಜೀವನ ಸಾಧ್ಯ



ಉಪ್ಪಿನಬೆಟಗೇರಿ: ಹಲವಾರು ರಂಗದಲ್ಲಿ ಗುರಿ ಸಾಧಿಸಬೇಕಾದರೆ ಗುರುಗಳ ಆಶೀರ್ವಾದ ಬೇಕು ಎಂದು ನಿವೃತ್ತ ಮೋಟಾರು ವಾಹನ ನಿರೀಕ್ಷಕ ಶಿವಾನಂದ ಹೇಳಿದರು.

ಅವರು ಶ್ರೀಗುರು ವಿರುಪಾಕ್ಷೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ವಿಶ್ವಗುರು ಬಸವಣ್ಣನವರ ವೇದಿಕೆಯಲ್ಲಿ ನಡೆದ ಲವಣಗಿರಿ ಉತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗುರುವಿನ ಸೇವೆ ಭಕ್ತಿಯಿಂದ ಮಾಡಿದರೆ ನಮ್ಮ ಜೀವನ ಸಾರ್ಥಕ ವಾಗುತ್ತದೆ. ಮಠ, ಮಂದಿರ ಅಭಿವೃದ್ಧಿ ಯಾಗಬೇಕಾದರೆ ಮಠದಲ್ಲಿ ಗುರು ಇದ್ದರೆ ಮಾತ್ರ. ಭಕ್ತರು ಗುರುವಿನ ಮಾರ್ಗದರ್ಶನದಲ್ಲಿ ನಡೆದರೆ ಮಾತ್ರ ನೆಮ್ಮದಿ ಜೀವನ ನಡೆಸಲು ಸಾಧ್ಯ ಎಂದರು. ನಂದಿಕೇಶ್ವರ ಪಂಡಿತ ಶ್ರೀವೀರೇಶ್ವರ ಶಾಸ್ತ್ರಿಗಳು, ನಾಡಿನ ಎಲ್ಲ ಶರಣರು ಶಿವಶರಣ ರಾಗಬೇಕೆಂದು ಒಂಬತ್ತು ನೂರು ವರ್ಷಗಳ ಹಿಂದೆಯೇ ಪ್ರಪಂಚದ ನಾಡಿನ ತತ್ವ ಸಿದ್ಧಾಂತಗಳು ಶರಣರ ಕಿವಿಗೆ ಬಿದ್ದವು, ಸಾಮಾಜಿಕ ಚಿಂತನೆ, ಧಾರ್ಮಿಕ ಕುರಿತು ಅನೇಕರು ಕಲ್ಯಾಣದ ಅನುಭಾವ ಮಂಟಪದಲ್ಲಿ ಸೇರಿದ್ದರು. ಅದರಲ್ಲಿ ಸೊಲ್ಲಾಪುರದ ಶಿವಶರಣ ಶಿದ್ದರಾಮೇಶ್ವರ ಒಬ್ಬರು, ಅವರ ಜೀವನ ಚರಿತ್ರೆಯಲ್ಲಿ ಬರುವ ಸಾರಾಂಶದಲ್ಲಿ ಶ್ರೀಶೈಲ ಮಲ್ಲಯ್ಯನ ಮೇಲೆ ಇಟ್ಟ ಅಪಾರ ಭಕ್ತಿ ಯಿಂದ ದರ್ಶನ ಪಡೆದರು ಎಂದು ಹೇಳಿದರು.ನರಗುಂದ ಶ್ರೀಪತ್ರಿವನ ಸಂಸ್ಥಾನ ಮಠದ ಡಾ.ಸಿದ್ದವೀರ ಶಿವಾಚಾರ್ಯರು ಹಾಗೂ ನರೇಂದ್ರ ಶ್ರೀಮೇಳಪ್ಪಜ್ಜನ ಮಠದ ಸಂಗಮೇಶ್ವರ ಅಜ್ಜನವರು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ನಿವೃತ್ತ ಶಿಕ್ಷಕ ಗುರು ತಿಗಡಿ, ಜಿಪಂ ಮಾಜಿ ಉಪಾಧ್ಯಕ್ಷ ನಿಜನಗೌಡ ಪಾಟೀಲ, ಧಾರವಾಡ ಜಿಪಂ ಆಯೋಜನಾಧಿಕಾರಿ ಬಿ.ಎಸ್.ರಾಠೋಡ, ಮಂಗಳಗಟ್ಟಿ, ಕುರುಬಗಟ್ಟಿ, ನರೇಂದ್ರ ಹಾಗೂ ಉಪ್ಪಿನಬೆಟಗೇರಿ ಗ್ರಾಮದ ಹಿರಿಯರನ್ನು ಶ್ರೀಕುಮಾರ ವಿರುಪಾಕ್ಷ ಸ್ವಾಮೀಜಿಯವರು ಸನ್ಮಾನಿಸಿದರು. ಶ್ರೀಗುರು ವಿರುಪಾಕ್ಷೇಶ್ವರ ಅಕ್ಕನ ಬಳಗ ವತಿಯಿಂದ ಅನ್ನಪ್ರಸಾದ ಸೇವೆ ಸಲ್ಲಿಸಿದರು. ಶಿಕ್ಷಕ ಸಂಜಯ ಕೊಡಿ ಸ್ವಾಗತಿಸಿದರು. ಪತ್ರಕರ್ತ ಚನ್ನಬಸಪ್ಪ ಲಗಮಣ್ಣವರ ನಿರ್ವಹಿಸಿದರು.

ಇಂದಿನ ಕಾರ್ಯಕ್ರಮ

ಮಾ.17ರಂದು ಲವಣಗಿರಿ ಉತ್ಸವದ ಐದನೇ ದಿನದಂದು 'ಆತ್ಮವಾನ ಆಮುಗೆ ದೇವಯ್ಯನ' ಜೀವನ ದರ್ಶನ ಪ್ರವಚನ. ದಿವ್ಯ ಸಾನಿಧ್ಯ ಕಲ್ಲೂರ ಆರೋಢ ಆಶ್ರಮದ ಮಾತೋಶ್ರೀ ಲಲಿತಮ್ಮನವರು, ಮುಖ್ಯ ಅತಿಥಿಯಾಗಿ ಧಾರವಾಡ ಜರ್ನಲಿಸ್ಟ ಗಿಲ್ಡ್ ಅಧ್ಯಕ್ಷ ಡಾ.ಬಸವರಾಜ ಹೊಂಗಲ ಸೇರಿದಂತೆ ಪತ್ರಕರ್ತರ ತಂಡದವರು ಆಗಮಿಸಿಲಿದ್ದಾರೆ.

ತಾಪಂ ಅಧಿಕಾರಿಗಳು-ಪಿಡಿಓ ಸಭೆ | ಶಿವಲೀಲಾ ಕುಲಕರ್ಣಿ ಸೂಚನೆ

ಕುಡಿಯುವ ನೀರಿಗೆ ತಕ್ಷಣ ಸ್ಪಂದಿಸಿ



ಧಾರವಾಡ: ಬೇಸಿಗೆಯಲ್ಲಿ ತಾಲೂಕಿನ ಜನ-ಜಾನುವಾರಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಕ್ರಮ ಕೈಗೊಳ್ಳಲು ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷೆ ಶಿವಲೀಲಾ ಕುಲಕರ್ಣಿ ಸೂಚಿಸಿದರು.

ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಸೋಮವಾರ ಅಧಿಕಾರಿಗಳ ಸಭೆ ನಡೆಸಿದ ಅವರು, ತಾಲೂಕಿನ ಯಾವುದೇ ಹಳ್ಳಿಗಳಲ್ಲಿ ನೀರಿನ ಸಮಸ್ಯೆಗಳು ತಲೆದೋರದಂತೆ ಯುದ್ಧೋಪಹಾದಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಹಳ್ಳಿಗಳಿಗೆ ಪೂರೈಸುವ ನೀರಿನ ಮೂಲಗಳು ಗುರುತಿಸಬೇಕು. ಅಗತ್ಯವಿದ್ದಲ್ಲಿ ತಕ್ಷಣವೇ ಟ್ಯಾಂಕರ್ ನೀರು ಪೂರೈಕೆಗೆ ಸಿದ್ಧತೆ ಮಾಡಿಕೊಳ್ಳಬೇಕು. ನೀರಿನ ವಿಷಯದಲ್ಲಿ ನಿರ್ಲಕ್ಷ್ಯತೋರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು. ನೀರಿಗೆ ಆದ್ಯತೆ ನೀಡಿ: ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಪಿಡಿಓ) ಹಾಗೂ ಆಡಳಿತಾಧಿಕಾರಿಗಳು ತಮ್ಮ ಗ್ರಾಮಗಳಲ್ಲಿ ನೀರಿನ ಲಭ್ಯತೆ ಪರಿಶೀಲಿಸಬೇಕು. ಪಂಪ್‌ಸೆಟ್ ಅಥವಾ ಕೊಳವೆಬಾವಿಗಳ ದುರಸ್ತಿ ಇದ್ದಲ್ಲಿ ತಕ್ಷಣ ಸರಿಪಡಿಸಲು ಸಲಹೆ ನೀಡಿದರು.

ಆರೋಗ್ಯ ಮುನ್ನೆಚ್ಚರಿಕೆ: ಬಿಸಿಲಿನ ತಾಪದಿಂದ ಉಂಟಾಗುವ ಅನಾರೋಗ್ಯದ ಸಮಸ್ಯೆಗಳ ತಡೆಗೆ ಆರೋಗ್ಯ ಇಲಾಖೆಯು ಜನರಲ್ಲಿ ಜಾಗೃತಿ ಮೂಡಿಸಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧಗಳ ದಾಸ್ತಾನು ಇರಿಸುವಂತೆ ಹೇಳಿದರು.

ಅಧಿಕಾರಿಗಳ ಸಮನ್ವಯ: ಕಂದಾಯ, ಪಂಚಾಯತ್ ರಾಜ್ ಇಲಾಖೆ ಹಾಗೂ ನೀರು ಸರಬರಾಜು ಇಲಾಖೆ ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸುವ ಮೂಲಕ ಸಾರ್ವಜನಿಕರ ದೂರುಗಳಿಗೆ ತಕ್ಷಣ ಸ್ಪಂದಿಸಬೇಕು ಎಂದು ಸೂಚನೆ ನೀಡಿದರು.ಸಭೆಯಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಧಾರವಾಡ ತಾಲೂಕಾಧ್ಯಕ್ಷ ಅರವಿಂದ ಏಗನಗೌಡರ, ತಹಶೀಲ್ದಾರ್ ಡಿ.ಎಚ್.ಹೂಗಾರ, ತಾಪಂ ಇಓ ಗಂಗಾಧರ ಕಂದಕೂರ, ತಾಪಂ ಅಧಿಕಾರಿಗಳು, ಪಿಡಿಓಗಳು, ಗ್ರಾಮ ಲೆಕ್ಕಾಧಿಕಾರಿಗಳು ಇದ್ದರು.

ಕಿರುಸುದ್ದಿ

ಪಾಕ್ ಆಟಗಾರನಿಗೆ ನೀಡುವ ವೇತನವು ಭಾರತಕ್ಕೆ ಮಾರಕ

• **ಹೊಸದಿಲ್ಲಿ:** ಸನ್ ಟಿವಿ ನೆಟ್‌ವರ್ಕ್ ಹಾಗೂ ಸನ್ ರೈಸರ್ಸ್ ಹೈದರಾಬಾದ್ ಮುಖ್ಯಸ್ಥೆ ಕಾವ್ಯಾ ಮಾರನ್ ಒಡೆತನದ ದಿ ಹಂಡ್ರೆಡ್‌ನ ಸನ್‌ರೈಸರ್ಸ್ ಲೀಡ್ಸ್ ಪಾಕಿಸ್ತಾನಿ ಸ್ಪಿನ್ನರ್ ಅಬ್ರಾರ್ ಅಹ್ಮದ್‌ರನ್ನು ಖರೀದಿಸಿರುವುದನ್ನು ಮಾಜಿ ಕ್ರಿಕೆಟಿಗರ ಲಿಟಲ್ ಮಾಸ್ಟರ್ ಸುನಿಲ್ ಗವಾಸ್ಕರ್ ಕಟುವಾಗಿ ವಿರೋಧಿಸಿದ್ದಾರೆ. ಪಾಕಿಸ್ತಾನಿ ಆಟಗಾರರಿಗೆ ವೇತನ ನೀಡುವುದು ಭಾರತದ ವಿರುದ್ಧ ಹಾನಿ ಮಾಡಲು ಕೊಡುಗೆ ನೀಡಿದಂತೆ ಎಂದು ನೇರ ಮಾತಿನಲ್ಲಿ ವಿರೋಧ ವ್ಯಕ್ತಪಡಿಸಿದ್ದಾರೆ. ದಿ ಹಂಡ್ರೆಡ್ ಪಂದ್ಯಾವಳಿಯಲ್ಲಿ ಭಾರತೀಯ ಫ್ರಾಂಚೈಸಿ ಮಾಲೀಕರು ಪಾಕ್ ಆಟಗಾರನನ್ನು ಖರೀದಿಸಿರುವುದು ನಿಜಕ್ಕೂ ನನಗೆ ಆಶ್ಚರ್ಯ ಮೂಡಿಸಿದೆ.

ಸಚಿನ್ 100ನೇ ಶತಕಕ್ಕೆ 14 ವರ್ಷ

• **ಮುಂಬೈ:** ಕ್ರಿಕೆಟ್ ದೇವರೆಂದೇ ಕರೆಯಲ್ಪಡುವ ಸಚಿನ್ ತೆಂಡುಲ್ಕರ್ ಅವರ 100ನೇ ಅಂತಾರಾಷ್ಟ್ರೀಯ ಶತಕದ ಮೈಲಿಗಲ್ಲಿಗೆ 14 ವರ್ಷಗಳಾಗಿವೆ. 2012ರ ಮಾ.16ರಂದು ಢಾಕಾದಲ್ಲಿ ನಡೆದಿದ್ದ ಬಾಂಗ್ಲಾದೇಶ ತಂಡದ ವಿರುದ್ಧದ ಏಷ್ಯಾ ಕಪ್ ಏಕದಿನ ಪಂದ್ಯದಲ್ಲಿ ಸಚಿನ್ ತಮ್ಮ 100ನೇ ಅಂತಾರಾಷ್ಟ್ರೀಯ ಶತಕವನ್ನು ದಾಖಲಿಸಿದ್ದರು. ಪಂದ್ಯದಲ್ಲಿ 147 ಎಸೆತಗಳನ್ನು ಎದುರಿಸಿದ್ದ ತೆಂಡುಲ್ಕರ್ ಅವರು 12 ಬೌಂಡರಿಗಳನ್ನು ಮತ್ತು ಏಕೈಕ ಸಿಕ್ಸರ್ ಒಳಗೊಂಡಿದ್ದ 114 ರನ್‌ಗಳನ್ನು ಕಲೆಹಾಕಿದ್ದರು. ಸ್ಕ್ವೇರ್ ಲೆಗ್ ಕ್ಷೇತ್ರದಲ್ಲಿ ಒಂದು ರನ್ ಕಸಿಯುವ ಮೂಲಕ ತೆಂಡುಲ್ಕರ್ ಮೈಲಿಗಲ್ಲು ಪೂರೈಸಿದ್ದರು. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಚಿನ್ 51 ಟೆಸ್ಟ್ ಮತ್ತು 49 ಏಕದಿನ ಶತಕಗಳನ್ನು ದಾಖಲಿಸಿದ್ದರು.

ಜೇಮ್ಸ್ ಫೋಸ್ಟರ್ ಸಿಎಸ್‌ಕೆ ನೂತನ ಫೀಲ್ಡಿಂಗ್ ಕೋಚ್

• **ಚೆನ್ನೈ:** ಇಂಗ್ಲೆಂಡ್‌ನ ಮಾಜಿ ಕ್ರಿಕೆಟಿಗ ಜೇಮ್ಸ್ ಫೋಸ್ಟರ್ ಅವರನ್ನು ನೂತನ ಫೀಲ್ಡಿಂಗ್ ಕೋಚ್ ಆಗಿ ನೇಮಿಸಿರುವುದಾಗಿ ಐಪಿಎಲ್ ಫ್ರಾಂಚೈಸಿ ಚೆನ್ನೈ ಸೂಪರ್ ಕಿಂಗ್ಸ್ ಸೋಮವಾರ ದೃಢೀಕರಿಸಿದೆ. ಫೋಸ್ಟರ್ ಅವರು ಇಂಗ್ಲೆಂಡ್ ಪರ 7 ಟೆಸ್ಟ್, 12 ಏಕದಿನ ಮತ್ತು 5 ಟಿ20 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ ಅನುಭವ ಹೊಂದಿದ್ದಾರೆ. ಫ್ರಾಂಚೈಸಿ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಕೋಚಿಂಗ್ ಅನುಭವವನ್ನು ಫೋಸ್ಟರ್ ಹೊಂದಿದ್ದಾರೆ. ದಿ ಹಂಡ್ರೆಡ್ ಟೂರ್ನಿಯಲ್ಲಿ ಅವರು ಬರ್ಮಿಂಗಮ್ ಫೀನಿಕ್ಸ್‌ನ ಸಹಾಯಕ ಕೋಚ್ ಆಗಿದ್ದರು.

ಕೆಎಸ್‌ಸಿಎ, ಆರ್‌ಸಿಬಿಗೆ ರಾಜ್ಯ ಸರ್ಕಾರದ ಅಧಿಕೃತ ಅನುಮತಿ

ಸರ್ಕಾರದ ಗ್ರೀನ್ ಸಿಗ್ನಲ್ ಚಿನ್ನಸ್ವಾಮಿನಲ್ಲಿ ಐಪಿಎಲ್

• **ಹೊಸದಿಲ್ಲಿ:** ಐಪಿಎಲ್ 2026ರ ಪಂದ್ಯಗಳನ್ನು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಫ್ರಾಂಚೈಸಿಗೆ ಕರ್ನಾಟಕ ಸರ್ಕಾರದಿಂದ ಸೋಮವಾರ ಅಧಿಕೃತ ಅನುಮತಿ ಲಭಿಸಿದೆ. ಈ ನಿರ್ಧಾರದಿಂದ, ಆರ್‌ಸಿಬಿ ತನ್ನ ಚೊಚ್ಚಲ ಐಪಿಎಲ್ ಪ್ರಶಸ್ತಿಯನ್ನು ಗೆದ್ದ ನಂತರದ ಸಂಭ್ರಮಾಚರಣೆಯ ವೇಳೆ ಕಾಲ್ತುಳಿತ ದುರಂತ ಸಂಭವಿಸಿತ್ತು. ಕಾಲ್ತುಳಿತ ದುರಂತದ ನಂತರ ಮೈದಾನದಲ್ಲಿ ಯಾವುದೇ ಐಪಿಎಲ್ ಅಥವಾ ಅಂತಾರಾಷ್ಟ್ರೀಯ ಪಂದ್ಯಗಳು ನಡೆಯುವ ಬಗ್ಗೆ ಇದ್ದ ಅನಿಶ್ಚಿತತೆ ಅಂತ್ಯಗೊಂಡಿದೆ.

ಕೆಎಸ್‌ಸಿಎ ಕೃತಜ್ಞತೆ

ಈ ಅನುಮತಿ ಪ್ರಕ್ರಿಯೆಗೆ ನೆರವಾದ ರಾಜ್ಯ ಸರ್ಕಾರ ಮತ್ತು ತಜ್ಞ ಸಮಿತಿಗೆ ಕೆಎಸ್‌ಸಿಎ ಧನ್ಯವಾದ ತಿಳಿಸಿದೆ. ತಜ್ಞ ಸಮಿತಿ ಕಾರ್ಯದರ್ಶಿ ಹಾಗೂ ಬೆಂಗಳೂರು ಪೊಲೀಸ್ ಆಯುಕ್ತ ಶ್ರೀಮಂತ್ ಕುಮಾರ್ ಸಿಂಗ್ ಅವರಿಗೆ ನಮ್ಮ ವಿಶೇಷ ಧನ್ಯವಾದಗಳು. ಅವರು ಸಕ್ರಿಯ ಸಂಯೋಜನೆ ನಡೆಸಿ, ಎಲ್ಲಾ ಭದ್ರತಾ ಹಾಗೂ ಕಾರ್ಯಾಚರಣಾ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಲು ನೆರವಾದರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ತಜ್ಞ ಸಮಿತಿಯ ಗೌರವಾನ್ವಿತ ಸದಸ್ಯರು ಹಾಗೂ ಅದರ ಉಪಸಮಿತಿಗಳ ಅಧಿಕಾರಿಗಳು ನೀಡಿದ ಸೂಕ್ಷ್ಮ ಪರಿಶೀಲನೆ ಮತ್ತು ರಚನಾತ್ಮಕ ಶಿಫಾರಸುಗಳು ಈ ಮಹತ್ವದ ನಿರ್ಧಾರಕ್ಕೆ ನೆರವಾದವು ಎಂದು ತಿಳಿಸಿದೆ.

ತಜ್ಞರ ಸಮಿತಿಯ ಪರಿಶೀಲನೆ ಬಳಿಕ ಅನುಮತಿ

ಅನುಮತಿ ನೀಡುವ ಮೊದಲು, ಕರ್ನಾಟಕ ಗೃಹ ಸಚಿವ ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ರಾಜ್ಯ ಸರ್ಕಾರ ನೇಮಿಸಿದ್ದ ತಜ್ಞರ ಸಮಿತಿ ಈ ಸಭೆಯಲ್ಲಿ ಭಾಗವಹಿಸಿತು. ಸಭೆಯಲ್ಲಿ ಕೆಎಸ್‌ಸಿಎ, ಆರ್‌ಸಿಬಿ ಮತ್ತು ಕಾರ್ಯಕ್ರಮ ನಿರ್ವಹಣಾ ಸಂಸ್ಥೆ ಡಿಎನ್‌ಎ ಪ್ರತಿನಿಧಿಗಳೂ ಹಾಜರಿದ್ದರು. ಚರ್ಚೆಯ ವೇಳೆ ಮುಂಬರುವ ಐಪಿಎಲ್ ಪಂದ್ಯಗಳ ಆಯೋಜನೆಗೂ ಮುನ್ನ ಮೈದಾನದಲ್ಲಿ ಕೈಗೊಳ್ಳಲಾದ ಸಿದ್ಧತೆಗಳು ಹಾಗೂ ಭದ್ರತಾ ಕ್ರಮಗಳ ಕುರಿತು ತಜ್ಞ ಸಮಿತಿ ವಿವರವಾದ ವರದಿ ಮಂಡಿಸಿತು. ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಅವರ ಪ್ರಕಾರ, ಸಮಿತಿಯ ಶಿಫಾರಸುಗಳು ಹಾಗೂ ಸರ್ಕಾರದ ಪರಿಶೀಲನೆಯ ಬಳಿಕ ಅಧಿಕೃತ ಅನುಮತಿ ನೀಡಲಾಗಿದೆ. ತಜ್ಞರ ಸಮಿತಿಯು ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೈಗೊಂಡಿರುವ ಸಿದ್ಧತೆಗಳು ಹಾಗೂ ನಿಯಮಾನುಸರಣೆ ಕ್ರಮಗಳ ಬಗ್ಗೆ ವರದಿ ಮಂಡಿಸಿತು. ವ್ಯವಸ್ಥೆಗಳನ್ನೆಲ್ಲಾ ಸಮಗ್ರ ಪರಿಶೀಲಿಸಿದ ನಂತರ ಗೌರವಾನ್ವಿತ ಗೃಹ ಸಚಿವರು ಐಪಿಎಲ್ ಪಂದ್ಯಗಳನ್ನು ಇಲ್ಲಿ ನಡೆಸಲು ಅಧಿಕೃತ ಅನುಮತಿ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಚಿನ್ನಸ್ವಾಮಿ ಮೈದಾನದಲ್ಲೇ ಟೂರ್ನಿಯ ಆರಂಭ

ಐಪಿಎಲ್ 19ನೇ ಆವೃತ್ತಿ ಮಾ.28ರಂದು ಆರಂಭವಾಗಲಿದೆ. ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವು ಸನ್ ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ವಿರುದ್ಧ ತವರಿನ ಎಂ.ಚಿನ್ನಸ್ವಾಮಿ ಮೈದಾನದಲ್ಲಿ ಕಣಕ್ಕಿಳಿಯಲಿದೆ. ಉದ್ಘಾಟನಾ ಪಂದ್ಯ ಮಾತ್ರವಲ್ಲದೆ, ಟೂರ್ನಿಯ ಉದ್ಘಾಟನಾ ಸಮಾರಂಭ ಹಾಗೂ ಆರ್‌ಸಿಬಿ ತಂಡದ ಪ್ರಸಿದ್ಧ ಅನ್‌ಬಾಕ್ಸಿಂಗ್ ಕಾರ್ಯಕ್ರಮವೂ ಇದೇ ಮೈದಾನದಲ್ಲಿ ನಡೆಯಲಿದೆ. ಇದು ಸಾಮಾನ್ಯವಾಗಿ ಹೊಸ ಆವೃತ್ತಿಯ ಆರಂಭವನ್ನು ಸೂಚಿಸುವ ಕಾರ್ಯಕ್ರಮವಾಗಿದೆ.

ಆರ್‌ಸಿಬಿ ತವರಿನ ಪಂದ್ಯಗಳ ವೇಳಾಪಟ್ಟಿ

ಐಪಿಎಲ್ 2026 ಆವೃತ್ತಿಯಲ್ಲಿ ಆರ್‌ಸಿಬಿ ತನ್ನ 7 ತವರಿನ ಪಂದ್ಯಗಳಲ್ಲಿ, ಐದು ಪಂದ್ಯಗಳನ್ನು ಅಭಿಮಾನಿಗಳ ನೆಚ್ಚಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿದೆ. ಉಳಿದ ಎರಡು ತವರಿನ ಪಂದ್ಯಗಳನ್ನು ರಾಯ್ಪುರ್‌ನ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಆಯೋಜಿಸಲು ಫ್ರಾಂಚೈಸಿ ನಿರ್ಧರಿಸಿದೆ. ಈ ವ್ಯವಸ್ಥೆಯಿಂದ ಬೆಂಗಳೂರು ತಂಡದ ಮುಖ್ಯ ತವರಿನ ಮೈದಾನವಾಗಿಯೇ ಉಳಿದಿದೆ, ಜೊತೆಗೆ ಕೆಲವು ಪಂದ್ಯಗಳನ್ನು ಪರ್ಯಾಯ ಮೈದಾನದಲ್ಲಿ ನಡೆಸಲು ಅವಕಾಶ ಸಿಗುತ್ತದೆ.



2027ರ ಒಡಿಐ ವಿಶ್ವಕಪ್ ಗೆಲ್ಲುವುದೇ ಗುರಿ: ಗಿಲ್

• **ಹೊಸದಿಲ್ಲಿ:** ಮುಂದಿನ ವರ್ಷ ನಡೆಯಲಿರುವ ಐಸಿಸಿ ಏಕದಿನ ವಿಶ್ವಕಪ್ ಗೆಲ್ಲುವುದೇ ತಮ್ಮ ತಂಡದ ಪ್ರಮುಖ ಗುರಿ ಎಂದು ಭಾರತದ ಏಕದಿನ ಕ್ರಿಕೆಟ್ ತಂಡದ ನಾಯಕ ಶುಬ್ಮನ್ ಗಿಲ್ ಸೋಮವಾರ ಹೇಳಿದ್ದಾರೆ.

2023ರ ಆವೃತ್ತಿಯ ತವರಿನ ವಿಶ್ವಕಪ್‌ನಲ್ಲಿ ಅಜೇಯ ತಂಡವಾಗಿ ಫೈನಲ್ ಪ್ರವೇಶಿಸಿದ್ದ ರೋಹಿತ್ ಶರ್ಮಾ ನೇತೃತ್ವದ ತಂಡ, ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಸೋಲುಂಡಿತ್ತು. ವಿಶ್ವಕಪ್ ಫೈನಲ್ ಸೋಲು ಭಾರತೀಯ ಕ್ರಿಕೆಟ್ ತಂಡ ಮತ್ತು ಕ್ರಿಕೆಟ್ ಅಭಿಮಾನಿಗಳಿಗೆ ಆಘಾತವನ್ನು ನೀಡಿತ್ತು.

ಟಿ20 ಗೆದ್ದಾಯ್ತು, ಇನ್ನು ಏಕದಿನ: ಭಾರತ ತಂಡ ಸತತ ಎರಡು ಟಿ20 ವಿಶ್ವಕಪ್ ಗೆದ್ದ ಬಳಿಕ ಇದೀಗ ಶುಬ್ಮನ್ ಗಿಲ್ ನೇತೃತ್ವದ ತಂಡವು ಏಕದಿನ ವಿಶ್ವಕಪ್ ಟ್ರೋಫಿಯ ಮೇಲೆ ಕಣ್ಣಿಟ್ಟಿದೆ. ಮುಂದಿನ ವರ್ಷ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ರಾಷ್ಟ್ರಗಳ ಜಂಟಿ ಆತಿಥ್ಯದಲ್ಲಿ ಏಕದಿನ ವಿಶ್ವಕಪ್ ನಡೆಯಲಿದೆ.

ಹಿಂದಿನ ವಿಶ್ವಕಪ್‌ನಲ್ಲಿ ನಾವು ಗೆಲುವಿನ ಬಹಳ ಸಮೀಪದಲ್ಲಿದ್ದೆವು. ದಕ್ಷಿಣ ಆಫ್ರಿಕಾದಲ್ಲಿ ಪ್ರಶಸ್ತಿ ಗೆಲ್ಲಲು ಇನ್ನೊಂದು ಅವಕಾಶ ಸಿಕ್ಕರೆ, ನಮಗದು ದೊಡ್ಡ ಅವಕಾಶ. ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿ ದೇಶಕ್ಕಾಗಿ ವಿಶ್ವಕಪ್ ಗೆಲ್ಲುವುದು ನಮ್ಮ ತಂಡದ ಪ್ರಮುಖ ಗುರಿ. ಆ ಯೋಚನೆ ಸದಾ ನನ್ನ ಮನಸ್ಸಿನಲ್ಲಿದೆ.

■ **ಶುಬ್ಮನ್ ಗಿಲ್, ಭಾರತ ಏಕದಿನ ತಂಡದ ನಾಯಕ**

ದಕ್ಷಿಣ ಆಫ್ರಿಕಾದಲ್ಲಿ ಇನ್ನೊಂದು ಅವಕಾಶ?

ಭಾನುವಾರ ರಾತ್ರಿ ಬಿಸಿಸಿಐ ಆಯೋಜಿಸಿದ್ದ ನಮನ್ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ನಾಯಕ ಶುಬ್ಮನ್, ಹಿಂದಿನ ವಿಶ್ವಕಪ್‌ನಲ್ಲಿ ನಾವು ಗೆಲುವಿನ ಬಹಳ ಸಮೀಪದಲ್ಲಿದ್ದೆವು. ದಕ್ಷಿಣ ಆಫ್ರಿಕಾದಲ್ಲಿ ಪ್ರಶಸ್ತಿ ಗೆಲ್ಲಲು ಇನ್ನೊಂದು ಅವಕಾಶ ಸಿಕ್ಕರೆ, ನಮಗದು ದೊಡ್ಡ ಅವಕಾಶ. ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿ ದೇಶಕ್ಕಾಗಿ ವಿಶ್ವಕಪ್ ಗೆಲ್ಲುವುದು ನಮ್ಮ ತಂಡದ ಪ್ರಮುಖ ಗುರಿ. ಆ ಯೋಚನೆ ಸದಾ ನನ್ನ ಮನಸ್ಸಿನಲ್ಲಿದೆ ಎಂದು ಅಭಿಪ್ರಾಯಿಸಿದ್ದಾರೆ.



ಯಶಸ್ಸಿನ ಪಥದಲ್ಲಿ ಭಾರತೀಯರು: ಸೂರ್ಯ



ಈ ಮಧ್ಯೆ ಕಾರ್ಯಕ್ರಮದಲ್ಲಿ ಮಾತನಾಡಿದ ಭಾರತದ ಟಿ20 ತಂಡದ ನಾಯಕ ಸೂರ್ಯ ಕುಮಾರ್ ಯಾದವ್, 2024ರ ಟಿ20 ವಿಶ್ವಕಪ್ ಜಯವು ಭಾರತೀಯ ಕ್ರಿಕೆಟಿಗರು ಯಶಸ್ಸಿನ ಪಥದಲ್ಲಿ ಓಡಲು ನೆರವಾಗಿದೆ. ಪುರುಷರ ತಂಡ ಚಾಂಪಿಯನ್ಸ್ ಟ್ರೋಫಿ ಮತ್ತು ವನಿತೆಯರು ಚೊಚ್ಚಲ ಏಕದಿನ ವಿಶ್ವಕಪ್ ಗೆದ್ದಿದ್ದರು ಎಂದು ಹೇಳಿದರು.


ಆ ಒಂದು ಹೆಜ್ಜೆ ಬಹಳ ಮುಖ್ಯವಾಗಿತ್ತು. ಐಸಿಸಿ ಟ್ರೋಫಿ ಗೆಲ್ಲಲು ಏನು ಬೇಕು ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಲು ಆ ಅನುಭವ ಬಹಳ ಮುಖ್ಯ ಎಂದು ನಾಯಕ ಸೂರ್ಯ ಕುಮಾರ್ ಹೇಳಿದರು. ಇನ್ನು ಹಿಂದೆ ತಿರುಗಿ ನೋಡುವ ಪ್ರಶ್ನೆಯೇ ಇಲ್ಲ, ಈ ಯಶಸ್ಸು ಆರಂಭವಾಗಿರುವುದರಿಂದ ಸಾಧ್ಯವಾದಷ್ಟು ಹೆಚ್ಚು ಟ್ರೋಫಿಗಳನ್ನು ಗೆಲ್ಲಲು ಪ್ರಯತ್ನಿಸೋಣ ಎಂದು ಸೂರ್ಯ ಹೇಳಿದರು.

» ಅಕ್ಟೋಬರ್-ನವೆಂಬರ್‌ನಲ್ಲಿ ಐಸಿಸಿ ಏಕದಿನ ವಿಶ್ವಕಪ್
» ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ಜಂಟಿ ಆತಿಥ್ಯ

ಸಿನ್ನರ್, ಸೆಬಲೆಂಕಾ ಚಾಂಪಿಯನ್ಸ್

» ಇಂಡಿಯನ್ ವೆಲ್ಸ್ 2026 ಎಟಿಪಿ ಮಾಸ್ಟರ್ಸ್ ಟೂರ್ನಿ
ಎಲ್ಲಾ 6 ಎಟಿಪಿ ಮಾಸ್ಟರ್ಸ್ 1000 ಹಾರ್ಡ್‌ಕೋರ್ಟ್ ಪ್ರಶಸ್ತಿ ಗೆದ್ದ 3ನೇ ಟೆನಿಸಿಗ ಯಾನಿಕ್ ಸಿನ್ನರ್





• **ಕ್ಯಾಲಿಫೋರ್ನಿಯಾ:** ಇಂಡಿಯನ್ ವೆಲ್ಸ್ ಎಟಿಪಿ ಮಾಸ್ಟರ್ಸ್ ಟೆನಿಸ್ ಪಂದ್ಯಾವಳಿಯಲ್ಲಿ ಇಟಲಿಯ ಯಾನಿಕ್ ಸಿನ್ನರ್ ಪುರುಷರ ಸಿಂಗಲ್ಸ್ ವಿಭಾಗದ ಹಾಗೂ ಬೆಲಾರೂಸ್‌ನ ಅರೀನಾ ಸೆಬಲೆಂಕಾ ಅವರು ಮಹಿಳೆಯರ ವಿಭಾಗದ ಚಾಂಪಿಯನ್ನರಾಗಿ ಹೊರಹೊಮ್ಮಿದ್ದಾರೆ.


ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಸಿನ್ನರ್ ತನ್ನ ಚೊಚ್ಚಲ ಇಂಡಿಯನ್ ವೆಲ್ಸ್ ಪ್ರಶಸ್ತಿಯನ್ನು ಗೆದ್ದರು. ಅವರು ಫೈನಲ್‌ನಲ್ಲಿ ಡೇನಿಲ್ ಮೆಡ್ವೆಡೆವ್ ಅವರನ್ನು 7–6(6), 7–6(4) ನೇರ ಸೆಟ್‌ಗಳ ಅಂತರದಿಂದ ಸೋಲಿಸಿ, ಕ್ಯಾಲಿಫೋರ್ನಿಯಾ ಮರುಭೂಮಿಯ ಸೂರ್ಯನಡಿ ಅದ್ಭುತ ಹಾರ್ಡ್‌ಕೋರ್ಟ್ ಪ್ರದರ್ಶನ ನೀಡಿದರು. ಇಟಲಿ ಆಟಗಾರ ಸಂಪೂರ್ಣ ಪಂದ್ಯದಲ್ಲಿ ಪ್ರಾಬಲ್ಯ ತೋರಿದರು. 28 ವಿನ್ನರ್‌ಗಳು

ಒಂದೂ ಸೆಟ್ ಸೋಲದೆ ಎಟಿಪಿ ಪ್ರಶಸ್ತಿ: 1990ರಿಂದ ಒಂದೂ ಸೆಟ್ ಕೂಡ ಕಳೆದುಕೊಳ್ಳದೇ ಸತತ ಎಟಿಪಿ ಮಾಸ್ಟರ್ಸ್ 1000 ಪ್ರಶಸ್ತಿಗಳನ್ನು ಗೆದ್ದ ಮೊದಲ ಆಟಗಾರ ಎಂಬ ದಾಖಲೆಯನ್ನೂ ನಿರ್ಮಿಸಿದರು. ಕಳೆದ ನವೆಂಬರ್‌ನಲ್ಲಿ ಪ್ಯಾರಿಸ್‌ನಲ್ಲಿ ಪಡೆದ ಪ್ರಶಸ್ತಿಯಿಂದ ಆರಂಭವಾದ ಅವರ ಗೆಲುವಿನ ಸರಣಿ ಈಗ 11 ಪಂದ್ಯಗಳಿಗೆ ಏರಿದೆ.

ಸೆಬಲೆಂಕಾಗೆ ವೃತ್ತಿಜೀವನದ 23ನೇ ಪ್ರಶಸ್ತಿ!: ಬೆಲಾರೂಸ್ ತಾರೆ ಅರೀನಾ ಸೆಬಲೆಂಕಾ ಭಾನುವಾರ ತಮ್ಮ ದೀರ್ಘಕಾಲದ ಸೋಲಿನ ಸರಪಣಿಯನ್ನು ಮುರಿದು, ಇದೇ ಮೊದಲ ಬಾರಿಗೆ ಇಂಡಿಯನ್ ವೆಲ್ಸ್‌ನಲ್ಲಿ ಪ್ರಶಸ್ತಿಗೆ ಮುತ್ತಿಟ್ಟಿದ್ದಲ್ಲದೆ ತಮ್ಮ ವೃತ್ತಿಜೀವನದ 23ನೇ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ರೋಚಕ ಫೈನಲ್ ಪಂದ್ಯದಲ್ಲಿ ಕಜಕಿಸ್ತಾನದ ತಾರೆ ಎಲೆನಾ ರೀಬಕಿನ ಅವರನ್ನು 3–6, 6–3, 7–6(6) ಅಂತರದಿಂದ ಸೋಲಿಸಿ ಮೊದಲ ಬಾರಿಗೆ ಕ್ಯಾಲಿಫೋರ್ನಿಯಾದಲ್ಲಿ ಪ್ರಶಸ್ತಿಗೆ ಮುತ್ತಿಟ್ಟರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5926

ಎಡದಿಂದ ಬಲಕ್ಕೆ
2.ಗಡಿಯ ನಡುವೆ ಕಟ್ಟಿದ ವ್ಯಾಯಾಮ ಶಾಲೆ (3)
5.ಮಕ್ಕಳು ಮರಳಿನಿಂದ ಕಟ್ಟಿದ ಮನೆ (4)
6. ಗೋಡಂಬಿಯನ್ನು ಹೀಗೂ ಕರೆಯುತ್ತೇವೆ (4)
7. ಮಣ್ಣಿನ ಪಾತ್ರೆ ಮಾಡುವ ಕಾಯಕದವ (3)
8.ದೃಷ್ಟಿಯೂ ಹೌದು–ಕಾಣಿಕೆಯೂ ಹೌದು (3)
10.ಭೂಮಿ–ಆಕಾಶಕ್ಕೂ ನಡುವಿನ ಪ್ರದೇಶ (4)
11.ಸಂತನ ನಡುವೆ ಕುಗ್ಗಿದ್ದು ಇದೆ (4)
13. ಈತ ಹರಿಕಥೆ ಮಾಡುವವನು (5)
15. ಜೀರ್ಣಕ್ರಿಯೆಯ ಮುಖ್ಯ ಅಂಗ (3)
16. ತಾಳ್ಮೆಯಿಂದ ಸ್ಮರಿಸಿಕೋ (3)

ಮೇಲಿನಿಂದ ಕೆಳಕ್ಕೆ
1.ಕೊಂಬೆಗಳಿಲ್ಲದ ಎತ್ತರವಾದ ಮರ (2)
2. ಗರದ ನಡುವೆ ಅಡಗಿದ ಕಠಿಣವಾದದ್ದು (4)
3.ಅಪಹಾಸ್ಯಕ್ಕೆ ಒಳಗಾದವನು ತಲೆಕೆಳಗಾಗಿದ್ದಾನೆ (4)
4. ಒಂದು ದೇಶದ ಆಡಳಿತಗಾರ (2)
7.ಬಲ ಕಡಿಮೆಯಾದದ್ದು–ಕುಗ್ಗಿದುದು (3)
9. ತಳಿರು ಇಲ್ಲಿ ತಲೆಕೆಳಗಾಗಿದೆ (3)
10. ಅಂಕದ ನಡುವೆ ಕುಜಗ್ರಹವಿದೆ (4)
12.ಅಕಸ್ಮಾತ್ ಪರಿಸ್ಥಿತಿಯಿಂದ ಮನ ಅಸ್ತವ್ಯಸ್ತವಾಗು (4)
13.ಹೀನವೂ ಹೌದು–ಎಳೆದುಹಾಕುವಿಕೆಯೂ ಹೌದು (2)
14.ಇದು ಹಣ್ಣಿನ ಸಾರ (2)

5925 ಉತ್ತರ

ಎಡದಿಂದ ಬಲಕ್ಕೆ:
2.ಅನುಕೂಲಿಗ
5.ಉಗ್ರ 6.ಧೇನು
7.ಕಲಹ 9.ಅವನಿ
11.ಕಾಯಿಸು 13.ಜನನಿ
15.ಲವ 16.ಮಾರಿ
17.ಕ್ರಮಪಡಿಸು

ಮೇಲಿನಿಂದ ಕೆಳಕ್ಕೆ :
1 .ಆಕರ್ಷಕ 2.ಅನುಗ್ರಹ
3.ಅನುರಾಗ
4.ಬಿರಿಯಾನಿ 8.ಲಡಾಯಿ
10.ವದನ 11.ಸುಚರಿತ
12.ಕಾಲಚಕ್ರ
13.ಜಮಾಯಿಸು
14.ನಿವೇದನೆ

ಇಶಾನ್ ಕಿಶನ್ ಸನ್‌ರೈಸರ್ಸ್ ನಾಯಕ?



ಟಿ20 ವಿಶ್ವಕಪ್ ಗೆಲುವಿನ ರೂವಾರಿ

ಐಸಿಸಿ ಪುರುಷರ ಟಿ20 ವಿಶ್ವಕಪ್ 2026ರಲ್ಲಿ ಇಶಾನ್ ಕಿಶನ್ ಭಾರತ ತಂಡಕ್ಕೆ ಮಹತ್ವದ ಪಾತ್ರ ವಹಿಸಿದರು. 9 ಇನ್ನಿಂಗ್ಸ್‌ಗಳಲ್ಲಿ 317 ರನ್ ಗಳಿಸಿದ ಕಿಶನ್, ಭಾರತದ ಎರಡನೇ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿದ್ದರು. ಅವರ ಸರಾಸರಿ 35.22 ಆಗಿದ್ದು, ಸ್ಟ್ರೈಕ್ ರೇಟ್ 193 ದಾಟಿತ್ತು. ಈ ಅಭಿಯಾನದಲ್ಲಿ 3 ಅರ್ಧಶತಕಗಳು ಸೇರಿದ್ದು, ಫೈನಲ್‌ನಲ್ಲೂ ಒಂದು ಅರ್ಧಶತಕ ಬಾರಿಸಿ ಭಾರತ ತಂಡಕ್ಕೆ ಪ್ರಶಸ್ತಿ ಗೆಲ್ಲಲು ನೆರವಾದರು.

• **ಹೈದರಾಬಾದ್:** ಭಾರತ ತಂಡದ ಎಡಗೈ ಬ್ಯಾಟ್ಸ್‌ಮನ್ ಇಶಾನ್ ಕಿಶನ್ ಮುಂಬರುವ ಐಪಿಎಲ್ 2026 ಹಂಗಾಮಿನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮುನ್ನಡೆಸುವ ಸಾಧ್ಯತೆಯಿದೆ. ಆಸ್ಟ್ರೇಲಿಯಾದ ವೇಗದ ಬೌಲರ್ ಪ್ಯಾಟ್ ಕಮ್ಮಿನ್ಸ್ ಯಾವಾಗ ತಂಡದೊಂದಿಗೆ ಸೇರಿಕೊಳ್ಳುತ್ತಾರೆ ಎಂಬುದರ ಕುರಿತು ಇನ್ನೂ ಸ್ಪಷ್ಟತೆ ಇಲ್ಲದಿರುವ ಕಾರಣ, ಕಿಶನ್ ನಾಯಕರಾಗಲು ಪ್ರಮುಖ ಅಭ್ಯರ್ಥಿ ಎಂಬ ನಿರೀಕ್ಷೆಯಿದೆ. ಮೂಲಗಳ ಪ್ರಕಾರ, ಈ ವಿಷಯದ ಬಗ್ಗೆ ಸನ್‌ರೈಸರ್ಸ್ ಕ್ರಿಕೆಟ್ ನಿರ್ವಹಣಾ ಮಂಡಳಿ ಚರ್ಚೆ ನಡೆಸಿದ್ದು, ಕಮ್ಮಿನ್ಸ್ ಗೈರುಹಾಜರಿಯಲ್ಲಿ ನಾಯಕತ್ವ ವಹಿಸಲು ಕಿಶನ್ ಅವರನ್ನು ಅತ್ಯಂತ ಸೂಕ್ತ ಅಭ್ಯರ್ಥಿಯನ್ನಾಗಿ ಗುರುತಿಸಿದೆ.

ಈ ವೇಳೆ ಕಿಶನ್ ಅವರ ಪ್ರದರ್ಶನವೂ ಅತ್ಯುತ್ತಮ ಮಟ್ಟದಲ್ಲಿದೆ. 27 ವರ್ಷದ ಈ ಆಟಗಾರ ಇತ್ತೀಚಿನ ಟಿ20 ವಿಶ್ವಕಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ ದೇಶದ ಗಮನ ಸೆಳೆದಿದ್ದರು. ಆರಂಭದಲ್ಲಿ ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್ ಆಗಿ ಹಾಗೂ ನಂತರ ಸಂಜು ಸ್ಯಾಮ್ಸನ್ ಪ್ಲೇಯಿಂಗ್ ಇಲೆವೆನ್‌ಗೆ ಮರಳಿದ ನಂತರ ಮೂರನೇ ಕ್ರಮಾಂಕದಲ್ಲಿ ಉತ್ತಮ ಆಟ ಪ್ರದರ್ಶಿಸಿದರು.

ಐಪಿಎಲ್‌ನಲ್ಲಿ ಕಿಶನ್ ಸ್ಫೋಟಕ ಪ್ರದರ್ಶನ: ಐಪಿಎಲ್‌ನಲ್ಲಿ ಕಿಶನ್ ಅತ್ಯಂತ ಸ್ಫೋಟಕ ವಿಕೆಟ್ ಕೀಪರ್–ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿ ತಮ್ಮ ಛಾಪು ಮೂಡಿಸಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ಸೇರಿ ಮೂರು ಫ್ರಾಂಚೈಸಿಗಳ ಪರ ಆಡಿರುವ ಅವರು ಟೂರ್ನಿಯ ಒಟ್ಟು 119 ಪಂದ್ಯಗಳ 112 ಇನ್ನಿಂಗ್ಸ್‌ಗಳಲ್ಲಿ 2,998 ರನ್ ಕಲೆಹಾಕಿದ್ದಾರೆ. ಅವರ ಸರಾಸರಿ 29.10 ಆಗಿದ್ದು, 137.64 ಸ್ಟ್ರೈಕ್ ರೇಟ್ ಅನ್ನು ಹೊಂದಿದ್ದಾರೆ.

ಅವರ ಖಾತೆಯಲ್ಲಿ 1 ಶತಕ, 17 ಅರ್ಧಶತಕಗಳು, 288 ಬೌಂಡರಿಗಳು ಹಾಗೂ 134 ಸಿಕ್ಸರ್‌ಗಳು ಸೇರಿವೆ. ಇದು ಅವರ ಆಕ್ರಮಣಕಾರಿ ಬ್ಯಾಟಿಂಗ್ ಶೈಲಿಯನ್ನು ಸ್ಪಷ್ಟಪಡಿಸುತ್ತದೆ. ವಿಕೆಟ್ ಹಿಂದೆ ಕೂಡ ಅವರು 59 ಕ್ಯಾಚ್‌ಗಳು ಮತ್ತು 5 ಸ್ಟಂಪಿಂಗ್‌ಗಳ ಮೂಲಕ ತಂಡಕ್ಕೆ ಕೊಡುಗೆ ನೀಡಿದ್ದಾರೆ.

2025ರ ಹರಾಜಿನಲ್ಲಿ 11.25 ಕೋಟಿಗೆ ಖರೀದಿ!: 2025ರ ಹಂಗಾಮಿನಲ್ಲಿ ಹರಾಜಿನಲ್ಲಿ ರೂ. 11.25 ಕೋಟಿಗೆ ಖರೀದಿಸಲ್ಪಟ್ಟ ನಂತರದ ಮೊದಲ ಸೀಸನ್‌ನಲ್ಲಿ ಅವರು 14 ಪಂದ್ಯಗಳಲ್ಲಿ 354 ರನ್ ಗಳಿಸಿದ್ದರು. ಆ ಸಂದರ್ಭದಲ್ಲಿ ಅವರ ಸ್ಟ್ರೈಕ್ ರೇಟ್ 152.58 ಆಗಿದ್ದು, ತಲಾ ಒಂದು ಶತಕ ಮತ್ತು ಅರ್ಧಶತಕವನ್ನು ಕೂಡ ದಾಖಲಿಸಿದ್ದರು.

ಆದಾಯ ಸ್ಥಿರತೆ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿಯ ಮಾರ್ಗ | ವಿಕಸಿತ ಭಾರತ–2047 ಗುರಿಯತ್ತ ದಿಟ್ಟ ಹೆಜ್ಜೆ

ವಿಬಿ ಜಿ ರಾಮ್ ಜಿ ಸಮಗ್ರ, ಸುಸ್ಥಿರ ಗ್ರಾಮೀಣ ಅಭಿವೃದ್ಧಿಯ ದಾರಿದೀಪ

ವಿಕಸಿತ ಭಾರತ–ರೋಜಗಾರ್ ಮತ್ತು ಜೀವನೋಪಾಯ ಖಾತರಿ ಮಿಷನ್ (ಗ್ರಾಮೀಣ) ಇದು ಒಂದು ಪರಿಷ್ಕೃತ ಸಮಗ್ರ, ಸುಸ್ಥಿರ ಗ್ರಾಮೀಣ ಅಭಿವೃದ್ಧಿಯ ನೂತನ ಯೋಜನೆ. ಇದು ಇಂಗ್ಲೀಷ್‌ನಲ್ಲಿ ವಿಬಿ–ಜಿ ರಾಮ್–ಜಿ (VB-GRAM-G) ಎಂದು ಸಂಕ್ಷಿಪ್ತವಾಗಿ ಕರೆಯಲಾಗುತ್ತದೆ. ಇದು ಯಾರ ಒಬ್ಬ ವ್ಯಕ್ತಿಯ, ಊರಿನ ಅಥವಾ ಧರ್ಮ ಗ್ರಂಥದ ಹೆಸರೂ ಅಲ್ಲ, ಬಲ ಅಥವಾ ಎಡಪಂಕ್ತಿಯ ಸೈದ್ಧಾಂತಿಕ ಕೃತಿಯ ಹೆಸರೂ ಅಲ್ಲ, ಇದು ಒಬ್ಬ ವ್ಯಕ್ತಿಯ ಕೇವಲ ಉದ್ಯೋಗ ಸೃಷ್ಟಿಯ ಯೋಜನೆ ಅಲ್ಲ; ಇದು ಸಮಗ್ರ ಗ್ರಾಮೀಣ ಅಭಿವೃದ್ಧಿ ಜೊತೆಗೆ ಆದಾಯ ಸ್ಥಿರತೆ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿಯ ಮಾರ್ಗವಾಗಿದ್ದು, ವಿಕಸಿತ ಭಾರತ–2047 ಗುರಿಯನ್ನು ಸಾಧಿಸಲು ಗ್ರಾಮೀಣ ಭಾರತವನ್ನು ಬಲಪಡಿಸುವ ಒಂದು ದಿಟ್ಟ ಹೆಜ್ಜೆಯಾಗಿದೆ. ಇದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005 (MGN-REGA)ರ ಬದಲಾಗಿ ದೇಶಾದ್ಯಂತ ಏ.1, 2026ರಿಂದ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.



ವಿಬಿ–ಜಿರಾಮ್–ಜಿಯೋಜನೆಯ ವಿಶೇಷತೆಗಳು: ಇದು ಹಕ್ಕು–ಆಧಾರಿತ, ಬೇಡಿಕೆ–ಪ್ರಚೋದಿತ ಗ್ರಾಮೀಣ ಉದ್ಯೋಗ ಯೋಜನೆಯಿಂದ, ವಿಕಸಿತ ಭಾರತ ಗುರಿ ಸಾಧನೆಗೆ ಹೊಂದಿಕೊಳ್ಳುವ ಬಜೆಟ್ ಮಿತಿಯ ಪೂರೈಕೆ–ಆಧಾರಿತ ಯೋಜನೆಯಾಗಿದೆ. ಅಂದರೆ ಈ ಯೋಜನೆಯು ಗ್ರಾಮೀಣ ಉದ್ಯೋಗವನ್ನು ಕೇವಲ ಕೂಲಿ ಆಧಾರಿತ ಯೋಜನೆಯಾಗಿ ಅನುಷ್ಠಾನಗೊಳಿಸದೆ, ಉತ್ಪಾದಕ ಆಸ್ತಿ ನಿರ್ಮಾಣ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿ ಮತ್ತು ಪಾರದರ್ಶಕ ಆಡಳಿತ ಹೊಂದಿದ ಸಮಗ್ರ ಗ್ರಾಮೀಣ ಅಭಿವೃದ್ಧಿ ಚೌಕಟ್ಟಾಗಿ ರೂಪಿಸಲಾಗಿದೆ.

ಜೀವನೋಪಾಯ ಕಾಮಗಾರಿಗಳು: ಕೇವಲ ತಾತ್ಕಾಲಿಕ ಕೂಲಿ ಕೆಲಸ ಒದಗಿಸುವುದರ ಜೊತೆಗೆ ಉತ್ಪಾದಕ ಮತ್ತು ದೀರ್ಘಕಾಲಿಕ ಆದಾಯ ಸೃಷ್ಟಿಸುವ ಆಸ್ತಿಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡುವುದು. ನಾಲ್ಕು ಕ್ಷೇತ್ರಗಳಲ್ಲಿ ಶಾಶ್ವತ ಆಸ್ತಿಗಳ ನಿರ್ಮಾಣ ಮಾಡಲಾಗುತ್ತದೆ. ಅಂದರೆ ನೀರಿನ ಭದ್ರತೆ, ಗ್ರಾಮೀಣ ಮೂಲಸೌಕರ್ಯ, ಜೀವನೋಪಾಯ ಸಂಬಂಧಿತ ಮೂಲಸೌಕರ್ಯ ಮತ್ತು ತೀವ್ರ ಹವಾಮಾನ ಶಮನಗೊಳಿಸುವ ಕಾಮಗಾರಿಗಳು ಈ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವುದು. ಇದರಿಂದ ದೀರ್ಘಕಾಲಿಕ ಮತ್ತು ಉತ್ಪಾದಕ ಗ್ರಾಮೀಣ ಆಸ್ತಿಗಳು ಸೃಷ್ಟಿಯಾಗುತ್ತವೆ.

ನೀರಿನ ಭದ್ರತೆ: ನೀರಿನ ಕೊರತೆ ಗ್ರಾಮೀಣ ಭಾರತದ ಮುಖ್ಯ ಸಮಸ್ಯೆಯಾಗಿದೆ. ಹೀಗಾಗಿ ವಿಕಸಿತ ಭಾರತ ಗುರಿ ಸಾಧನೆಯ ಹಿನ್ನಲೆಯಲ್ಲಿ ನೀರಿನ ಭದ್ರತೆ ಒದಗಿಸುವ ಸಲುವಾಗಿ ಕೆರೆಗಳ ಮರುನಿರ್ಮಾಣ, ಚೆಕ್‌ಡ್ಯಾಂ, ಬಂಡೆಗಳು, ಮಳೆ ನೀರು ಸಂಗ್ರಹಣೆ, ಭೂಗರ್ಭ ಜಲ ಸಂರಕ್ಷಣೆ ಮುಂತಾದ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಲು ಪ್ರಸ್ತಾವಿಸಲಾಗಿದೆ.

ಗ್ರಾಮೀಣ ಮೂಲಸೌಕರ್ಯ: ಗ್ರಾಮೀಣ ಭಾರತದ ಸಮಗ್ರ ಸುಸ್ಥಿರ ಅಭಿವೃದ್ಧಿಯಲ್ಲಿ ಮೂಲಸೌಕರ್ಯಗಳ ಪಾತ್ರ ಮಹತ್ವದ್ದು. ಇವುಗಳ ಗುಣಮಟ್ಟದ ಕೊರತೆಗಳಿಂದ ಅಭಿವೃದ್ಧಿ ಕುಂಠಿತಗೊಂಡಿದ್ದರಿಂದ, ಗ್ರಾಮೀಣ ರಸ್ತೆ, ಕಾಲುವೆಗಳು, ಸ್ಮಶಾನ ಭೂಮಿ ಅಭಿವೃದ್ಧಿ, ಸಾರ್ವಜನಿಕ ಕಟ್ಟಡ ಮುಂತಾದವುಗಳ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

ಮಹಿಳಾ ಮತ್ತು ದುರ್ಬಲ ವರ್ಗಗಳ ಸಬಲೀಕರಣ: ಈ ಯೋಜನೆಯ ಪ್ರತಿ ಕಾಮಗಾರಿಗಳಲ್ಲಿ ಕನಿಷ್ಠ ಶೇ.33ರಷ್ಟು ಮಹಿಳಾ ಕಾರ್ಮಿಕರು ಪಾಲ್ಗೊಳ್ಳುವಿಕೆಗೆ ಕಡ್ಡಾಯಗೊಳಿಸಲಾಗಿದೆ. ಕೂಲಿ ಆಧಾರಿತ ಉದ್ಯೋಗ ಒದಗಿಸುವಲ್ಲಿ ಏಕಾಂಗ ಮಹಿಳೆಯರಿಗೆ ಹಾಗೂ ಮಹಿಳಾ ಮುಖ್ಯಸ್ಥ ಕುಟುಂಬಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಐದು ಅಥವಾ ಹೆಚ್ಚು ಮಕ್ಕಳು ಕೆಲಸಕ್ಕೆ ಬರುವ ಮಹಿಳೆಯರೊಂದಿಗೆ ಇದ್ದಲ್ಲಿ, ಕಾರ್ಯಕ್ಷೇತ್ರದಲ್ಲಿ ಸೌಲಭ್ಯ ಒದಗಿಸುವುದು ಕಡ್ಡಾಯ.

ಪಾರದರ್ಶಕತೆ ಮತ್ತು ಜವಾಬ್ದಾರಿತ್ವ: ಬಯೋಮೆಟ್ರಿಕ್ ದೃಢೀಕರಣ ಮತ್ತು ಡಿಜಿಟಲ್ ಮೇಲ್ವಿಚಾರಣೆ ಮೂಲಕ ಅಕ್ರಮ ಕಾಮಗಾರಿಗಳ ಸೃಷ್ಟಿ, ಜಾಬ್ ಕಾರ್ಡ್‌ಗಳ ನೋಂದಣಿ, ವೇತನ ಪಾವತಿ ವಿಳಂಬ ಮುಂತಾದ ಸಮಸ್ಯೆಗಳನ್ನು ಇತ್ಯಾರ್ಥಗೊಳಿಸಲು ಸಾಧ್ಯ. ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನದ ಮೂಲಕ ಈ ಯೋಜನೆಯ ಕಾಮಗಾರಿಗಳ ಸಾಮಾಜಿಕ ಲೆಕ್ಕಪತ್ರ ಮತ್ತು ದೂರು ನಿವಾರಣಾ ವ್ಯವಸ್ಥೆಯನ್ನು ಬಲಪಡಿಸಲಾಗುತ್ತದೆ.

ಸಮಗ್ರ ಯೋಜನೆ ಮತ್ತು ಸಂಯೋಜನೆ: ವಿಕಸಿತ ಗ್ರಾಮ ಪಂಚಾಯತ್ ಯೋಜನೆಗಳೊಂದಿಗೆ ಇದು ಸಮನ್ವಯಗೊಳಿಲಾಗುತ್ತದೆ. ವಿಕಸಿತ ಗ್ರಾಮ ಪಂಚಾಯತ್ ಯೋಜನೆಗಳು (Viksit Gram Panchayat Plans) ಹಾಗೂ ಇತರ ಯೋಜನೆಗಳ ಸಂಯೋಜನೆಯ ಮೂಲಕ ಕೂಲಿ ಆಧಾರಿತ ಉದ್ಯೋಗವನ್ನು ಆಸ್ತಿ ನಿರ್ಮಾಣ, ಮೂಲಸೌಕರ್ಯ ಕೊರತೆ ನಿವಾರಣೆ ಮತ್ತು ದೀರ್ಘಕಾಲೀನ ಜೀವನೋಪಾಯ ವೃದ್ಧಿಯ ಕಾಮಗಾರಿಗಳೊಂದಿಗೆ ಸಂಪರ್ಕಿಸುತ್ತದೆ.

ಕೇಂದ್ರ–ರಾಜ್ಯಗಳ ನಡುವೆ ನಿಧಿ ಹಂಚಿಕೆ: ವಿಬಿ ಜಿ ರಾಮ್ ಜಿ ಯೋಜನೆಯಡಿಯಲ್ಲಿ ವಸ್ತು ಮತ್ತು ಪರಿಣತ ಕಾರ್ಮಿಕರ ಮೇಲಿನ ವೆಚ್ಚ ಶೇ.60ರಷ್ಟು ಕೇಂದ್ರ ಸರ್ಕಾರ ಮತ್ತು ಶೇ. 40ರಷ್ಟು ರಾಜ್ಯ ಸರ್ಕಾರ ಭರಿಸಬೇಕಾಗುತ್ತದೆ. ವಿಬಿ ಜಿ ರಾಮ್ ಜಿ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಪಾಲು ಕಡಿಮೆ ಮಾಡಿ ರಾಜ್ಯ ಸರ್ಕಾರದ ಪಾಲು ಶೇ.25ರಿಂದ ಶೇ.40ರಷ್ಟಕ್ಕೆ ಹೆಚ್ಚಿಸಲಾಗಿದೆ.

ಪ್ರಸ್ತುತ ಹಣಕಾಸಿನ ವರ್ಷದಲ್ಲಿ ಕೇಂದ್ರ ಸರ್ಕಾರವು ಮನರೇಗಾ ಯೋಜನೆಯಡಿಯಲ್ಲಿ 30,000 ಕೋಟಿರೂ. ಮತ್ತು ವಿಬಿ ಜಿ ರಾಮ್ ಜಿ ಯೋಜನೆಯಡಿಯಲ್ಲಿ 95,692 ಕೋಟಿ ರೂ.ಗಳನ್ನ ಕಾಯ್ದಿರಿಸಲಾಗಿದೆ. ಅಂದರೆ ಒಟ್ಟು 1,25,692 ಕೋಟಿ ರೂ.ಗಳನ್ನು ವೆಚ್ಚ ಮಾಡುವ ಉದ್ದೇಶವನ್ನು ಹೊಂದಿದೆ.

ರಾಜ್ಯ ಸರ್ಕಾರಗಳ ವಿರೋಧವೇಕೆ?: ದೇಶದ ಬಹುತೇಕ ರಾಜ್ಯಗಳು ವಿಬಿ ಜಿ ರಾಮ್ ಜಿ ಯೋಜನೆಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದರೆ, ಕರ್ನಾಟಕ ರಾಜ್ಯ ಸೇರಿದಂತೆ ತೆಲಂಗಾಣ, ತಮಿಳುನಾಡು ಮತ್ತು ಪಂಜಾಬ್ ರಾಜ್ಯಗಳುಇದರ ಅನುಷ್ಠಾನವನ್ನು ಏಕಾಏಕಿಯಾಗಿ ವಿರೋಧಿಸುತ್ತಿವುದು ವಿಷಾದನೀಯ. ಏಕೆಂದರೆ ಈ ಯೋಜನೆಯನ್ನು ಜಾರಿಗೆ ತಂದರೆ ರಾಜ್ಯ ಸರ್ಕಾರಗಳ ಮೇಲೆ ಆರ್ಥಿಕ ಭಾರ ಹೆಚ್ಚಾಗುವ ಸಾಧ್ಯತೆ ಇದೆ.

ಆದರೆ ಈ ಯೋಜನೆ ರೈತರ, ಬಡವರ, ಮಹಿಳೆಯರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜನರ, ಯುವಕರಮೇಲೆ ಅಥವಾಗ್ರಾಮೀಣ ಸುಸ್ಥಿರ ಅಭಿವೃದ್ಧಿಯ ಮೇಲೆ ಯಾವುದೇ ರೀತಿಯ ವ್ಯತಿರಿಕ್ತವಾದ ಪರಿಣಾಮ ಬೀರುವುದಿಲ್ಲ, ಇದು ಗ್ರಾಮೀಣ ಭಾರತದ ಆರ್ಥಿಕತೆಯನ್ನು ಇನ್ನಷ್ಟು ಬಲಪಡಿಸುವುದರ ಮೂಲಕ 2047ರೊಳಗೆ ವಿಕಸಿತ ಭಾರತ ಗುರಿ ಸಾಧಿಸಲು ಅಣಿಯಾಗುವಂತೆ ಪರಿಷ್ಕೃತಗೊಂಡು ಅನುಷ್ಠಾನಗೊಳ್ಳಲ್ಪಡುವ ಒಂದು ಯೋಜನೆ.

ಪ್ರೊ. ಆರ್.ಆರ್. ಬಿರಾದಾರ
ಕುಲಸಚಿವರು, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ,
ಕಲಬುರಗಿ, rrbiradar@kud.ac.in

ಕಿರುಸುದ್ದಿ

ಮಾ.19ರಂದು ರಥೋತ್ಸವ



• **ಲಕ್ಷ್ಮೇಶ್ವರ:** ಪಟ್ಟಣದ ಬಸ್ತಿ ಬಣದ ದಿ. ಪ್ರಭಣ್ಣನವರು ಓದುನವರ ಅವರ ಮಾರ್ಗದರ್ಶನದಲ್ಲಿ ಸತತ 25 ವರ್ಷಗಳಿಂದ ವಿಜೃಂಭಣೆಯಿಂದ ನಡೆದುಕೊಂಡು ಬಂದ ಶ್ರೀ ಮಾರುತಿ ದೇವಸ್ಥಾನದ ರಥೋತ್ಸವವು ಕರೆವಡಿಮಠದ ಶ್ರೀ ಮಳೆಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮಾ. 18ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ.

ಮಾ.18ರಂದು ಮಾರುತಿ, ಬಲಮುರಿ ವಿಶ್ವೇಶ್ವರ, ನವಗ್ರಹ ಹಾಗೂ ರಾಮ, ಲಕ್ಷ್ಮಣ, ಸೀತಾ ಮಾತೆಗಳಿಗೆ ಮಹಾರುದ್ರಾಭಿಷೇಕ ಪೂಜೆ ನಡೆಯಲಿದೆ. ಮಾ.19ರಂದು ಯುಗಾದಿ ಪಾಡ್ಯಯ ದಿವಸ ಸಂಜೆ 5.30 ಘಂಟೆಗೆ ಮಾರುತಿ ದೇವರ ರಥೋತ್ಸವ ವಿಜೃಂಭಣೆಯಿಂದ ನಡೆಯಲಿದೆ. ಮಾ.20ರಂದು ಸಂಜೆ 5.30 ಘಂಟೆಗೆ ಕಡುಬಿನ ಕಾಳಗ ಜರುಗಲಿದೆ ಎಂದು ಮಾರುತಿ ದೇವಸ್ಥಾನದ ಕಮಿಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಮಾಜಿಕ ಜಾಗೃತಿಗೆ ಎನ್‌ಎಸ್‌ಎಸ್ ಪ್ರೇರಕ

• **ನರಗುಂದ:** ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯ ಮಾಡುತ್ತವೆ. ಎನ್‌ಎಸ್‌ಎಸ್ ವಿದ್ಯಾರ್ಥಿಗಳಲ್ಲಿ ನಾಯಕತ್ವ, ಶಿಸ್ತಿನ ಮನೋಭಾವ, ಜವಾಬ್ದಾರಿ ಮತ್ತು ಸಹಕಾರದ ಗುಣಗಳನ್ನು ಬೆಳೆಸಲು ಸಹಾಯ ಮಾಡುತ್ತವೆ ಎಂದು ಪದವಿ ಕಾಲೇಜಿನ ಉಪನ್ಯಾಸಕ ಶಿವರಾಜ ಬೆಳ್ಳೇರಿ ಹೇಳಿದರು.

ತಾಲೂಕಿನ ಮೂಗನೂರ ಗ್ರಾಮದಲ್ಲಿ ನಡೆದ ಶ್ರೀ ಯಡಿಯೂರ ಸಿದ್ದಲಿಂಗೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಹಾಗೂ ಮೂಗನೂರ ದತ್ತು ಗ್ರಾಮದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಎನ್‌ಎಸ್‌ಎಸ್ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜಾಗೃತಿ, ರಾಷ್ಟ್ರ ಪ್ರೇಮ ಮತ್ತು ಸೇವಾ ಭಾವನೆಗಳನ್ನು ಬೆಳೆಸಿ ಅವರಿಗೆ ಉತ್ತಮ ನಾಗರಿಕ ನಿರ್ಮಾಣಲು ರೂಪಿಸುತ್ತದೆ ಎಂದು ಹೇಳಿದರು.

ಪ್ರಾಚಾರ್ಯ ಹಿರೇಗೌಡ್ರ ಮಾತನಾಡಿ, ಯುವಜನರು ದೇಶದ ಭವಿಷ್ಯ. ರಾಷ್ಟ್ರವನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸುವ ಅತಿದೊಡ್ಡ ಶಕ್ತಿ. ಅವರು ಸತ್ಯ, ನ್ಯಾಯ ಮತ್ತು ಸಮಾನತೆಯ ಮೌಲ್ಯಗಳನ್ನು ಪಾಲಿಸಿದಾಗ ಸಮಾಜದಲ್ಲಿ ಉತ್ತಮಬದಲಾವಣೆ ಸಾಧ್ಯ. ವಿದ್ಯಾರ್ಥಿಗಳು ಮಾನವೀಯ ಸಾರುವ ಮಕ್ಕಳಾಗಿ ಬೆಳೆಯಲಿ ಎಂದು ಕರೆ ನೀಡಿದರು.

ಕಾಲೇಜಿನ ಉಪನ್ಯಾಸಕ ರಮೇಶ ಐನಾಪೂರ ಮಾತನಾಡಿ, ಎನ್‌ಎಸ್‌ಎಸ್ ನ ಧ್ಯೇಯವಾಕ್ಯ ''ನಾನಲ್ಲ, ನೀನು. ಇದು ಪ್ರಜಾಸತ್ತಾತ್ಮಕ ಬದುಕಿನ ಸಾರವನ್ನು ವ್ಯಕ್ತಪಡಿಸುತ್ತದೆ ಮತ್ತು ನಿಸ್ವಾರ್ಥ ಸೇವೆಯ ಅಗತ್ಯವನ್ನು ಎತ್ತಿಹಿಡಿಯುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಪವಿತ್ರಾ ಚನ್ನಪ್ಪಗೌಡ್ರ ಪ್ರಾರ್ಥಿಸಿದರು. ಜಿ.ಎಮ್. ಕುರಿ ಸ್ವಾಗತಿಸಿದರು. ಮಲ್ಲೇಶ ಹೂಗಾರ ವಂದಿಸಿದರು. ಸುಕನ್ಯಾ ಪಾಟೀಲ ನಿರೂಪಿಸಿದರು. ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಬೆಳೆ	ಧಾರಣೆ
ಗೆಜ್ಜಿ ಶೇಂಗಾ	4769-8166
ಅಜವಾನ	6050-8219
ಅಲಸಂದಿಕಾಳು	3659-6289
ಕಡಲೆ	1109-5429
ಉದ್ದು	5312-5312
ಹೆಸರು	1059-7569
ಹುರಳಿ	4005-3274
ಜೋಳ	1459-4433
ಗೋವಿನಜೋಳ	1400-2326
ಸಾಸವಿ	4712-4869
ಕುಸಬಿ	4019-5090
ಹವೀಜ	8214-8600
ತೊಗರಿ	3712-5689
ಗೋಧಿ	1309-5469
ಮಡಕಿ	8044-8214
ಹತ್ತಿ	7601-7601
ನವನಿ	2411-2411
ಸೂರ್ಯಕಾಂತಿ	6670-6782
ಬೆಲ್ಲ	1309-5469



ಗದಗ: ತಾಲೂಕಿನ ಬಿಂಕದಕಟ್ಟಿಯ ಪ್ರಾದೇಶಿಕ ವಿಭಾಗದ ಕಚೇರಿ ಆವರಣದಲ್ಲಿ ಸೋಮವಾರ ನೂತನವಾಗಿ ನಿರ್ಮಿಸಲಾದ 'ತಿಮ್ಮಪ್ಪ ದೈವಿವನ' ಹಾಗೂ 'ಪ್ರಕೃತಿ ಅರಣ್ಯ' ಸಭಾಂಗಣವನ್ನು ಅರಣ್ಯ, ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷಕುಮಾರ ಕೆಂಚಪ್ಪನವರ, ಅರಣ್ಯ ಸಂರಕ್ಷಣಾಧಿಕಾರಿ ವಸಂತರೆಡ್ಡಿ ಕೆ.ವಿ., ಅರಣ್ಯ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಸಮಾಜದ ಪ್ರಗತಿಗೆ ಮಹಿಳೆಯರ ಕೊಡುಗೆ ಅಪಾರ

• **ಗದಗ:** ಸಮಾಜದ ಸಮಗ್ರ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ' ಎಂದು ಪ್ರಭಾರ ಕುಲಪತಿ ಪ್ರೊ.ಸುರೇಶ ನಾಡಗೌಡರ ಹೇಳಿದರು. ನಗರದ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಹಿಳೆಯರು ಕುಟುಂಬ ವ್ಯವಸ್ಥೆಯಲ್ಲಷ್ಟೇ ಅಲ್ಲದೆ ಶಿಕ್ಷಣ, ಕೃಷಿ, ಆಡಳಿತ, ಉದ್ಯಮ, ವಿಜ್ಞಾನ ಮತ್ತು ಸಾಮಾಜಿಕ ಸೇವೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸಮಾಜದ ಪ್ರಗತಿಗೆ ಮಹತ್ತರ ಕೊಡುಗೆ ನೀಡುತ್ತಿದ್ದಾರೆ' ಎಂದು ಹೇಳಿದರು.

ಪ್ರಗತಿಪರ ರೈತ ಮಹಿಳೆ ಮಂಗಳಾ ನೀಲಗುಂದ ಮಾತನಾಡಿ, 'ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಕೃಷಿ ಹಾಗೂ ಕುಟುಂಬದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದು ಪರಿಶ್ರಮ, ಆತ್ಮವಿಶ್ವಾಸ ಮತ್ತು ದೃಢ ಸಂಕಲ್ಪದಿಂದ ಯಾವುದೇ ಸವಾಲನ್ನು ಜಯಿಸಿ, ಯಶಸ್ಸನ್ನು ಸಾಧಿಸಬಹುದು' ಎಂದರು.

ಮಹಿಳೆಯರು ಶಿಕ್ಷಣ ಮತ್ತು ಕೌಶಲಾಭಿವೃದ್ಧಿಯ ಮೂಲಕ ಸಮಾಜದಲ್ಲಿ ಮುನ್ನಡೆಯಬೇಕು ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳ ವಿಶೇಷಾಧಿಕಾರಿ ಎಂ.ಬಿ. ಚನ್ನೇಗೌಡರ, ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಸಂಯೋಜಕಿ ದೀಪಾ ಪಾಟೀಲ, ರಿಯಲನ್ಸ್ ಸಂಸ್ಥೆಯ ಬೆಂಗಳೂರು ವಿಭಾಗದ ಪ್ಲೇಸ್‌ಮೆಂಟ್ ಅಧಿಕಾರಿ ಗೌತಮ್ ಇದ್ದರು.



ಗದಗ: ನಗರದ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ನಡೆಯಿತು. ಪ್ರಭಾರ ಕುಲಪತಿ ಪ್ರೊ.ಸುರೇಶ ನಾಡಗೌಡರ, ಪ್ರಗತಿಪರ ರೈತ ಮಹಿಳೆ ಮಂಗಳಾ ನೀಲಗುಂದ,ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳ ವಿಶೇಷಾಧಿಕಾರಿ ಎಂ.ಬಿ. ಚನ್ನೇಗೌಡರ, ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಸಂಯೋಜಕಿ ದೀಪಾ ಪಾಟೀಲ, ರಿಯಲನ್ಸ್ ಸಂಸ್ಥೆಯ ಬೆಂಗಳೂರು ವಿಭಾಗದ ಪ್ಲೇಸ್‌ಮೆಂಟ್ ಅಧಿಕಾರಿ ಗೌತಮ್ ಇದ್ದರು.

ಅರಣ್ಯ ಇಲಾಖೆಯಿಂದ ಪಟ್ಟಿ ಬಿಡುಗಡೆ
ಕಪ್ಪತಗುಡ್ಡದ ಒಡಲಿನಲ್ಲಿ 91 ಕೆರೆಗಳು

▸ ಸಿ.ಎಸ್.ಅರಸನಾಳ

• **ಮುಂಡರಗಿ:** ಉತ್ತರ ಕರ್ನಾಟಕ ಸಹ್ಯಾದ್ರಿ ಎಂದೇ ಪ್ರಸಿದ್ಧಿ ಹೊಂದಿದ ಗದಗ ಜಿಲ್ಲೆಯ ಕಪ್ಪತಗುಡ್ಡ ಅನೇಕ ವೈವಿಧ್ಯತೆಯನ್ನು ಹೊಂದಿ ಐತಿಹಾಸಿಕ ಘಟನೆಗಳನ್ನು ತನ್ನ ಒಡಲೊಳಗೆ ಇಟ್ಟುಕೊಂಡು ನಮ್ಮ ಕಪ್ಪತಗುಡ್ಡ ನಮ್ಮ ಸಂಪತ್ತು ಎನ್ನುವ ರೀತಿಯಲ್ಲಿ ಪ್ರವಾಸಿಗರನ್ನು ಕೈಬೀಸಿ ತನ್ನತ್ತ ಸೆಳೆಯುತ್ತಿದೆ.

ಕಪ್ಪತಗುಡ್ಡದಲ್ಲಿ ಏನ್ ಅದಾವ ಅಂತ ಕೇಳಬಾರದಂತೆ ,ಕಪ್ಪತಗುಡ್ಡದಲ್ಲಿ ಏನ್ ಇಲ್ಲಾ ಅಂತ ಕೇಳಬೇಕು ಎನ್ನುವ ವಾಡಿಕೆ ಇಲ್ಲಿ ಇದೆ. ಕಪ್ಪತಗುಡ್ಡದಲ್ಲಿ ಸಾಕಷ್ಟು ಕೆರೆಗಳು, ಝರಿಗಳು, ಹಳ್ಳಗಳು, ಕೊಳ್ಳಗಳು ಮತ್ತು ಪಡಿಗಳು ಇವೆ ಎಂಬುದನ್ನು ಕೇಳುತ್ತಾ ಬಂದಿದ್ದೇವೆ. ಕಪ್ಪತಹಿಲ್ಸ ಅರಣ್ಯ ಇಲಾಖೆ ಮುಂಡರಗಿ ಭಾಗದ ಕಪ್ಪತಗುಡ್ಡದಲ್ಲಿ ಒಟ್ಟು 91 ಕೆರೆಗಳು ಇದ್ದವು ಎಂದು ಗುರುತಿಸಿ, ಅವುಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಈ ಪ್ರತಿಯೊಂದು ಕೆರೆಗೆ ತನ್ನದೇಯಾದ ವಿಶಿಷ್ಟ ಹೆಸರು ಇದ್ದು, ಐತಿಹಾಸಿಕ ಚರಿತೆಯನ್ನು ಹೊಂದಿದೆ ಎಂದು ತಿಳಿದುಬಂದಿದೆ.

ಮುಂಡರಗಿ ತಾಲೂಕಿನ ಡೋಣಿ ಗ್ರಾಮದಲ್ಲಿ ಒಟ್ಟು 13 ಕೆರೆಗಳಿದ್ದು,ಅವುಗಳ ವಿವರ ಹೀಗಿದೆ: ಹಗಲಬತ್ತಿ ಕೆರೆ, ಕೆಂಪಾಕೆರೆ, ಹುಲಕೋಟಿ ಕೆರೆ, ಕತ್ರಿಬಸವಣ್ಣಕೆರೆ, ನೆರವರ್ತಿಕೆರೆ, ಸುಜಿಮಟ್ಟಿಕೆರೆ, ಆಶಾಕಂಪನಿಕೆರೆ, ಕರಿಬೆಂಚಿಕೆರೆ, ಅಯ್ಯನ ಕೆರೆ, ಬೂದಿಬೆಂಚಿನ ಕೆರೆ, ಹೊಸಕೆರೆ, ಆಲದಕೆರೆ, ಶಂಕದೊದಕಕೆರೆ. ಅತ್ತಿಕಟ್ಟಿ ಗ್ರಾದಕಡೆ ಎರಡು ಕೆರೆಗಳಿದ್ದು,ಅವುಗಳನ್ನು ಅತ್ತಿಕಟ್ಟಿಕೆರೆ, ಮಹಾಲಿಂಗಪೂರ ಕೆರೆ ಎನ್ನಲಾಗುತ್ತಿದೆ. ಡಂಬಳ ಗ್ರಾಮದ ಕಡೆ ಎರಡು ಕೆರೆಗಳಿದ್ದು,ಅವುಗಳು ಡೊಲಿಯಾವರ ಕೆರೆ, ರಾಜಪ್ಪಣ್ಣಕೆರೆ ಎಂದು ಹೇಳಲಾಗಿದೆ.

ತಾಲೂಕಿನ ಬಾಗೇವಾಡಿ ಗ್ರಾಮದ ಕಡೆಯಲ್ಲಿ 5 ಕೆರೆಗಳಿವೆ. ಅವುಗಳು ತುಗ್ಗಲಿಗುಂಡಿ ಕೆರೆ, ಮೇಟಿ ಕೆರೆ, ಕ್ವಾತಿಕಣವಿ ಕೆರೆ, ಕಟಗಿನಕೆರೆ, ಕಣವಿ ಬಸಪ್ಪಣ್ಣನ ಕೆರೆ. ಇನ್ನು ಮುರಡಿ ಗ್ರಾಮದ ಭಾಗದಲ್ಲಿ ಒಂದು ಕೆರೆಯನ್ನು ಗುರುತಿಸಿದ್ದು ಅದಕ್ಕೆ ಎರೆಮಲ್ಲಪ್ಪನಕೆರೆ ಎಂದು ಹೆಸರಿತ್ತು ಎನ್ನಲಾಗಿದೆ. ಕೆಲೂರ ಗ್ರಾಮದ ಭಾಗದಲ್ಲಿ ಒಂದು ಕೆರೆ ಇತ್ತು, ಅದು ಹಾಲಕೆರೆ ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದಿದೆ. ಗುಡ್ಡದಬೂದಿಹಾಳ ಗ್ರಾಮದ ಭಾಗದಲ್ಲಿ ಒಟ್ಟು 4 ಕೆರೆಗಳಿವೆ. ಅವುಗಳು ಭೀರಪ್ಪನಕೆರೆ, ಆಸೀನ ಕೆರೆ, ಮಹದಿ ಕೆರೆ, ವಕೀಲನಕೆರೆ ಎನ್ನಲಾಗಿದೆ. ಜಾಲವಾಡಗಿ ಗ್ರಾಮದ ಭಾಗದಲ್ಲಿ 5 ಕೆರೆಗಳು ಇವೆ. ಅವು ಸಾವಿರಕುರಿ ಕೆರೆ, ಫಕ್ಕೀರಪ್ಪ ಕೆರೆ, ಹೊಸಕೆರೆ, ಗೊಜನೂರಹತ್ತಿರಕೆರೆ, ಕೆಂಚಪ್ಪನಕೆರೆ ಎನ್ನಲಾಗಿದೆ.



> ಮುಂಡರಗಿ ಭಾಗದ ಕಪ್ಪತಗುಡ್ಡದಲ್ಲಿ 91 ಕೆರೆಗಳನ್ನು ಗುರುತಿಸಲಾಗಿದೆ. ಇವುಗಳು ಹೂಳು ತುಂಬಿ ಕೆರೆ ಎನ್ನುವ ಗುರುತು ಸಿಗಲಾರದಷ್ಟು ಹಾಳಾಗಿವೆ. ಇವುಗಳೆಲ್ಲವನ್ನು ಗುರುತಿಸಲಾಗಿದೆ. ಪ್ರತಿವರ್ಷ ಕ್ರಿಯಾಯೋಜನೆಯನ್ನು ತಯಾರಿಸಿ ಒಂದಿಷ್ಟು ಕೆರೆಗಳ ಹೂಳೆತ್ತುವ ಕಾರ್ಯ ಮಾಡಲಾಗುತ್ತದೆ ಮತ್ತು ಅವುಗಳಿಗೆ ನಾಮಫಲಕವನ್ನು ಅಳವಡಿಸಿ, ಅದರ ಇತಿಹಾಸವನ್ನು ಬರೆಸುವ ಕ್ರಮ ಜರುಗಿಸಲಾಗುವುದು.
>
> ■ ಮಂಜುನಾಥ ಮೇಗಲಮನಿ, ಆರ್ ಎಫ್‌ಒ, ಕಪ್ಪತಹಿಲ್ಸ ಮುಂಡರಗಿ

ಮುಂಡವಾಡ ಗ್ರಾಮದ ಭಾಗದಲ್ಲಿ ಎರಡು ಕೆರೆಗಳು..ಗೋಡಿ ಕೆರೆ ಮತ್ತು ಹೊಸಕೆರೆ, ಬಿದರಹಳ್ಳಿ ಗ್ರಾಮದ ಬಾಗದಲ್ಲಿ ಹದಗಾರ ಕೆರೆ ಇದೆ. ಮಲ್ಲಿಕಾರ್ಜುನಪುರ ಗ್ರಾಮದ ಭಾಗದಲ್ಲಿ 2 ಕೆರೆಗಳಿದ್ದು, ಅವುಗಳು ಚಿಗರಿಮರಾದಿ ಕೆರೆ, ಹೊಸಕೆರೆ ಹಾಗೂ ಹಮ್ಮಗಿ ಭಾಗದಲ್ಲಿ 4 ಕೆರೆಗಳಿದ್ದು,ಅವುಗಳು ಬರ್ಕಿಕೆರೆ, ಮಕಾಂದರಕೆರೆ, ಚೇಗಿನ್ ಕೆರೆ, ಮದ್ದಿನ ಕೆರೆ, ಇನ್ನು ಕಲಕೇರಿ ಭಾಗದಲ್ಲಿ 3 ಕೆರೆಗಳಿದ್ದು, ಅವುಗಳು ಬೆಂಚಿಕೆರೆ, ಧನದ ಕೆರೆ, ಹಗಲಬತ್ತಿಕೆರೆ. ವಿರಪಾಪೂರ ಗ್ರಾಮದ ಭಾಗದಲ್ಲಿ 3 ಕೆರೆಗಳಿದ್ದು, ಅವುಗಳು ವಿರಪಾಪೂರ ಕೆರೆ, ಬೈಪೆಕೆರೆ,ಬೀಡನಾಳ ಗ್ರಾಮದ ಭಾಗದಲ್ಲಿ 5 ಕೆರೆಗಳಿದ್ದು, ಅವುಗಳು.ಲಾಲಪ್ಪನಕೆರೆ, ಕರೆಕ್ಕನ ಕೆರೆ, ಹನುಮಗೊಡಾನ ಕೆರೆ, ಹೊಸಕೆರೆ, ನಕರಕಟ್ಟಿ ಕೆರೆ. ಕೊರ್ಲಹಳ್ಳಿ ಭಾಗದಲ್ಲಿ 5 ಕೆರೆಗಳಿದ್ದು, ಅವುಗಳು.ಸಣ್ಣಬುಲಿಕೆರೆ, ಜೋಡಾಕೆರೆ, ಕೆಂಪಕೆರೆ, ಹೊಸಕೆರೆ, ಚೌವಾಕಕೆರೆ. ಶಿಂಗಟಾಲೂರ ಭಾಗದಲ್ಲಿ ಹೊರಕೆರೆ ಎನ್ನುವ ಹೆಸರಿನ ಒಂದು ಕೆರೆ ಇದೆ.

ಹಾರೋಗೇರಿ ಭಾಗದಲ್ಲಿ ಒಟ್ಟು 11 ಕೆರೆಗಳಿದ್ದು,ಅವುಗಳು. ಸೀಮಿಕೊಳ್ಳಕೆರೆ, ಯರಗನಿ ಕೆರೆ (ಇದೆ ಹೆಸರಿನ 3 ಕೆರೆಗಳು), ಪಾಟೀಲನಕೆರೆ, ಕತ್ತಪ್ಪನಗುಡ್ಡದ ಕೆರೆ, ಕಡೆಕೊಳ್ಳದ ಕೆರೆ, ಮುಸ್ಟಿಕೊಪ್ಪಗುಡ್ಡದ ಕೆರೆ, ಮುಸ್ಟಿಕೊಪ್ಪೊಳಗಿನ ಗುಡ್ಡದ ಕೆರೆ,ಮುಸ್ಟಿಕೊಪ್ಪಹೊರಗಿನ ಗುಡ್ಡದ ಕೆರೆ, ಕಣವಿ ಕೆರೆ. ಚಿಕ್ಕವಡ್ಡಟ್ಟಿ ಗ್ರಾಮದ ಭಾಗದಲ್ಲಿ 6 ಕೆರೆಗಳಿದ್ದು,ಅವುಗಳು..ಬೂದಿಬೆಂಚಿ ಕೆರೆ, ಎಲಂಟಿ ಕೆರೆ, ಯಲ್ಲಮ್ಮನಗುಡಿ ಕೆರೆ, ಹೊಸಕೆರೆ, ಕಂಪಪ್ಪಾ ಟೇಷನ್ ಕೆರೆ, ಕೆಂಪ ಗುಡ್ಡದ ಕೆರೆ. ತಾಲೂಕಿನ ಹಿರೇವಡ್ಡಟ್ಟಿ ಭಾಗದಲ್ಲಿ ಒಟ್ಟು 15 ಕೆರೆಗಳಿದ್ದು ,ಅವುಗಳು..ಕಿರಿಕಿರಿಹೊಲದಹಟ್ಟಿ ಕೆರೆ, ನಂದಿಕೊಳ್ಳಹೊಲದಹಟ್ಟಿಕೆರೆ, ಕೆಂಗಾಲಬೆಂಚಿಕೆರೆ, ಕರ್ಲಗಟ್ಟಿಕೆರೆ, ತಾಮ್ರಗುಂಡಿಹೊಲದಹತ್ತಿಕೆರೆ, ದೊಡ್ಡಸರವಿನ ಕೆರೆ, ದೊಡ್ಡಸರವಿನಸಣ್ಣಕೆರೆ, ಕುಬೇರಪ್ಪ ನಮಠದದಾರಿ ಕೆರೆ, ಡೋಣಿರೋಡ್ ಕೆರೆ, ಅರಸಿಕೆರೆ, ಹನುಮಪ್ಪನಗುಡಿಹಿಂದಿನ ಕೆರೆ, ದುರ್ಗಮ್ಮನಗುಡಿ ಹೀಮದಿನ ಕೆರೆ, ಹನುಮಪ್ಪನಗುಡಿ ಮುಂದಿನ ಕೆರೆ, ಮತ್ತಿಕೆರೆ,ಮೇವುಂಡಿ ಹೊಲದ ಹತ್ತಿರದ ಕೆರೆ.

ಈ 91 ಕೆರೆಗಳು ಕಪ್ಪತಗುಡ್ಡದ ಒಡಲಿನಲ್ಲಿವೆ. ಮಳೆಗಾಲದಲ್ಲಿ ಎಲ್ಲ ಕೆರೆಗಳು ತುಂಬುತ್ತಿದ್ದವು. ಅಲ್ಲಿಯ ಪ್ರಾಣಿ ಪಕ್ಷಿಗಳಿಗೆ ನೀರಿನ ದಾಹ ತಣಿಸುತ್ತಿದ್ದವು ಎನ್ನುವುದು ಅನೇಕ ಹಿರಿಯರ ಅಭಿಪ್ರಾಯ.

ಸೈಬರ್ ಕ್ರೈಂ ಬಗ್ಗೆ ಜಾಗ್ರತೆ ಇರಲಿ

• **ಗದಗ:** ವಾಹನ ಚಲಾಯಿಸುವ ಸಂದರ್ಭದಲ್ಲಿ ಪ್ರತಿಯೊಬ್ಬರೂ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಇದರಿಂದಾಗಿ ಸಂಭಾವ್ಯ ಸಾವು ತಡೆಗಟ್ಟಬಹುದು. ಸಂಚಾರ ನಿಯಮಗಳನ್ನು ಎಲ್ಲರೂ ತಪ್ಪದೇ ಪಾಲಿಸಬೇಕು ಎಂದು ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮಾರುತಿ ಜೋಗದಂಡಕರ ಹೇಳಿದರು.

ನಗರದ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ದತ್ತಿ ಉಪನ್ಯಾಸದಲ್ಲಿ 'ಅಪರಾಧ ತಡೆ ಹಾಗೂ ಸೈಬರ್ ಕ್ರೈಂ ಜಾಗೃತಿ' ವಿಷಯ ಕುರಿತು ಮಾತನಾಡಿದರು.

ಪ್ರತಿಯೊಬ್ಬರೂ ತಮ್ಮ ಮನೆಯ ಒಳಗೆ ಹಾಗೂ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸುವುದರಿಂದ ಕಳವು ನಡೆಯುವುದನ್ನು ತಪ್ಪಿಸಲು ಸಾಧ್ಯ. ಸಾರ್ವಜನಿಕರು ಮನೆಗೆ ಬೀಗ ಹಾಕಿ ಊರಿಗೆ ಹೋಗುವ ಸಂದರ್ಭದಲ್ಲಿ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದರೆ ಉಚಿತವಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗುವುದು. ಯಾವುದೇ ತೊಂದರೆಯಾದರೂ ಪೊಲೀಸ್ ಇಲಾಖೆಗೆ ತಕ್ಷಣವೇ ಮಾಹಿತಿ ಹೋಗುವುದರಿಂದ ಸಿಬ್ಬಂದಿ ಆ ಸ್ಥಳಕ್ಕೆ ತೆರಳಿ ಅಪರಾಧ ಪ್ರಕರಣ ತಡೆಯುತ್ತಾರೆ' ಎಂದರು.

'ಮಹಿಳೆಯರು ಹೊರಗಡೆ ಹೋಗುವ ಸಂದರ್ಭದಲ್ಲಿ ಹೆಚ್ಚಿನ ಚಿನ್ನಾಭರಣಗಳನ್ನು ಧರಿಸಬಾರದು' ಎಂದು ಕಿವಿಮಾತು ಹೇಳಿದರು.

ಪೊಲೀಸ್ ಸಿಬ್ಬಂದಿ ಎಸ್.ಜಿ. ಹರ್ಲಾಪುರ ಮಾತನಾಡಿ, 'ಹಿಂದೆ ದರೋಡೆಗಳು ನಡೆಯುತ್ತಿದ್ದವು. ಆದರೆ, ಇಂದು ಯಾರೋ ಒಬ್ಬ ಎಲ್ಲೋ ಕುಳಿತು ನಮ್ಮ ಬ್ಯಾಂಕ್ ಖಾತೆಗೆ ಕನ್ನ ಹಾಕುತ್ತಿದ್ದಾನೆ. ಜನರು ಸೈಬರ್ ಕ್ರೈಂಗಳಕುರಿತು ಜಾಗೃತಿ ವಹಿಸಬೇಕು. ವಂಚಕರ ಆಮಿಷಗಳಿಗೆ ಬಲಿಯಾಗಬಾರದು. ಯಾವುದೇ ಕಾರಣಕ್ಕೂ ಬ್ಯಾಂಕ್ ಖಾತೆ ವಿವರ, ಒಟಿಪಿಗಳನ್ನು ಹಂಚಿಕೊಳ್ಳಬಾರದು. ಅನಾಮಧೇಯ ವ್ಯಕ್ತಿಗಳಿಂದ ಬರುವ ಸಂದೇಶಕ್ಕೆ ಪ್ರತಿಕ್ರಿಯಿಸಬಾರದು. ಎಪಿಕೆ ಫೈಲ್‌ಗಳನ್ನು ಡೌನ್‌ಲೋಡ್ ಮಾಡಬಾರದು' ಎಂದು ತಿಳಿಸಿದರು. ಸಿಪಿಐ ಧೀರಜ್ ಶಿಂಧೆ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರಾಮನಗೌಡ ವೇದಿಕೆಯಲ್ಲಿದ್ದರು.

ಸಂಸ್ಥೆಯ ಗೌರವ ಕಾರ್ಯದರ್ಶಿ ಚನ್ನವೀರಪ್ಪ ಪ್ರಭಣ್ಣ ಹುಣಸಿಕಟ್ಟಿ ಸ್ವಾಗತಿಸಿದರು. ದಾನಯ್ಯ ವೀರಯ್ಯ ಗಣಾಚಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ಉಪಾಧ್ಯಕ್ಷ ಜಯದೇವ ಎಂ. ಮೆಣಸಗಿ ಪರಿಚಯಿಸಿದರು.




ಸೌಹಾರ್ದಯುತ ಇಫ್ತಿಯಾರ್ ಕೂಟ: ಪಾಟೀಲ

• **ಮುಂಡರಗಿ:** ಹಿಂದು ಧರ್ಮದಲ್ಲಿ ಏಕಾದಶಿ, ಶಿವರಾತ್ರಿ, ನವರಾತ್ರಿ ಪವಿತ್ರ ದಿನಗಳಾದರೆ. ಮುಸ್ಲಿಂ ಧರ್ಮದಲ್ಲಿ ರಂಜಾನ್ ಪವಿತ್ರ ದಿನವಾಗಿದ್ದು, ರಂಜಾನ್‌ದಲ್ಲಿ ಮಾಡುವ ಉಪವಾಸ ವೃತ ವೈಜ್ಞಾನಿಕ ಹಿನ್ನೆಲೆ ಇದ್ದು, ಉತ್ತಮ ಆರೋಗ್ಯಕ್ಕೆ ಪೂರಕವಾಗಿದೆ ಎಂದು ರೋಣ ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ(ಮಿಥುನ) ಜಿ. ಪಾಟೀಲ ಹೇಳಿದರು.

ಡಂಬಳ ಹೋಬಳಿಯ ಡೋಣಿ ಗ್ರಾಮದ ಜುಮ್ಮಾ ಮಜ್ಜಿದಿಯಲ್ಲಿ ರಂಜಾನ್ ಹಬ್ಬದ ಅಂಗವಾಗಿ ಉಪವಾಸ ನಿರತರಿಗೆ ಆಯೋಜಿಸಿದ್ದ ಸೌಹಾರ್ದ ಇಫ್ತಿಯಾರ್ ಕೂಟದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸ್ಥಿತಿವಂತರು ದಾನ ಮಾಡುವುದು ಸಂಪ್ರದಾಯವಾದರೆ, ಉಪವಾಸವು ದೇಹಕ್ಕೆ ಶಿಸ್ತಿನ ಜೀವನಶೈಲಿ ನೀಡುತ್ತದೆ. ನಿಯಮಿತ ಉಪವಾಸದಿಂದ ದೇಹದ ಆರೋಗ್ಯ ಉತ್ತಮವಾಗುತ್ತದೆ. ಪ್ರಾರ್ಥನೆಯಲ್ಲಿ ಭಾಗಿಯಾಗುವುದರಿಂದ ಮನಸ್ಸಿಗೆ ಶಾಂತಿ ಹಾಗೂ ಆತ್ಮಸಂತೋಷ ಲಭಿಸುತ್ತದೆ ಎಂದು ಹೇಳಿದರು.

ವಕಿಲರಾದ ಬಿ.ಎಸ್.ಕೆರಿ ಮಾತನಾಡಿ, ರಂಜಾನ್ ತಿಂಗಳು ತ್ಯಾಗ, ಸಹನೆ ಮತ್ತು ಸಹೋದರತ್ವದ ಸಂಕೇತವಾಗಿದೆ. ಶಾಸಕರಾದ ಜಿ.ಎಸ್.ಪಾಟೀಲರು ಮತ್ತು ಗ್ಯಾರಂಟಿ ಸಮಿತಿ ಅಧ್ಯಕ್ಷ ರಾದ ಮಿಥುನ ಪಾಟೀಲರು ಇಫ್ತಿಯಾರ ಕೂಟ ಆಯೋಜನೆ ಮಾಡಿರುವುದು ಸಮಾಜದಲ್ಲಿ ಪರಸ್ಪರ ಪ್ರೀತಿ, ಸೌಹಾರ್ದತೆ ಮತ್ತು ಏಕತೆಯನ್ನು ಕಾಪಾಡಿಕೊಳ್ಳಲು ಇಂತಹ ಇಫ್ತಿಯಾರ್ ಕೂಟಗಳು ಸಹಕಾರಿಯಾಗುತ್ತವೆ ಎಂದು ಹೇಳಿದರು. ಗಣ್ಯರು ಹಾಗೂ ಗ್ರಾಮಸ್ಥರು ಭಾಗವಹಿಸಿ ಸೌಹಾರ್ದತೆಯ ಸಂದೇಶವನ್ನು ಸಾರಿದರು. ಉಪವಾಸ ಮುಕ್ತಾಯದ ನಂತರ ಎಲ್ಲರೂ ಸೇರಿ ಇಫ್ತಿಯಾರ್ ಸೇವಿಸಿ ಸಾಮರಸ್ಯದ ಸಂಕೇತ ಮೂಡಿಸಿದರು. ಅಂಜುಮನ್ ಅಧ್ಯಕ್ಷ ಮಾಬುಸಾಬ ಮೋದಿನಸಾಬ ಕಾಗದಗಾರ, ಕಾಶಪ್ಪ ಅಳವಂಡಿ, ಕಾಶಪ್ಪ ಹೊನ್ನೂರ, ಪ್ರಥಮದರ್ಜೆ ಗುತ್ತಿಗೆದಾರರು ಎಸ್. ಕೆ.ಹಿರೇಮಠ, ಕನಕಮೂರ್ತಿ ನರೇಗಲ್ಲ, ಈಶಪ್ಪ ಓಲಿ, ಖ್ಯಾತಪ್ಪ ತಳವಾರ, ಮಳಪ್ಪ ಜೋಂಡಿ, ಮೋದಿನಸಾಬ ಕಾಗದಗಾರ, ಪರಸಪ್ಪ ಬೆಳ್ಳಿ, ನಿಂಗಪ್ಪ ಗ್ವಾಡಿ, ಮೌನೇಶ ಹುವಣ್ಣವರ, ಅಂಜಮನ ಉಪಾಧ್ಯಕ್ಷ ಹಸನಸಾಬ ಸುಂಕದ, ಕಾರ್ಯದರ್ಶಿ ಶರೀಫ್‌ಶಿರಹಟ್ಟಿ, ಅಂಜುಮನ ಸಮಿತಿ ಸದಸ್ಯರು, ಹಿರಿಯರು, ಯುವಕರು ಇದ್ದರು.



ಕಸಾಪ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸೋಮಶೇಖರರನ್ನು ಬೆಂಬಲಿಸಿ: ಕುಷ್ಟಗಿ

• **ರೋಣ:** ಇನ್ನು ಕೆಲ ತಿಂಗಳಲ್ಲಿ ಬರುವ ಕಸಾಪ ರಾಜ್ಯಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಐಎಎಸ್ ನಿವೃತ್ತ ಅಧಿಕಾರಿ ಹಾಗೂ ಸಾಹಿತಿಗಳಾದ ಡಾ.ಸಿ. ಸೋಮಶೇಖರವರನ್ನು ಸಾಹಿತಿಗಳು ಹಾಗೂ ಕಸಾಪ ಮತದಾರರು ಬೆಂಬಲಿಸಬೇಕು ಎಂದು ನಿಕಟಪೂರ್ವ ಕೇಂದ್ರ ಸಂಘ ಸಂಸ್ಥೆ ಪ್ರತಿನಿಧಿ ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರ ಸದಸ್ಯರಾದ ನಬಿಸಾಬ ಕುಷ್ಟಗಿ ಹೇಳಿದರು.



ಅವರು ಸೋಮವಾರ ಪಟ್ಟಣದ ಪಿಡಬ್ಲುಡಿ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

ಡಾ.ಸಿ. ಸೋಮಶೇಖರವರು ಐಎಎಸ್ ಅಧಿಕಾರಿಗಳಾಗಿ ಉತ್ತಮ ಸೇವೆಯನ್ನು ಸಲ್ಲಿಸಿ ನಿವೃತ್ತರಾದವರು. ಜೊತೆಗೆ ಅಪ್ಪಟ ಕನ್ನಡಾಭಿಮಾನಿಗಳು, ಇವರು ಅನೇಕ ಸಾಹಿತ್ಯ ಚಟುವಟಿಕೆಗಳಲ್ಲಿ ಭಾಗಿಯಾಗಿ ಕನ್ನಡತನವನ್ನು ಮೆರದವರು ಎಂಬ ವಿಷಯ ರಾಜ್ಯದ ಎಲ್ಲ ಸಾಹಿತ್ಯಕಾರರಿಗೆ ತಿಳಿದಿರುವ ವಿಷಯವಾಗಿದ್ದು, ಈ ನಿಟ್ಟಿನಲ್ಲಿ ಈ ಬಾರಿಯ ಚುನಾವಣೆಯಲ್ಲಿ ಅವರನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಅವರು ತಮ್ಮ ವೃತ್ತಿ ಜೀವನವನ್ನು ಅಧ್ಯಾಪಕರಾಗಿ ಆರಂಭಿಸಿದರು. ನಂತರ ಅವರು ಐಎಎಸ್ ಪರೀಕ್ಷೆ ಪಾಸಾಗಿ ಉನ್ನತ ಉದ್ದೇಯ ಮೂಲಕ ಕನ್ನಡ ನಾಡಿನ ಸೇವೆಯನ್ನು ಸಲ್ಲಿಸಿದವರು. ಇವರು ಮುತ್ತಿನಹಾರ ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ, ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿ ಮತ್ತು ಸರ್ಕಾರದ ಪ್ರಮುಖ ಇಲಾಖೆಗಳಲ್ಲಿ ಉನ್ನತ ಹುದ್ದೆಗಳನ್ನು ಪಡೆದು ಸೇವೆಯನ್ನು ಸಲ್ಲಿಸಿರುವುದು ಇವರ ಪ್ರಾಮಾಣಿಕ ಕಾರ್ಯದ ಕೈಗನ್ನಡಿಯಾಗಿದೆ ಎಂದರು. ಸಾಹಿತ್ಯ ಕ್ಷೇತ್ರದಲ್ಲಿ ಚಿಂತನ ಚಿಲುಮೆ, ಚಿಂತನ ಕಿರಣ, ಚಿಂತನ ಚೇತನ, ಅರಿವೇ ಗುರು, ಮಾತೆಂಬುದು ಜ್ಯೋತಿರ್ಲಿಂಗ ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಬಸವ ವೇದಿಕೆ ಸ್ಥಾಪಿಸಿದ ಇವರು ಅನೇಕ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಅನೇಕ ಪ್ರಮುಖ ಪ್ರಶಸ್ತಿಗಳನ್ನು ಪಡೆದಿರುವ ಇವರು ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸಹ ತಮ್ಮ ಸೇವೆಯನ್ನು ನಾಡಿಗೆ ನೀಡಿದ್ದಾರೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕಸಾಪ ಸದಸ್ಯರು ಡಾ.ಸಿ ಸೋಮಶೇಖರವರನ್ನು ಬೆಂಬಲಿಸಬೇಕು ಎಂದು ಅವರು ಮನವಿ ಮಾಡಿದರು.ಈ ಸಂದರ್ಭದಲ್ಲಿ ಕನ್ನಡಪರ ಹೋರಾಟಗಾರ ಮೋಹನ್‌ಲಾಲ್ ಜೈನ ಉಪಸ್ಥಿತರಿದ್ದರು.

ಮರಳು ಸಾಗಿಸುತ್ತಿದ್ದ ಟ್ರ್ಯಾಕ್ಟರ್ ವಶ

• **ಲಕ್ಷ್ಮೇಶ್ವರ:** ತಾಲೂಕಿನ ಹರದಗಟ್ಟಿ ಗ್ರಾಮಕ್ಕೆ ಹೋಗುವ ರಸ್ತೆಯ ಹೊರವಲಯದ ಮಾ.15ರಂದು ರಾತ್ರಿ ಅಗಸ್ತ್ಯ ತೀರ್ಥ ಹತ್ತಿರ ಟ್ರ್ಯಾಕ್ಟರ್ ಚಾಲಕನ ತನ್ನ ಸ್ವಂತ ಲಾಭಕ್ಕಾಗಿ ಎಲ್ಲಿಂದಲೋ ಮರಳನ್ನು ಅನಧಿಕೃತವಾಗಿ ಯಾವುದೇ ಪಾಸ್ ಪರ್ಮಿಟ್ ಇಲ್ಲದೇ ಕಳ್ಳತನದಿಂದ ಟ್ರ್ಯಾಕ್ಟರ್ ಟ್ರೇಲರ್‌ದಲ್ಲಿ ತುಂಬಿಕೊಂಡು ಹರದಗಟ್ಟಿ ಮಾರ್ಗವಾಗಿ ಲಕ್ಷೇಶ್ವರ ಕಡೆಗೆ ಬರುತ್ತಿದ್ದಾಗ, ಪಿಎಸ್‌ಐ ನಾಗರಾಜ ಗಡದ ಹಾಗೂ ಅವರ ಪೊಲೀಸ್ ತಂಡ ದಾಳಿ ಮಾಡಿದಾಗ ಚಾಲಕ ಟ್ರ್ಯಾಕ್ಟರ್ ಮರಳು ತುಂಬಿದ್ದ ಟ್ರ್ಯಾಕ್ಟರ್ ಟ್ರೇಲರ್‌ನ್ನು ನಿಲ್ಲಿಸಿ ಪರಾರಿಯಾಗಿದ್ದಾನೆ.



ಚಾಲಕ ಮತ್ತು ಈ ಅಕ್ರಮ ಮರಳು ಸಾಗಾಟಕ್ಕೆ ಸಹಕರಿಸಿದ ಟ್ರ್ಯಾಕ್ಟರ್ ಮಾಲಿಕನ ಮೇಲೆ ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ವಿದ್ಯಾರ್ಥಿಗಳು ಸಜ್ಜು

• **ಲಕ್ಷ್ಮೇಶ್ವರ:** ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ತಾಲೂಕಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಿದ್ಧತೆ ಬಲು ಜೋರಾಗಿದ್ದು, ಮಾ.18ರಿಂದ ಏ.2ರವರೆಗೆ ನಡೆಯಲಿದೆ.

ಗದಗ ಜಿಲ್ಲೆಯಲ್ಲಿ 1ನೇ ಸ್ಥಾನವನ್ನು ಕಳೆದ ವರ್ಷ ಪಡೆದಿದ್ದ ಶಿರಹಟ್ಟಿ-ಲಕ್ಷ್ಮೇಶ್ವರ, ತಾಲೂಕ ಹಾಗೂ ಬೆಳಗಾವಿ ವಿಭಾಗ ಮಟ್ಟದಲ್ಲಿ 7ನೇ ಸ್ಥಾನ ಗಿಟ್ಟಿಸಿತ್ತು. ಉತ್ತಮ ಸಾಧನೆಯಿಂದ ಇನ್ನು ಹೆಚ್ಚಿನ ಸ್ಥಾನವನ್ನು ಗಳಿಸಿಕೊಳ್ಳುವ ನಿಟ್ಟಿನಲ್ಲಿ ಈ ಬಾರಿ ಅವಳಿ ತಾಲೂಕಿನ ಶಿಕ್ಷಕರ ಬಳಗ ಸನ್ನದ್ಧವಾಗಿದ್ದು ಈ ಬಾರಿಯು ವಿಶೇಷ ಕಾರ್ಯಕ್ರಮಗಳನ್ನು ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಹಮ್ಮಿಕೊಳ್ಳುವ ಮುಖಾಂತರ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಂಕಗಳನ್ನು ಗಳಿಸುವ ಸಲುವಾಗಿ ವಿಶೇಷ ತರಬೇತಿ ಕೊಟ್ಟಿದ್ದಾರೆ.

ಶಿಕ್ಷಣ ಇಲಾಖೆಯ ಸೂಚಿಸುವ ಪರೀಕ್ಷಾ ಫಲಿತಾಂಶ ಸುಧಾರಣೆಗೆ 29ಅಂಶಗಳ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಡೆಸಿದ್ದಾರೆ, ಬೆಳಗಿನ ವೇಕಪಕಾಲ್, ಸಂಜೆ ಗುಂಪಿನ ಚಟುವಟಿಕೆ, ವಿಶೇಷ ತರಗತಿ ಬೋಧನೆ, ಶಿಕ್ಷಕರು ಸ್ವಇಚ್ಛೆಯಿಂದ ರಾತ್ರಿಶಾಲೆಯಲ್ಲಿ ಓದಿನ ಮನೆ ನಿರ್ಮಾಣ, ನಿಧಾನವಾಗಿ ಕಲಿಯುವ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕಾರ್ಯಾಗಾರ, ನಡೆಸಿದ್ದು ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲು ಸಜ್ಜಾಗಿದ್ದಾರೆ.

ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕಿನಲ್ಲಿ ಒಟ್ಟು 12 ಪರೀಕ್ಷಾ ಕೇಂದ್ರಗಳು ಇದ್ದು ಅದರಲ್ಲಿ ಲಕ್ಷ್ಮೇಶ್ವರ ತಾಲೂಕಿನಲ್ಲಿ , ಉಮಾ ವಿದ್ಯಾಲಯ ಮುನ್ಸಿಪಲ್ ಪ್ರೌಢಶಾಲೆ, ಪಿಎಸ್‌ಬಿಡಿ ಬಾಲಕಿಯರ ಪ್ರೌಢಶಾಲೆ, ಸಪ್ರೌಶಾಲೆ ಪು ಬಡ್ನಿ, ಎಸ್‌ಎಸ್‌ಕೆ ಪ್ರೌಢಶಾಲೆ ಶಿಗ್ಲಿ, ಸಪ್ರೌಶಾಲೆ ಬಾಳೆಹೊಸೂರ, ಶಿರಹಟ್ಟಿ ತಾಲೂಕಿನಲ್ಲಿ ಶಿವಯೋಗೇಶ್ವರ ಪ್ರೌಢಶಾಲೆ ಹೆಬ್ಬಾಳ, ಎಫ್ ಎಂ. ಡಬಾಲಿ ಸಂಪಪೂ ಕಾಲೇಜು ಶಿರಹಟ್ಟಿ, ಎಸ್‌ಎಫ್‌ಸಿ ಆಂಗ್ಲ ಮಾಧ್ಯಮ ಪ್ರೌಶಾ ಶಿರಹಟ್ಟಿ, ಎಸ್‌ಜೆಎಫ್ ಪ್ರೌಢಶಾಲೆ ಬೆಳ್ಳಟ್ಟಿ, ಎನ್.ವ್ಹಿ. ಅಂಗಡಿ ಸ.ಪ.ಪೂ ಕಾಲೇಜ ಮಾಗಡಿ, ಶಿರಹಟ್ಟಿ ತಾಲೂಕು 14 ಸರ್ಕಾರಿ ಶಾಲೆ 8 ಅನುದಾನಿತ, 2ಅನುದಾನ ರಹಿತ ಪ್ರೌಢಶಾಲೆ, ಲಕ್ಷ್ಮೇಶ್ವರ 14 ಸರ್ಕಾರಿ ಶಾಲೆಗಳು 8 ಅನುದಾನಿತ, 14ಅನುದಾನ ರಹಿತ ಪ್ರೌಢಶಾಲೆ ಗಳು, ಪ್ರಥಮವಾಗಿ ಒಟ್ಟು 2839 ವಿದ್ಯಾರ್ಥಿಗಳ ಪರೀಕ್ಷೆ ಬರಿಯಲಿದ್ದಾರೆ.



> ### ಸಹಾಯವಾಣಿ
> ಎಸ್ ಎಸ್ ಎಲ್ ಸಿ ಪರೀಕ್ಷಾ ಸಹಾಯವಾಣಿ ಪರೀಕ್ಷೆಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸಲು, ರಾಘವೇಂದ್ರ ಜೋಶಿ (ಶಿಕ್ಷಣ ಸಂಯೋಜಕರು)8762614592,ಉಮೇಶ ಹುಚ್ಚಯ್ಯನಮಠ 7829446825 ಈ ಸಂಖ್ಯೆಗಳಿಗೆ ಕರೆ ಮಾಡಬಹುದು.

ಪರೀಕ್ಷಾ ಸಿಬ್ಬಂದಿಗಳು: ಅದಿಕ್ಷಕರು 12 , ಕಷ್ಟೋಡಿಯನ್ 12, ಸ್ಥಾನಿಕ ಜಾಗೃತದಳದ ಅಧಿಕಾರಿ 12, ಮಾರ್ಗಾದಿಕಾರಿಗಳು 6, ಮೊಬೈಲ್ ಸ್ವಾದಿನಾದಿಕಾರಿಗಳು 12, ಕೊಠಡಿ ಮೇಲ್ವಿಚಾರಕರು 230, ಆರೋಗ್ಯ ಇಲಾಖೆಯ 24, ಪೊಲೀಸ ಸಿಬ್ಬಂದಿಗಳು 30 ಒಟ್ಟು 338 ಸಿಬ್ಬಂದಿಗಳು ಕಾರ್ಯ ನಿರ್ವಹಿಸಲಿದ್ದಾರೆ, ಪರೀಕ್ಷಾ ಕೇಂದ್ರಗಳಲ್ಲಿ 5ಕೇಂದ್ರಗಳು ಕ್ಲಸ್ಟರ ರಹಿತ ಪರೀಕ್ಷಾ ಕೇಂದ್ರಗಳಾಗಿವೆ, 7ಪರೀಕ್ಷಾ ಕೇಂದ್ರ ಕ್ಲಸ್ಟರ ಸಹಿತವಾಗಿವೆ,

ಜಿಲ್ಲಾಧಿಕಾರಿಗಳ ಆದೇಶದಂತೆ ಪರೀಕ್ಷೆಯ ಮೊದಲು ಹಾಗೂ ನಂತರ ಮಕ್ಕಳು ಸರಿಯಾದ ಸಮಯಕ್ಕೆ ಪರೀಕ್ಷಾ ಕೇಂದ್ರಗಳಿಗೆ ಹಾಗೂ ಮನೆಗೆ ತೆರಳಲು ಅನುಕೂಲವಾಗುವಂತೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ, ಪ್ರವೇಶ ಪತ್ರ ತೋರಿಸಿ ಕೆ ಎಸ್ ಆರ್ ಟಿ ಸಿ ಬಸ್ ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅನುಕೂಲ ಮಾಡಲಾಗಿದೆ,

ಅವೈಜ್ಞಾನಿಕ ರಸ್ತೆ ಕಾಮಗಾರಿಯಿಂದ ಬೇಸತ್ತ ಜನ

• **ಗದಗ:** ನಗರದ ಪ್ರಮುಖ ರಸ್ತೆಗಳು ದುರಸ್ತಿಯಾದರೆ ಸಾಕಪ್ಪ. ಎನ್ನುತ್ತಿದ್ದ ಜನರಿಗೆ ಬನ್ನಿಕಟ್ಟಿ ವೃತ್ತದ ಬಳಿ ಹೊಸದಾಗಿ ನಿರ್ಮಾಣ ವಾಗುತ್ತಿದ್ದ ರಸ್ತೆ ನಗರದ ಜನರಿಗೆ ಸಮಾಧಾನ ತಂದಿತ್ತು ಆದರೆ ಹೊಸ ರಸ್ತೆಯನ್ನು ಹಿಂದೆಯಿದ್ದ ರಸ್ತೆಗಿಂತ ಎತ್ತರಕ್ಕೆ ಏರಿಸಿದ್ದು ಸವಾರರಿಗೆ ತಲೆನೋವಾಗಿದೆ.

ನಗರದ ಹಳೇ ಡಿಸಿ ಆಫೀಸ್ ನಿಂದ ಮುಳಗುಂದ ನಾಕಾ ಹೋಗುವ ರಸ್ತೆಯಲ್ಲಿ ಬರುವ ಬನ್ನಿಕಟ್ಟಿ ವೃತ್ತದಲ್ಲಿ ಸಿ ಸಿ ರಸ್ತೆ ಕಾಮಗಾರಿ ಪ್ರಾರಂಭ ಆಗಿದ್ದಾಗಿಂದಲೂ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಈ ಮೊದಲು ಕಾಮಗಾರಿಗೆ ಬಳಸಲು ಬೇಕಾಗ ಮರಳನ್ನು ರಸ್ತೆಯಲ್ಲಿ ಹಾಕಿ ಹಲವಾರು ತಿಂಗಳು ಹಾಗಿಯೇ ಬಿಟ್ಟಿದ್ದರಿಂದ ರಸ್ತೆಯ ತುಂಬೆಲ್ಲಾ ಮರಳು ಹರಡಿದ್ದರಿಂದ ಮಾರುಕಟ್ಟೆಗೆ ಹೋಗುವ ಹತ್ತಾರು ವಾಹನಸವಾರರ ವಾಹನಗಳು ಸ್ಕಿಡ್ ಆಗಿ ಜಾರಿ ಬಿದ್ದಿರುವ ಅನೇಕ ಉದಾರಣೆಗಳಿವೆ.

ಕಾಮಗಾರಿ ಪ್ರಾರಂಭವಾದ ಬಳಿಕ: ನರಗದ ಪ್ರಮುಖ ರಸ್ತೆಗಳಲ್ಲಿ ಒಂದಾದ ಬನ್ನಿಕಟ್ಟಿ ವೃತ್ತದ ರಸ್ತೆಯಿಂದ ಪ್ರತಿದಿನ ನೂರಾರು ಜನರು ಜಿಲ್ಲಾಡಳಿತ ಕಚೇರಿಗೆ,ಜಿಲ್ಲಾ ಆಸ್ಪತ್ರೆಗೆ,ಜಿಲ್ಲಾ ನ್ಯಾಯಾಲಕ್ಕೆ ಹೋಗುತ್ತಾರೆ. ಹಾಗಾಗಿ ಬನ್ನಿಕಟ್ಟಿ ವೃತ್ತದ ಬಳಿ ಸಿ ಸಿ ರಸ್ತೆ ಕಾಮಗಾರಿ ಪ್ರಾರಂಭವಾದ ದಿಂದದಿಂದ ಇಲ್ಲಿಯವರೆಗೂ ಸರಿಯಾದ ಮಾರ್ಗವಿಲ್ಲದ ಕಾರಣ ವಾಹನ ದಟ್ಟಣೆಗೆ ಜನರು ಬೇಸತ್ತು ಹೋಗಿದ್ದಾರೆ.



ಕಾಮಗಾರಿ ಮುಕ್ತಾಯದ ಹಂತಕ್ಕೆ ಬಂದಾಗ: ಇನ್ನೆನ್ನೂ ರಸ್ತೆ ಕಾಮಗಾರಿ ಮುಗೀತು ಇನ್ನೂ ಮುಂದಾದರೂ ನೆಮ್ಮದಿಯಿಂದ ಸಂಚರಿಸಬಹುದೆಂಬ ಜನರ ಆಸೆಗೆ ತಣ್ಣೀರೆರಚಿದ ಹಾಗಾಗಿದೆ ಬನ್ನಿಕಟ್ಟಿ ವೃತ್ತದ ಬಳಿ ಮೂರು ರಸ್ತೆಗಳು ಕೂಡುತ್ತಿದ್ದು, ಹೊಸ ರಸ್ತೆ ಕಾಮಗಾರಿ ಕೇವಲ ಒಂದು ರಸ್ತೆಗೆ ಸೀಮಿತವಾಗಿದ್ದು ಇನ್ನುಳಿದ ರಸ್ತೆಗಳು ತಗ್ಗಿನ ಪ್ರದೇಶದಲ್ಲಿದ್ದು ಹೊಸ ರಸ್ತೆ ಎತ್ತರದ ಪ್ರಮಾಣಕ್ಕೆ ಆಗಿದೆ ಹಾಗಾಗಿ ಮಾರುಕಟ್ಟೆಗೆ ಹೋಗುವ ಹಾಗೂ ಮಾರುಕಟ್ಟೆಯಿಂದ ಶಿವಾನಂದ ಮಠದ ರಸ್ತೆಗೆ ,ಮುಳುಗುಂದ ನಾಕ ಗೆ ಹೋಗುವ ಜನರು ಹೊಸ ರಸ್ತೆಗೆ ತಮ್ಮ ದ್ವಿಚಕ್ರವಾಹನಗಳನ್ನು ಏರಿಸಲು ಹಾಗೂ ಇಳಿಸಲು ಹೈರಾಣರಾಗಿದ್ದಾರೆ ಇದರಿಂದ ವಾಹನಗಳ ಅದುವೇ ಪ್ರತಿ ದಿನ ಅಪಘಾತಗಳು ಸಂಭವಿಸುತ್ತಿವೆ.

> ರಸ್ತೆಯನ್ನು ಇಷ್ಟು ಎತ್ತರಕ್ಕೆ ಏರಿಸಿದ್ದರಿಂದ ಪ್ರತಿದಿನ ಹತ್ತಾರು ಮಂದಿ ವಾಹನ ಹಾಕಿಕೊಂಡು ಬೀಳುವ ಪರಿಸ್ಥಿತಿ ಎದುರಾಗಿದೆ ಯುವಕರು ಹೇಗೂ ಹೋಗುತ್ತಾರೆ ಆದರೆ ನನ್ನಂತ ವಯಸ್ಸಾದವರು ಜೀವ ಕೈಯಲ್ಲಿ ಹಿಡಿದುಕೊಂಡು ಓಡಾಡುವಂತಾಗಿದೆ.
>
> ■ ಹನುಮಂತ ವರ್ಣೇಕರ್.ಬೈಕ್ ಸವಾರ.

ಸೂಚನಾ ಫಲಕಗಳು ಮಾಯ: ನಗರದ ಪ್ರಮುಖ ಹಾಗೂ ಜನದಟ್ಟಣೆಯ ರಸ್ತೆಗಳ ಕಾಮಗಾರಿ ಪ್ರಾರಂಭ ಆದ ಕೂಡಲೇ ಸಾರ್ವಜನಿಕರಿಗೆ ತಿಳಿಯುವ ಹಾಗೇ,ಕಾಮಗಾರಿ ಪ್ರಗತಿಯಲ್ಲಿದೆ ನಿಧಾನವಾಗಿ ಚಲಿಸಿ,ಎನ್ನುವಂತ ಸೂಚನ ಫಲಕ ಸೇರಿದಂತೆ ಜಾಗೃತ ಫಲಕಗಳನ್ನು ಅಳವಡಿಸಬೇಕು ಆದರೆ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ರಸ್ತೆ ಕಾಮಗಾರಿ ಪ್ರಾರಂಭ ವಾಗಿ ಇಲ್ಲಿಯವರೆಗೂ ಯಾವುದೇ ಸೂಚನಾ ಫಲಕಗಳು ಕಾಣದಿರುವುದು ವಿಪರ್ಯಾಸ.

ಜಿಲ್ಲೆಯಾದ್ಯಂತ ಮಾದರಿ ನೀತಿ ಸಂಹಿತೆ ಜಾರಿ | ಜಿಲ್ಲಾಧಿಕಾರಿ ಸಂಗಪ್ಪ ಮಾಹಿತಿ

ಉಪ ಚುನಾವಣೆ: ಏ.9ಕ್ಕೆ ಮತದಾನ

ಬಾಗಲಕೋಟೆ: ಭಾರತ ಚುನಾವಣಾ ಆಯೋಗವು ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪಚುನಾವಣೆಗೆ ಅಧಿಸೂಚನೆ ಹೊರಡಿಸಿದ್ದು, ಉಪ ಚುನಾವಣೆಗೆ ಏ.9ರಂದು ಮತದಾನ ನಡೆಯಲಿದೆ. ಬಾಗಲಕೋಟೆ ಮತಕ್ಷೇತ್ರದ ಉಪಚುನಾವಣೆಯನ್ನು ಪಾರದರ್ಶಕತೆಯಿಂದ ನಡೆಸಲು ಜಿಲ್ಲಾಡಳಿತ ವ್ಯವಸ್ಥೆ ಮಾಡಿಕೊಂಡಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ನಾಮಪತ್ರ ಸಲ್ಲಿಕೆ ಆರಂಭ

ಜಿಲ್ಲಾಧಿಕಾರಿಗಳ 'ಳ' ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಉಪ ಚುನಾವಣೆಗೆ ಮಾ.16ರಂದು ಅಧಿಸೂಚನೆ ಹೊರಡಿಸಲಾಗಿದ್ದು, ನಾಮಪತ್ರ ಸಲ್ಲಿಕೆಗೆ ಮಾ.23 ಕೊನೆಯ ದಿನವಾಗಿದೆ. ಮಾ.24 ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಮಾ.26 ಕೊನೆಯ ದಿನವಾಗಿದೆ. ಏ. ರಂದು ಮತದಾನ ನಡೆಯಲಿದ್ದು, ಮತ ಎಣಿಕೆ ಮೇ 4ರಂದು ನಡೆಯಲಿದೆ. ಮಾದರಿ ನೀತಿ ಸಂಹಿತೆಯು ಮಾ.15ರಿಂದ ಜಿಲ್ಲೆಯಾದ್ಯಂತ ಜಾರಿಯಾಗಿದೆ ಎಂದು ತಿಳಿಸಿದರು.

ಮತಕ್ಷೇತ್ರದಲ್ಲಿ 2.59 ಲಕ್ಷ ಮತದಾರರು: ಮತಕ್ಷೇತ್ರದಲ್ಲಿ 319 ಮತಗಟ್ಟೆಗಳಿದ್ದು, ಗ್ರಾಮೀಣ ಪ್ರದೇಶದಲ್ಲಿ 176, ನಗರ ಪ್ರದೇಶದಲ್ಲಿ 143 ಮತಗಟ್ಟೆಗಳಿವೆ. ಫೆಬ್ರವರಿ 14ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಾರ ಒಟ್ಟು 2,59,260 ಮತದಾರರಿದ್ದು, ಅದರಲ್ಲಿ 1,26,761 ಪುರುಷ, 1,32,476 ಮಹಿಳಾ ಮತದಾರರಿದ್ದಾರೆ. ಯುವ ಮತದಾರರು ಒಟ್ಟು 4188, 85ಕ್ಕಿಂತ ಹೆಚ್ಚಿನ ವಯಸ್ಸಿನ ಮತದಾರರು 3017, ಪಿಡಬ್ಲ್ಯೂಡಿ ಮತದಾರರು 2633, 100ಕ್ಕಿಂತ ಹೆಚ್ಚಿನ ವಯಸ್ಸಿನ ಮತದಾರರು 38 ಹಾಗೂ 391 ಸೇವಾ ಮತದಾರರು ಇದ್ದಾರೆ ಎಂದರು.

ನೀತಿ ಸಂಹಿತೆಗೆ ತಂಡಗಳ ರಚನೆ: ಜಿಲ್ಲೆಯಲ್ಲಿ ಜಿಪಂ ಸಿಇಒ ಮಾದರಿ ನೀತಿ ಸಂಹಿತೆಯ ನೋಡಲ್ ಅಧಿಕಾರಿಯಾಗಿದ್ದು, ಅಭ್ಯರ್ಥಿಯ 40 ಲಕ್ಷ ರೂ. ಗಳವರೆಗೆ ಖರ್ಚು ಮಾಡಬಹುದಾಗಿದೆ. ಜಿಲ್ಲೆಯಾದ್ಯಂತ ಒಟ್ಟು 29 ಸೆಕ್ಟರ್ ಅಧಿಕಾರಿಗಳು, 60 ಫ್ಲಾಯಿಂಗ್ ಸ್ಕ್ವಾಡ್, 24 ಚೆಕ್‌ಪೋಸ್ಟ್, 72 ಸ್ಟಾಟಿಕ್ ಸರ್ವೆಲೆನ್ಸ್ ತಂಡ, 22 ವಿಡಿಯೋ ಸರ್ವೆಲೆನ್ಸ್ ತಂಡಗಳನ್ನು ರಚಿಸಲಾಗಿದೆ ಎಂದರು. ಹೆಚ್ಚುವರಿ ಜಿಲ್ಲಾಧಿಕಾರಿ ಅಶೋಕ ತೇಲಿ ಪತ್ರಿಕಾಗೋಷ್ಠಿಯಲ್ಲಿದ್ದರು.



ಉಪಚುನಾವಣೆಗೆ 24 ಚೆಕ್‌ಪೋಸ್ಟ್: ಎಸ್ಪಿ

ಉಪಚುನಾವಣೆ ನಡೆಯುತ್ತಿರುವುದರಿಂದ ಈಗಾಗಲೇ ಜಿಲ್ಲೆಯಲ್ಲಿ 24 ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಎಸ್ಪಿ ಸಿದ್ದಾರ್ಥ ಗೋಯಲ್ ತಿಳಿಸಿದರು. ಮುಧೋಳ ಕ್ಷೇತ್ರದಲ್ಲಿ ಯಾದವಾಡ ಸರ್ಕಲ್, ಲಕ್ಷಾನಟ್ಟಿ ಕ್ರಾಸ್, ಸಂಗೊಳ್ಳಿ ರಾಯಣ್ಣ ಸರ್ಕಲ್, ತೇರದಾಳ ಕ್ಷೇತ್ರದಲ್ಲಿ ಬುದ್ನಿ ಪಿಡಿ ಕ್ರಾಸ್, 4ನೇ ಕೆನಾಲ್ ತೇರದಾಳ, ಎಪಿಎಂಸಿ ಕ್ರಾಸ್ ಮಹಾಲಿಂಗಪೂರ, ಜಮಖಂಡಿ ಕ್ಷೇತ್ರದಲ್ಲಿ ಚಿಕ್ಕಲಕಿ ಕ್ರಾಸ್, ಹುನ್ನೂರ, ಹುಲ್ಯಾಳ ಕ್ರಾಸ್, ಬೀಳಗಿ ಕ್ಷೇತ್ರದಲ್ಲಿ ಕೊರ್ತಿ ಕೋಲಾರ ಬ್ರಿಡ್ಜ್, ಅನಗವಾಡಿ ಕ್ರಾಸ್, ಗುಗ್ಗಲಮರಿ, ಗುಡೂರ ಎಸ್‌ಸಿ (ಹೂಲಗೇರಿ ಕ್ರಾಸ್)ನ ಸೇರಿದಂತೆ ವಿವಿಧ ಕಡೆ ಚೆಕ್‌ಪೋಸ್ಟ್ ಸ್ಥಾಪಿಸಲಾಗಿದೆ ಎಂದರು.

ಚುನಾವಣಾ ಅಧಿಕಾರಿಗಳ ವಿವರ

ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಸಂಗಪ್ಪ, ಮಾದರಿ ನೀತಿ ಸಂಹಿತೆ ಪಾಲನಾ ನೋಡಲ್ ಅಧಿಕಾರಿಯಾಗಿ ಜಿ.ಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ವರಿಷ್ಠಾಧಿಕಾರಿ ಸಿದ್ದಾರ್ಥಗೋಯಲ್, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಯಾಗಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆಯ ಚುನಾವಣಾಧಿಕಾರಿ ಹಾಗೂ ಮತದಾರರ ನೋಂದಣಿ ಅಧಿಕಾರಿಯಾಗಿ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಸಹಾಯಕ ಚುನಾವಣಾಧಿಕಾರಿ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಯಾಗಿ ಬಾಗಲಕೋಟೆ ತಹಶೀಲಾರ್ ವಾಸುದೇವ ಸ್ವಾಮಿ, ಹುನಗುಂದ ತಹಶೀಲ್ದಾರ್ ಡಾ.ಪ್ರದೀಪಕುಮಾರ ಅವರನ್ನು ನೇಮಕ ಮಾಡಲಾಗಿದೆ.

ಮತದಾರರ ಸೆಳೆಯಲು ಆಮಿಷಯೊಡ್ಡಿದರೆ ಮಾಹಿತಿ ನೀಡಿ: ಕುರೇರ

ಚುನಾವಣೆಯ ಸಂದರ್ಭದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಮತದಾರರನ್ನು ಸೆಳೆಯಲು ರಾಜಕೀಯ ಮುಖಂಡರು ದುಡ್ಡು, ಮದ್ಯ, ಗಿಫ್ಟ್‌ಗಳನ್ನು ಹಂಚಿಕೆ ಮಾಡುತ್ತಿದ್ದರೆ ಸಾರ್ವಜನಿಕರು ದೂರು ನೀಡಿದರೆ ತಕ್ಷಣವೇ ಕ್ರಮ ವಹಿಸಲಾಗುವುದು. ಮಾಹಿತಿ ನೀಡುವವರ ಹೆಸರನ್ನು ಬಹಿರಂಗಪಡಿಸುವುದಿಲ್ಲ. ಪಾರದರ್ಶಕ ಮತದಾನಕ್ಕೆ ಎಲ್ಲರೂ ಕೈ ಜೋಡಿಸಬೇಕಾಗಿದೆ ಎಂದು ಜಿಲ್ಲಾ ಚುನಾವಣೆ ನೀತಿ ಸಂಹಿತೆ ಪಾಲನಾ ನೋಡಲ್ ಅಧಿಕಾರಿ ಶಶಿಧರ ಕುರೇರ ತಿಳಿಸಿದರು. ಕಳೆದ ವಿಧಾನಸಭೆಯ ಚುನಾವಣೆಯಲ್ಲಿ ಹಣ, ಇನ್ನಿತರ ಸಾಮಾಗ್ರಿಗಳ ಹಂಚಿಕೆ ಕುರಿತು 240 ಪ್ರಕರಣ ದಾಖಲಾಗಿದ್ದವು. ಚುನಾವಣಾ ಅಧಿಕಾರಿಗಳು ಎಲ್ಲದರ ಮೇಲೆ ಕಣ್ಣಿಟ್ಟಿರುತ್ತದೆ ಎಂದರು.

ಕಾಂಗ್ರೆಸ್‌ನಿಂದ ಜನರ ಮೂಗಿಗೆ ತುಪ್ಪ ಹಚ್ಚುವ ಕೆಲಸ: ಚರಂತಿಮಠ

ಬಾಗಲಕೋಟೆ: 1998ರಿಂದ 2000ರ ವರೆಗೆ ನಮ್ಮ ಸಂಘದ ಸದಸ್ಯರ ಸಹಕಾರ ಹಾಗೂ ಬ್ಯಾಂಕ್‌ನಲ್ಲಿ ಸಾಲ ಪಡೆದುಕೊಂಡು ನಾನು ಒಬ್ಬನೇ ಬಿವ್ಹಿವ್ಹಿ ಸಂಘದಿಂದ ಮೆಡಿಕಲ್ ಕಾಲೇಜ್ ಮಾಡಿದ್ದೇನೆ. ಆದರೆ, ಎಂಟು ವರ್ಷವಾದರೂ ಮೆಡಿಕಲ್ ಕಾಲೇಜ್ ಮಾಡದವರು ಈಗ ಜನರ ಮೂಗಿಗೆ ತುಪ್ಪ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಮುಳುಗಡೆ ಜನರ ಅಭಿವೃದ್ಧಿಗೆ ಯಾವುದೇ ಕೆಲಸ ರಾಜ್ಯ ಸರ್ಕಾರ ಮಾಡುತ್ತಿಲ್ಲ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಆರೋಪಿಸಿದರು.



> ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆಯಲ್ಲಿ ಯಾರೋ ಒಬ್ಬ ಕಿಡಿಗೇಡಿ ಚಪ್ಪಲಿ, ಕಲ್ಲು ಎಸೆದರೆ ಶಿವಾಜಿ ಮಹಾರಾಜರು ಸಣ್ಣವರಾಗುವುದಿಲ್ಲ. ಎಲ್ಲ ಸಮುದಾಯದವರ ಮೆರವಣಿಗೆ ಇರುತ್ತವೆ. ಅದು ಶಾಂತಿಯುತವಾಗಿ ನಡೆಯಬೇಕು. ಮುಸ್ಲಿಂ ಸಮುದಾಯದವರು ಅಬ್ದುಲ್ ಕಲಾಂ ರೀತಿ ಜೀವನ ನಡೆಸಬೇಕು. ಕಿಡಿಗೇಡಿಗಳು ಒಸಾಮಾ ಬಿನ್ ಲಾಡೆನ್ ತರಹ ಬದುಕಬಾರದು.
>
> ■ ವೀರಣ್ಣ ಚರಂತಿಮಠ, ಮಾಜಿ ಶಾಸಕ

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮೂರು ವರ್ಷದಿಂದ ವಾರಸುದಾರರು ಇಲ್ಲವೇ ಯಾರು ಕ್ಷೇತ್ರದಲ್ಲಿ ಅಧಿಕಾರ ನಡೆಸುತ್ತಿದ್ದಾರೆ. ದಿ.ಶಾಸಕ ಎಚ್.ವೈ.ಮೇಟಿಯವರು ಇದ್ದಾಗಲೂ ಅದೇ ಇತ್ತು. ಈಗಲೂ ಅದೇ ಮುಂದುವರಿದಿದೆ. ಚುನಾಯಿತ ಪ್ರತಿನಿಧಿಯೂ ಅಲ್ಲದ ವ್ಯಕ್ತಿ ಕಾಣದ ಕೈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡಿದರೆ ಬಾಗಲಕೋಟೆ ಮತಕ್ಷೇತ್ರದಲ್ಲಿ ಕಾಂಗ್ರೆಸ್‌ನವರಿಗೆ ಸ್ವಾಭಿಮಾನ ಇಲ್ಲವೇ ಎಂದು ಪ್ರಶ್ನಿಸಿದರು.

ಗ್ರಾಮೀಣ ರಸ್ತೆ ಹಾಳಾಗಿ ಹೋಗಿದೆ. ತೋಟಗಾರಿಕೆ ವಿವಿಗೆ ನಮ್ಮ ಅವಧಿಯಲ್ಲಿ 10 ಕೋಟಿರೂ. ಹಣ ಮೀಸಲಿಟ್ಟು ನೀರು ಕೊಡುವ ಯೋಜನೆ ಇತ್ತು. ಆದರೆ, ಈಗ ಕಾಂಗ್ರೆಸ್ ಅವಧಿಯಲ್ಲಿ ಅವರಿಗೆ ಒಂದು ಬೊಗಸೆ ನೀರು ಕೊಡಲು ಆಗಿಲ್ಲ.

ಮುಚಖಂಡಿ ಕೆರೆ ತುಂಬಿಸುವ ಯೋಜನೆ, ಉದ್ಯಾನವನ ನಿರ್ಮಾಣ ಕಾಮಗಾರಿ ನಮ್ಮ ಅವಧಿಯಲ್ಲೇ ಹಣ ಮೀಸಲಿಟ್ಟಿದ್ದನ್ನು ಬಳಕೆ ಮಾಡುತ್ತಿದ್ದಾರೆ. ನವನಗರದ ಯುನಿಟ್-3ರಲ್ಲಿ ನಡೆಯುತ್ತಿರುವ ಕಾಮಗಾರಿ ಕೂಡ ಬಿಜೆಪಿ ಸರ್ಕಾರದ ಅವಧಿಯಲ್ಲಿ ಇಟ್ಟಿದ್ದ ಹಣದಲ್ಲೇ ನಡೆಯುತ್ತಿದೆ ಎಂದು ಆರೋಪಿಸಿದರು.

ಕೃಷ್ಣಾ ಮೇಲ್ದಂಡೆ ಯೋಜನೆ ಸಂತ್ರಸ್ತರಿಗೆ ಪರಿಹಾರ ನೀಡಲು ಕನಿಷ್ಠ 25 ಸಾವಿರ ಕೋಟಿ ಅನುದಾನ ಮೀಸಲಿಡುವ ಬದಲು ಕೇವಲ 3 ಸಾವಿರ ಕೋಟಿ ರೂ. ಮೀಸಲಿಟ್ಟಿದ್ದಾರೆ. ನೀರಾವರಿ ಬಗ್ಗೆ ಉಡಾಫೆ ಬಿಡಬೇಕು. ಬಾಗಲಕೋಟೆಯ ನಗರದಲ್ಲಿ ನಡುಗಡ್ಡೆ ಪ್ರದೇಶ ಎಂದು ಕಿಲ್ಲಾ, ಜೈನಪೇಟೆಯ ಮನೆಗಳನ್ನು ಸ್ವಾಧೀನಪಡಿಸಿಕೊಳ್ಳಲು 4(1),6(1), 12(1) ಅಧಿಸೂಚನೆ ಹೊರಡಿಸಲಾಗಿತ್ತು. ಈ ಸರ್ಕಾರದಲ್ಲಿ ಇದುವರೆಗೆ ಈ ಜನರ ಸಮಸ್ಯೆ ಸರ್ಕಾರಕ್ಕೆ ಅರಿವೆ ಆಗಿಲ್ಲ ಎಂದು ಆರೋಪಿಸಿದರು.

ಸತ್ಯನಾರಾಯಣ ಹೇಮಾದ್ರಿ, ಜಿ.ಎನ್.ಪಾಟೀಲ, ಸುರೇಶ ಕೊಣ್ಣೂರ, ಬಸವರಾಜ ಹುನಗುಂದ ಪತ್ರಿಕಾಗೋಷ್ಠಿಯಲ್ಲಿದ್ದರು.

ಕಿರುಸುದ್ದಿ

ವಾಣಿಜ್ಯ ಬಳಕೆ 25 ಸಿಲಿಂಡರ್‌ಗಳ ವಶ

ಹುಬ್ಬಳ್ಳಿ: ವಿದ್ಯಾನಗರ ಸಿದ್ಧೇಶ್ವರ ಪಾರ್ಕ್ ಹತ್ತಿರ ಶಿವಸಾಗರ ಹೋಟೆಲ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 25 ವಾಣಿಜ್ಯ ಬಳಕೆ ಅನಿಲದ ಸಿಲಿಂಡರ್‌ಗಳನ್ನು ಆಹಾರ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಭಾನುವಾರ ತಡ ರಾತ್ರಿ ಪೊಲೀಸರ ಸಹಕಾರದೊಂದಿಗೆ ಆಹಾರ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ ಸಿಲಿಂಡರ್‌ಗಳ ಪತ್ತೆ ಮಾಡಿದ್ದಾರೆ. ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಹಾರ ನಿರೀಕ್ಷಕ ವಿಜಯಕುಮಾರ ಪತ್ತಾರ ಅವರು ಅಗತ್ಯ ವಸ್ತುಗಳ ಅಕ್ರಮ ದಾಸ್ತಾನು ಕಾಯ್ದೆಯಡಿ ಹೋಟೆಲ್‌ನ ಸಹ ಮಾಲೀಕ ಸುರೇಶ ಬಂಡಿ ವಿರುದ್ಧ ದೂರು ನೀಡಿದ್ದಾರೆ. ಗೋ ಗ್ಯಾಸ್ ಕಂಪನಿಯಿಂದ ಪೂರೈಕೆಯಾಗುವ ಅನಿಲದ ಸಿಲಿಂಡರ್‌ಗಳನ್ನು ಹೋಟೆಲ್‌ನಲ್ಲಿ ಹೆಚ್ಚುವರಿಯಾಗಿ ದಾಸ್ತಾನು ಮಾಡಲಾಗಿತ್ತು. ಎಲ್ಲಿಂದ ಪೂರೈಕೆಯಾಗಿದೆ ಎನ್ನುವ ಕುರಿತು ತನಿಖೆ ನಡೆಯುತ್ತಿದೆ ಎಂದು ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾರು ಇಲಾಖೆ ವಿಜಯಕುಮಾರ ಹೆಗ್ಗಳಗಿ ತಿಳಿಸಿದರು.

ಕಾಳಿ ನದಿ ಯೋಜನೆ ಜಾರಿಗೆ ಒತ್ತಾಯ

ಹಳಿಯಾಳ ಬಂದ್ ಯಶಸ್ವಿ

ಹಳಿಯಾಳ: ಕಾಳಿ ನದಿ ನೀರಾವರಿ ಯೋಜನೆ ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸಬೇಕೆಂದು ಆಗ್ರಹಿಸಿ ಸೋಮವಾರ ಕರೆ ನೀಡಲಾಗಿದ್ದ ಹಳಿಯಾಳ ಬಂದ್ ಯಶಸ್ವಿಯಾಯಿತು.

ಹಳಿಯಾಳದ ಎಲ್ಲಾ ವ್ಯಾಪಾರಸ್ಥರ ಸಂಘಗಳು, ಸಂಘ ಸಂಸ್ಥೆಗಳು, ಹಿರಿಯ ನಾಗರಿಕ ಸಂಘಟನೆ, ಕನ್ನಡ ಹೋರಾಟ ಸಂಘಟನೆಗಳು, ಹೊಟೇಲ್ ಮತ್ತು ಬಾರ್ ಅಸೋಸಿಯೇಷನ್‌ನ ಸದಸ್ಯರು ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿದ ಕಾರಣ ಸಂಪೂರ್ಣ ಹಳಿಯಾಳ ಸ್ತಬ್ಧಗೊಂಡಿತ್ತು.

ರೈತರು ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ರೈತರು ಘೋಷಣೆ ಕೂಗಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವಂತೆ ಸರ್ಕಾರದ ಗಮನ ಸೆಳೆದರು. ಇದರಿಂದಾಗಿ ಪ್ರಯಾಣಿಕರು ಪರದಾಡುವಂತಾಯಿತು.

ರೈತ ಮುಖಂಡ ಸಂದೀಪ ಕುಮಾರ ಬೊಬಾಟಿ ಮತ್ತಿತರರು ನೇರವಾಗಿ ಶಾಸಕರಿಗೆ ರಾಜೀನಾಮೆ ನೀಡಲು ಒತ್ತಾಯಿಸಿದರಲ್ಲದೇ, ಕಾಳಿ ನದಿ ನೀರು ಯೋಜನೆ ಹಾಗೂ ಸಮಗ್ರ ಏತ ನೀರಾವರಿ ಯೋಜನೆ ಜಾರಿಗೆ ರೈತ ಮುಖಂಡರಾದ ನಾಗೇಂದ್ರ ಜಿವೋಜಿ ರವರನ್ನು ದೇಣಿಗೆ ಎತ್ತಿಯಾದರೂ ಗೆಲ್ಲಿಸಿ ತಂದು ಯೋಜನೆ ಜಾರಿ ಮಾಡಿ ತೋರಿಸುವುದಾಗಿ ಸವಾಲ್ ಹಾಕಿದರು.

ಪ್ರತಿಭಟನೆ ನಡೆಯುತ್ತಿರುವ ಮಾಹಿತಿ ತಿಳಿದ ತಕ್ಷಣ ತಾಲೂಕು ಆಡಳಿತ ಹಾಗೂ ಕೆಎನ್‌ಎಲ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರೈತ ಮುಖಂಡರೊಂದಿಗೆ ಮಾತುಕತೆ ನಡೆಸಿ ಏಪ್ರಿಲ್ 2ರೊಳಗೆ ಕಾಳಿನದಿಯಿಂದ 19 ಬಾಂದಾರುಗಳಿಗೆ ಮತ್ತು 46 ಕೆರೆಗಳನ್ನು ತುಂಬಿಸುವ ಕಾರ್ಯಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ರೈತ ಮುಖಂಡರು ತಾತ್ಕಾಲಿಕವಾಗಿ ಪ್ರತಿಭಟನೆಯನ್ನು ಹಿಂಪಡೆಯಲು ಒಪ್ಪಿದರು.

ಬಿಸಿಲು ನಾಡಿಗೆ ತಂಪೆರೆದ ಮಳೆರಾಯ



ಕಲಬುರಗಿ: ಬಿಸಿಲಿನ ತಾಪಕ್ಕೆ ಹೆಸರಾದ ಕಲಬುರಗಿ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಸೋಮವಾರ ಸಂಜೆ ಮಳೆರಾಯ ಅಬ್ಬರಿಸಿ ಸುರಿದನು. ದಿನವಿಡೀ ಕಿಡಿಕಿಡಿ ಬಿಸಿಲಿನಿಂದ ಬೇಸತ್ತು ಹೋಗಿದ್ದ ಜನತೆಗೆ ಈ ಮಳೆ ಸ್ವಲ್ಪ ಮಟ್ಟಿನ ತಂಪು ಮತ್ತು ನೆಮ್ಮದಿ ನೀಡಿತು. ಮಳೆಯ ಆಗಮನದಿಂದ ನಗರದಲ್ಲಿ ವಾತಾವರಣ ತಕ್ಷಣ ತಣ್ಣಗಾಯಿತು. ಸಂಜೆ ವೇಳೆಯಲ್ಲಿ ಆರಂಭವಾದ ಮಳೆ ಕೆಲ ಸಮಯ ಜೋರಾಗಿ ಸುರಿದ ಪರಿಣಾಮ ನಗರದ ಹಲವು ಪ್ರಮುಖ ರಸ್ತೆಗಳಲ್ಲಿ ಕೆಲ ಕಾಲ ತೊಂದರೆ ಉಂಟಾಗಿ ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ಕೆಲ ಹೊತ್ತಿನ ಮಟ್ಟಿಗೆ ಸಂಚಾರದಲ್ಲಿ ಅಡಚಣೆ ಉಂಟಾಯಿತು.ಆದರೂ ಮಳೆಯ ಕಾರಣದಿಂದ ಬಿಸಿಲಿನ ತಾಪ ಕಡಿಮೆಯಾಗಿದ್ದು ಜನರು ಸ್ವಲ್ಪ ಮಟ್ಟಿಗೆ ಉಸಿರಾಟದ ನಿಟ್ಟುಸಿರು ಬಿಟ್ಟರು. ಕಲಬುರಗಿ ಜಿಲ್ಲೆಯ ವಿವಿಧ ಭಾಗಗಳಲ್ಲೂ ಮಳೆಯಾದ ಹಿನ್ನೆಲೆಯಲ್ಲಿ ವಾತಾವರಣ ಸುಖಕರವಾಗಿದ್ದು ಜನರು ಸಂತಸ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿಯೂ ಇದೇ ರೀತಿ ಮಳೆ ಮುಂದುವರಿದರೆ ಬಿಸಿಲಿನ ತಾಪದಿಂದ ಸ್ವಲ್ಪ ಪರಿಹಾರ ಸಿಗಬಹುದು ಎಂಬುದು ಸಾರ್ವಜನಿಕರು ಅಭಿಪ್ರಾಯಪಟ್ಟರು.

ಬೀದರ್‌ನಲ್ಲಿ ಗುಡುಗು ಸಹಿತ ಭಾರೀ ಮಳೆ: ಮಾವಿನ ಬೆಳೆಗೆ ಹಾನಿ

ಬೀದರ್ : ಜಿಲ್ಲೆಯ ಹಲವು ಕಡೆಗಳಲ್ಲಿ ಭಾನುವಾರ ಸಂಜೆಯಿಂದ ಗುಡುಗು ಮಿಂಚು ಸಹಿತ ಭಾರೀ ಮಳೆಯಾಗಿರುವ ಬಗ್ಗೆ ವರದಿಯಾಗಿದೆ.ಬೀದರ ನಗರ, ನೌಬಾದ್, ಅಣದೂರ, ಜನವಾಡ, ಭಾಲ್ಕಿ, ಖಾನಾಪುರ್, ಮುಚಳಂಬ್, ಮೊರಂಬಿ, ಉಚ್ಚಾ, ರಾಚಪ್ಪಗೌಡಗಾಂವ್, ಬ್ಯಾಲಹಳ್ಳಿ ಹಾಗೂ ಗೋರ್ಟಾ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಧಾರಾಕಾರ ಮಳೆಯಾಗಿದೆ.ಇಡೀ ದಿನ ಬಿಸಿಲಿನ ಮತ್ತು ಕಾವಿನ ವಾತಾವರಣದಿಂದ ಕಿರಿಕಿರಿ ಅನುಭವಿಸುತ್ತಿದ್ದವರಿಗೆ, ಸಂಜೆ ವೇಳೆಗೆ ಕತ್ತಲೆ ಕವಿದಂತೆ ಮೋಡಗಳು ಆವರಿಸಿಕೊಂಡು ಗುಡುಗು, ಮಿಂಚಿನೊಂದಿಗೆ ಭಾರೀ ಮಳೆ ಸುರಿಯಿತು.ರೈತರ ಹೊಲಗಳಲ್ಲಿ ಜೋಳದ ರಾಶಿ ಇನ್ನೂ ಮಾಡದಿರುವುದರಿಂದ ಈ ಮಳೆಯಿಂದ ಬಿಳಿ ಜೋಳ ಹಾಳಾಗುವ ಭೀತಿ ರೈತರಲ್ಲಿದೆ ಅಲ್ಲದೆ ಮಳೆಯ ಕಾರಣ ಮಾವು ಬೆಳೆಗೆ ಹಾನಿ ಸಂಭವಿಸಿದ್ದು ಏಕಾಏಕಿ ಸುರಿದ ಭಾರೀಮಳೆಯ ಕಾರಣ ರೈತರು ಕಂಗಾಲಾಗಿದ್ದಾರೆ.

ಕೋಟ್ಯಂತರ ರೂ.ಚೀಟಿ ವ್ಯವಹಾರ: ಆರೋಪಿ ಬಂಧನ

ಬಳ್ಳಾರಿ: ಕೋಟ್ಯಂತರ ರೂ.ಚೀಟಿ ವ್ಯವಹಾರ ಮಾಡಿ, ಜನರಿಗೆ ವಂಚನೆ ಮಾಡಿ ಪರಾರಿಯಾಗಿದ್ದ ಆರೋಪಿ ವೆಂಕಟೇಶ ಅವರನ್ನು ಬಂಧಿಸುವಲ್ಲಿ ಬ್ರೂಸ್ ಪೇಟೆ ಪೊಲೀಸ್ ಠಾಣೆ ಅಧಿಕಾರಿಗಳು ಯಶಸ್ವಿಯಾಗಿದ್ದು, ಆರೋಪಿಯನ್ನು ನ್ಯಾಯಾಧೀಶರ ಎದುರು ಹಾಜರು ಪಡಿಸಿದ್ದಾರೆ.

ನಗರದ ಅವಂಭಾವಿ ಪ್ರದೇಶದ ನಿವಾಸಿ ವೆಂಕಟೇಶ, ಕಳೆದ ಎರಡು ತಿಂಗಳಿಂದ ಪರಾರಿಯಾಗಿದ್ದರು. ಕಳೆದ ಸುಮಾರು ವರ್ಷಗಳಿಂದ ಚೀಟಿ ವ್ಯವಹಾರ ಮಾಡುತ್ತಿದ್ದ, ನಗರದ ಬಹುತೇಕ ವ್ಯಾಪಾರಿಗಳು, ವೈದ್ಯರು, ವಿವಿಧ ಅಧಿಕಾರಿಗಳು ಸೇರಿದಂತೆ ಅನೇಕ ಜನ ಸಾರ್ವಜನಿಕರು ವೆಂಕಟೇಶ ಅವರೊಂದಿಗೆ ಚೀಟಿ ವ್ಯವಹಾರ ನಡೆಸಿದ್ದರು.

ಈತನ ವ್ಯವಹಾರ ಕೋಟ್ಯಂತರ ರೂ.ದಾಟಿತ್ತು. ಆದರೆ, ನಾನಾ ಕಾರಣಗಳಿಂದ ಕಳೆದ ಜ.30ರಂದು ನಗರದ ಬೆಂಗಳೂರು ರಸ್ತೆಯ ಎಚ್‌ಎಲ್‌ಸಿ ಕಾಲುವೆ ಬಳಿ ತಮ್ಮ ಬೈಕ್ ಬಿಟ್ಟು, ಅದರಲ್ಲಿ ತಮ್ಮ ಎರಡು ಮೊಬೈಲ್ ಬಿಟ್ಟು ಪರಾರಿಯಾಗಿದ್ದರು. ಕುಟುಂಬದ ಸದಸ್ಯರು ಕಾಣೆಯಾಗಿರುವ ಕುರಿತು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.



ಆದರೆ, ಮಾರುಕಟ್ಟೆಯಲ್ಲಿ ವೆಂಕಟೇಶ್ ಅವರು ಪೂರ್ವ ನಿರ್ಧಾರದಂತೆ ಎಲ್ಲ ಚೀಟಿದಾರರಿಗೆ ವಂಚನೆ ಮಾಡಿ ತಲೆ ಮರೆಸಿಕೊಂಡಿದ್ದಾನೆ, ನಮಗೆ ಹಣ ಕೊಡಿಸಿ, ನ್ಯಾಯ ಕಲ್ಪಿಸಿ ಎಂದು ಚೀಟಿದಾರರು ದೂರು ಸಲ್ಲಿಸಿದ್ದರು. ಬ್ರೂಸ್ ಪೇಟೆ ಪೊಲೀಸ್ ಠಾಣೆ ಅಧಿಕಾರಿಗಳು ಪ್ರಕರಣವನ್ನು ದಾಖಲಿಸಿಕೊಂಡು ಆರೋಪಿ ವೆಂಕಟೇಶ ಹುಡುಕಾಟಕ್ಕೆ ಪ್ರತ್ಯೇಕ ತಂಡ ರಚಿಸಿ ಬಲೆ ಬೀಸಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್ ಅವರ ಮಾರ್ಗದರ್ಶನದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ನವೀನ ಕುಮಾರ್, ಬಳ್ಳಾರಿ ನಗರ ಉಪ ವಿಭಾಗದ ಪೊಲೀಸ್ ಉಪಧೀಕ್ಷಕ ಗೋವಿಂದರಾಜು ಅವರ ನೇತೃತ್ವದಲ್ಲಿ ಬ್ರೂಸ್ ಪೇಟೆ ಪೊಲೀಸ್ ಠಾಣೆ ಪಿಐ ಮಹಾಂತೇಶ ಟಿ ಅವರೊಂದಿಗೆ ವಿಶೇಷ ತಂಡವನ್ನು ರಚಿಸಲಾಗಿತ್ತು. ಈ ತಂಡವು ಕಾರ್ಯಾಚರಣೆ ನಡೆಸಿದ್ದು, ಚಿತ್ರದುರ್ಗದಲ್ಲಿ ಆರೋಪಿ ವೆಂಕಟೇಶ ಅವರನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ಹಾಜರು ಪಡಿಸಿದ್ದಾರೆ.

ಏಳು ಜನ ಅಂತರ್‌ರಾಜ್ಯ ವಂಚಕರ ಬಂಧನ

ಗೋಕಾಕ: ನಗರದಲ್ಲಿ ಸಾರ್ವಜನಿಕರಿಗೆ ಹಣದ ಆಮಿಷವೊಡ್ಡಿ ವಂಚಿಸುತ್ತಿದ್ದ ಅಂತರ್‌ರಾಜ್ಯ ವಂಚಕರ ಜಾಲವನ್ನು ಪೊಲೀಸರು ಭೇದಿಸಿದ್ದು, ಈ ದಂಧೆಯಲ್ಲಿ ಮಹಾರಾಷ್ಟ್ರದ ಇಬ್ಬರು ಪೊಲೀಸ್ ಸಿಬ್ಬಂದಿ ಸೇರಿದಂತೆ ಒಟ್ಟು ಏಳು ಜನ ಆರೋಪಿಗಳನ್ನು ಗೋಕಾಕ ಪೊಲೀಸರು ಬಂಧಿಸಿದ್ದಾರೆ.

ಗೋಕಾಕದ ಶ್ರೀನಗರದಲ್ಲಿರುವ ಮನೆಯೊಂದರಲ್ಲಿ ಹಣವನ್ನು ನಾಲ್ಕು ಪಟ್ಟು ಮಾಡಿಕೊಡುವುದಾಗಿ ನಂಬಿಸಿ ಸಾರ್ವಜನಿಕರಿಗೆ ವಂಚಿಸುತ್ತಿದ್ದ ಜಾಲದ ಮೇಲೆ ಗೋಕಾಕ ಶಹರ ಠಾಣಾ ಪೊಲೀಸರು ದಾಳಿ ನಡೆಸಿದ್ದರು. ಆರೋಪಿತರು ಬಿಳಿ ಹಾಳೆಗಳಿಗೆ ಕಪ್ಪು ಬಣ್ಣ ಬಳಿದು, ಅದನ್ನು ಪೌಡರ್ ನಿಂದ ತೊಳೆಯುವಂತೆ ಸಾರ್ವಜನಿಕರನ್ನ ವಂಚಿಸಿ ಅವರಿಂದ ಅಸಲಿ ನೋಟುಗಳನ್ನು ಸಾರ್ವಜನಿಕರಿಂದ ದೋಚುತ್ತಿದ್ದರು.



ಈ ಪ್ರಕರಣದಲ್ಲಿ ಬಂಧಿತ ಪರಶುರಾಮ ಭೀಮಶಿ ಬಡಕರಿ, ಇಮ್ರಾನ ಬಾಬಾಜಾನ ಜುನೇದಿ, ಜಯಶ್ರೀ ಬಾಬು ಕಾಂಬಳೆ, ಮನೀಷಾ ರಾಜು ಗಾಯಕವಾಡ (ಮಾರ್ಗೇರೆಟ್ ಡೆವಿಡ್ ಗಾಯಕವಾಡ), ಉಜ್ವಲಾ ತುಳಸಿರಾಮ ಬಿಲಾನೆ, ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿಗಳಾದ ಅನಂತ ಪ್ರಕಾಶ ನರವಾಡೆ ಹಾಗೂ ದಿಲದಾರ ರಬ್ಬಾನಿ ಶೇಖ ಎಂದು ಗುರುತಿಸಲಾಗಿದೆ.

ಪೊಲೀಸ್ ಸಿಬ್ಬಂಧಿ ವಂಚಕರಿಂದ 8 ಮೊಬೈಲ್, 2520ರೂ ಹಣ, ಕಪ್ಪು ಬಣ್ಣದ ಬಾಟಲ್‌ಗಳಿರುವ ಬ್ಯಾಗ್ ಸೇರಿ ಇತರೆ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಕುರಿತು ಗೋಕಾಕ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪ್ರಕರಣ ಭೇದಿಸಲು ಯಶಸ್ವಿಯಾದ ಹೆಚ್ಚುವರಿ ಎಸ್‌ಪಿ ರಾಮನಗೌಡ ಬಸರಗಿ, ಡಿವೈಎಸ್‌ಪಿ ರವಿ ನಾಯಿಕ ಮಾರ್ಗದರ್ಶನದಲ್ಲಿ ಸಿಪಿಐ ಸುರೇಶಬಾಬು, ಪಿಎಸ್‌ಐ ಕಿರಣ ಮೋಹಿತೆ ಹಾಗೂ ಸಿಬ್ಬಂದಿ ಆರ್.ಬಿ.ಹಡಪದ, ಕೆ.ಎನ್.ಇಳಿಗೇರ, ಜೆ.ಎಚ್.ಗುಡ್ಲಿ, ಪಿ.ಎಂ.ಗಸ್ತಿ, ಮಂಜುನಾಥ ಹುಚ್ಚಗೌಡರ, ಐ.ವಿ.ಘಂಟಿ, ಎ.ಎ.ಶೇಡಬಾಳ, ಎಂ.ಆರ್.ಅಂಬಿ, ಮಂಜುನಾಥ ನಾಯಿಕ, ಎಸ್.ಎಂ.ಮಂಗಿ ಅವರ ಕಾರ್ಯವನ್ನು ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ ಕೆ ಅವರು ಅಭಿನಂದಿಸಿದ್ದಾರೆ.

ಲೋಕಾಯುಕ್ತ ಅಧಿಕಾರಿಗಳಿಂದ ಕಡತಗಳ ಪರಿಶೀಲನೆ

ಆಲಮಟ್ಟಿ: ಇಲ್ಲಿನ ಕೃಷ್ಣಾ ಮೇಲ್ದಂಡೆ ಯೋಜನೆಯ ವಿಶೇಷ ಭೂಸ್ವಾಧೀನ ಅಧಿಕಾರಿ ಕಚೇರಿ ಮತ್ತು ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ಇಲಾಖೆಯ ಪುನರ್ವಸತಿ ಅಧಿಕಾರಿ ಕಚೇರಿಗಳಿಗೆ ಏಕಕಾಲಕ್ಕೆ ಭೇಟಿ ನೀಡಿದ ಲೋಕಾಯುಕ್ತ ಅಧಿಕಾರಿಗಳು ವಿವಿಧ ಕಡತಗಳನ್ನು ಪರಿಶೀಲಿಸಿ ಕಚೇರಿಯ ಸಿಬ್ಬಂದಿಗಳಿಂದ ಅಗತ್ಯ ಮಾಹಿತಿ ಪಡೆದರು.

ಈ ಹಿಂದೆ ಲೋಕಾಯುಕ್ತರು ಭೇಟಿ ನೀಡಿದ ವೇಳೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ವಿವಿಧ ಯೋಜನೆಗಳಿಗಾಗಿ ಭೂಮಿ, ಮನೆ ಸೇರಿದಂತೆ ತಮ್ಮ ಆಸ್ತಿಗಳನ್ನು ಕಳೆದುಕೊಂಡ ಸಂತ್ರಸ್ಥರು ತಮಗೆ ಸಮರ್ಪಕವಾಗಿ ಪರಿಹಾರ ನೀಡದೇ ಜಮೀನುಗಳನ್ನು ಹಿನ್ನೀರಿಗಾಗಿ ಸ್ವಾಧೀನಪಡೆದುಕೊಂಡಿದ್ದು, ಅಲ್ಲದೇ ಜಮೀನುಗಳಿಗೆ ಪರಿಹಾರ ಧನವನ್ನೂ ಕೊಡದೇ, ಯಾವುದೇ ನೋಟೀಸ್ ಕೊಡದೇ ಕಾಲುವೆಗಳನ್ನು ನಿರ್ಮಿಸಲಾಗಿದೆ.

ಇನ್ನು ಕೆಲ ಜಮೀನುಗಳಲ್ಲಿ ಜಮೀನಿನ ಮುಖ್ಯಸ್ಥರಿಗೆ ನೋಟೀಸ್ ಕೊಟ್ಟು ವಗೈರೆಯಲ್ಲಿ ಇರುವ ರೈತರಿಗೆ ನೋಟೀಸ್ ಆಗಲಿ ಪರಿಹಾರ ಧನವನ್ನಾಗಲೀ ಕೊಟ್ಟಿಲ್ಲ ಎನ್ನುವುದು ಸೇರಿದಂತೆ ಹಲವಾರು ಬಗೆಯ ದೂರುಗಳ ಹಿನ್ನೆಲೆಯಲ್ಲಿ ಲೋಕಾಯುಕ್ತ ಅವರ ಆದೇಶದಂತೆ ಸೋಮವಾರ ಲೋಕಾಯುಕ್ತ ಎಸ್ಪಿ ಮಲ್ಲೇಶ ಟಿ. ಅವರ ನೇತೃತ್ವದಲ್ಲಿ ಕಚೇರಿಯ ಕಡತಗಳ ಪರಿಶೀಲನಾ ಕಾರ್ಯ ಜರುಗಿದೆ.

ಇದಕ್ಕೆ ಸಂಬಂಧಿಸಿದಂತೆ ಮುದ್ದೇಬಿಹಾಳ, ತಾಳಿಕೋಟಿ ಸೇರಿದಂತೆ ಹಲವು ತಾಲೂಕಿನ ರೈತರಿಂದ ಈ ಬಗ್ಗೆ ದೂರುಗಳು ಬಂದಿದ್ದು, ಇಲ್ಲಿಯವರೆಗೆ ಎಷ್ಟು ಪ್ರಕರಣಗಳಲ್ಲಿ ಪರಿಹಾರ ಧನ ವಿತರಿಸಲಾಗಿದೆ, ಎಷ್ಟು ಬಾಕಿ? ಉಳಿದಿವೆ, ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳಿವೆ? ಅವುಗಳ ವಿಲೇವಾರಿಗೆ ಅಧಿಕಾರಿಗಳು ಯಾವ ಕ್ರಮಕೈಗೊಂಡಿದ್ದಾರೆ.

ಇನ್ನೂ ಎಷ್ಟು ಪ್ರಕರಣಗಳು ದಾಖಲಾಗಬೇಕು ಹೀಗೆ ಹಲವಾರು ಬಗೆಯಲ್ಲಿ ತನಿಖೆ ಕೈಗೊಳ್ಳಲಾಗುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ಅರ್ಹ ಫಲಾನುಭವಿಗಳು, ಅನ್ಯಾಯಕ್ಕೊಳಗಾದ ಸಂತ್ರಸ್ತರು ತಮ್ಮ ಅಹವಾಲು ಸಲ್ಲಿಸಬಹುದು. ತನಿಖೆಯು ಇನ್ನೂ ಮುಂದುವರಿಯಲಿದೆ ಎಂದು ಲೋಕಾಯುಕ್ತ ಡಿವೈಎಸ್ಪಿ ಮಲ್ಲಿಕಾರ್ಜುನ ತುಳಸಿಗೇರಿ ತಿಳಿಸಿದರು. ತನಿಖೆಯಲ್ಲಿ ಇನ್ಸಪೆಕ್ಟರ್‌ಗಳಾದ ಆನಂದ ಡೋಣಿ, ಆನಂದ ಟಕ್ಕನ್ನವರ, ನಿಂಗಪ್ಪ ಪೂಜೇರಿ ಹಾಗೂ ಸಿಬ್ಬಂದಿಗಳಿದ್ದರು.

22 ಪ್ರಕರಣ ಭೇದಿಸಿ, 36 ಜನರ ಬಂಧನ | ಎಸ್ಪಿ ಮಾಹಿತಿ

₹1 ಕೋಟಿಗೂ ಹೆಚ್ಚು ಮೌಲ್ಯದ ಚಿನ್ನಾಭರಣ ಜಪ್ತಿ

ವಿಜಯಪುರ: ಮನೆ, ತೋಟದ ಮನೆ, ದೇವಸ್ಥಾನದಲ್ಲಿ ಕಳ್ಳತನ, ಸುಲಿಗೆ ಪ್ರಕರಣ ಸೇರಿದಂತೆ ಒಟ್ಟು 22 ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ 36 ಜನ ಆರೋಪಿಗಳನ್ನು ಬಂಧಿಸಲಾಗಿದ್ದು, 1,27,38,800 ರೂ.ಗಳ ಮೌಲ್ಯದ ಚಿನ್ನಾಭರಣ, 2 ಕಾರು, 17 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2025-26ನೇ ಸಾಲಿನಲ್ಲಿ ಮುದ್ದೇಬಿಹಾಳ, ನಿಡಗುಂದಿ, ತಾಳಿಕೋಟಿ, ಬಸವನಬಾಗೇವಾಡಿ ಹಾಗೂ ಕೂಡಗಿ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ದಾಖಲಾದ ವಿವಿಧ ಪ್ರಕರಣಗಳ ಸಂಬಂಧಿಸಿದ ಆರೋಪಿಗಳನ್ನು ಬಂಧಿಸಲಾಗಿದೆ ಎಂದರು.

ಮುದ್ದೇಬಿಹಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಿಎನ್‌ಎಸ್-2023ನೇ ಪ್ರಕರಣದಲ್ಲಿ ಜಯರಾಮು ನಾನಪ್ಪ ನಾಯಕ ತೋಟದ ಮನೆಯ ಬಾಗಿಲು ಮುರಿದು ಕಳ್ಳತನ ಮಾಡಿದ ಆರೋಪಿತರಾದ ಗುರುರಾಜ ಉರ್ಫ್ ದೊಡ್ಡಗುರು ಮೌನೇಶ, ಗುರುಕುಮಾರ ಉರ್ಫ್ ಕಿರಣಕುಮಾರ ಉರ್ಫ್ ಸಣ್ಣಗುರು ಮಲ್ಲೇಶ, ಸೈಯದ್ ಅಸ್ಲಮ್ಯ ಉರ್ಫ್ ಮಿನ್ನು ನಾದರಷಾ ಬಂಧಿಸಲಾಗಿದೆ. ಆರೋಪಿತರಿಂದ ಸುಮಾರು 26 ತೋಲೆ ಬಂಗಾರ, 3.5 ಕೆ.ಜಿ ಬೆಳ್ಳಿ, 4,30,000 ರೂಪಾಯಿ ಮತ್ತು ಕೃತ್ಯಕ್ಕೆ ಬಳಸಿದ ಇನೋವಾ ಕಾರ್ ಸೇರಿ ಒಟ್ಟು 51,35,000 ಗಳ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದರು.



ಪ್ರತ್ಯೇಕ ಪ್ರಕರಣ ಮುದ್ದೇಬಿಹಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಕವಡಿಮಟ್ಟಿ ಗ್ರಾಮದ ಮನೆಯ ಕೀಲಿ ಮುರಿದು ಒಟ್ಟು 87 ಗ್ರಾಂ ಬಂಗಾರದ ಆಭರಣಗಳು, 60 ಗ್ರಾಂ ಬೆಳ್ಳಿಯ ಆಭರಣಗಳು ಹಾಗೂ ರೋಖ ಹಣ 50,000 ಸೇರಿದಂತೆ ಅವುಗಳ ಒಟ್ಟು ಅಂದಾಜು 7,49,000 ರೂ. ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರು. ಈ ಪ್ರಕರಣದ ಆರೋಪಿ ಬಸವರಾಜ ಸಂಗಪ್ಪ ಹೋಕ್ರಾಣಿ ಬಂಧಿಸಿ, ಆರೋಪಿತನಿಂದ 89 ಗ್ರಾಂ ಬಂಗಾರದ ಆಭರಣಗಳು, 110 ಗ್ರಾಂ ಬೆಳ್ಳಿಯ ಆಭರಣಗಳು ಹಾಗೂ ರೋಖ ಹಣ 37,932 ರೂ. ಸೇರಿದಂತೆ ಒಟ್ಟು ಅಂದಾಜು 7,55,432 ರೂ.ಗಳ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಅಲ್ಲದೆ ಜಿಲ್ಲೆಯ ಹಲವು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಗಳನ್ನು ಭೇದಿಸಿ, ಆರೋಪಿಗಳನ್ನು ಬಂಧಿಸಲಾಗಿದೆ ಎಂದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರು ಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಉಪ-ವಿಭಾಗದ ಕೆಳಗೆ ಸೂಚಿಸಿದ ಪ್ರದೇಶದಲ್ಲಿ ವಾಹಕ ಬದಲಾವಣೆ ಕಾಮಗಾರಿಗೆ ಇರುವ ಕಾರಣ ಮಾ.17ರಂದು ಕಾರವಾರ ಟೌನ ಮತ್ತು ಕೋಡಿಭಾಗ ಫೀಡರಿನ ಎಲ್ಲಾ ಪ್ರದೇಶಗಳಲ್ಲಿ ಬೆಳ್ಳಗೆ 9.30 ಗಂಟೆಯಿಂದ ಮಧ್ಯಾಹ್ನ 2.30 ಗಂಟೆಯವರೆಗೆ ಹಾಗೂ ಬೈತ್‌ಕೋಲ್ ಮತ್ತು ಎನ್.ಎಚ್-17 ಫೀಡರಿನ ಎಲ್ಲಾ ಪ್ರದೇಶಗಳಲ್ಲಿ ಬೆಳ್ಳಗೆ 9.30 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲ್ಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ, ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಕಾರವಾರ: ಹೊನ್ನಾವರ ಉಪ-ವಿಭಾಗದ ಪಟ್ಟಣ ಶಾಖೆ ವ್ಯಾಪ್ತಿಯ ಕರ್ಕಿ ಫೀಡರ್ ವ್ಯಾಪ್ತಿಯಲ್ಲಿ 11 ಕೆ.ವಿ ಮಾರ್ಗದ ನಿರ್ವಹಣೆ ನಿಮ್ಮಿತ್ತ ಫೀಡರ್ ವ್ಯಾಪ್ತಿಯಲ್ಲಿ ಮಾ.18 ಬೆಳ್ಳಗೆ 11 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೊನ್ನಾವರ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳಾ ದಿನಾಚರಣೆ



ಹಳಿಯಾಳ: ಪಟ್ಟಣದ ಗಣೇಶನಗರ ದಲ್ಲಿರುವ ಶ್ರೀ ಪೂರ್ಣ ಬೋಧ ಯೋಗ ಹಾಗೂ ಆಯುರ್ವೇದ ಕೇಂದ್ರ ಶ್ರೀ ರಾಯರ ಆರೋಗ್ಯ ಮನೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.ಈ ಸಂದರ್ಭದಲ್ಲಿ ವೈದ್ಯರಾದ ಡಾಕ್ಟರ್ ಕಿರಣ್ ಎಲ್ ಸಾಳುಂಕೆ ಮಾತನಾಡಿ, ಯಾವ ದೇಶದಲ್ಲಿ ಹೆಣ್ಣನ್ನು ಪೂಜಿಸಲಾಗುತ್ತದೆಯೋ ಆ ದೇಶ ಅತ್ಯಂತ ಪವಿತ್ರವಾದ ದೇಶವಾಗಿದೆ ಎಂದು ಹೇಳಿದರು. ಯಾವ ದೇಶದಲ್ಲಿ ಹೆಣ್ಣಿಗೆ ಗೌರವ ಸಿಗುವುದಿಲ್ಲವೋ ಹೆಣ್ಣಿನ ಮೇಲೆ ದೌರ್ಜನ್ಯ ನಡೆಯುತ್ತದೆಯೋ ಅಂತಹ ದೇಶಗಳು ಸದ್ಯ ಅಂದ ಪತನದತ್ತ ಸಾಗುತ್ತಿದೆ ಎಂಬುದನ್ನು ವಿವರಿಸಿದರು. ಯೋಗ ಗುರುಗಳಾದ ಹನುಮಂತ ಗುರೂಜಿ, ಪ್ರಮುಖರಾದ ಮಂಜುಳಾ ಮಾಳೋದೆ, ಅಮೃತಾ, ಜ್ಯೋತಿ, ರಾಜೇಶ್ವರಿ ತಳವಾರ್, ಅರ್ಚನಾ ಹಿರೇಮಠ, ಸುಮಾ ಉಪ್ಪರ, ಸುಜಾತಾ ಹಿರೇಮಠ ಇತರರು ಇದ್ದರು.

ನಿಧನ ಸುದ್ದಿ

ಬಂಗಾರೇಶ್ವರ ಹೆಗಡೆ



ಶಿರಸಿ: ಸಿದ್ದಾಪುರ ತಾಲೂಕಿನ ಹಾರ್ಸಿಕಟ್ಟಾ ಬಳಿಯ ಅತ್ತೀಮುರ್ಡು ನಿವಾಸಿ ಬಂಗಾರೇಶ್ವರ ಹೆಗಡೆ (78) ನಿಧನರಾದರು. ಮೃತರು, ಪತ್ನಿ, ಓರ್ವ ಪುತ್ರ, ಇಬ್ಬರು ಇಬ್ಬರು ಪುತ್ರಿಯರು ಹಾಗೂ ಅಪಾರ ಬಂದು ಬಳಗ ಅಗಲಿದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60009	68518
ಬಿಳಿಗೋಟು	22109	39899
ಕೆಂಪುಗೋಟು	23609	37898
ಚಿಟ್ಟೆ	34169	47248
ರಾಶಿ	49019	53318
ಚಾಲಿ	44099	48299
ಬಿ.ಕಾಳುಮೆಣಸು	83569	83569

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	56470	56515
ರಾಶಿ	49819	55899
ಚಿಟ್ಟೆ	36011	49869
ಕೆಂಪುಗೋಟು	25499	36969
ಬಿಳಿಗೋಟು	16900	41711
ಚಾಲಿ	38619	48809
ಕೋಕಾ	14012	32899
ಕಾಳುಮೆಣಸು	55555	69000



ಕುಮಟಾ: ಹೆಗಲೆಯ ಸುಪ್ರಸಿದ್ಧ ಶ್ರೀ ಕ್ಷೇತ್ರ ಮಹಾರಾಜ್ಞಿ ದುರ್ಗಾ ಪರಮೇಶ್ವರಿ ದೇವಿ ದೇವಸ್ಥಾನ, ಕ್ಷೇತ್ರ ಭುಜಕಪುರ ಹೆಗಲೆ ಕೂಜಳ್ಳಿಯಲ್ಲಿ ಪ್ರತಿಷ್ಠಾಪನಾ ವಾರ್ಷಿಕೋತ್ಸವ ಭಕ್ತಿಭಾವ ಹಾಗೂ ವೈಭವದಿಂದ ಸಂಪನ್ನಗೊಂಡಿತು.

ಹಬ್ಬಗಳ ಪ್ರಯುಕ್ತ ವಿಶೇಷ ಸಾರಿಗೆ ವ್ಯವಸ್ಥೆ

ಕಾರವಾರ: ಯುಗಾದಿ ಮತ್ತು ರಂಜಾನ ಹಬ್ಬದ ಪ್ರಯುಕ್ತ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳುವುದರಿಂದ, ವಾಕರಸಾ ಸಂಸ್ಥೆಯ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 171 ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.ಮಾ.18 ಮತ್ತು ಮಾ.19 ಯುಗಾದಿ, ಮಾ.21 ರಂಜಾನ್ ಹಬ್ಬ ಮಾ.22 ಭಾನುವಾರವಿರುವುದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಪ್ರಯಾಣಿಕರು ತಮ್ಮ ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು. ಬೆಂಗಳೂರಿನಿಂದ ರಾಜ್ಯ, ಅಂತರರಾಜ್ಯದ ವಿವಿಧ ಸ್ಥಳಗಳಿಗೆ ತೆರಳಲು ಮಾ.18ರಿಂದ ಮಾ.20ರವರೆಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಸದರಿ ವಿಶೇಷಸಾರಿಗೆಗಳ ಸದುಪಯೋಗ ಪಡಿಸಿಕೊಳ್ಳುವುದರೊಂದಿಗೆ, ಸುಖಕರ ಹಾಗೂ ಸುರಕ್ಷಿತ ಪ್ರಯಾಣಕ್ಕಾಗಿ ಸಂಸ್ಥೆಯ ಬಸ್‌ಗಳಲ್ಲಿ ಪ್ರಯಾಣಿಸುವಂತೆ ಮತ್ತು ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಕಟಣೆ ತಿಳಿಸಿದೆ.



ಸಿದ್ದಾಪುರ: ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ಕ್ಷೇತ್ರ ಶಿಕ್ಷಣಾಧಿಕಾರಿ ಮಾ.18 ರಿಂದ ಆರಂಭಗೊಳ್ಳುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಎಮ್.ವಿ.ನಾಯ್ಕ ಮತ್ತು ಮಂಜುನಾಥ ಶಾಸ್ತ್ರಿ ಇದ್ದರು.

ಕಾಳಿ ನದಿ ಯೋಜನೆ ಜಾರಿಗೆ ಒತ್ತಾಯ | ಹಳಿಯಾಳ ಬಂದ್

ಹೆದ್ದಾರಿ ತಡೆದು ರೈತರ ಆಕ್ರೋಶ

ಹಳಿಯಾಳ: ತಾಲೂಕಿನಲ್ಲಿ ಕಾಳಿ ನದಿ ನೀರಾವರಿ ಯೋಜನೆ ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ರೈತರು ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಕಬ್ಬು ಬೆಳೆಗಾರರ ಸಂಘ ಹಾಗೂ ಕಬ್ಬು ಬೆಳೆಗಾರರ ಹಿತ ಸಂರಕ್ಷಣಾ ಸಮಿತಿಯ ಜಂಟಿ ಸಹಯೋಗದಲ್ಲಿ ಫೆಬ್ರವರಿ 27ರಂದು ಆರಂಭಗೊಂಡಿದ್ದ ಪಾದಯಾತ್ರೆ 19 ದಿನಗಳ ಕಾಲ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಂಚರಿಸಿ ಕಾಳಿ ನದಿ ನೀರಾವರಿ ಯೋಜನೆ ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಿತು. ಪಾದಯಾತ್ರೆಯ ಸಮಾಪ್ತಿಯಾಗಿ ಸೋಮವಾರ ಪಟ್ಟಣದಲ್ಲಿ ಮೆರವಣಿಗೆ ನಡೆಸಿದ ರೈತರು ನಂತರ ರಾಜ್ಯ ಹೆದ್ದಾರಿಯನ್ನು ತಡೆದು ಪ್ರತಿಭಟನೆಗೆ ಮುಂದಾದರು.

ಪ್ರತಿಭಟನೆ ನಡೆಯುತ್ತಿರುವ ಮಾಹಿತಿ ತಿಳಿದ ತಕ್ಷಣ ತಾಲೂಕು ಆಡಳಿತ ಹಾಗೂ ಕೆಸಿಎನ್ ಎಲ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರೈತ ಮುಖಂಡರೊಂದಿಗೆ ಮಾತುಕತೆ ನಡೆಸಿದರು. ಏಪ್ರಿಲ್ 2ರೊಳಗೆ ಕಾಳಿ ನದಿಯಿಂದ 19 ಬಾಂದಾರುಗಳಿಗೆ ಮತ್ತು 46 ಕೆರೆಗಳನ್ನು ತುಂಬಿಸುವ ಕಾರ್ಯಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು

ಅಧಿಕಾರಿಗಳು ಭರವಸೆ ನೀಡಿದ ಹಿನ್ನೆಲೆಯಲ್ಲಿ ರೈತ ಮುಖಂಡರು ತಾತ್ಕಾಲಿಕವಾಗಿ ಪ್ರತಿಭಟನೆಯನ್ನು ಹಿಂಪಡೆಯಲು ಒಪ್ಪಿದರು.

ಆದರೆ ನಿಗದಿತ ಅವಧಿಯೊಳಗೆ ಯೋಜನೆ ಅನುಷ್ಠಾನಗೊಳ್ಳದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ರೈತ ಮುಖಂಡರು ಎಚ್ಚರಿಕೆ ನೀಡಿದರು.



> ದೇಶಪಾಂಡೆ ಅವರೇ, 92 ಹಳ್ಳಿಗಳ ಎಲ್ಲಾ ಕೆರೆಗಳಿಗೆ ಎಡ ಮತ್ತು ಬಲ ದಂಡೆ ಕಾಲುವೆ ನಿರ್ಮಾಣ ಮತ್ತು ಎಲ್ಲ ಹಳ್ಳಿಗಳಿಗೆ ಏತನೀರಾವರಿ ಮೂಲಕ ನೀರು ಪೂರೈಸುವ ಸಮಗ್ರ ನೀರಾವರಿ ಯೋಜನೆ ಮಂಜೂರಿ ಮಾಡದೆ ಇದ್ದಲ್ಲಿ ಮುಂದಿನ ಬಾರಿ ನಾವು ನಾಗೇಂದ್ರ ಜಿವೋಜಿ ಅಂತಹ ರೈತ ಮುಖಂಡರನು ಚುನಾವಣೆಯಲ್ಲಿ ನಿಲ್ಲಿಸಿ ಗೆಲ್ಲಿಸಿ ತೋರಿಸುತ್ತೇವೆ. ಇದು ನಮ್ಮ ಚಾಲೆಂಜ್.
>
> ■ ಕುಮಾರ ಬೊಬಾಟಿ ,ಜಿಲ್ಲಾಧ್ಯಕ್ಷ ರಾಜ್ಯ ಕಬ್ಬು ಬೆಳೆಗಾರರ ಸಂಘ.

> ಎಪ್ರಿಲ್ 2ರ ಒಳಗಾಗಿ ಯೋಜನೆ ಅನುಷ್ಠಾನಗೊಳ್ಳದಿದ್ದರೆ ಎ.3 ರಂದು ಮತ್ತೆ ಪ್ರತಿಭಟನೆ ಮಾಡಲಾಗುವುದು ಇದು ಕೊನೆಯ ಎಚ್ಚರಿಕೆ ಮುಂದೆ ಆಗುವ ಅನಾಹುತಗಳಿಗೆ ಇಲ್ಲಿನ ಶಾಸಕರು ಹಾಗೂ ಅಧಿಕಾರಿಗಳೇ ಜವಾಬ್ದಾರರು. ತಾಲೂಕಿನಾದ್ಯಂತ ಸಮಗ್ರ ನೀರಾವರಿ ಯೋಜನೆ ಅನುಷ್ಠಾನ ಗೊಳ್ಳಲೇಬೇಕು.
>
> ■ ನಾಗೇಂದ್ರ, ಜಿವೋಜಿ, ಕಬ್ಬು ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ಅಧ್ಯಕ್ಷ

ಹಳಿಯಾಳ ಬಂದ್ ಯಶಸ್ವಿ

ಕಾಳಿ ನದಿ ನೀರಾವರಿ ಯೋಜನೆ ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸಬೇಕೆಂದು ಆಗ್ರಹಿಸಿ ಸೋಮವಾರ ಕರೆ ನೀಡಲಾಗಿದ್ದ ಹಳಿಯಾಳ ಬಂದ್ ಯಶಸ್ವಿಯಾಯಿತು. ಹಳಿಯಾಳದ ಎಲ್ಲಾ ವ್ಯಾಪಾರಸ್ಥರ ಸಂಘಗಳು, ಸಂಘ ಸಂಸ್ಥೆಗಳು , ಹಿರಿಯ ನಾಗರಿಕ ಸಂಘಟನೆ, ಕನ್ನಡ ಹೋರಾಟ ಸಂಘಟನೆಗಳು, ಹೊಟೇಲ್ ಮತ್ತು ಬಾರ್ ಅಸೋಸಿಯೇಷನ್ ನ ಸದಸ್ಯರು ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿದ ಕಾರಣ ಸಂಪೂರ್ಣ ಹಳಿಯಾಳ ಸ್ತಬ್ಧಗೊಂಡಿತು.

ಈ ಸಂದರ್ಭದಲ್ಲಿ ಚೂನಪ್ಪಾ ಪೂಜಾರಿ, ಮಹೇಶ್ ಸುಬೇದಾರ್, ಪ್ರಕಾಶ್ ನಾಯ್ಕ್, ರಾಜು ಪವಾರ್, ಪ್ರೇಮ ಚೌಗಲಾ, ಸತ್ಯಪ್ಪಾ ಮಲ್ಲಾಪುರಿ, ವಿಜಯ ಭರತ್, ರಮೇಶ್ ಟಕ್ಕನವರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕೆರೆ, ಬಾಂದಾರ ತುಂಬಿಸುವ ಯೋಜನೆ ಬಹುತೇಕ ಪೂರ್ಣ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನಲ್ಲಿ ಕಾಳಿ ನದಿಯಿಂದ ನೀರನ್ನು ಎತ್ತಿ ಹಳಿಯಾಳ ತಾಲೂಕಿನ 46 ಕೆರೆಗಳನ್ನು ಹಾಗೂ ತಟ್ಟಿಹಳ್ಳದ ಮೇಲಿನ 19 ಬಾಂಧಾರಗಳನ್ನು ತುಂಬಿಸುವ ಯೋಜನೆಯು ಪ್ರಸ್ತುತ ಬಹುತೇಕ ಪೂರ್ಣಗೊಂಡಿದ್ದು, ಪರೀಕ್ಷಾರ್ಥ ಚಾಲನೆಗೊಳಿಸಬೇಕಾಗಿದೆ.

ಈ ಯೋಜನೆಯನ್ನು 2 ಹಂತಗಳಲ್ಲಿ ಕೈಕೊಳ್ಳಲಾಗುತ್ತಿದ್ದು, 1ನೇ ಹಂತದಲ್ಲಿ ದಾಂಡೇಲಿ ನಗರದ ಸರಹದ್ದಿನ ಕಾಳಿ ನದಿಯ ದಂಡೆಯ ಮೇಲೆ ಜಾಕವೆಲ್ ಪಂಪಹೌಸ ಹಾಗೂ ವಿದ್ಯುತ್ ಉಪ-ಕೇಂದ್ರ ನಿರ್ಮಾಣ ಮಾಡಿದ್ದು, ಅಲ್ಲಿಂದ ಬಲೋಗಾ ಗ್ರಾಮದ ಹತ್ತಿರ ನಿರ್ಮಾಣವಾಗಿರುವ 2ನೇ ಹಂತದ ಜಾಕವೆಲ್ ಪಂಪಹೌಸ್ ಗೆ ನೀರನ್ನು ಪಂಪ ಮಾಡಲಾಗುವುದು. 1ನೇ ಹಂತದಲ್ಲಿ 2 ಕೆರೆಗಳು ಹಾಗೂ 13 ಬಾಂಧಾರಗಳಿಗೆ ನೀರನ್ನು ತುಂಬಿಸಲಾಗುವುದು. 2ನೇ ಹಂತದಲ್ಲಿ 2 ಫೀಡರಗಳು ಇದ್ದು 1ನೇ ಫೀಡರನಲ್ಲಿ 11 ಕೆರೆಗಳು ಹಾಗೂ 2ನೇ ಫೀಡರ ನಲ್ಲಿ 33 ಕೆರೆಗಳು ಮತ್ತು 6 ಬಾಂಧಾರಗಳಿಗೆ ನೀರನ್ನು ತುಂಬಿಸಲಾಗುವುದು.ಈ ಯೋಜನೆಯು ಭೂಸ್ವಾಧೀನ ಸಮಸ್ಯೆ, ಕೋವಿಡ್-19 ಅತಿವೃಷ್ಟಿ ಹಾಗೂ ಇನ್ನಿತರ ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದ ವಿಳಂಬವಾಗಿರುತ್ತದೆ.

» ಕ.ನೀ.ನಿ.ನಿಗಮದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು ಪ್ರಕಟಣೆ

ಪ್ರಸ್ತುತ ಯೋಜನೆ ಎರಡು ಹಂತಗಳಲ್ಲಿ ಪಂಪ್‌ಹೌಸ್, ಸಬ್ ಸ್ಟೇಷನ್ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯವಿರುವ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಯೋಜನೆಯ 2ನೇ ಹಂತಕ್ಕೆ ಈಗಾಗಲೇ ಸರ್ಕಾರದ ಮುಖ್ಯ ವಿದ್ಯುತ್ ಪರೀಕ್ಷಕರಿಂದ ವಿದ್ಯುತ್ ಚಾರ್ಜ್ ಮಾಡಲು ಅನುಮೋದನೆ ಪಡೆದುಕೊಂಡಿದ್ದು, 1ನೇ ಹಂತಕ್ಕೆ ಅನುಮೋದನೆ ಪಡೆಯುವ ಸಲುವಾಗಿ ವಿದ್ಯುತ್ ಪರೀಕ್ಷಕರಿಂದ ಅಂತಿಮ ಪರೀವಿಕ್ಷಣೆ ಪೂರ್ಣಗೊಂಡಿದ್ದು, ವಿದ್ಯುತ್ ಚಾರ್ಜ್ ಮಾಡಲು ಅನುಮೋದನೆಯ ಲಿಖಿತ ಆದೇಶ ದೊರೆತ ಕೂಡಲೇ ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಮಾರ್ಚ್-2026ರ ಅಂತ್ಯದೊಳಗೆ ಯೋಜನೆಯನ್ನು ಪರೀಕ್ಷಾರ್ಥ ಚಾಲನೆಗೊಳಿಸಲಾಗುವುದು ಎಂದು ಕ.ನೀ.ನಿ.ನಿಗಮದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ದೇಶಪಾಂಡೆ ಜನ್ಮದಿನ: ರಕ್ತದಾನ ಶಿಬಿರ ಯಶಸ್ವಿ

ಹಳಿಯಾಳ: ದಾಂಡೇಲಿ, ಜೋಯಿಡಾ ವಿಧಾನಸಭಾ ಶಾಸಕರು ಹಾಗೂ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾದ ಆರ್.ವಿ.ದೇಶ್‌ಪಾಂಡೆಯವರ ಜನ್ಮದಿನದ ಪ್ರಯುಕ್ತ ಪಟ್ಟಣದ ಕೆಎಲ್ ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಸೋಮವಾರ ಆಯೋಜಿಸಲಾಗಿತ್ತು.

ಪದ್ಮಶ್ರೀ ಆರ್.ಬಿ.ಪಾಟೀಲ್ ಕ್ಯಾನ್ಸರ್ ಹಾಸ್ಪಿಟಲ್ ನವ ನಗರದ ಡಾ. ಉಮೇಶ್ ಹಳ್ಳಿ ಕೇರಿಯವರು ಅತಿಥಿಗಳಾಗಿ ಮಾತನಾಡಿ, ರಕ್ತದಾನ ಮಹಾದಾನವಾಗಿದ್ದು, ರಕ್ತದಾನದಿಂದ ಜೀವವನ್ನು ಉಳಿಸಬಹುದಾಗಿದೆ ಎಂದು ಹೇಳಿದರು. ಉತ್ತಮ ರಕ್ತವನ್ನು ಹೊಂದಲು ವಿದ್ಯಾರ್ಥಿಗಳು ಮಾದಕ ವಸ್ತು ಸೇವಿಸದಂತೆ ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ ಶೈಕ್ಷಣಿಕ ವಿಭಾಗದ ಡೀನ್ ಡಾ.ಗುರುರಾಜ ಹಟ್ಟಿ ಉತ್ತಮ ಆರೋಗ್ಯ ಹೊಂದಲು ಪ್ರತಿ ದಿನ ದೈಹಿಕ ಪರಿಶ್ರಮ ಪಡುವಂತೆ ಹೇಳಿದರು. ವಿದ್ಯಾರ್ಥಿಗಳ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿ ಸಮಾಜಕ್ಕೆ ಕೊಡುಗೆ ನೀಡಬೇಕೆಂದು ಹೇಳಿದರು.

75ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿ ಸಮಾಜಕ್ಕೆ ಕೊಡುಗೆ ನೀಡಿದರು. ವಿಆರ್‌ಡಿಎಂ ಟ್ರಸ್ಟ್ ನ ಆಡಳಿತಾಧಿಕಾರಿ ಪ್ರಕಾಶ್ ಪ್ರಭು, ಡೀನ್ ಪ್ರೊ ಮಂಜುನಾಥ್, ಎನ್‌ಎಸ್‌ಎಸ್ ಘಟಕದ ಸಂಚಾಲಕ ಪ್ರೊ. ಸಂತೋಷ ಸವಣೂರ್ ಮತ್ತು ರೆಡ್ ರಿಬ್ಬನ್ ಕ್ಲಬ್ ಸಂಚಾಲಕಿ ಪ್ರೊ. ಜ್ಯೋತಿ ಕಮ್ಮಾರ್ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಮಹಾವಿದ್ಯಾಲಯದ ಎನ್‌ಎಸ್ ಎಸ್ ಘಟಕ, ರೆಡ್ ರಿಬ್ಬನ್ ಕ್ಲಬ್ ಮತ್ತು ವಿ ಆರ್ ಡಿಎಂ ಟ್ರಸ್ಟ್ ನ ಜಂಟಿ ಸಯೋಗದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ರಕ್ತದಾನ ಮೂಲಕ ವಿದ್ಯಾರ್ಥಿಗಳು ಸಮಾಜ ಸೇವೆ ಸಲ್ಲಿಸುತ್ತಿರುವುದು ಸಂತಸದ ವಿಷಯವಾಗಿದೆ ಎಂದು ಪ್ರಾಚಾರ್ಯ ಡಾ.ವಿ.ಎ ಕುಲಕರ್ಣಿ ತಿಳಿಸಿದ್ದಾರೆ.



ಗುಣ, ಮೌಲ್ಯಗೌರವಿಸುವ ಪರಂಪರೆ ನಮ್ಮದು: ಕೋಣೆಮನೆ

ಯಲ್ಲಾಪುರ: ಸಂಖ್ಯೆಗಿಂತ ಗುಣ, ಮೌಲ್ಯಗಳನ್ನು ಗೌರವಿಸುವ ಪರಂಪರೆ ನಮ್ಮದಾಗಿದೆ. ಮಠಾಧೀಶರು, ಸಜ್ಜನರು, ಋಷಿ ಮುನಿಗಳು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಹಾಗೆಯೇ ವೇದಾಧ್ಯಯನ ಮಾಡುವವರು ಕಡಿಮೆ ಇದ್ದರೂ, ವೈದಿಕ ಸಂಸ್ಕೃತಿಯು ಭಾರತವನ್ನು ಅನೇಕ ಕಾಲ ಮುನ್ನೆಡೆಸಿದೆ ಎಂದು ಹಿರಿಯ ಪತ್ರಕರ್ತ ಹರಿಪ್ರಕಾಶ ಕೋಣೆಮನೆ ಹೇಳಿದರು.

ಅವರು ಪಟ್ಟಣದ ನಾಯಕನ ಕೆರೆಯ ಶಾರದಾಂಬಾ ವೇದ ಸಂಸ್ಕೃತ ಪಾಠ ಶಾಲೆಯಲ್ಲಿ ಸಾಹಿತ್ಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ನಮ್ಮ ಸಂವಿಧಾನವು ಶ್ರೇಷ್ಠವಾದುದು. ವೈದಿಕ ಸಂಸ್ಕೃತಿಗೂ ಇಂದಿನ ಸಂವಿಧಾನಕ್ಕೂ ವೈರುಧ್ಯವಿಲ್ಲ. ನಾವೆಲ್ಲ ಒಂದು ಎಂಬ ಭಾವದಿಂದ ರಾಷ್ಟ್ರಗೀತೆಯನ್ನು ಹೇಳಿದರೆ ಎಲ್ಲರೂ ಸುಖವಾಗಿಯೂ, ಶಾಂತವಾಗಿಯೂ ಇರಲಿ ಎಂಬ ಭಾವ ವೈದಿಕ ರಾಷ್ಟ್ರಗೀತೆಯಲ್ಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಉಮೇಶ ಭಾಗ್ವತ ಮಾತನಾಡಿದರು. ಪಿಯು ಕಾಲೇಜು ಪ್ರಾಚಾರ್ಯ ಡಾ.ಡಿ.ಕೆ.ಗಾಂವ್ಕರ ಮಾತನಾಡಿ, ನಿಮ್ಮ ಮುಂದಿನ ಜೀವನ ಕಲಿತ ವಿದ್ಯೆಗೆ, ತಂದೆ-ತಾಯಿಗಳಿಗೆ ಗೌರವ ತರುವಂತಾಗಲಿ ಎಂದರು. ಪ್ರೌಢಶಾಲೆಯ ಮುಖ್ಯಾಧ್ಯಾಪಕಿ ಮುಕ್ತಾ ಶಂಕರ ಮಾತನಾಡಿ, ಆಧುನಿಕ ಯುಗದಲ್ಲಿ ಆರೋಗ್ಯಕ್ಕೆ ಮಹತ್ವ ನೀಡಿ. ಶುಚಿ-ರುಚಿ ಆಹಾರ ಕ್ರಮ, ಆರ್ಥಿಕವಾದ ಭದ್ರತೆ, ಅಧ್ಯಯನ ಶೀಲತೆ, ಉತ್ತಮ ಹವ್ಯಾಸ ರೂಢಿಸಿಕೊಂಡಾಗ ನಿಮ್ಮ ಭವಿಷ್ಯ ಉಜ್ವಲವಾಗುತ್ತದೆ ಎಂದರು.




ಆಡಳಿತ ಮಂಡಳಿಯ ನಿರ್ದೇಶಕ ನಾಗೇಂದ್ರ ಕವಾಳೆ, ವಿಶ್ರಾಂತ ಮುಖ್ಯಾಧ್ಯಾಪಕ ವಿ.ಎಸ್.ಭಟ್ಟ ಕಳಚೆ, ದೇವಸ್ಥಾನದ ಸಹ ಕಾರ್ಯದರ್ಶಿ ನರಸಿಂಹ ಗೇರಗದ್ದೆ ಉಪಸ್ಥಿತರಿದ್ದರು. ವಿದ್ಯಾಥಿಗಳಿಂದ ವೇದಘೋಷ ಹೇಳಿದರು. ಮುಖ್ಯಾಧ್ಯಾಪಕ ಡಾ.ಶಿವರಾಮ ಭಾಗ್ವತ ಸ್ವಾಗತಿಸಿ, ವಂದಿಸಿದರು. ಅಧ್ಯಾಪಕ ಡಾ.ನರಸಿಂಹ ಭಟ್ಟ ನಿರ್ವಹಿಸಿದರು.

ಸಿಗಡಿ ಕೃಷಿ: ಸೂಕ್ತ ದಾಖಲೆ ಸಲ್ಲಿಸಲು ಸೂಚನೆ

ಕಾರವಾರ: ಚೆಂಡಿಯಾ ಪಂಚಾಯತ್ ವ್ಯಾಪ್ತಿಯಲ್ಲಿ ಪಂಚಾಯತ ಪರವಾನಿಗೆಯಿಲ್ಲದೆ ಅನಧಿಕೃತವಾಗಿ ನಡೆಸುತ್ತಿರುವ ಸಿಗಡಿ ಕೃಷಿ ಹೊಂಡ ಸ್ಥಳಕ್ಕೆ ಭೇಟಿ ನೀಡಿ, ಸಿಗಡಿ ಕೃಷಿಗೆ ಸಂಬಂಧಿಸಿ ಸೂಕ್ತ ದಾಖಲೆಗಳನ್ನು ಸಲ್ಲಿಸುವಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಆಡಳಿತಾಧಿಕಾರಿ ಪ್ರಶಾಂತ ಎಸ್.ಹೆಚ್. ಸೂಚಿಸಿದರು.

ಅವರು ಸೋಮವಾರ ಚೆಂಡಿಯಾ ಗ್ರಾಪಂಗೆ ಭೇಟಿ ನೀಡಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಂದಯ ಅಧಿಕಾರಿ ಮತ್ತು ಇತರೆ ಪಂಚಾಯತ ಸಿಬ್ಬಂದಿಗಳೊಂದಿಗೆ ಸ್ಥಳ ಭೇಟಿ ಮಾಡಿ ಪರಿಶೀಲನೆ ನಡೆಸಿದರು.

ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸುವ ಬಗ್ಗೆ ಆ ಭಾಗದ ಗ್ರಾಮಸ್ಥರಲ್ಲಿ ಸ್ಥಾನಿಕವಾಗಿ ಚರ್ಚಿಸಿ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ನಿರ್ಮಾಣ ಮಾಡುವ ಬಗ್ಗೆ ವಿಶ್ವಾಸ ಮೂಡಿಸಿ, ಸಾರ್ವಜನಿಕರು ನೀಡಿದ ತಕರಾರು ಅರ್ಜಿಗಳನ್ನು ಹಾಗೂ ಇತರೆ ಕುಂದು ಕೊರತೆ ಅರ್ಜಿಗಳನ್ನು ಪರಿಶೀಲಿಸಿದರು. ಬೇಸಿಗೆಕಾಲದಲ್ಲಿ ಕುಡಿಯುವ ನೀರು ಸಮಸ್ಯೆ ಉದ್ಭವಿಸುವ ಸ್ಥಳಗಳನ್ನು ಪರಿಶೀಲಿಸಿ ಸೂಕ್ತ ಕ್ರಮಕ್ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ ಸಿಬ್ಬಂದಿಗಳಿಗೆ ಸೂಚನೆ ನೀಡಿ, ಮಳೆಗಾಲದಲ್ಲಿ ಮುಂಜಾಗೃತಾ ಕ್ರಮವಾಗಿ ಪ್ರವಾಹ ಉಂಟಾಗುವ ಸಂಭವನೀಯ ಸ್ಥಳಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು. ರಾ.ಹೆ. 66ರ ಎರಡು ಬದಿಯಲ್ಲಿರುವ ಚರಂಡಿಗಳಲ್ಲಿರುವ ಮಣ್ಣನ್ನು ಹೂಳೆತ್ತುವ ಕಾಮಗಾರಿಗನ್ನು ಕೈಗೊಳ್ಳಲು ಸಂಬಂಧಪಟ್ಟ ಐಆರ್‌ಬಿ ಅಧಿಕಾರಿಗಳಿಗೆ ಸೂಚನೆ ನೀಡಿದ ಅವರು ಚೆಂಡಿಯಾ ವ್ಯಾಪ್ತಿಯ ಒಕ್ಕಲಕೇರಿಯಲ್ಲಿ ಉಂಟಾದ ಬೆಂಕಿ ಅವಘಡ ಸಂಭವಿಸಿದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.



ಲೋಕ ಅದಾಲತ್: 53 ಪ್ರಕರಣ ಇತ್ಯರ್ಥ



ಯಲ್ಲಾಪುರ: ಪಟ್ಟಣದ ಜೆಎಂಎಫಸಿ ನ್ಯಾಯಾಲಯದ ಆವರಣದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಯಶಸ್ವಿಯಾಗಿ ನಡೆಯಿತು. ಸಿವಿಲ್ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶ ಕುಮಾರ್.ಎಸ್ .ನೇತೃತ್ವದಲ್ಲಿ ದಾಖಲಾದ 64 ಪ್ರಕರಣಗಳಲ್ಲಿ ಒಟ್ಟು 53 ಪ್ರಕರಣಗಳು ಇತ್ಯರ್ಥವಾದವು. ಸಿವಿಲ್ ನ್ಯಾಯಾಧೀಶೆ ಅನಿತಾ ಕುಮಾರಿ.ಎಸ್ ನೇತೃತ್ವದಲ್ಲಿ ದಾಖಲಾದ 314 ಪ್ರಕರಣಗಳಲ್ಲಿ 22 ಪ್ರಕರಣಗಳು ಇತ್ಯರ್ಥವಾದವು.

ಒಟ್ಟಾರೆ ಎರಡೂ ನ್ಯಾಯಾಲಯಗಳ ಅಡಿಯಲ್ಲಿ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 2,03,36,265ರುಗಳಷ್ಟು ಮೊತ್ತ ಭರಣವಾಯಿತು.

ಸಂಧಾನಕಾರರಾಗಿ ಗಣಪತಿ.ಎಸ್.ಭಟ್ಟ ಹಾಗೂ ಸುಭಾಸ.ಸಿ.ಭಟ್ಟ ಕಾರ್ಯನಿರ್ವಹಿಸಿದರು. ವಕೀಲರ ಸಂಘದ ಅಧ್ಯಕ್ಷ ವಿ.ಟಿ ಜಿ ಭಟ್ಟ, ಅಪರ ಸರ್ಕಾರಿ ವಕೀಲ ಎನ್.ಟಿ ಗಾಂವಕರ್, ಸಹಾಯಕ ಸರ್ಕಾರಿ ಅಭಿಯೋಜಕಿ ಝೀನತ್ ಬಾನು ಶೇಖ, ನ್ಯಾಯವಾದಿಗಳು, ನ್ಯಾಯಾಲಯದ ಸಿಬ್ಬಂದಿಗಳು, ಆರಕ್ಷಕರು, ಬ್ಯಾಂಕ ಹಾಗೂ ಸೊಸೈಟಿ ಅಧಿಕಾರಿಗಳು ಉಪಸ್ಥಿತರಿದ್ದರು.

ಭಗವಂತನ ಸ್ಮರಣೆ ಮಾಡಿ: ಶ್ರೀಗಳು

ಭಟ್ಕಳ: ಹೊನ್ನಾವರ ಮಂಡಳ ಅಂತರ್ಗತ ಭಟ್ಕಳ ಹವ್ಯಕ ವಲಯದ ಐದನೇ ವಲಯೋತ್ಸವ ಕಾರ್ಯಕ್ರಮ ಗುರುವಂದನೆ, ಕುಂಕುಮಾರ್ಚನೆ, ಭಜನಾ ಕಾರ್ಯಕ್ರಮದೊಂದಿಗೆ ಆರಂಭಗೊಂಡಿತು. ಈ ಸಂದರ್ಭದಲ್ಲಿ ಮಾತನಾಡಿದ ವಲಯದ ವೈವಾಹಿಕ ವಿಭಾಗದ ಮುಖ್ಯಸ್ಥ ಕೃಷ್ಣಾನಂದ ಭಟ್ಟ ಬಲ್ಸೆ ಅವರು, ಗುರುವಿನ ಸ್ಥಾನ ಬಹು ದೊಡ್ಡದು. ನಮ್ಮಲ್ಲಿರುವ ಅಜ್ಞಾನವನ್ನು ದೂರ ಮಾಡಿ ಭಗವಂತನನ್ನು ಕಾಣಲು ಗುರು ಕಾರುಣ್ಯಬೇಕು. ನಾವು ಭಗವಂತನ ಸ್ಮರಣೆ ಮಾಡಬೇಕು. ನಮ್ಮಲ್ಲಿ ಸಂಪತ್ತು ಇದ್ದಾಗ ನಾವು ಸದುಪಯೋಗ ಪಡಿಸಿಕೊಳ್ಳಬೇಕು.ಆಗ ಮಾತ್ರ ಜೀವನ ಸಾರ್ಥಕವಾಗುವುದು ಎಂದು ಹೇಳಿದರು. ಹೊನ್ನಾವರ ಮಂಡಳದ ವಿದ್ಯಾರ್ಥಿ ವಿಭಾಗದ ಮುಖ್ಯಸ್ಥ ಎಸ್.ಎನ್.ಹೆಗಡೆ ಕರ್ಕಿ, ಸಿದ್ದಾಪುರ ಮಂಡಳದ ಕೋಶಾಧ್ಯಕ್ಷ ಎಸ್.ಎಂ.ಹೆಗಡೆ, ಉದ್ಯಮಿ ನಾಗರಾಜ ಭಟ್ಟ ಬೇಂಗ್ರೆ, ಹೊನ್ನಾವರ ಮಂಡಳದ ಮಾತೃ ಪ್ರಧಾನೆ ರೇಷ್ಮಾ ಯೋಗೀಶ ಭಟ್ಟ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಭಟ್ಕಳ ಹವ್ಯಕ ವಲಯದ ಅಧ್ಯಕ್ಷ ಎಂ.ವಿ.ಹೆಗಡೆ ಮಾತನಾಡಿದರು. ಹೊನ್ನಾವರ ಮಂಡಳದ ಉಪಾಧ್ಯಕ್ಷ ಶಂಭು ಹೆಗಡೆ, ಭಟ್ಕಳ ವಲಯದ ಉಪಾಧ್ಯಕ್ಷ ರಾಧಾಕೃಷ್ಣ ಭಟ್ಟ ಉಪಸ್ಥಿತರಿದ್ದರು. ವಲಯೋತ್ಸವದ ಆತಿಥ್ಯ ವಹಿಸಿದ್ದ ನಾಗರಾಜ ಮಧ್ಯಸ್ಥ ಗೋಳಿಕುಂಬ್ರಿ ಅವರನ್ನು ಗೌರವಿಸಲಾಯಿತು. ಶ್ರೀಕಾಂತ ಹೆಗಡೆ ಸ್ವಾಗತಿಸಿದರು. ವಲಯ ಕಾರ್ಯದರ್ಶಿ ಎಸ್.ಎಂ.ಭಟ್ಟ ನಿರ್ವಹಿಸಿದರು. ಗುರಿಕಾರರಾದ ಪಿ.ಎನ್. ಭಟ್ಟ ಹಾಗೂ ತಿಮ್ಮಣ್ಣ ಮಧ್ಯಸ್ಥ ಸಹಕರಿಸಿದರು.



ಅಪಘಾತ: ತೀವ್ರ ಗಾಯ

ಅಂಕೋಲಾ: ಸ್ಕೂಟಿ ಮಾದರಿಯ ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನದಲ್ಲಿ ಸಂಚರಿಸುತ್ತಿದ್ದ ತಂದೆ ಮತ್ತು ಮಗ ತೀವ್ರವಾಗಿ ಗಾಯಗೊಂಡ ಘಟನೆ ತಾಲೂಕಿನ ಸಿಂಗನಮಕ್ಕಿ ಕ್ರಾಸ್ ಅಂಕೋಲಾ ಗೋಕರ್ಣ ರಾಜ್ಯ ಹೆದ್ದಾರಿಯಲ್ಲಿ ನಡೆದಿದೆ.

ದ್ವಿಚಕ್ರ ವಾಹನ ಸವಾರ ಅಂಕೋಲಾ ಮಂಜಗುಣಿ ನಿವಾಸಿ ಜಗದೀಶ ಗಣೇಶ ನಾಯ್ಕ(34) ಮತ್ತು ಹಿಂಬದಿ ಸವಾರ ಗಣೇಶ ಜಟ್ಟಿ ನಾಯ್ಕ(76) ಗಾಯಗೊಂಡವರಾಗಿದ್ದು ಇವರು ತಮ್ಮ ಸ್ಕೂಟಿ ವಾಹನದಲ್ಲಿ ಅಂಕೋಲಾ ಕಡೆಯಿಂದ ಮಂಜಗುಣಿ ಕಡೆ ತೆರಳುತ್ತಿದ್ದ ಸಂದರ್ಭದಲ್ಲಿ ಮಂಜಗುಣಿ ಕಡೆಯಿಂದ ಅಂಕೋಲಾ ಕಡೆ ಬರುತ್ತಿದ್ದ ಕೆ.ಎ30 ಎನ್ 4024 ನೋಂದಣಿ ಸಂಖ್ಯೆಯ ಕಾರು ಚಾಲಕನ ಅಜಾಗರೂಕತೆಯ ಚಾಲನೆಯಿಂದ ಸಿಂಗನಮಕ್ಕಿ ಕ್ರಾಸ್ ಬಳಿ ಬಲಕ್ಕೆ ಹೋಗಿ ಸ್ಕೂಟಿಗೆ ಡಿಕ್ಕಿ ಹೊಡೆದಿದೆ.ದ್ವಿಚಕ್ರ ವಾಹನದಲ್ಲಿದ್ದ ಇಬ್ಬರಿಗೂ ಕೈ,ಕಾಲು,ಮುಖಗಳಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಕಾರು ಚಾಲಕ ಬಂಕಿಕೊಡ್ಲ ನಿವಾಸಿ ಶ್ರೀರಾಮ ನಾಡಕರ್ಣಿ ಎನ್ನುವವರ ಮೇಲೆ ದೂರು ದಾಖಲಾಗಿದ್ದು, ಅಂಕೋಲಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಗಾಂಜಾ ಸೇವನೆ: ಆರೋಪಿ ಬಂಧನ

ಅಂಕೋಲಾ: ಮಾದಕ ವಸ್ತು ಗಾಂಜಾ ಸೇವನೆ ಮಾಡಿದ್ದ ಯುವಕನೋರ್ವನನ್ನು ಅಂಕೋಲಾ ಪೊಲೀಸರು ವಶಕ್ಕೆ ಪಡೆದು ಕಾನೂನು ಕ್ರಮ ಜರುಗಿಸಿದ್ದಾರೆ.ವಂದಿಗೆ ಹೊಸಗದ್ದೆ ನಿವಾಸಿ ಅಕ್ಷಯಕುಮಾರ ಗೋಯ್ದು ಗೊಂಡ(25) ಬಂಧಿತ ವ್ಯಕ್ತಿಯಾಗಿದ್ದು ಆಟೋ ಚಾಲಕನಾಗಿರುವ ಈತ ಜಿ.ಸಿ.ಕಾಲೇಜು ಪ್ಲೈ ಓವರ್ ಬಳಿ ಸಾರ್ವಜನಿಕ ಸ್ಥಳದಲ್ಲಿ ಮಾದಕ ವಸ್ತು ಸೇವನೆ ಮಾಡಿರುವ ರೀತಿಯಲ್ಲಿ ಕಂಡು ಬಂದಿದ್ದರಿಂದ ಅಂಕೋಲಾ ಪಿಎಸ್‌ಐ ಗುರುನಾಥ ಹಾದಿಮನಿ ಅವರು ವಿಚಾರಣೆ ನಡೆಸಿದಾಗ ಬಾಯಿಂದ ಘಾಟು ವಾಸನೆ ಬರುತ್ತಿದ್ದು, ವಿಚಾರಣೆ ಸಂದರ್ಭದಲ್ಲಿ ತಾನು ಗಾಂಜಾ ಸೇವನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದು ಆರೋಪಿತನನ್ನು ಅಂಕೋಲಾ ತಾಲೂಕು ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆ ನಡೆಸಲಾಗಿದ್ದು ಆತ ಗಾಂಜಾ ಸೇವನೆ ಮಾಡಿರುವುದು ಪರೀಕ್ಷಾ ವರದಿಯಲ್ಲಿ ದೃಡಪಟ್ಟಿದೆ.ಈ ಕುರಿತಂತೆ ಪಿಎಸ್‌ಐ ಗುರುನಾಥ ಹಾದಿಮನಿ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಅಪಘಾತ: ಬೈಕ್ ಸವಾರರಿಗೆ ಗಾಯ

ಅಂಕೋಲಾ: ಬೈಕ್ ಸ್ಕಿಡ್ ಆಗಿ ಈರ್ವರು ಗಾಯಗೊಂಡ ಘಟನೆ ತಾಲೂಕಿನ ಶೆಟಗೇರಿ ಕ್ರಾಸ್ ಬಳಿ ಸಂಭವಿಸಿದೆ. ತಾಲೂಕಿನ ಬೆಳಂಬಾರ ಮುದ್ರಾಣಿ ನಿವಾಸಿಗಳಾದ ರಾಘವೇಂದ್ರ ಉದಯ ಗೌಡ(26) ಮತ್ತು ಯೋಗೇಶ ಮಂಗು ಗೌಡ (29) ಗಾಯಗೊಂಡವರಾಗಿದ್ದು, ಇವರು ಕೆ ಎ47 ಜೆ 9399 ನೋಂದಣಿ ಸಂಖ್ಯೆಯ ಬೈಕಿನಲ್ಲಿ ಕುಮಟಾ ಕಡೆಯಿಂದ ಅಂಕೋಲಾ ಕಡೆ ಬರುತ್ತಿದ್ದ ಸಂದರ್ಭದಲ್ಲಿ ಬೈಕ್ ಸವಾರ ರಾಘವೇಂದ್ರ ಗೌಡ ಅವರು ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಅತಿ ವೇಗ ಮತ್ತು ಅಜಾಗರೂಕತೆಯಿಂದ ಬೈಕ್ ಚಲಾಯಿಸಿ ತಾಲೂಕಿನ ಶೆಟಗೇರಿ ಕ್ರಾಸಿನ ಬಳಿ ನಿಯಂತ್ರಣ ತಪ್ಪಿ ಒಮ್ಮೇಲೆ ಬ್ರೇಕ್ ಒತ್ತಿದ್ದರಿಂದ ಬೈಕ್ ಸ್ಕಿಡ್ ಆಗಿ ರಸ್ತೆಯಲ್ಲಿರುವ ಬ್ಯಾರಿಕೆಡ್ ಗೆ ಬಡಿತ ಪರಿಣಾಮ ಬೈಕ್ ಸವಾರ ಮತ್ತು ಹಿಂಬದಿ ಸವಾರ ಇಬ್ಬರೂ ಗಾಯಗೊಂಡಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.ಅಂಕೋಲಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಬೈಕ್ ಸವಾರನ ಮೇಲೆ ಪ್ರಕರಣ ದಾಖಲಿಸಿದ್ದಾರೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಕಿರುಸುದ್ದಿ

ಪದಾಧಿಕಾರಿಗಳ ನೇಮಕ

ಹಾವೇರಿ: ಜಿಲ್ಲಾ ಬಿಜೆಪಿ ಅಧ್ಯಕ್ಷ ಹಾಗೂ ಮಾಜಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ ನಗರ ಮಂಡಲ ಅಧ್ಯಕ್ಷ ಕಿರಣ ಕೊಳ್ಳಿ ಇವರ ನಿರ್ದೇಶನದ ಮೇರೆಗೆ ನಗರ ಮಂಡಲ ಯುವ ಮೋರ್ಚಾ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಉಪಾಧ್ಯಕ್ಷರಾಗಿ ಪವನ ಕಜೂರಕರ್, ದೀಪಕ್ ಮಡಿವಾಳರ, ಪ್ರದೀಪ ತಾವರಿ, ರಾಯಪ್ಪ ಸಾಳಗುಂದಿ, ಕಾರ್ಯದರ್ಶಿಗಳಾಗಿ ರಘು ಮುತ್ತಳ್ಳಿ, ಉಜನೇಶ ಮೇಟಿ, ಸುರೇಶ ಹಿರೇಮಠ, ವಿಶ್ವ ಕಿತ್ತೂರಮಠ, ಖಜಾಂಚಿಯಾಗಿ ಪ್ರವೀಣ ಅಂಗರಗಟ್ಟಿ, ಮಾಧ್ಯಮ ಪ್ರಮುಖರಾಗಿ ಕೃಷ್ಣ ಮಾನೆ, ಕಾರ್ಯಕಾರಿಣಿ ಸದಸ್ಯರಾಗಿ ಕುಶಾಲ್ ಕನವಳ್ಳಿ, ವಿಕ್ರಾಂತ್ ಹೆಬ್ಬಾರ, ಪವನ ಯರೇಸಿಮಿ, ಚಂದ್ರಶೇಖರ ಅಗಡಿ, ನಿತೀಶ ಬೆಳವಡಿ, ಖುಷ್ ಜೈನ್, ಮನೋಜ್ ಮಳಗಾವಿ, ನಿಸರ್ಗ ಗಡ್ಡಿ, ಗಣೇಶ ಯಲವಿಗಿ, ಧನಂಜಯ ಅಂಗಡಿ, ತಿರಕಪ್ಪ ಕರ್ಜಗಿ, ಗುರು ಸಾತೇನಹಳ್ಳಿ, ಮಂಜುನಾಥ ಶಿರಗುಪ್ಪಿ, ಶೇಖರ ಗದಗಿ ಇವರನ್ನು ನೇಮಕ ಮಾಡಿ ನಗರ ಮಂಡಲ ಯುವ ಮೋರ್ಚಾ ಅಧ್ಯಕ್ಷ ಮಂಜುನಾಥ ಮಲಗೋಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುಗಾದಿ-ರಂಜಾನ್: ಹೆಚ್ಚುವರಿ ವಿಶೇಷ ಸಾರಿಗೆ

ಹಾವೇರಿ: ಯುಗಾದಿ ಮತ್ತು ರಂಜಾನ ಹಬ್ಬದ ಪ್ರಯುಕ್ತ ಪ್ರಯಾಣಿಕರ ಅನುಕೂಲಕ್ಕಾಗಿ ವಾ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 171 ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಮಾ.18 ಮತ್ತು 19 ರಂದು ಯುಗಾದಿ ಮಾ.21ರಂದು ರಂಜಾನ್ ಹಾಗೂ ಮಾ.22ರಂದು ಭಾನುವಾರ ಇರುವುದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಪ್ರಯಾಣಿಕರು ತಮ್ಮ ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು. ಬೆಂಗಳೂರಿನಿಂದ ರಾಜ್ಯ, ಅಂತರ ರಾಜ್ಯದ ವಿವಿಧ ಸ್ಥಳಗಳಿಗೆ ತೆರಳಲು ಮಾ.18 ರಿಂದ ಮಾ.20ರ ವರೆಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಈ ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದರ ಏರಿಕೆ ಖಂಡಿಸಿ ಪ್ರತಿಭಟನೆ



ರಾಣೇಬೆನ್ನೂರ: ಎಲ್‌ಪಿಜಿ ಸಿಲಿಂಡರ್ ದರ ಏರಿಕೆಯನ್ನು ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಆಟೋ ಚಾಲಕರು ಮತ್ತು ಮಾಲಕರು ಸೋಮವಾರದಂದು ನಗರದಲ್ಲಿ ಪ್ರತಿಭಟಿಸಿ ತಹಶೀಲ್ದಾರ ಆರ್.ಭಾಗವಾನ್ ಅವರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ರೈತ ಮುಖಂಡ ರವೀಂದ್ರಗೌಡ ಪಾಟೀಲ್ ಮಾತನಾಡಿ, ಎಲ್‌ಪಿಜಿ ಸಿಲಿಂಡರ್ ದರ ಏರಿಕೆಯಿಂದಾಗಿ ಜನಸಾಮಾನ್ಯರಿಗೆ, ಬಡವರಿಗೆ ಹಾಗೂ ಎಲ್ಲ ವರ್ಗದವರಿಗೂ ಹೊರೆಯಾಗುತ್ತಿದೆ ಕೂಡಲೇ ಸಿಲಿಂಡರ್ ದರವನ್ನು ಕೇಂದ್ರ ಸರಕಾರ ಇಳಿಕೆ ಮಾಡಬೇಕು ಇಲ್ಲವಾದಲ್ಲಿ ಬೃಹತ್ ಪ್ರತಿಭಟನೆ ಕೈಗೊಳ್ಳುವುದು ಅನಿವಾರ್ಯ ಎಂದರು. ಅಲ್ಲದೆ ನಗರದಲ್ಲಿ ಮೂರು ಎಲ್‌ಪಿಜಿ ಬಂಕ್ ಗಳಿವೆ ಆದರೆ ಒಂದೊಂದು ಬಂಕ್‌ನಲ್ಲಿ ಒಂದೊಂದು ರೇಟ್ ಫಿಕ್ಸ್ ಮಾಡಿದ್ದಾರೆ, ಬಂಕ್‌ಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯಗಳ ವ್ಯವಸ್ಥೆ ಇರುವುದಿಲ್ಲ ಕೂಡಲೇ ಅಂತಹ ಬಂಕ್ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಪ್ರತಿಭಟನಾಕಾರರು ತಹಶೀಲ್ದಾರರಿಗೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಆಟೋ ಚಾಲಕರು ಮಾಲಕರು ಮತ್ತು ರೈತ ಪರ ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪುಟ್ಟವ್ವ ಚೌಶೆಟ್ಟಿ ನಿಧನ

ಹಾವೇರಿ: ಇಲ್ಲಿಯ ಶಿವಲಿಂಗ ನಗರ ನಿವಾಸಿ ಪುಟ್ಟವ್ವ ಚನ್ನಬಸಪ್ಪ ಚೌಶೆಟ್ಟಿ (88) ಅವರು ನಿಧನರಾಗಿದ್ದಾರೆ. ಅವರ ಅಪೇಕ್ಷೆಯಂತೆ ಅವರ ಕಣ್ಣುಗಳನ್ನು ಹುಬ್ಬಳ್ಳಿಯ ಜೋಶಿ ಕಣ್ಣಿನ ಆಸ್ಪತ್ರೆಗೆ ದಾನ ಮಾಡಲಾಗಿದೆ. ಮೃತರಿಗೆ ಇಬ್ಬರು ಪುತ್ರರು, ಇಬ್ಬರುಪುತ್ರಿಯರು, ಅಪಾರ ಬಂಧು ಬಳಗವಿದೆ. ನೇತ್ರದಾನ ಪ್ರೇರಣ ಸಂಘದ ಪ್ರೇರಣೆಯ 168ನೇ ನೇತ್ರದಾನ ಇದಾಗಿದೆ. ಈ ಕಾರ್ಯಕ್ಕೆ ಸಹಕರಿಸಿದ ಮಠದ ಒಡೆಯ ಡಾ. ಶಿರಗುಪ್ಪಿ ಅವರನ್ನು ನೇತ್ರದಾನ ಪ್ರೇರಣ ಸಂಘದ ಅಧ್ಯಕ್ಷ ಪ್ರಭಾಕರ್ ಮಂಗಳೂರು ಅಭಿನಂದಿಸಿದ್ದಾರೆ.





ರಾಣೇಬೆನ್ನೂರ: ತಾಲೂಕಿನ ಪತ್ತೆಪುರ ಗ್ರಾಮದ ಯುವಕರು ಕಾಂಗ್ರೆಸ್ ಪಕ್ಷವನ್ನು ತೊರೆದು ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ನೇತೃತ್ವದಲ್ಲಿ ಪಕ್ಷದ ತತ್ವಸಿದ್ಧಾಂತಗಳಿಗೆ ಬದ್ಧರಾಗಿ ಜೆಡಿಎಸ್ ಪಕ್ಷಕ್ಕೆ ಸ್ವಯಂ ಪ್ರೇರಿತರಾಗಿ ಸೇರ್ಪಡೆಗೊಂಡರು. ತಾಲೂಕ ಯುವ ಘಟಕದ ಅಧ್ಯಕ್ಷ ಸಿದ್ದು ಪಟ್ಟಣಶೆಟ್ಟಿ, ತಾಲೂಕು ಅಧ್ಯಕ್ಷ ನಿಂಗಪ್ಪ ಸತ್ಯಪ್ಪನವರ, ನಗರ ಘಟಕ ಅಧ್ಯಕ್ಷ ಲಿಂಗರಾಜ ಹೊನ್ನಾಳಿ, ತಾಲೂಕ ರೈತ ಮೋರ್ಚ ಅಧ್ಯಕ್ಷ ಶಿವಪುತ್ರಪ್ಪ ನಡುವಿನಮನಿ ಮತ್ತು ಮುಖಂಡ ವಿಠಲ ಸುಣಗಾರ ಉಪಸ್ಥಿತರಿದ್ದರು.

ಇಂದು ವಿಶ್ವ ಗ್ರಾಹಕರ ದಿನಾಚರಣೆ

ಹಾವೇರಿ: ಜಿಲ್ಲಾಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಚೈತನ್ಯ ಸಂಸ್ಥೆಯ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಸಹಯೋಗದಲ್ಲಿ ವಿಶ್ವ ಗ್ರಾಹಕರ ದಿನಾಚರಣೆ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮ ಮಾ.17ರಂದು ಬೆಳಗ್ಗೆ 10.30ಕ್ಕೆ ಸಿ.ಬಿ. ಕೊಳ್ಳಿ ಪಾಲಿಟೆಕ್ನಿಕ್‌ನಲ್ಲಿ ಜರುಗಲಿದೆ. ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಉದ್ಘಾಟನೆ ನೆರವೇರಿಸಲಿದ್ದು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಈಶ್ವರಪ್ಪ ಬಿ.ಎಸ್. ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್ .ವಿ., ಕೆಎಲ್‌ಇ ಸೊಸೈಟಿ ನಿರ್ದೇಶಕ ಎಂ.ಸಿ. ಕೊಳ್ಳಿ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಉಮಾದೇವಿ ಹಿರೇಮಠ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಸಿ. ಸಿದ್ದನಗೌಡ್ರ, ಕಾರ್ಯದರ್ಶಿ ಪಿ.ಎಸ್. ಹೆಬ್ಬಾಳ, ಪ್ರಾಂಶುಪಾಲ ಪ್ರದೀಪ ಗದ್ದಿಗೌಡರ, ಕಾನೂನು ಮಾಪನ ಶಾಸ್ತ್ರ ಇಲಾಖೆ ಸಿದ್ದಪ್ಪ ಪೂಜಾರಿ ಭಾಗವಹಿಸಲಿದ್ದಾರೆ. ಹಿರಿಯ ಸಹಾಯಕ ಕಾನೂನು ನೆರವು ಅಭಿರಕ್ಷಣಾ ವಕೀಲ ಎನ್.ಎನ್. ಡಿಳ್ಳೆಪ್ಪನವರ ಗ್ರಾಹಕ ಹಕ್ಕು ಕಾಯ್ದೆ 2019ರ ಕುರಿತು ಉಪನ್ಯಾಸ ನೀಡಲಿದ್ದಾರೆ.



ಹಾನಗಲ್ಲ: ಪಟ್ಟಣದ ವರ್ದಿ ಕಾಂಪ್ಲೆಕ್ಸ್‌ನಲ್ಲಿ ವೈಭವಿ ಮಹಿಳಾ ಮಂಡಳ ವತಿಯಿಂದ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ವೇಳೆ ವೈಭವಿ ಮಹಿಳಾ ಮಂಡಳದ ಅಧ್ಯಕ್ಷೆ ಸೌಭಾಗ್ಯ ಉದಾಸಿ, ಶಿವಗಂಗಕ್ಕ ಪಟ್ಟಣದ, ಲಲಿತಾ ಧಾರವಾಡ ಮಾಜಿ ಸೈನಿಕ ದಿ.ಬಸವಂತಪ್ಪ ಸುಣಗಾರ ಅವರ ಪತ್ನಿ ಶಕುಂತಲಾ ಸುಣಗಾರವ ಮತ್ತಿತರರಿದ್ದರು.

ನಾಳೆಯಿಂದ ಪರೀಕ್ಷೆ ಆರಂಭ | ಡಿಡಿಪಿಐ ಮೋಹನ ದಂಡಿನ ಮಾಹಿತಿ

ಎಸೆಸ್ಸೆಲ್ಸಿ ಪರೀಕ್ಷೆಗೆ ಅಗತ್ಯ ಸಿದ್ಧತೆ ಪೂರ್ಣ

ಸಾಂದರ್ಭಿಕ ಚಿತ್ರ



ಹಾವೇರಿ: ಎಸೆಸ್ಸೆಲ್ಸಿ ಪರೀಕ್ಷೆ-1 ಮಾ.18ರಿಂದ ಏ.2ರವರೆಗೆ ಜಿಲ್ಲೆಯ 81 ಕೇಂದ್ರಗಳಲ್ಲಿ ನಡೆಯಲಿದ್ದು, ವ್ಯವಸ್ಥಿತ ಹಾಗೂ ಶಾಂತತೆಯಿಂದ ಪರೀಕ್ಷೆ ನಡೆಸಲು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮೋಹನ್ ದಂಡಿನ ತಿಳಿಸಿದ್ದಾರೆ.

23,348 ವಿದ್ಯಾರ್ಥಿಗಳು: 21,446 ಹೊಸ ವಿದ್ಯಾರ್ಥಿಗಳು, 1,296 ಪುನರಾವರ್ತಿತ ವಿದ್ಯಾರ್ಥಿಗಳು, 528 ಖಾಸಗಿ ಹೊಸ ಅಭ್ಯರ್ಥಿಗಳು, 78 ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು ಸೇರಿ 23,348 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, 11,539 ಗಂಡು ಮತ್ತು 11,809 ಹೆಣ್ಣು ಮಕ್ಕಳು ಪರೀಕ್ಷೆ ಬರೆಯಲಿದ್ದಾರೆ.

81 ಪರೀಕ್ಷಾ ಕೇಂದ್ರಗಳು: ಬ್ಯಾಡಗಿ ತಾಲೂಕಿನಲ್ಲಿ 7, ಹಾನಗಲ್ ಹಾಗೂ ಹಾವೇರಿಯಲ್ಲಿ ತಲಾ 14, ಹಿರೇಕೆರೂರು-11, ರಾಣೇಬೆನ್ನೂರು-15, ಸವಣೂರ-8 ಹಾಗೂ ಶಿಗ್ಗಾಂವ ತಾಲೂಕಿನಲ್ಲಿ 12 ಸೇರಿ ಒಟ್ಟು 81 ಪರೀಕ್ಷೆಗಳನ್ನು ಸ್ಥಾಪಿಸಲಾಗಿದೆ. ಸುಗಮ ಪರೀಕ್ಷೆ ನಡೆಸಲು ಮುಖ್ಯ ಅಧೀಕ್ಷಕರು -81, ಉಪ ಮುಖ್ಯ ಅಧೀಕ್ಷಕರು-15, ಸಿ.ಸಿ.ಟಿ.ವಿ ವೆಬ್ ಕಾಸ್ಟಿಂಗ್ ತಂಡ- 14, ಕಸ್ಟೋಡಿಯನ್-81, ಸ್ಥಾನಿಕ ಜಾಗೃತದಳ-81, ಮಾರ್ಗಾಧಿಕಾರಿಗಳು-32, ಕೊಠಡಿ ಮೇಲ್ವಿಚಾರಕರು- 1089 ಹಾಗೂ 81 ಕಚೇರಿ ಸಹಾಯಕರನ್ನು ನೇಮಕ ಮಾಡಲಾಗಿದೆ.

ಪ್ರಶ್ನೆಪ್ರತಿಕೆಸರಬರಾಜುಗಾಗಿ32 ಮಾರ್ಗಗಳನ್ನು ರಚಿಸಲಾಗಿದೆ. ಪರೀಕ್ಷಾ ಕಾರ್ಯವು ಸುಗಮವಾಗಿ ನಡೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಎಂಟು ಜಿಲ್ಲಾಮಟ್ಟದ ವೀಕ್ಷಕರ ತಂಡ ಹಾಗೂ 32ತಾಲೂಕ ವೀಕ್ಷಕರ ತಂಡವನ್ನು ಜಿಲ್ಲಾಧಿಕಾರಿಗಳು ನೇಮಕ ಮಾಡಿ ಆದೇಶಿಸಿದ್ದಾರೆ. ಪರೀಕ್ಷಾ ಕೇಂದ್ರದ ಸುತ್ತ 200 ಮೀಟರ್ ನಿಷೇಧಿತ ಪ್ರದೇಶವೆಂದು ಘೋಷಿಸಿ, ನಿಷೇದಾಜ್ಞೆ ಜಾರಿಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

- ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಕೆ
- ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ

ಅಗತ್ಯ ಮೂಲಭೂತ ಸೌಲಭ್ಯ: ಪ್ರತಿ ಪರೀಕ್ಷಾ ಕೇಂದ್ರಕ್ಕೆ ಅಗತ್ಯ ಮೂಲ ಭೂತ ಸೌಲಭ್ಯ ಒದಗಿಸಲಾಗಿದೆ. ಉತ್ತಮ ಆಸನದ ವ್ಯವಸ್ಥೆ. ಜಿಲ್ಲಾ ಪಂಚಾಯಿತಿಯಲ್ಲಿ ಜಿಲ್ಲಾಮಟ್ಟದ ವೆಬ್ ಕಾಸ್ಟಿಂಗ್ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ.

ಜಿಲ್ಲಾಧಿಕಾರಿಗಳು, ಜಿಪಂ ಸಿಇಒ, ಎಸ್ಪಿ ನೇತೃತ್ವದಲ್ಲಿ ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರ ಹಾಗೂ ಬಿಇಒಗಳ ಸಭೆನಡೆಸಿ, ನಕಲು ರಹಿತ ಹಾಗೂ ಪಾರದರ್ಶಕ ಪರೀಕ್ಷೆ ನಡೆಸಲು ಸೂಚನೆ ನೀಡಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಅಗತ್ಯ ಪೊಲೀಸ್ ಸಿಬ್ಬಂದಿ ನೇಮಿಸಲಾಗಿದೆ ಹಾಗೂ ಜಿಲ್ಲಾ ಹಾಗೂ ತಾಲೂಕಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ಜಾಗೃತ ದಳವನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಉಚಿತ ಸಾರಿಗೆ ಸೌಲಭ್ಯ

ಎಸೆಸ್ಸೆಲ್ಸಿ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಅವರ ವಿದ್ಯಾಸಂಸ್ಥೆಯ ಹೊರತಾಗಿ ಇತರೆ ವಿದ್ಯಾ ಸಂಸ್ಥೆಗಳಿಗೆ ಪರೀಕ್ಷಾ ಕೇಂದ್ರಗಳ ನಿಯೋಜನೆಯಾದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ವಾಸಸ್ಥಳದಿಂದ ಪರೀಕ್ಷಾ ಕೇಂದ್ರಗಳವರೆಗೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಪರೀಕ್ಷೆ ನಡೆಯುವ ದಿನಾಂಕಗಳಂದು, ಅಂದರೆ ಪರೀಕ್ಷೆಗೆ ಹಾಜರಾಗುವ ಮಕ್ಕಳು ಎಸೆಸ್ಸೆಲ್ಸಿ ಪರೀಕ್ಷೆಯ ಪ್ರವೇಶ ಪತ್ರ ತೋರಿಸಿ ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಹಾಗೂ ಪರೀಕ್ಷೆ ಮುಗಿಸಿ ವಾಸಸ್ಥಳಕ್ಕೆ ಹಿಂದಿರುಗಲು ಸಂಸ್ಥೆಯ ನಗರ, ಉಪನಗರ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಬಹುದಾಗಿದೆ ಎಂದು ಹುಬ್ಬಳ್ಳಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

ಹಾನಗಲ್ಲ: ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಉತ್ತಮ ರಸ್ತೆ, ಕುಡಿಯುವ ನೀರು, ಶಿಕ್ಷಣ ಸೇರಿದಂತೆ ಮೂಲಭೂತ ಸೌಕರ್ಯ ಒದಗಿಸಲು ಆದ್ಯತೆ ನೀಡಿ ಅವಶ್ಯ ಅನುದಾನ ದೊರಕಿಸಲಾಗುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ನಿಸ್ಸೀಮ ಆಲದಕಟ್ಟಿ ಗ್ರಾಮದಲ್ಲಿ ಒಂದು ಕೋಟಿ ರೂ. ವೆಚ್ಚದಲ್ಲಿ ನಿಸ್ಸೀಮೇಶ್ವರ ದೇವಸ್ಥಾನದಿಂದ ತೇರಿನ ಮನೆವರೆಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ನಿಸ್ಸೀಮ ಆಲದಕಟ್ಟಿ ಗ್ರಾಮಕ್ಕೆ ತನ್ನದೇ ಆದ ಐತಿಹಾಸಿಕ ಹಿನ್ನೆಲೆ ಇದೆ. ಗ್ರಾಮದ ನಿಸ್ಸೀಮೇಶ್ವರ ದೇವಸ್ಥಾನಕ್ಕೆ ಸುತ್ತಲಿನ ಜಿಲ್ಲೆಗಳಿಂದಲೂ ಭಕ್ತರು ಆಗಮಿಸುತ್ತಾರೆ. ಪ್ರತಿವರ್ಷ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸೇರುತ್ತಾರೆ. ಜಾತ್ರಾ ಮಹೋತ್ಸವದಲ್ಲಿ ನಡೆಯುವ ರಥೋತ್ಸವದಲ್ಲಿ ರಥ ಸಂಚರಿಸುವ ಮಾರ್ಗವನ್ನು ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನಾಗಿಸಬೇಕು ಎನ್ನುವ ಬೇಡಿಕೆ ಬಹುದಿನಗಳದ್ದಾಗಿತ್ತು. ಅದನ್ನು ಈಗ ಈಡೇರಿಸಲಾಗಿದೆ. ನಿಗದಿತ ಕಾಲಾವಧಿಯಲ್ಲಿ ಗುಣಮಟ್ಟದ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

> ಗ್ರಾಮಗಳ ಅಭಿವೃದ್ಧಿಯಲ್ಲಿ ಒಳ್ಳೆಯ ರಸ್ತೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಸುಗಮ ಸಂಚಾರ ಸಾಧ್ಯವಾಗಲಿದ್ದು, ವ್ಯಾಪಾರ-ವಹಿವಾಟು ಹೆಚ್ಚಿ ವಾಣಿಜ್ಯ ಚಟುವಟಿಕೆಗಳಿಗೆ ಅನುಕೂಲವಾಗಲಿದೆ. ಈ ನಿಟ್ಟಿನಲ್ಲಿ ರಸ್ತೆಗಳ ನಿರ್ಮಾಣ, ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ಮೇರೆಗೆ ಅನುದಾನ ನೀಡಲಾಗುತ್ತಿದೆ.
> ■ ಶ್ರೀನಿವಾಸ ಮಾನೆ, ಶಾಸಕ

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ಮರಗಡಿ, ಬಗರ್ ಹುಕುಂ ಸಾಗುವಳಿ ಸಮಿತಿ ಅಧ್ಯಕ್ಷ ಪುಟ್ಟಪ್ಪ ನರೇಗಲ್, ಮುಖಂಡರಾದ ಸುರೇಶ ಮುಸುರಿ, ಮಲ್ಲಿಕಾರ್ಜುನ ದೇವಣ್ಣನವರ, ವೆಂಕಟೇಶ ವಡ್ಡರ, ನೀಲಪ್ಪ ಬಾಲಣ್ಣನವರ, ಚಂದ್ರು ಬಳ್ಳಾರಿ, ಮುಕ್ತಾನಂದ ಹಿರೇಮನಿ, ಉಳವಪ್ಪ ಜಿಂಗಿ, ಲೋಹಿತ್ ಕಾಟಣ್ಣನವರ, ಗೋಪಾಲ ಕಾಟಣ್ಣನವರ, ಅಶೋಕ ಹೆಗಡೆ, ಬಸವರಾಜ ಬಿದರಣ್ಣನವರ, ಸಂಜೀವರೆಡ್ಡಿ ಬಿದರಣ್ಣನವರ, ಲಕ್ಷ್ಮಣ ಜಾಧವ, ನಿಸ್ಸೀಮ, ಬಸವರಾಜ ಹೊಸಮನಿ, ಬಸನಗೌಡ ಪಾಟೀಲ ಇದ್ದರು.



ಲೋಕ ಅದಾಲತ್:1,10,876 ಪ್ರಕರಣ ಇತ್ಯರ್ಥ

ಹಾವೇರಿ: ಜಿಲ್ಲೆಯ ನ್ಯಾಯಾಲಯಗಳಲ್ಲಿ ಜರುಗಿದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ ಇತ್ಯರ್ಥಕ್ಕೆ ಗುರುತಿಸಲ್ಪಟ್ಟ 1,24,057 ಪ್ರಕರಣಗಳಲ್ಲಿ 1,10,876 ಪ್ರಕರಣಗಳು ಇತ್ಯರ್ಥಗೊಂಡಿದ್ದು, ರೂ.56,83,18,798 ಮೊತ್ತದ ರಾಜೀಯಾಗಿದೆ ಹಾಗೂ 15 ಕೌಟುಂಬಿಕ ಪ್ರಕರಣಗಳಲ್ಲಿ ದಂಪತಿಗಳು ರಾಜೀ ಮಾಡಿಕೊಂಡಿದ್ದಾರೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿರಾದಾರ ದೇವಿಂದ್ರಪ್ಪ ಅವರು ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲ ನ್ಯಾಯಾಲಯಗಳಲ್ಲಿ ಬಾಕಿ ಇರುವ ಇತ್ಯರ್ಥಕ್ಕೆ ಗುರುತಿಸಲಾದ 6,387 ಪ್ರಕರಣಗಳ ಪೈಕಿ 5,400 ಪ್ರಕರಣಗಳು ಇತ್ಯರ್ಥಗೊಂಡಿದ್ದು, ರೂ.29,15,37,575ಗಳ ರಾಜೀಯಾಗಿದೆ.ವ್ಯಾಜ್ಯಪೂರ್ವಪ್ರಕರಣಗಳಲ್ಲಿ ಇತ್ಯರ್ಥಕ್ಕೆ ಗುರುತಿಸಲಾದ 1,17,670 ಪ್ರಕರಣಗಳಲ್ಲಿ 1,05,476 ಪ್ರಕರಣಗಳು ಇತ್ಯರ್ಥಗೊಂಡಿದ್ದು, ರೂ.27,67,81,223 ಗಳ ಮೊತ್ತದ ರಾಜೀಯಾಗಿದೆ.

ಜಿಲ್ಲೆಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ರಾಣೇಬೆನ್ನೂರಿನಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಐದು ವರ್ಷಕ್ಕೆ ಮೇಲ್ಪಟ್ಟ ಎಕ್ಸಿಕ್ಯೂಷನ್ ನಂ.19/2020 ದಾವೆಯು ರಾಷ್ಟ್ರೀಯ ಲೋಕ ಅದಾಲತ್ ನಲ್ಲಿ ರಾಜಿ ಸಂಧಾನದ ಮೂಲಕ ಇತ್ಯರ್ಥವಾಗಿರುತ್ತದೆ.

ಹಾವೇರಿ ಜಿಲ್ಲಾ ಕೌಟುಂಬಿಕ ನ್ಯಾಯಾಲಯದಲ್ಲಿ ಆರು, ರಾಣೆಬೆನ್ನೂರಲ್ಲಿ ಮೂರು, ಬ್ಯಾಡಗಿ, ಹಾನಗಲ್ ಹಾಗೂ ಶಿಗ್ಗಾಂವದಲ್ಲಿ ತಲಾ ಎರಡು ಸೇರಿ ಒಟ್ಟು 15 ಕೌಟುಂಬಿಕ ಪ್ರಕರಣಗಳಲ್ಲಿ ದಂಪತಿಗಳು ರಾಜಿ ಮಾಡಿಕೊಂಡು ಮತ್ತೆ ಒಂದಾಗಿದ್ದಾರೆ.

ಈ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಜಿಲ್ಲಾ ನ್ಯಾಯವಾದಿಗಳ ಸಂಘದ ಹಾಗೂ ಜಿಲ್ಲೆಯ ಎಲ್ಲಾ ತಾಲೂಕಾ ನ್ಯಾಯವಾದಿಗಳ ಸಂಘದ ಸದಸ್ಯರು, ಹಾವೇರಿ ಜಿಲ್ಲೆಯ ಎಲ್ಲಾ ನ್ಯಾಯಾಧೀಶರು, ಅಭಿಯೋಜನೆ ಇಲಾಖೆ, ಆರಕ್ಷಕ ಇಲಾಖೆಯವರು, ಇತರೇ ಇಲಾಖೆಯವರು ಹಾಗೂ ಕಕ್ಷಿಗಾರರ ಸಹಕಾರದೊಂದಿಗೆ ರಾಷ್ಟ್ರೀಯ ಲೋಕ ಅದಾಲತ್ ತುಂಬಾ ಯಶಸ್ವಿಯಾಗಿ ಜರುಗಿದೆ ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಹಾಗೂ ಮತ್ತಿತರರು ಉಪಸ್ಥಿತರಿದ್ದರು.



ಮನಸ್ಸಿನ ನೆಮ್ಮದಿಗೆ ಪ್ರವಚನ ಅವಶ್ಯ: ಚನ್ನಮಲ್ಲ ಸ್ವಾಮೀಜಿ

ಗುತ್ತಲ: ಮಾನವ ಜೀವನದಲ್ಲಿ ಮನಸ್ಸಿಗೆ ನೆಮ್ಮದಿ ಅತ್ಯಂತ ಮುಖ್ಯವಾಗಿದೆ. ಇಂದಿನ ಯಾಂತ್ರಿಕ ಮತ್ತು ವೇಗದ ಬದುಕಿನಲ್ಲಿ ಮನುಷ್ಯ ಒತ್ತಡ, ಆತಂಕಮತ್ತು ಚಿಂತೆಗಳಿಂದ ಬಳಲುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಧಾರ್ಮಿಕ ಪುರಾಣ ಪ್ರವ ಚನಗಳು ಮನಸ್ಸಿಗೆ ಶಾಂತಿ ಮತ್ತು ಆತ್ಮಸ್ಥೈರ್ಯ ನೀಡುವ ಮಹತ್ವದ ಸಾಧನವಾಗಿದ್ದು, ಪ್ರಸ್ತುತ ದಿನಮಾನದಲ್ಲಿ ಪುರಾಣ ಪ್ರವಚನ ಅವಶ್ಯಕವಾಗಿವೆ ಎಂದು ಕನಕಗಿರಿ ವಿರಕ್ತಮಠದ ಚನ್ನಮಲ್ಲ ಸ್ವಾಮೀಜಿ ಹೇಳಿದರು.

ಸಮೀಪದ ನೆಗಳೂರ ಗ್ರಾಮದ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದಲ್ಲಿಜಾತ್ರಾ ಮಹೋತ್ಸವದ ಅಂಗವಾಗಿ ಜರುಗುತ್ತಿರುವ ಪುರಾಣ ಪ್ರವಚನ ಭಾನುವಾರ ' ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಮಹಾತ್ಮರ ಜೀವನ ಚರಿತ್ರೆಗಳನ್ನು ಆಲಿಸುವುದರಿಂದ ವ್ಯಕ್ತಿಯ ಮನಸ್ಸು ಶುದ್ಧವಾಗುತ್ತದೆ. ಸತ್ಪಥದಲ್ಲಿ ನಡೆಯುವ ಪ್ರೇರಣೆ ದೊರೆತು ಧರ್ಮ, ನೀತಿ, ಸತ್ಯದ ಧಾರಿಯಲ್ಲಿ ನಡೆಯಲು ಪ್ರೇರಪಿಸಿ ಬದುಕನ್ನು ಸುಂದರವಾಗಿ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಆದ್ದರಿಂದ ಜೀವನದಲ್ಲಿಸ್ವಲ್ಪಸಮಯವನ್ನಾದರೂ ಆಧ್ಯಾತ್ಮಿಕತೆ ಮೀಸಲಿಡಬೇಕೆಂದರು. ಎಂದರು.



ಮಠದ ಪೀಠಾಧಿಕಾರಿ ಗುರು ಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮನುಷ್ಯನ ಜೀವನಕ್ಕೆ ಧರ್ಮವೇ ಶಾಶ್ವತ ನಂದಾದೀಪ. ಬದುಕನ್ನು ಶುದ್ಧ ಹಾಗೂ ಸುಂದರಗೊಳಿಸುವಲ್ಲಿ ಗುರುಕಾರುಣ್ಯ ಮಹತ್ವದ ಪಾತ್ರ ವಹಿಸುತ್ತದೆ ಎಂದರು.

ಪುಟ್ಟರಾಜ ಶಾಸ್ತ್ರೀ ಹಿರೇಮಠ ಮಾತನಾಡಿದರು.

ಕಾರ್ಯಕ್ರಮದಲ್ಲಿ ಹಿರೇಮಠದ ಸೋಮಶೇಖರ ಸ್ವಾಮೀಜಿ, ಶಹಾಪುರದ ನಿಜಗುಣದೇವರು, ವೈದ್ಯಕಿರಣಕುಮಾರ ಬಡಪ್ಪನವರ, ದೇವಿರಮ್ಮ ದೇವಮಾಳಿ, ವಿಶ್ವನಾಥ ಕಿತ್ತೂರಮಠ ಮತ್ತಿತರರಿದ್ದರು.

ಗುತ್ತಲದ ಬಸವರಾಜ ಬಡಪ್ಪನವರ ಹಾಗೂ ಅಗಡಿಯ ದೇವಿರಮ್ಮ ದೇವಮಾಳಿ ಕುಟುಂಬಸ್ಥರಿಂದ ಶಿವಾನಂದ ಶಿವಾಚಾರ್ಯರ ಮೂರ್ತಿಯ ತುಲಾಭಾರ ಸೇವೆ ಜರುಗಿತು. ಶಂಭುಲಿಂಗಯ್ಯ ಮಠದ ಹಾಗೂ ವಿಶ್ವನಾಥ ಕಿತ್ತೂರಮಠ ಪರಿವಾರದಿಂದ ದಾಸೋಹ ಸೇವೆ ನೆಗಳೂರಿನ ಶಾಲಾ ಮಕ್ಕಳಿಂದ ನೃತ್ಯ ಪ್ರದರ್ಶನ ಜರುಗಿತು. ಗುರುಮಹಾಂತಯ್ಯ ಆರಾಧ್ಯಮಠ ನಿರ್ವಹಿಸಿದರು.

ಗರ್ಭಕಂಠ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕಾ ಅಭಿಯಾನ ಆರಂಭ

ಹಾವೇರಿ: ಮಹಿಳೆಯರಲ್ಲಿ ಕಂಡುಬರುವಗರ್ಭಕಂಠದಕ್ಯಾನ್ಸರ್ ಕಾಯಿಲೆಯನ್ನು ತಡೆಗಟ್ಟಲು ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ ಮಾರ್ಗದರ್ಶನದಲ್ಲಿ ಶುಕ್ರವಾರದಿಂದ ಎಚ್‌ಪಿವಿ ಲಸಿಕಾ ಅಭಿಯಾನವನ್ನು ಜಿಲ್ಲೆಯ ಎಲ್ಲ ಆರೋಗ್ಯ ಸಂಸ್ಥೆಗಳಲ್ಲಿ ಆರಂಭಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಯಾನಂದ ಅವರು ತಿಳಿಸಿದ್ದಾರೆ.



ಬ್ಯಾಡಗಿ ತಾಲೂಕಿನಲ್ಲಿ-1,520, ಹಾನಗಲ್-2,804, ಹಾವೇರಿ-3,100, ಹಿರೇಕೆರೂರು-2,200, ರಾಣೇಬೆನ್ನೂರು-3,630, ಸವಣೂರು-1,800 ಹಾಗೂ ಶಿಗ್ಗಾಂವ ತಾಲೂಕಿನ 1,900 ಹೆಣ್ಣು ಮಕ್ಕಳು ಸೇರಿದಂತೆ 16,954 ಮಕ್ಕಳನ್ನು ಲಸಿಕೆಗೆ ಗುರುತಿಸಲಾಗಿದೆ.

ಈ ಅಭಿಯಾನದಲ್ಲಿ 14 ವರ್ಷ ಪೂರ್ಣಗೊಂಡು 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಒಂದು ಡೋಸ್ ಎಚ್‌ಪಿವಿ ಲಸಿಕೆಯನ್ನು ಜಿಲ್ಲೆಯ ಆರೋಗ್ಯ ಸಂಸ್ಥೆಗಳಲ್ಲಿ ಉಚಿತವಾಗಿ ನೀಡಲಾಗುತ್ತಿದ್ದು, ಹೆಣ್ಣು ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಹುಕಾಲದ ಬೇಡಿಕೆಗೆ ಬಾಗಲಕೋಟೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮತಿ

ಹಾವೇರಿಗೆ ಬರಲಿದೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ!

▸ ಕಿರಣ ಮಾಸಣಗಿ

ದಿಗಂತ ವಿಶೇಷ

ಹಾವೇರಿ: ಜಿಲ್ಲೆಯ ಜನರು ಹಲವು ವರ್ಷಗಳಿಂದ ಕಾಯುತ್ತಿದ್ದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕನಸು ನನಸಾಗುವ ಲಕ್ಷಣಗಳು ಕಾಣಿಸಿದ್ದು, ಸಿಎಂ ಸಿದ್ದರಾಮಯ್ಯ ಬಾಗಲಕೋಟೆಯಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮದಲ್ಲಿ ಹಾವೇರಿ ಜಿಲ್ಲೆಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಂಜೂರು ಮಾಡುವುದಾಗಿ ಘೋಷಣೆ ಮಾಡಿದ್ದು, ಉನ್ನತ ಮಟ್ಟದ ವೈದ್ಯಕೀಯ ಸೇವೆಯಿಂದ ವಂಚಿತರಾಗಿದ್ದ ಜಿಲ್ಲೆಯ ಜನರಿಗೆ ಇದು ಸಂತಸ ನೀಡಿದೆ.

ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ಜಿಲ್ಲೆಯ ಶಾಸಕರು ಮತ್ತು ಜನಪ್ರತಿನಿಧಿಗಳು ವಿವಿಧ ಕ್ಷೇತ್ರಗಳ ಸಾಧಕರು ಹಲವು ಬಾರಿ ಮನವಿ ಸಲ್ಲಿಸಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಂಜೂರಿಗೆ ಒತ್ತಾಯಿಸಿದ್ದರು.

ಬಾಗಲಕೋಟೆಯಲ್ಲಿ ಶನಿವಾರ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬಜೆಟ್‌ನಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಘೋಷಣೆ ಮಾಡದಿರುವ ಬಗ್ಗೆ ಹಾವೇರಿ ಉಸ್ತುವಾರಿ ಸಚಿವ ಶಿವಾನಂದ ಪಾಟೀಲರಿಗೆ ಅಸಮಾಧಾನ ಆಗಿರಬಹುದು, ಆದರೆ ಶೀಘ್ರದಲ್ಲಿಯೇ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾವೇರಿಗೆ ಮಂಜೂರಾಗಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಭೂ ಗ್ಯಾರಂಟಿ ಸಮಾವೇಶದಲ್ಲಿ ನಿರಾಸೆ : ಇತ್ತೀಚೆಗೆ ಹಾವೇರಿಯಲ್ಲಿ ನಡೆದ ಭೂ ಗ್ಯಾರಂಟಿ ಸಮಾವೇಶದಲ್ಲಿ ಸಿಎಂ ಭಾಗವಹಿಸಿದ್ದರೂ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕುರಿತು ಯಾವುದೇ ಸ್ಪಷ್ಟ ಘೋಷಣೆ ಮಾಡದ ಹಿನ್ನೆಲೆ ಜಿಲ್ಲೆಯ ಜನರಲ್ಲಿ ನಿರಾಸೆ ಮೂಡಿತ್ತು. ಆದರೆ ಇದೀಗ ಬಾಗಲಕೋಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಅಧಿಕೃತವಾಗಿ ಆಸ್ಪತ್ರೆ ಘೋಷಣೆ ಮಾಡಿ ಜಿಲ್ಲೆಯ ಜನರಿಗೆ ಸಂತಸ ನೀಡಿದ್ದು, ಈ ಘೋಷಣೆಯಿಂದ ಹಲವು ವರ್ಷಗಳ ಕನಸು ನನಸಾಗುವ ನಿರೀಕ್ಷೆ ಗಟ್ಟಿಯಾಗಿದೆ. ಜಿಲ್ಲೆಯ ವಿವಿಧ ಸಂಘಟನೆಗಳು, ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ಸರ್ಕಾರದ ಕ್ರಮವನ್ನು ಸ್ವಾಗತಿಸಿದ್ದಾರೆ.

ವೈದ್ಯಕೀಯ ಸೌಲಭ್ಯಗಳ ಕೊರತೆ : ಹಾವೇರಿ ಜಿಲ್ಲೆಯಲ್ಲಿ ತಜ್ಞ ವೈದ್ಯರು, ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯ ಮತ್ತು ವಿಶೇಷ ವೈದ್ಯಕೀಯ ವಿಭಾಗಗಳ ಕೊರತೆ ಇದ್ದು, ಗಂಭೀರ ಅನಾರೋಗ್ಯ ಸಮಸ್ಯೆ ಎದುರಾದಾಗ ದಾವಣಗೆರೆ ಇಲ್ಲವೇ ಹುಬ್ಬಳ್ಳಿಗೆ ತೆರಳಬೇಕಾದ ಅನಿವಾರ್ಯತೆ ಇದೆ. ಹೃದಯ ಸಂಬಂಧಿ, ಮೂತ್ರಪಿಂಡ ವೈಫಲ್ಯ, ನರ ಸಂಬಂಧಿತ ಸಮಸ್ಯೆಗಳು, ಕ್ಯಾನ್ಸರ್ ಹೀಗೆ ಅನೇಕ ಗಂಭೀರ ಕಾಯಿಲೆಗಳ ಚಿಕಿತ್ಸೆಗೆ ಜನರು ನೆರೆಯ ಜಿಲ್ಲೆಯನ್ನೇ ಅವಲಂಬಿಸಬೇಕಾಗಿದ್ದು, ಇದು ತುರ್ತು ಪರಿಸ್ಥಿತಿಗಳಲ್ಲಿ ಪ್ರಾಣ ಪಣಕ್ಕೊಡ್ಡಿದಂತಹ ಸಂದರ್ಭಗಳಾಗಿವೆ.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ : ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆರಂಭವಾದಲ್ಲಿ ತುರ್ತು ಚಿಕಿತ್ಸೆ, ಶಸ್ತ್ರಚಿಕಿತ್ಸೆಗಳು ಮತ್ತು ಗಂಭೀರ ಕಾಯಿಲೆಗಳ ಚಿಕಿತ್ಸೆಗೆ ಹೆಚ್ಚಿನ ಸೌಲಭ್ಯ ಸ್ಥಳೀಯವಾಗಿಯೇ ಲಭ್ಯವಾಗಲಿವೆ. ಇದರಿಂದ ಸಮಯ ಮತ್ತು ಹಣದ ಉಳಿತಾಯದ ಜೊತೆಗೆ ರೋಗಿಗಳ ಕುಟುಂಬದ ಮೇಲಿನ ಮಾನಸಿಕ ಒತ್ತಡವೂ ಕಡಿಮೆಯಾಗಲಿದೆ. ಬಡ ಹಾಗೂ ಮಧ್ಯಮ ವರ್ಗದ ಜನರ ಅನಗತ್ಯ ವೈದ್ಯಕೀಯ ವೆಚ್ಚಕ್ಕೆ ಕಡಿವಾಣ ಹಾಗೂ ಸರ್ಕಾರಿ ಆಸ್ಪತ್ರೆಯಲ್ಲೇ ಗುಣಮಟ್ಟದ ಚಿಕಿತ್ಸೆ ಪಡೆಯಲು ಸಾಧ್ಯವಾಗಲಿದೆ.

ಈ ಆಸ್ಪತ್ರೆ ನಿರ್ಮಾಣದಿಂದ ಜಿಲ್ಲೆಯ ಆರೋಗ್ಯ ಕ್ಷೇತ್ರದಲ್ಲಿ ಹೊಸ ಉದ್ಯೋಗಾವಕಾಶ, ವೈದ್ಯರು, ಶುಶ್ರೂಷಕ, ತಾಂತ್ರಿಕ ಸಿಬ್ಬಂದಿ ಹಾಗೂ ಇತರ ಆರೋಗ್ಯ ಸಿಬ್ಬಂದಿಗೆ ಉದ್ಯೋಗ ದೊರೆಯಲಿದೆ. ಪ್ರಸ್ತುತ ಆಸ್ಪತ್ರೆ ಘೋಷಣೆಯಾದ ಬೆನ್ನಲೆ ಸರ್ಕಾರ ಶೀಘ್ರವೇ ಆಡಳಿತಾತ್ಮಕ ಅನುಮೋದನೆ ನೀಡಿ, ಸ್ಥಳದ ಆಯ್ಕೆ, ಭೂಮಿಪೂಜೆ ಹಾಗೂ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಿ ಎಂಬುದು ಜಿಲ್ಲೆಯ ಜನರ ಒತ್ತಾಯ. ಇದು ಘೋಷಣೆಯಾಗಿ ಉಳಿಯದೇ ಶೀಘ್ರವೇ ಕಾರ್ಯರೂಪಕ್ಕೆ ಬರಲೆಂಬುದು ಜನರ ಆಗ್ರಹ

ಇದು ಹಾವೇರಿ ಜಿಲ್ಲೆಯ ಆರೋಗ್ಯ ಕ್ಷೇತ್ರದಲ್ಲಿ ಮೈಲಿಗಲ್ಲಾಗುವ ನಿರೀಕ್ಷೆ ಇದ್ದು, ಸಿಎಂ ಘೋಷಿಸಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಯೋಜನೆ ತುರ್ತಾಗಿ ಸಾಕಾರಗೊಳ್ಳಲಿ ಎಂದು ಹಾರೈಸಿದ್ದಾರೆ.

ಪೊಲೀಸ್ ವಾಹನಗಳ ಉದ್ಘಾಟನೆ



ಬ್ಯಾಡಗಿ: ಹಾವೇರಿ ಜಿಲ್ಲಾ ಪೋಲಿಸ ಬ್ಯಾಡಗಿ ವೃತ್ತ ಕಾರ್ಯಾಲಯಕ್ಕೆ ಬಸವರಾಜ ಶಿವಣ್ಣನವರ ಇವರ 2024-25ರ ಶಾಸಕ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿ ಬ್ಯಾಡಗಿ ಹಾಗೂ ಕಾಗಿನೆಲೆ ಪೋಲಿಸ್ ಠಾಣೆಗಳಿಗೆ ನೂತನವಾಗಿ ಪೊಲೀಸ್ ವಾಹನಗಳಿಗ ಹಸಿರು ನಿಶಾನೆ ತೋರಿಸಿ ಉದ್ಘಾಟಿಸಿ ಮಾತನಾಡಿದರು. ಸಾವರ್ಜನಿಕ ಕ್ಷೇತ್ರದಲ್ಲಿ ಪೋಲಿಸ್ ಇಲಾಖೆಯ ಅವಶ್ಯಕ. ಶಿಸ್ತಿನ ಕೆಲಸ ಪೋಲಿಸ್ ಇಲಾಖೆ ಸಿಬ್ಬಂದಿಗಳಿಂದಾಗ ಬೇಕು. ಸಾರ್ವಜನಿಕರ ಜೀವ ಮಾನ ಕಾಪಾಡುವ ಕೆಲಸ ಪೋಲಿಸರು ಮಾಡಬೇಕು. ಅಮಾಯಕರಿಗೆ ಅನ್ಯಾಯ ಆಗಬಾರದು ತಪ್ಪಿತಸ್ಥರಿಗೆ ಕಠಿಣ ಕ್ರಮ ಕೈಗೊಳ್ಳಬೇಕು ಅಮಾಯಕರಿಗೆ ನ್ಯಾಯ ಒದಗಿಸುವ ಕೆಲಸ ಪೋಲಿಸರು ಮಾಡಬೇಕು. ಮುಂದಿನ ದಿನಗಳಲ್ಲಿ ಪಟ್ಟಣದಲ್ಲಿ 10 ಲಕ್ಷ ರೂ ಹಣ ಸಿ ಸಿ ಕ್ಯಾಮೆರಾ ಅಳವಡಿಕೆ ಕೊಡುತ್ತೇನೆ ಎಂದರು. ಜಿಲ್ಲಾ ವರಿಷ್ಠಾಧಿಕಾರಿ ಯಶೋಧಾ ವಂಟಗೊಡೆ ಮಾತನಾಡಿ, ಬ್ಯಾಡಗಿ ಪಟ್ಟಣ ಕಮರ್ಷಿಯದ ಎರಿಯಾ ಆಗಿದ್ದು, ಪಟ್ಟಣದಲ್ಲಿ ಸಿಸಿಕ್ಯಾಮೆರಾ ಅಳವಡಿಸಲು ಈ ಹಿಂದೆ ನಾನು ತಮಗೆ ಕೇಳಿದೆ. ನೀವು ಮುಂದಿನ ದಿನಗಳಲ್ಲಿ ಅನುದಾನ ಕೊಟ್ಟು ಬೇರೆ ತಾಲೂಕಿಗೆ ಮಾದರಿಯಾಗುವ ಕೆಲಸ ಮಾಡಿ. ಕಾಗಿನೆಲೆ ಸರ್ಕಲಗೆ ಇನ್ನೊಂದು ವಾಹನ ಕೊಡುವಂತೆ ಬೇಡಿಕೆ ಇಟ್ಟರು. ಡಿವೈಎಸ್‌ಪಿ ಗೀರಿಶ ತಲಕಟ್ಟಿ, ಸಿಪಿಐ ಎಂ.ಡಿ.ಚಿಕ್ಕಣನವರ, ಪಿಎಸ್‌ಐ ಭಾರತಿ ಕುರಿ, ಕಾಗಿನೆಲೆ ಪಿಎಸ್‌ಐ ಎಸ್ .ಡಿ.ಸಾಗರ, ಪಿಎಸ್‌ಐ ನಿಂಗೇನಹಳ್ಳಿ ಇಲಾಖೆಯ ಸಿಬ್ಬಂದಿಗಳಾದ ಬಸಣ್ಣ ಪೂಜಾರ, ಬೀರಪ್ಪ ಹುಲಿಹಳ್ಳಿ, ದಾನಪ್ಪ ಚೂರಿ, ಶಿವನಗೌಡ ಪಾಟೀಲ, ನಾಗರಾಜ ಆನ್ವೇರಿ, ರಮೇಶ ಸುತ್ತ ಕೋಟಿ, ಬೀರಪ್ಪ ಬಣಕಾರ್, ಡಾ.ಸೌಧಾಗರ, ಮುನ್ನಾ ಎರೇಸಿಮಿ ಹಾಗೂ ಇಲಾಖೆಯ ಎಲ್ಲ ಸಿಬ್ಬಂದಿ ಉಪಸ್ಥಿತರಿದ್ದರು.

ಕಿರುಸುದ್ದಿ

63.32ಲಕ್ಷ ಉಳಿತಾಯದ ಬಜೆಟ್

ಗೋಕಾಕ: ನಗರಸಭೆ ಗೋಕಾಕ ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 2025-26 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2026-27ನೇ ಸಾಲಿನ ರೂ.63.32ಲಕ್ಷ ರೂಗಳ ಉಳಿತಾಯದ ಆಯವ್ಯಯವನ್ನು ಪೌರಾಯುಕ್ತ ರವಿ ರಂಗಸುಭೆ ಅವರು ಮಂಡಿಸಿದರು.

16ನೇ ಹಣಕಾಸು ಆಯೋಗದ ಅನುದಾನ, ರಾಜ್ಯ ಹಣಕಾಸು ಆಯೋಗದಿಂದ ಬಿಡುಗಡೆಯಾಗಬಹುದಾದ ಅನುದಾನ, ಮತ್ತು ಸ್ವಂತ ಮೂಲದಿಂದ ಸಂಗ್ರಹವಾಗುವ ತೆರಿಗೆ, ತೆರಿಗೆಯೇತರ ಆದಾಯಗಳು ಸೇರಿ ಒಟ್ಟು 61.46ಕೋಟಿ ನಿರೀಕ್ಷಿಸಲಾಗಿದೆ ಮತ್ತು 60.83ಕೋಟಿ ರೂಗಳನ್ನು ರಸ್ತೆ, ರಸ್ತೆಬದಿ ಚರಂಡಿ, ಮಳೆನೀರು ಚರಂಡಿ, ಕುಡಿಯುವ ನೀರು ಸರಬರಾಜು, ಬೀದಿ ದೀಪ, ಘನತ್ಯಾಜ್ಯ ನಿರ್ವಹಣೆ, ಶೌಚಾಲಯ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಹಾಗು ನಿರ್ವಹಣೆಗಾಗಿ ಕಾಯ್ದಿರಿಸಲಾಗಿದೆ. ಎಸ್.ಎಫ್.ಸಿ. ಹಾಗೂ ನಗರಸಭೆ ನಿಧಿಯಡಿ ಶೇ.24.10, 7.25 ಮತ್ತು 5 ರ ವಿಭಾಗಗಳಲ್ಲಿ ಅಂದಾಜು 34.38 ಲಕ್ಷ ರೂಗಳನ್ನು ಕಾಯ್ದಿರಿಸಿರುವುದನ್ನು ವಿವರಿಸಿದರು. ಸಭೆಯಲ್ಲಿ ನಗರಸಭೆಯ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ವೆಚ್ಚಗಳ ನಿಯಂತ್ರಣಕ್ಕಾಗಿ ಸೂಚನೆಗಳನ್ನು ನೀಡಿ ಮಾನ್ಯ ಆಡಳಿತಾಧಿಕಾರಿಗಳು ಗೋಕಾಕ ನಗರಸಭೆಯ 2025-26 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2026-27 ನೇ ಸಾಲಿನ 63.32 ಲಕ್ಷಗಳ ಉಳಿತಾಯದ ಆಯವ್ಯಯಕ್ಕೆ ಅನುಮೋದನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ ಕಲಾದಗಿ ಮತ್ತು ಗೋಕಾಕ ನಗರಸಭೆಯ ಲೆಕ್ಕಾಧೀಕ್ಷಕ ಜಯನಾಯಕ್ ಎಂ.ಬಿ ರವರು ಉಪಸ್ಥಿತರಿದ್ದರು.

ಖಾಲಿ ಕೊಡ ಹಿಡಿದು ಪ್ರತಿಭಟನೆ

ಬೆಳಗಾವಿ : ಬೇಸಿಗೆ ಆರಂಭಕ್ಕೂ ಮುನ್ನವೇ ಬೆಳಗಾವಿ ನಗರದ ವಡಗಾಂವ ರೈತ ಗಲ್ಲಿಯಲ್ಲಿ ಕುಡಿಯುವ ನೀರಿಗೆ ತೀವ್ರ ಹಾಹಾಕಾರ ಉಂಟಾಗಿದೆ. ಕಳೆದ 15 ದಿನಗಳಿಂದ ಕಲುಷಿತ ನೀರು ಸರಬರಾಜಾಗುತ್ತಿದ್ದು, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಬೇಸತ್ತ ನಿವಾಸಿಗಳು ಪಾಲಿಕೆ ವಿರುದ್ಧ ತೀವ್ರ ಆಕ್ರೋಶ ಹೊರಹಾಕಿದ್ದಾರೆ. ಬೇಸಿಗೆ ಆರಂಭದ ಹೊಸ್ತಿಲಲ್ಲೇ ನಗರದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಪಡುವ ಸ್ಥಿತಿ ನಿರ್ಮಾಣವಾಗಿದೆ. ನಗರದ ವಡಗಾಂವ ರೈತ ಗಲ್ಲಿಯ ನಿವಾಸಿಗಳು ಖಾಲಿ ಕೊಡಗಳನ್ನು ಹಿಡಿದು ಎಲ್ ಆಂಡ್ ಟಿ ಹಾಗೂ ಪಾಲಿಕೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬೆಳಗಾವಿಯಲ್ಲಿ ಬೇಸಿಗೆ ಆರಂಭಕ್ಕೂ ಮುನ್ನವೇ ರೈತಗಲ್ಲಿಯಲ್ಲಿ ನೀರಿನ ಸಮಸ್ಯೆ ತಲೆದೋರಿರುವುದು ಜನರಲ್ಲಿ ಆತಂಕ ಮೂಡಿಸಿದೆ. ಸಮಸ್ಯೆಯನ್ನು ಪಾಲಿಕೆ ಅಧಿಕಾರಿಗಳು ಕೂಡಲೇ ಬಗೆಹರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಪ್ರತಿಭಟನೆ ನಡೆಸುವುದಾಗಿ ನಿವಾಸಿಗಳು ಎಚ್ಚರಿಕೆ ನೀಡಿದರು. ಬೇರೆ ಗಲ್ಲಿಯಲ್ಲಿ ಎರಡೇರಡು ಬೋರವೆಲ್ ಗಳು ಇವೆ. ರೈತಗಲ್ಲಿಯಲ್ಲಿದ್ದ ಒಂದೇ ಒಂದು ಬೋರವೆಲ್ ಸಂಪೂರ್ಣ ಹದಗೆಟ್ಟಿದೆ. ಇರುವ ಒಂದು ಭಾವಿಯಲ್ಲಿಯೂ ಒಳಚರಂಡಿ ನೀರು ಮಿಶ್ರಿತವಾಗುತ್ತಿದೆ. ಇದನ್ನು ಸರಿಪಡಿಸಬೇಕೆಂದು ಇಲ್ಲಿನ ಜನರು ಒತ್ತಾಯಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ : ತೋಟಗಾರಿಕೆ ಇಲಾಖೆಯ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ, ತೋಟಗಾರಿಕೆ ವಿಸ್ತರಣೆ ಮತ್ತು ತರಬೇತಿ ಕಾರ್ಯಕ್ರಮದಡಿ 2026-27 ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ಪುರುಷ ಹಾಗೂ ಮಹಿಳಾ ರೈತ ಮಕ್ಕಳಿಗೆ ಹುಕ್ಕೇರಿ ತಾಲೂಕಿನ ಹಿಡಕಲ್ ಡ್ಯಾಂ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ಮೇ 2, 2026 ರಿಂದ ಫೆ. 28, 2027 ರ ವರೆಗೆ 10 ತಿಂಗಳ ತೋಟಗಾರಿಕೆ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ತೋಟಗಾರಿಕೆ ಜಂಟಿನಿರ್ದೇಶಕರು (ಜಿ.ಪಂ) ಬೆಳಗಾವಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಬೆಳಗಾವಿರವರ ಕಛೇರಿಯಲ್ಲಿ ಅಥವಾ ಇಲಾಖೆಯ https://horticulturedir.karnataka.gov.in/ ನಲ್ಲಿ ಡೌನಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಏಪ್ರಿಲ್ 15 ರ ಸಂಜೆ 5.30 ಗಂಟೆಯವರೆಗೆ ತೋಟಗಾರಿಕೆ ಜಂಟಿನಿರ್ದೇಶಕರು (ಜಿ.ಪಂ) ಬೆಳಗಾವಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ), ರಾಣಿ ಚನ್ನಮ್ಮ ವೃತ್ತ, ಬೆಳಗಾವಿ ಇವರಿಗೆ ಸಲ್ಲಿಸುವುದು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಏಪ್ರಿಲ್ 23 ರಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಬೆಳಗಾವಿ ರವರ ಕಚೇರಿಯಲ್ಲಿ ಬೆಳಿಗ್ಗೆ 11 ಗಂಟೆಗೆ ನೇರವಾಗಿ ಮೂಲ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ರವರ ಕಚೇರಿಯಲ್ಲಿ ಮಾಹಿತಿಯನ್ನು ಪಡೆಯಬಹುದು ಎಂದು ತೋಟಗಾರಿಕೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯಮಕನಮರಡಿ: ಸಮೀಪದ ಜೀನರಾಳ ಗ್ರಾಮದಲ್ಲಿ ವಿಠ್ಠಲ ಮಂದಿರದ ಸಪ್ತಾಹ ಕಾರ್ಯಕ್ರಮಕ್ಕೆ ಹತ್ತರಗಿ ಹರಿ ಮಂದಿರದ ಪೂಜ್ಯರಾದ ಆನಂದ ಮಹಾರಾಜ್ ಗೋಸಾವಿ ಅವರು ವೀಣಾ ಪೂಜೆ ನೆರವೇರಿಸಿ ಚಾಲನೆ ನೀಡಿದರು. ನಂತರ ಶ್ರೀ ಕೃಷ್ಣ ಸುಧಾಮರ ಅನನ್ಯ ಭಕ್ತಿ ಆತ್ಮೀಯತೆ ಕುರಿತು ಮಾರ್ಮಿಕವಾಗಿ ಪ್ರವಚನ ಹೇಳಿದರು ನಂತರ ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿ ಆಶೀರ್ವದಿಸಿದರು.

ಜಯಂತಿ ಆಚರಣೆ: ಸಿದ್ಧತೆ ಕೈಗೊಳ್ಳಿ

ಬೆಳಗಾವಿ : ಹಸಿರುಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ್ ರಾಮ್ ಜಯಂತಿ ಕಾರ್ಯಕ್ರಮ ಏಪ್ರಿಲ್ 05 ರಂದು ಸಂಗಮೇಶ್ವರ ನಗರದ ಡಾ. ಬಾಬು ಜಗಜೀವನ್ ರಾಮ್ ಉದ್ಯಾನವನದಲ್ಲಿ ನಡೆಯಲಿದ್ದು, ಸಂಬಂಧಿಸಿದ ಇಲಾಖೆಗಳು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ತಿಳಿಸಿದರು.ಸೋಮವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಹಸಿರುಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ್ ರಾಮ್ ಜಯಂತಿ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಸಂಗಮೇಶ್ವರ ನಗರದಲ್ಲಿ ನಡೆಯಲಿರುವ ವೇದಿಕೆ ಕಾರ್ಯಕ್ರಮ ಹಾಗೂ ಮೆರವಣಿಗೆ ಸಾಗುವ ಮಾರ್ಗದಲ್ಲಿ ಹೆಚ್ಚು ಜನರು ಸೇರುವ ನಿರೀಕ್ಷೆ ಇದ್ದು, ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲು ಪೊಲೀಸ್ ಆಯುಕ್ತರಿಗೆ ತಿಳಿಸಿದರು. ಸಮಾಜದ ಮುಖಂಡರಾದ ಮಲ್ಲೇಶ ಚೌಗಲಾ, ನಗರ ಪೊಲೀಸ್ ಆಯುಕ್ತ ಭೂಷಣ್ ಗುಲಾಬರಾವ ಬೊರಸೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೆ. ರಾಮರಾಜನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ರವಿ ಬಂಗಾರಪ್ಪನವರ, ಮುಖಂಡರಾದ ಮಹಾದೇವ ತಳವಾರ, ಭಾವಕಣ್ಣ ಭಂಗ್ಯಾಗೋಳ, ಕರೆಪ್ಪ ಗುಡ್ಡೆನ್ನವರ, ಸಿದ್ರಾಯಿ ಮೇತ್ರಿ, ಮಹೇಶ್ ಶೀಗಿಹಳ್ಳಿ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಸದಸ್ಯರು ಸಭೆಯಲ್ಲಿ ಹಾಜರಿದ್ದರು.



ಬೆಳಗಾವಿ : ಸೋಮವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಹಸಿರುಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ್ ರಾಮ್ ಜಯಂತಿ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾತನಾಡಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಿದ್ಧತೆ ಪೂರ್ಣ

ರಾಮದುರ್ಗ: 2025-26ನೇ ಸಾಲಿನ ಎಸ್ ಎಸ್ಎಲ್‌ಸಿ ಪರೀಕ್ಷೆ-1 ಮುಖ್ಯ ಪರೀಕ್ಷೆ ಮಾ.18 ಬುಧವಾರದಿಂದ ಎ.2ರವರೆಗೆ ನಡೆಯುತ್ತಿದ್ದು, ರಾಮದುರ್ಗ ವಲಯದಲ್ಲಿ 14 ಪರೀಕ್ಷಾ ಕೇಂದ್ರಗಳಲ್ಲಿ 1856 ಬಾಲಕರು ಹಾಗೂ 1999 ಬಾಲಕೀಯರು ಸೇರಿ ಒಟ್ಟು 3855, ಬಾಹ್ಯ-413 ಅಭ್ಯರ್ಥಿಗಳು ಸೇರಿ ಒಟ್ಟು 4268 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದು, ಶಿಕ್ಷಣ ಇಲಾಖೆ ಪರೀಕ್ಷೆ ಸುಗಮವಾಗಿ ನಡೆಯಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಪರೀಕ್ಷಾ ಕೇಂದ್ರದ ಮಾಹಿತಿ ಸಿ. ಡಿ. ಹಲ್ಯಾಳ ಹೈಸ್ಕೂಲ್ ರಾಮದುರ್ಗ -342, ಬಿವಿವಿಸ್ಟೇಟ್ ಸಂಯುಕ್ತ ಕಾಲೇಜ ರಾಮದುರ್ಗ -336, ಬಿವಿವಿ ಹೆಣ್ಣು ಮಕ್ಕಳು ನೂತನ ಪ್ರೌಢಶಾಲೆ ರಾಮದುರ್ಗದ - 336, ಎಸ್. ಆರ್. ಸಂಯುಕ್ತ ಪಿಯು ಕಾಲೇಜ ಹೊಸಕೋಟಿ-322, ಎಸ್‌ಜಿಕೆ ಹೈಸ್ಕೂಲ್ ಕಟಕೋಳ-241, ಎಸ್‌ಆರ್‌ಎಸ್ ಸಂಯುಕ್ತ ಪಿಯು ಕಾಲೇಜ ಹುಲಕುಂದ-301, ಎಸ್‌ಎಫ್‌ಎಸ್ ಸಂಯುಕ್ತ ಪಿಯು ಕಾಲೇಜ ಸುರೇಬಾನ-287 ಸರ್ಕಾರಿ ಪ್ರೌಢಶಾಲೆ ರಾಮದುರ್ಗ-309, ಎಸ್.ಎಂ. ಕಲೂತಿ ಸಂಯುಕ್ತ ಕ್ರೀಡಾಶಾಲೆ ಕೆ.ಚಂದರಗಿ- 273, ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆ ಸಾಲಹಳ್ಳಿ-2291, ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆ ಬಟಕುರ್ಕಿ-476 ಕರ್ನಾಟಕ ಪಬ್ಲಿಕ್ ಸ್ಕೂಲ್ ಕಟಕೋಳ-237 ಸರ್ಕಾರಿ ಆದರ್ಶ ವಿದ್ಯಾಲಯ ಕಟಕೋಳ-289 ಸರ್ಕಾರಿ ಪ್ರೌಢಶಾಲೆ ಸುರೇಬಾನ- 230 ಪರೀಕ್ಷೆ ಬರೆಯುತ್ತಿದ್ದು ಒಟ್ಟು 191 ಕೊಠಡಿಗಳ ವ್ಯವಸ್ಥೆ ಮಾಡಲಾಗಿದೆ. ವಿಶೇಷ ಚೇತನ ಮಕ್ಕಳಿಗಾಗಿ ಪ್ರತಿ ಕೇಂದ್ರದ ನೆಲ ಮಹಡಿಯಲ್ಲೆ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ.

280ಕ್ಕೂ ಅಧಿಕ ಸಿಬ್ಬಂದಿ ಪರೀಕ್ಷಾ ಕಾರ್ಯದಲ್ಲಿ ತೊಡಗಲಿದ್ದಾರೆ. ಪರೀಕ್ಷೆ ಕಾರ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿಗೆ ಎರಡು ಹಂತದ ತರಬೇತಿ ನೀಡಲಾಗಿದ್ದು ಪರೀಕ್ಷೆಯ ನೋಡಲ್ ಅಧಿಕಾರಿಯಾಗಿ ಶಿಕ್ಷಣ ಸಂಯೋಜಕ ಶ್ರೀಕಾಂತ ಕರಲಿಂಗಪ್ಪನವರ ಪರೀಕ್ಷೆ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

» ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲಿದ್ದಾರೆ 4268 ವಿದ್ಯಾರ್ಥಿಗಳು



ರಾಮದುರ್ಗ ವಲಯದ 14 ಪರೀಕ್ಷಾ ಕೇಂದ್ರಗಳಿಗೆ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದ್ದು, ವೆಬ್‌ಕಾಸ್ಟಿಂಗ್ ಮಾಡಲಾಗುತ್ತಿದೆ ಮತ್ತು ಕೃತಕ ಬುದ್ಧಿ ಮತ್ತೆ ತಾಂತ್ರಿಕತೆಯನ್ನು ಮೊದಲ ಬಾರಿಗೆ ಬಳಸಲಾಗುತ್ತಿದೆ.
■ ಶ್ರೀ ಸುರೇಂದ್ರ ಕಾಂಬಳೆ, ಬಿಇಒ

ರಾಮದುರ್ಗ ತಾಲೂಕಿನಲ್ಲಿ ಪರೀಕ್ಷೆ ಸುಗಮವಾಗಿ ನಡೆಯಲು ತಹಶೀಲ್ದಾರ ಪ್ರಕಾಶ ಹೊಳೆಪ್ಪಗೋಳ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಐನಾಪೂರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಟಿ. ಬಳಿಗಾರ ನೇತೃತ್ವದಲ್ಲಿ ಮೂರು ಸಂಚಾರಿ ವಿಚಕ್ಷದಳವನ್ನು ಜಿಲ್ಲಾಧಿಕಾರಿಗಳು ರಚಿಸಿದ್ದಾರಲ್ಲದೆ ಪರೀಕ್ಷಾ ಕೇಂದ್ರದ ಸುತ್ತ ನಿಷೇಧಾಜ್ಞೆ ಹೊರಡಿಸಿದ್ದಾರೆ.
■ ಶ್ರೀಕಾಂತ ಕರಲಿಂಗಪ್ಪನವರ, ಪರೀಕ್ಷಾ ನೋಡಲ್ ಅಧಿಕಾರಿಗಳು

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಕಲ ಸಿದ್ಧತೆ

ಮೂಡಲಗಿ : ಮಾ.18 ರಿಂದ ಎ.2ವರೆಗೆ ಪ್ರಾರಂಭವಾಗುವ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಮೂಡಲಗಿ ಶೈಕ್ಷಣಿಕ ವಲಯದಿಂದ ಒಟ್ಟು 7195 ವಿದ್ಯಾರ್ಥಿಗಳು ವಲಯದ ವ್ಯಾಪ್ತಿಯ 22 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳನ್ನು ಬರೆಯಲಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ ಹೀರೆಮಠ ತಿಳಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರ ಪ್ರದೇಶದಲ್ಲಿ 9, ಗ್ರಾಮೀಣ ಪ್ರದೇಶದಲ್ಲಿ 13 ಕೇಂದ್ರಗಳನ್ನು ರಚಿಸಲಾಗಿದೆ ಎಂದರು. ಗೌಪ್ಯ ಸಾಮಗ್ರಿಗಳ ಸಾಗಿಸಲು 6 ಮಾರ್ಗ ಮಾಡಲಾಗಿದೆ, 3 ತಾಲೂಕು ಹಂತದ ವಿಚಕ್ಷಣದಳ ರಚನೆ ಹಾಗೂ ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಲ್ಲಿ ಆರೋಗ್ಯ ಸಹಾಯಕಿರ ನೇಮಕ ಪರಿಕ್ಷಾ ಕೇಂದ್ರಗಳಿಗೆ ಬರುವ ವಿದ್ಯಾರ್ಥಿಗಳು ತಮ್ಮ ಪ್ರವೇಶ ಪತ್ರ ತೋರಿಸುವ ಮೂಲಕ ಉಚಿತ ಪ್ರಯಾಣದ ವ್ಯವಸ್ಥೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ತಾಲೂಕು ನೋಡಲ್ ಅಧಿಕಾರಿ ನಾಗರಾಜ ಗಡಾದ, ಸತೀಶ ಬಿ.ಎಸ್, ಶಿಕ್ಷಣ ಸಂಯೋಜಕರಾದ ಹನುಮೇಶ ಪಂಚಾಳ, ಆರ್.ವಿ ಯರಗಟ್ಟಿ, ದೈಹಿಕ ಅಧಿಕಾರಿ ಎಸ್ ಬಿ ಹಳಿಗೌಡರ ಹಾಜರಿದ್ದರು.



» 22 ಮುಖ್ಯ ಅಧೀಕ್ಷಕರು
» 10 ಉಪ ಮುಖ್ಯ ಅಧೀಕ್ಷಕರು
» 22 ಪ್ರಶ್ನೆ ಪತ್ರಿಕೆ ಪಾಲಕರು
» 22 ಮೊಬೈಲ್ ಸ್ವಾಧಿನಾಧಿಕಾರಿಗಳು

ಮೂವರ ಬಂಧನ

ಬೆಳಗಾವಿ: ಇಲ್ಲಿನ ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ನಡೆಯುತ್ತಿದ್ದ ಮಟಕಾ ದಂಧೆಯ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದಾರೆ. ಕಾರ್ಯಾಚರಣೆ ವೇಳೆ ಮೂವರು ಆರೋಪಿಗಳನ್ನು ವಶಕ್ಕೆ ಪಡೆದು, ನಗದು ಹಾಗೂ ಓಸಿ ಚೀಟಿಗಳನ್ನು ಜಪ್ತಿ ಮಾಡಲಾಗಿದೆ. ನಗರದಲ್ಲಿರುವ ಖಂಜರ ಗಲ್ಲಿಯ ಹಳೆ ಮೊಡಕಾ ಬಜಾರ್ ಬಳಿ ಅಕ್ರಮವಾಗಿ ಮಟಕಾ ಜುಗಾರಿ ಆಡಿಸುತ್ತಿದ್ದ ಅಡ್ಡೆಯ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದಾರೆ. ಖಚಿತ ಮಾಹಿತಿ ಮೇರೆಗೆ ಸಿಸಿಬಿ ಪಿಐ ಮಂಜುನಾಥ ನಾಯಕ ಮತ್ತು ಅವರ ತಂಡ ನಡೆಸಿದ ಈ ಕಾರ್ಯಾಚರಣೆಯಲ್ಲಿ ಅಶೋಕ ಪವಾರ, ಗಜಾನನ ಪಾಟೀಲ ಹಾಗೂ ಹವನ ಭಾತಖಾಂಡೆ ಎಂಬುವವರನ್ನು ಬಂಧಿಸಲಾಗಿದೆ. ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಶ್ರೀದೇವಿ ನೈಟ್ ಮೇನ್ ಬಜಾರ್ ಹೆಸರಿನಲ್ಲಿ ಓಸಿ ಮಟಕಾ ಆಟವಾಡಿಸುತ್ತಿದ್ದಾಗ ಪೊಲೀಸರು ಈ ದಾಳಿ ಸಂಘಟಿಸಿದ್ದಾರೆ.ಬಂಧಿತ ಆರೋಪಿಗಳಿಂದ ಪೊಲೀಸರು ಒಟ್ಟು 11,180 ರೂಪಾಯಿ ನಗದು ಹಣ ಹಾಗೂ ಮಟಕಾ ಚೀಟಿಗಳನ್ನು ವಶಪಡಿಸಿಕೊಂಡಿದ್ದಾರೆ.

ಅಪರಿಚಿತ ವ್ಯಕ್ತಿ ಸಾವು

ಬೆಳಗಾವಿ: ಧಾರವಾಡದಿಂದ ಬೆಳಗಾವಿ ಕಡೆಗೆ ಸಾಗುವ ಎನ್‌ಎಚ್ 48 ರಸ್ತೆಯ ಮುತ್ನಾಳ ಗ್ರಾಮದ ಜಿಯೋ ಪೆಟ್ರೋಲ್ ಪಂಪ ಹತ್ತಿರ ಮಾ.13 ರಂದು ರಸ್ತೆಯ ಮೇಲೆ ಯಾವುದೋ ವಾಹನ ಚಾಲಕನು ಅತಿ ವೇಗದಿಂದ ಹಾಗೂ ನಿಷ್ಕಾಳಜೀತನದಿಂದ ಚಾಲನೆ ಮಾಡಿ ರಸ್ತೆಯ ಮೇಲೆ ನಡೆದುಕೊಂಡು ಹೋಗುತ್ತಿದ್ದ ಅಪರಿಚಿತ ಪಾದಚಾರಿ ವ್ಯಕ್ತಿಗೆ ಹಾಯಿಸಿದ್ದರಿಂದ ವ್ಯಕ್ತಿಯು ಮೃತಪಟ್ಟಿರುವ ಕುರಿತು ಮಾ.14 ರಂದು ಹಿರೇಬಾಗೆವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಮೃತ ಅಪರಿಚಿತ ವ್ಯಕ್ತಿಯ ವಿವರ: ವಯಸ್ಸು ಅಂದಾಜು 60 ವರ್ಷ, 5 ಫೂಟ್ 4 ಇಂಚು ಎತ್ತರ, ಸಾಧಾರಣ ಗೋಧಿ ಮೈಬಣ್ಣ, ದುಂಡನೇಯ ಮುಖ, ಕಪ್ಪು ಬಿಳಿ ದಾಡಿ, ಮೀಸೆ, ಕಪ್ಪು ಬಿಳಿ ತಲೆ ಕೂದಲು, ಚಾಕೋಲೇಟ್ ಬಣ್ಣದ ಗೆರೆಗಳುಳ್ಳ ಉದ್ದ ತೋಳಿನ ಶರ್ಟ, ಬಿಳೀ ಹಾಪ್ ಬನಿಯಾನ್, ಕ್ರೀಮ್ ಬಣ್ಣದ ಹಾಪ್ ಪ್ಯಾಂಟ್ ಧರಿಸಿರುತ್ತಾನೆ.ಈ ಚಹರೆ ಹೋಲುವ ಅಪರಿಚಿತ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಮಾಹಿತಿ ತಿಳಿಸಬಹುದು.

ಲೋಕ ಅದಾಲತ್‌ನ ಲಾಭ ಪಡೆದುಕೊಳ್ಳಿ



ಮೂಡಲಗಿ: ಕಕ್ಷಿದಾರರು ಬಹಳ ವರ್ಷ ಅಲೆದಾಡುವ ಬದಲು ನ್ಯಾಯಾಲಯದಲ್ಲಿ ನಡೆಯುವ ಲೋಕ ಅದಾಲತ್‌ದಲ್ಲಿ ರಾಜಿ ಸಂಧಾನದ ಮೂಲಕ ತಮ್ಮ ತಮ್ಮ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಂಡರೆ, ಹಣ ಮತ್ತು ಸಮಯ ಎರಡು ಉಳಿತಾಯವಾಗುತ್ತದೆಎಂದು ನ್ಯಾಯಾಧೀಶೆ ಶಾಂತಮ್ಮಾ ಮಲ್ಲಿಕಾರ್ಜುನಗೌಡ ಪಿ. ಅವರು ಹೇಳಿದರು.

ಸ್ಥಳಿಯ ಹಿರಿಯ ದಿವಾಣಿ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯದಲ್ಲಿ ನಡೆದ, ಲೋಕ ಅದಾಲತ್‌ನಲ್ಲಿ ಕಕ್ಷಿದಾರರು ಹಾಗು ವಕೀಲರ ಸಹಕಾರದಿಂದ ನ್ಯಾಯಾಲಯದಲ್ಲಿ ವಿಚಾರಣೆಗಿದ್ದ ಪ್ರಕರಣಗಳ ಪೈಕಿ 38 ಸಿವಿಲ್ ಪ್ರಕರಣಗಳು, 374 ಕ್ರಿಮಿನಲ್ ಪ್ರಕರಣಗಳು ಒಟ್ಟು 412 ಪ್ರಕರಣಗಳನ್ನು ರಾಜಿ ಸಂದಾನದ ಮೂಲಕ ಇತ್ಯರ್ಥಗೊಂಡಿವೆ ಎಂದರು

ವರ್ಷಗಟ್ಟಲೆ ಕಾನೂನು ಸಮರ ನಡೆಸುತ್ತಿರುವ ಬಡ ಜನರಿಗೆ ನೆರವು ನೀಡುವ ನಿಟ್ಟಿನಲ್ಲಿ ಆರಂಭವಾದ ಲೋಕಅದಾಲತ್ ಸಾಕಷ್ಟು ಯಶಸ್ವಿ ಕಾಣುತ್ತಿದೆ.ನ್ಯಾಯಾಲಯದ ಅಲೆದಾಟ, ದೀರ್ಘಾವಧಿಯ ಕಾಯುವಿಕೆ ಹಾಗೂ ಆರ್ಥಿಕ ಹೊರೆಯಿಂದ ಬಳಲುತ್ತಿದ್ದ ಕಕ್ಷಿದಾರರಿಗೆ ಈ ಲೋಕ ಅದಾಲತ್ ವರದಾನವಾಗಿ ಪರಿಣಮಿಸಿದೆ. ಸಣ್ಣಪುಟ್ಟ ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ಅನೇಕ ವ್ಯಾಜ್ಯಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಈ ವೇದಿಕೆ ಅತ್ಯುತ್ತಮ ಅವಕಾಶ ಕಲ್ಪಿಸಿಕೊಟ್ಟಿದೆ ಎಂದು ಹೇಳಿದರು,

ಒಂದೇ ದಿನದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಪ್ರಕರಣಗಳು ವಿಲೇವಾರಿಯಾಗಿರುವುದು ಮೂಡಲಗಿ ನ್ಯಾಯಾಲಯದ ತ್ವರಿತ ಕಾರ್ಯನಿರ್ವಹಣೆಗೆ ಕನ್ನಡಿ ಹಿಡಿದಿದೆ. ಈ ಪ್ರಕ್ರಿಯೆಯಲ್ಲಿ ವಕೀಲರು, ಕಕ್ಷಿದಾರರು ಸಕ್ರಿಯವಾಗಿ ಪಾಲ್ಗೊಂಡು ಲೋಕ ಅದಾಲತ್ ಯಶಸ್ಸಿಗೆ ಕಾರಣರಾದರು.

» 412 ಪ್ರಕರಣ ರಾಜಿ ಸಂಧಾನದ ಮೂಲಕ ಇತ್ಯರ್ಥ

ಕಾರ್ಯಕರ್ತರ ಪರಿಶ್ರಮದಿಂದ ಪಕ್ಷದ ಬೆಳವಣಿಗೆ ಸಾಧ್ಯ

ಬೆಳಗಾವಿ: ಎಲ್ಲರೂ ಸೇರಿ ಪಕ್ಷವನ್ನು ಇನ್ನಷ್ಟು ಔನ್ನತ್ಯಕ್ಕೇರಿಸೋಣ. ಮುಂದಿನ ದಿನಗಳಲ್ಲಿ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ವಿಧಾನ ಸಭೆ, ಲೋಕಸಭೆಯಲ್ಲಿ ಸಹ ಕಾಂಗ್ರೆಸ್ ದಿಗ್ವಿಜಯ ಸಾಧಿಸುವಂತಾಗಬೇಕು. ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತರಿಗೆ ಬೆಲೆ ಇದೆ ಎಂದು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹೇಳಿದರು.

ಸೋಮವಾರ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ನಡೆದ ಬೆಳಗಾವಿ ನಗರ ಹಾಗೂ ಗ್ರಾಮಾಂತರ ಜಿಲ್ಲಾ ಪ್ರಚಾರ ಸಮಿತಿಯ ವತಿಯಿಂದ ನಡೆದ ಒಂದು ದಿನದ ತರಬೇತಿ ಕಾರ್ಯಾಗಾರ ಹಾಗೂ ಪದಗ್ರಹಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಣ್ಣ ಪುಟ್ಟ ವ್ಯತ್ಯಾಸಗಳ ಬಗ್ಗೆ ಯಾರೂ ಬೇಸರ ಮಾಡಿಕೊಳ್ಳದೆ ಸರಿಪಡಿಸಿಕೊಂಡು ಮುನ್ನಡೆಯಬೇಕು. ಪ್ರತಿಯೊಬ್ಬ ಕಾರ್ಯಕರ್ತರ ಪರಿಶ್ರಮವಿದ್ದಾಗ ಮಾತ್ರ ಪಕ್ಷದ ಬೆಳವಣಿಗೆ ಸಾಧ್ಯ. ನಿರಂತರ ಜನಸಂಪರ್ಕದೊಂದಿಗೆ ಪಕ್ಷವನ್ನು ಇನ್ನಷ್ಟು ಗಟ್ಟಿಗೊಳಿಸೋಣ ಎಂದು ಅವರು ಹೇಳಿದರು.



ಈ ವೇಳೆ ರಾಜ್ಯ ಪ್ರಚಾರ ಸಮಿತಿ ಅಧ್ಯಕ್ಷರಾದ ವಿನಯಕುಮಾರ್ ಸೊರಕೆ, ವಿನಯ ನಾವಲಗಟ್ಟಿ, ರಾಜಾಸಲೀಂ ಕಾಶೀಮನರ್ವ, ಮುನೀರ್, ಶಂಭು ಶೆಟ್ಟಿ, ಸುಧೀರ್ ಕುಮಾರ್ ಮುರೊಳಿ, ಜಿಲ್ಲಾ ಪ್ರಚಾರ ಸಮಿತಿಯ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸುಗಮ ಪರೀಕ್ಷೆಗೆ ಕ್ರಮ ಕೈಗೊಳ್ಳಿ: ಬಲರಾಮ ಕಟ್ಟಿಮನಿ

ಹುಕ್ಕೇರಿ: ಮಾರ್ಚ್ 18ರಿಂದ ಆರಂಭವಾಗಲಿರುವ ಎಸ್‌ಎಸ್ ಎಲ್‌ಸಿ ವಾರ್ಷಿಕ ಪರೀಕ್ಷೆಯನ್ನು ಪೌಢಶಿಕ್ಷಣಪರೀಕ್ಷಾ ಮಂಡಳಿಯ ಮಾರ್ಗ ಸೂಚಿಯಂತೆ ಯಾವುದೇ ಲೋಪ ದೋಷಗಳಿಲ್ಲದೆ ಅತ್ಯಂತ ಜಾಗರೂಕತೆಯಿಂದ ಮತ್ತು ಸುಗಮವಾಗಿ ನಡೆಸಬೇಕೆಂದು ತಹಶೀಲ್ದಾರ್ ಬಲರಾಮ ಕಟ್ಟಿಮನಿ ಹೇಳಿದರು.

ಅವರು ಪಟ್ಟಣದ ಸೋಮವಾರ ತಾಲೂಕು ಪಂಚಾಯತಿ ಸಭಾ ಭವನದಲ್ಲಿ ಆಯೋಜಿಸಲಾಗಿದ್ದ ಎಸ್‌ಎಸ್ ಎಲ್‌ಸಿ ವಾರ್ಷಿಕ ಪರೀಕ್ಷಾ ಕಾರ್ಯಕ್ಕೆ ನಿಯೋಜಿತ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದರು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಯಾವುದೇ ಅಕ್ರಮ ಚಟುವಟಿಕೆಗಳು ನಡೆಯದಂತೆ ನೋಡಿಕೊಳ್ಳಬೇಕು.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಟಿ.ಆರ್, ಮಲ್ಲಾಡದ ಮಾತನಾಡಿದರು.ತಾಲೂಕು ಸಮಾಜ ಕಲ್ಯಾಣ ಅಧಿಕಾರಿ ಜಿ.ಡಿ.ಪಾವಟೆ, ಅಕ್ಷರ ದಾಸೋಹ ಇಲಾಕೆ ಸಹಾಯಕ ನಿರ್ದೇಶಕಿ

ಸವಿತಾ ಹಲಕಿ, ಬಿಆರ್‌ಸಿ ಎ.ಕೆ. ಪದ್ಮಣ್ಣವರ ಮತ್ತು ನಿಯೋಜಿತ ಅಧಿಕಾರಿಗಳಿದ್ದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆ ನ್ಯಾಯಸಮ್ಮತ ಮತ್ತು ಯಶಸ್ವಿಯಾಗಿ ನಡೆಯಲು 19 ಕೇಂದ್ರಗಳಿದ್ದು ಅವುಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಪರೀಕ್ಷಾ ಕಾರ್ಯಕ್ಕೆ 550 ಸಿಬ್ಬಂದಿ ನಿಯೋಜಿಸಲಾಗಿದೆ. ತಾಲೂಕಿನಲ್ಲಿ ಈ ಬಾರಿ ಪುನರಾವರ್ತಿಕ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 7203 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.
■ ಪ್ರಭಾವತಿ ಪಾಟೀಲ ಬಿಇಒ ಹುಕ್ಕೇರಿ

ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ



ರಾಯಬಾಗ: ಪರಮ ಪೂಜ್ಯ ಡಾ.ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಮಾತೃಶ್ರೀ ಡಾ. ಹೇಮಾವತಿ ವಿ. ಹೆಗ್ಗಡೆಯವರ ಶುಭಾಶೀರ್ವಾದಗಳೊಂದಿಗೆ ಯೂನಿಕ್ ಪಿಯು ಕಾಲೇಜ್ ಬೂದಿಹಾಳ ಸಹಯೋಗದೊಂದಿಗೆ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ನಡೆಯಿತು.

ಸಂಪನ್ಮೂಲ ವ್ಯಕ್ತಿ ಸುರೇಶ ವೈ. ಶಿವಪುರೆ, ಪ್ರಿನ್ಸಿಪಾಲ ವಂದನಾ ಅ ಕುಪ್ಪಾನಟ್ಟಿ, ರಾಯಬಾಗ ತಾಲೂಕಿನ ಜ್ಞಾನವಿಕಾಸ ಸಮನ್ವಯಾಧಿಕಾರಿ ಸುರೇಖಾ ಅಶೋಕ ಹೆಬ್ಬಳ್ಳಿ, ಒಕ್ಕೂಟ ಅಧ್ಯಕ್ಷೆ ರಾಜೇಶ್ವರಿ ನಾಯಿಕ್, ಶಾಲೆಯ ಶಿಕ್ಷಕರ ಸಮ್ಮುಖದಲ್ಲಿ ದೀಪ ಬೆಳಗಿಸಿ ಉದ್ಘಾಟಿಸಲಾಯಿತು.ಸಂಪನ್ಮೂಲ ವ್ಯಕ್ತಿ ಸುರೇಶ ವೈ.ಶಿವಪುರೆ ಮಾತನಾಡಿ, ಮಕ್ಕಳಲ್ಲಿ ಶಿಕ್ಷಣದ ಜೊತೆಗೆ ಉತ್ತಮ ಆಹಾರ ಪದ್ಧತಿ, ನಡೆ ನುಡಿ ಹಾಗೂ ಒಳ್ಳೆಯ ಸಂಸ್ಕಾರ ಕೊಡುವುದು ಅವಶ್ಯ ಎಂದರು.

ಇಂದಿನ ಯುವ ಪೀಳಿಗೆ ಇಲ್ಲ ಸಲ್ಲದ ಚಟಗಳಿಗೆ ದಾಸರಾಗಿ ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದು, ಈ ಕಾರ್ಯಕ್ರಮದಿಂದ ತಮ್ಮ ಮುಂದಿನ ಭವಿಷ್ಯ ಉತ್ತಮವಾಗಿರಲು ಒಳ್ಳೆಯ ಹವ್ಯಾಸಗಳನ್ನು ಮೈಗೂಡಿಸಿಕೊಂಡು ಮಾದಕ ಚಟಗಳಿಂದ ದೂರವಿರಿ ಎಂದು ಮಾಹಿತಿ ನೀಡಿದರು. ಸುರೇಖಾ, ರಾಜೇಶ್ವರಿ, ಕಾಲೇಜಿನ ಎಲ್ಲಾ ಶಿಕ್ಷಕ ವೃಂದ, ಮಕ್ಕಳು ಉಪಸ್ಥಿತರಿದ್ದರು.

ವಿಜ್ಞಾನದ ಜ್ಞಾನ ಅಗತ್ಯ

ರಾಯಬಾಗ: ಇಂದಿನ ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ತಿಳಿದುಕೊಳ್ಳಬೇಕು. ಅದಕ್ಕೆ ಶಿಕ್ಷಕರ ಹಾಗೂ ಪೋಷಕರ ಸಹಕಾರ ಅಗತ್ಯವಾಗಿ ಬೇಕು ಎಂದು ಸಾವಿತ್ರಿಬಾಯಿ ಫುಲೆ ಸಂಘದ ತಾಲೂಕಾಧ್ಯಕ್ಷೆ ರೂಪಾ ತೂರಾಯಿದಾರ ಹೇಳಿದರು.ತಾಲೂಕಿನ ನಾಗರಾಳ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲರಯಲ್ಲಿ ಇಕೋ ಕ್ಲಬ್ ಕಾರ್ಯಕ್ರಮದ ಅಡಿಯಲ್ಲಿ ವಿಜ್ಞಾನ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದರು. ವಿಜ್ಞಾನ ಬಹಳ ಮುಂದುವರಿಯುತ್ತಿದೆ. ಅದರ ಬಗ್ಗೆ ಯುವಕರು ಹೊಸಹೊಸ ವಿಷಯಗಳನ್ನು ಕಲಿತು. ಜ್ಞಾನವನ್ನು ಹೆಚ್ಚಿಸಿ ಪ್ರಮುಖ ವೇದಿಕೆಗಳು ಸಿಕ್ಕಾಗ ಅವುಗಳನ್ನು ತೋರಿಸಬೇಕು ಎಂದರು.ರಾಯಬಾಗ ಉಪವಲಯ ಅರಣ್ಯಾಧಿಕಾರಿ ಎಂ ಬಿ ಚೌಗಲಾ ಮಾತನಾಡಿ, ಪ್ರತಿ ವಿದ್ಯಾರ್ಥಿಗಳು ಒಂದೊಂದು ಗಿಡಗಳನ್ನು ನೆಟ್ಟರೆ ಪರಿಸರ ಉಳಿಸಿ ಬೆಳೆಸಿದಂತ್ತಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಈ ವೇಳೆ ಶಿಕ್ಷಣ ಪ್ರೇಮಿ ಈರಗೌಡ ಪಾಟೀಲ, ಗಣಪತಿ ಮುದೋಳೆ, ಅರಣ್ಯ ಇಲಾಖೆ ನಿವೃತ್ತ ಗಾರ್ಡ್ ಪರಗೌಡ ಪಾಟೀಲ ಸೇರಿದಂತೆ ಪ್ರಧಾನಗುರುಗಳು, ಶಿಕ್ಷಕರು, ಶಿಕ್ಷಕಿಯರು ಉಪಸ್ಥಿತರಿದ್ದರು.



ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ಗೋಕಾಕ: ಇತ್ತೀಚೆಗೆ ನಿಪ್ಪಾಣಿಯಲ್ಲಿ ನಡೆದ ಟೇಕ್ವಾಂಡೋ ಕ್ರೀಡೆ ಖೇಲೋ ಇಂಡಿಯಾ 2025-2026ರ ಸ್ಪರ್ಧೆಯಲ್ಲಿ ವಿಜೇತರಾದ ಅನುಷ್ಕಾ ಲಕ್ಷ್ಮಣ ಮೇತ್ರಿ (ಕಂಚಿನ ಪದಕ) ಮತ್ತು ಸಲೋನಿ ಬಸವರಾಜ ಮೇತ್ರಿ (ಬೆಳ್ಳಿ ಪದಕ) ಪಡೆದ ಸಹೋದರಿಯರ ಸಾಧನೆಗೆ ಶಾಸಕ ರಮೇಶ್ ಜಾರಕಿಹೊಳಿ ಮತ್ತು ಕಾರ್ಮಿಕ ಮುಖಂಡರಾದ ಅಂಬಿರಾವ ಪಾಟೀಲ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾನುವಾರದಂದು ಶಾಸಕರ ಕಾರ್ಯಾಲಯದಲ್ಲಿ ಕ್ರೀಡಾಪಟುಗಳನ್ನು ಶಾಸಕ ರಮೇಶ ಜಾರಕಿಹೊಳಿ ಸತ್ಕರಿಸಿ ಸನ್ಮಾನ ಮಾಡಿ ಶುಭಾಶಯಗಳನ್ನು ತಿಳಿಸಿದರು.ಈ ಸಂದರ್ಭದಲ್ಲಿ ಶಾಸಕರ ಆಪ್ತ ಸಹಾಯಕ ಸುರೇಶ್ ಸನದಿ, ಭೀಮಗೌಡ ಪೊಲೀಸ್ ಗೌಡರ, ಹಿರಿಯರಾದ ಸುರೇಶ್ ಪಾಟೀಲ, ಮಲ್ಲಪ್ಪ ಹುಕ್ಕೇರಿ, ಆನಂದ ಬನನ್ನವರ, ಸುಧೀರ ಜೋಡಟ್ಟಿ, ಕೃಷ್ಣಾ ಗಂಡವ್ವಗೋಳ, ದುಂಡಪ್ಪಾ ಮೇತ್ರಿ, ನಾಗರಾಜ್ ಜಂಬ್ರಿ, ಅಪ್ಪಾಸಾಬ ಮುಲ್ಲಾ, ಬಸವರಾಜ ಮೇತ್ರಿ, ಲಕ್ಷ್ಮಣ ಮೇತ್ರಿ ಸೇರಿದಂತೆ ಹಲವಾರು ಮುಖಂಡರು ಇದ್ದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಯಮಕನಮರಡಿ : ಕರ್ನಾಟಕ ಸರ್ಕಾರ ಮತ್ತು ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಕರ್ನಾಟಕ ರಾಜ್ಯ ಅಭಿಯಾನ ಜಿಲ್ಲಾ ಪಂಚಾಯತಿ ಬೆಳಗಾವಿ, ತಾಲೂಕು ಪಂಚಾಯತಿ ಹುಕ್ಕೇರಿ ಸ್ಥಳೀಯ ಗ್ರಾಮ ಪಂಚಾಯತಿ ಮಟ್ಟದ ಸಂಜೀವಿನಿ ಮಹಿಳಾ ಒಕ್ಕೂಟ ಸಹಯೋಗದಲ್ಲಿ ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ ನಡೆಯಿತು. ಸಾನ್ನಿಧ್ಯ ವಹಿಸಿದ್ದ ಶೂನ್ಯ ಸಂಪಾದನಾ ಹುಣಸಿಕೊಳ್ಳಮಠದ ಸಿದ್ದಬಸವ ದೇವರು ಮಾತನಾಡಿ, ಮಹಿಳೆ ಅಬಲೆಯಲ್ಲ, ಕುಟುಂಬದ ಶಕ್ತಿ ಮಹಾಲಕ್ಷ್ಮೀ ಶಕ್ತಿ ಅವತಾರವಾಗಿದ್ದಾಳೆ . ಪ್ರತಿಯೊಬ್ಬರೂ ಮಹಿಳೆಯನ್ನು ಅತ್ಯಂತ ಗೌರವ ಭಾವನೆಯಿಂದ ಕಾಣಿರಿ ಎಂದರು. ಜಿಲ್ಲಾ ಪಂಚಾಯತಿ, ತಾಲೂಕು, ಗ್ರಾಮ ಪಂಚಾಯತಿ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಸಾಲ ಪತ್ರವನ್ನು ಹಂಚಲಾಯಿತು. ಪ್ರಾರಂಭದಲ್ಲಿ ಸಂಜೀವಿನಿ ಒಕ್ಕೂಟದ ಕಾರ್ಯದರ್ಶಿ ಅನುರಾದ ಕಾಪಶಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. 3 ದಿನಗಳವರೆಗೆ ಮಹಿಳಾ ವಸ್ತು ಪದರ್ಶನ ಮಳಿಗೆಗಳನ್ನು ಪ್ರಾರಂಭಿಸಲಾಯಿತು.



ಕಿರುಸುದ್ದಿ

ಅರ್ಜಿ ಆಹ್ವಾನ

• **ಬೆಳಗಾವಿ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ವಚನ ಕಲ್ಯಾಣ ಎಂಬ ಅಹೋರಾತ್ರಿ (9 ಗಂಟೆ) ನಾಟಕವನ್ನು ಸಿದ್ಧಪಡಿಸಿ, ನಾಡಿನಾದ್ಯಂತ ಪ್ರದರ್ಶನ ಮಾಡಲು ಉದ್ದೇಶಿಸಲಾಗಿದೆ. ಆಸಕ್ತ ಯುವಕ, ಯುವತಿಯರು ಹಾಗೂ ಅನುಭವಿ ರಂಗಕಲಾವಿದರು, ಗಾಯಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. 18 ರಿಂದ 40 ವರ್ಷಗಳ ವಯೋಮಿತಿ ನಿಗದಿಪಡಿಸಲಾಗಿದ್ದು, ರಂಗ ಶಿಕ್ಷಣದಲ್ಲಿ ತರಬೇತಿ ಪಡೆದ ಹಾಗೂ ನಾಟಕಗಳಲ್ಲಿ ಅಭಿನಯಿಸಿದ ಕಲಾವಿದರಿಗೆ ಆದ್ಯತೆಯನ್ನು ನೀಡಲಾಗುವುದು. ಅರ್ಜಿ ನಮೂನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವೆಬ್ ಸೈಟ್ kannadasiri.karanatak.gov.in ಮೂಲಕ ಪಡೆದುಕೊಂಡು, ಅರ್ಜಿಗಳನ್ನು ಭರ್ತಿ ಮಾಡಿ ಮಾರ್ಚ್ 20 ರ ಒಳಗಾಗಿ, ಸದಸ್ಯ ಕಾರ್ಯದರ್ಶಿ ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056, ಇಲ್ಲಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಅಥವಾ ಮೇಲ್ ವಿಳಾಸ kanakaresearchcentre@gmail.com ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವಚನ ಕಲ್ಯಾಣ ನಾಟಕದ ನಿರ್ದೇಶಕರಾದ ಸಿ. ಬಸವಲಿಂಗಯ್ಯರನ್ನು ಸಂಪರ್ಕಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೂರ್ವಭಾವಿ ಸಭೆ ನಾಳೆ

• **ಖಾನಾಪುರ:** ಏ.5ರಂದು ನಡೆಯಲಿರುವ ಡಾ.ಬಾಬು ಜಗಜೀವನರಾಂ ಮತ್ತು ಏ.14ರಂದು ನಡೆಯಲಿರುವ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಜಯಂತಿಯ ಪೂರ್ವಸಿದ್ಧತೆಗಳ ಬಗ್ಗೆ ಚರ್ಚಿಸಲು ಪಟ್ಟಣದ ತಾಲೂಕು ಪಂಚಾಯತ ಸಭಾ ಭವನದಲ್ಲಿ ಮಂಗಳವಾರ ಮಾ.18ರಂದು ಮುಂಜಾನೆ 11ಕ್ಕೆ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಖಾನಾಪುರದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ಶಿಕ್ಷಕ ಎಸ್.ಜಿ ಶಿಂಧೆ ನಾಪತ್ತೆ

• **ಖಾನಾಪುರ:** ಪಟ್ಟಣದ ಶಿವಾಜಿನಗರ ನಿವಾಸಿ, ನಿವೃತ್ತ ಶಿಕ್ಷಕ ಹಾಗೂ ವಿಶೇಷ ಅಗತ್ಯತೆಯುಳ್ಳವರ ಕಲ್ಯಾಣ ಸಂಸ್ಥೆಯ ಸಂಸ್ಥಾಪಕ ಶಿವಾಜಿ ಗಂಗಾರಾಮ ಶಿಂಧೆ (73) ಇತ್ತೀಚೆಗೆ ತಮ್ಮ ಮನೆಯಿಂದ ಯಾರಿಗೂ ಹೇಳದೇ ಹೊರಟುಹೋಗಿದ್ದಾರೆ. ಖಾನಾಪುರ ಪೊಲೀಸ್ ಠಾಣೆಯಲ್ಲಿ ಇವರ ನಾಪತ್ತೆ ಬಗ್ಗೆ ಪ್ರಕರಣ ದಾಖಲಾಗಿದ್ದು, ಶಿಂಧೆ ಅವರನ್ನು ಕಂಡರೆ ಅಥವಾ ಅವರ ಬಗ್ಗೆ ಯಾವುದೇ ಮಾಹಿತಿ ಇದ್ದಲ್ಲಿ ಖುದ್ದಾಗಿ ಖಾನಾಪುರ ಪೊಲೀಸ್ ಠಾಣೆ ತಿಳಿಸುವಂತೆ ಪೊಲೀಸ್ ಇಲಾಖೆಯ ಪ್ರಕಟಣೆ ತಿಳಿಸಿದೆ.

ಕಬ್ಬು ಕಟಾವಿಗೆ ಬಂದಿದ್ದ ಕಾರ್ಮಿಕ ನಾಪತ್ತೆ

• **ಖಾನಾಪುರ:** ಮಹಾರಾಷ್ಟ್ರದ ಅಮರಾವತಿ ಜಿಲ್ಲೆ ಥೋಗಾಂವ ಕಾರಲಾ ಗ್ರಾಮದಿಂದ ತಮ್ಮೂರಿನ ಜನರೊಂದಿಗೆ ತಾಲೂಕಿನ ಕೃಷಿ ಜಮೀನುಗಳಲ್ಲಿ ಕಬ್ಬು ಕಟಾವು ಮಾಡಲು ಬಂದಿದ್ದ ಉತ್ತಮರಾವ ಭೀಮಾಜಿ ಚಿದಾಮ ಈಚೆಗೆ ತಾಲೂಕಿನ ಒತ್ತೊಳ್ಳಿ ಗ್ರಾಮದ ಗೋಪಿ ಪಾಟೀಲ ಅವರ ಜಮೀನಿನಿಂದ ಕಾಣೆಯಾಗಿರುವ ಬಗ್ಗೆ ಖಾನಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಉತ್ತಮರಾವ ಅವರನ್ನು ಕಂಡರೆ ಅಥವಾ ಅವರ ಬಗ್ಗೆ ಯಾವುದೇ ಮಾಹಿತಿ ಇದ್ದಲ್ಲಿ ಖುದ್ದಾಗಿ ಖಾನಾಪುರ ಪೊಲೀಸ್ ಠಾಣೆ ತಿಳಿಸುವಂತೆ ಪೊಲೀಸ್ ಇಲಾಖೆಯ ಪ್ರಕಟಣೆ ತಿಳಿಸಿದೆ.

ಅಪರಿಚಿತ ಶವ ಪತ್ತೆ

• **ಖಾನಾಪುರ:** ಪಟ್ಟಣದ ಇಸ್ಕಾನ್ ದೇವಸ್ಥಾನದ ಬಳಿ ಮಲಪ್ರಭಾ ನದಿಯಲ್ಲಿ 20 ರಿಂದ 25 ವರ್ಷ ವಯಸ್ಸಿನ ಅಪರಿಚಿತ ಪುರುಷನ ಶವ ಪತ್ತೆಯಾಗಿದೆ. ಕಳೆದ ಹಲವು ದಿನಗಳ ಹಿಂದೆ ಈ ವ್ಯಕ್ತಿ ನದಿಯಲ್ಲಿ ಬಿದ್ದು ಮೃತಪಟ್ಟಿರಬಹುದು ಎಂದು ಪೊಲೀಸರು ಅಂದಾಜಿಸಿದ್ದು, ಮೃತ ವ್ಯಕ್ತಿಯ ಎತ್ತರ 5.10 ಅಡಿ ಇದೆ. ಮೃತರ ವಾರಸುದಾರರಿದ್ದಲ್ಲಿ ಖಾನಾಪುರ ಪೊಲೀಸ್ ಠಾಣೆಯಲ್ಲಿ ಖುದ್ದಾಗಿ ಅಥವಾ ಅಥವಾ 112 ಸಂಖ್ಯೆಯ ಮೂಲಕ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಮರಕ್ಕೆ ಬಸ್ ಡಿಕ್ಕಿ: 7 ಪ್ರಯಾಣಿಕರಿಗೆ ಗಾಯ

• **ಖಾನಾಪುರ:** ಎದುರಿನಿಂದ ವೇಗವಾಗಿ ಬಂದ ಕಾರಿಗೆ ಅಪ್ಪಳಿಸುವುದನ್ನು ತಪ್ಪಿಸಲು ಹೋದ ಬಸ್ಸೊಂದು ಬದಿಯ ಮರಕ್ಕೆ ಡಿಕ್ಕಿ ಹೊಡೆದ ಘಟನೆ ಭಾನುವಾರ ತಾಲೂಕಿನ ನಂದಗಡ ಗ್ರಾಮದ ಬಳಿ ಸಂಭವಿಸಿದೆ. ಪಟ್ಟಣದಿಂದ ಬೀಡಿ ಗ್ರಾಮದತ್ತ ಹೊರಟಿದ್ದ ವಾಯವ್ಯ ಸಾರಿಗೆ ಸಂಸ್ಥೆಯ ಖಾನಾಪುರ ಘಟಕಕ್ಕೆ ಸೇರಿದ ಬಸ್ ಅಪಘಾತಕ್ಕೀಡಾಗಿದೆ. ಆಕಸ್ಮಿಕವಾಗಿ ಸಂಭವಿಸಿದ ಈ ಘಟನೆಯಲ್ಲಿ ಬಸ್ ಚಾಲಕ ಸೇರಿದಂತೆ 7 ಪ್ರಯಾಣಿಕರಿಗೆ ಗಾಯಗಳಾಗಿದ್ದು, ಎಲ್ಲರೂ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ನಂದಗಡ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಅಥಣಿ: ಅವರು ತಾಲೂಕಿನ ಸತ್ತಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಜರುಗಿದ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ಸಾಧಕ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದ ಮುಖ್ಯ ಅತಿಥಿಯಾಗಿ ಹಾರೂಗೇರಿ ಶರಣ ವಿಚಾರ ವಾಹಿನಿ ಅಧ್ಯಕ್ಷ ಐ. ಆರ್. ಮಠಪತಿ ಮಾತನಾಡಿದರು.

ಭವನ ಉದ್ಘಾಟಿಸಿದ ಶಾಸಕ ವೈದ್ಯ

• **ಯರಗಟ್ಟಿ:** ಪಟ್ಟಣದ ಅಂಬೇಡ್ಕರ ನಗರದಲ್ಲಿ 50 ಲಕ್ಷ ರೂ.ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡ ಡಾ.ಬಾಬು ಜಗಜೀವನ ರಾಮ ಭವನವನ್ನು ಶಾಸಕ ವಿಶ್ವಾಸ ಉದ್ಘಾಟಿಸಿದರು.2025-26ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ - ಎಸ್.ಸಿ.ಎಸ್.ಪಿ ಯೋಜನೆಯಡಿಯಲ್ಲಿ ಪಟ್ಟಣದ ಡಾ. ಬಿ. ಆರ್. ಅಂಬೇಡ್ಕರ್ ಭವನ ಹಾಗೂ ಡಾ. ಬಾಬು ಜಗಜೀವನ ರಾಮ್ ಭವನಕ್ಕೆ ಸುಸಜ್ಜಿತ ಪೀಠೋಪಕರಣಗಳನ್ನು ವಿತರಿಸಲಾಯಿತು.ಈ ವೇಳೆ ತಹಶೀಲ್ದಾರ್ ಎಂ. ವ್ಹಿ. ಗುಂಡಪ್ಪಗೋಳ, ಪ. ಪಂ. ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಸಮಾಜ ಕಲ್ಯಾನ ಇಲಾಖೆ ಅಧಿಕಾರಿ ಆರ್. ಆರ್. ಕುಲಕರ್ಣಿ, ಕೆ.ಆರ್.ಐ.ಡಿ.ಎಲ್ ಎಇಇ ಸಚೀನ ಕಾಂಬಳೆ, ಕೆ.ಆರ್.ಐ.ಡಿ.ಎಲ್ ಇಂಜನಿಯರ ಆನಂದ ಬೆನಕಟ್ಟಿ ಹಾಗೂ ದಲಿತ ಸಮುದಾಯ ಮುಖಂಡರಾದ ಬಾಸ್ಕರ ಹಿರೇಮೆತ್ರಿ, ಲಕ್ಕಪ್ಪ ಹುಣಶೀಕಟ್ಟಿ, ಸಂತೋಷ ಚನ್ನಮೇತ್ರಿ, ಸುರೇಶ ಭಜಂತ್ರಿ, ವಿಲನ್ಸ್ ಸೊಪ್ಪಡ್ಲ, ಯಲ್ಲಪ್ಪ ಪಟ್ಟೆಪ್ಪನ್ನವರ, ಸುರೇಶ ತಮ್ಮಣ್ಣವರ, ಹನಮಂತ ನರೇರ, ಶ್ಯಾಮ ಕಾರೆಪ್ಪನ್ನವರ, ನಾಗಪ್ಪ ಪಡೆಪ್ಪನ್ನವರ, ಚಿದಂಬರ ಕಟ್ಟಿಮನಿ, ಪ. ಪಂ. ಸದಸ್ಯರಾದ ನೀಖಿಲ ಪಾಟೀಲ, ಹನಮಂತ ಹಾರುಗೊಪ್ಪ, ಸಲೀಮಬೇಗ ಜಮಾದಾರ, ವಿಠ್ಠಲಗೌಡ ದೇವರಡ್ಡಿ, ಮಲಿಕಸಾಬ ಬಾಗವಾನ, ಜೆ. ರತ್ನಾಕರ ಶೆಟ್ಟಿ, ಫಾರುಕ ಅತ್ತಾರ ಸೇರಿದಂತೆ ಅನೇಕ ದಲಿತ ಮುಖಂಡರು ಉಪಸ್ಥಿತರಿದ್ದರು.



ಯರಗಟ್ಟಿ: ಪಟ್ಟಣದ ಅಂಬೇಡ್ಕರ ನಗರದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡ ಡಾ.ಬಾಬು ಜಗಜೀವನ ರಾಮ ಭವನವನ್ನು ಶಾಸಕ ವಿಶ್ವಾಸ ವೈದ್ಯ ಅವರು ಉದ್ಘಾಟಿಸಿದರು.

ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತ

• **ಚಿಕ್ಕೋಡಿ:** ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಿಗೆ ಕಾಂಗ್ರೆಸ್ ಸರ್ಕಾರ ಶೇ.80 ರಷ್ಟು ಅನುದಾನ ಮೀಸಲಿಟ್ಟಿದ್ದು, ಏತನೀರಾವರಿ ಯೋಜನೆ ಸೇರಿದಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರ ಶೇ.20ರಷ್ಟು ಇರಿಸಿದೆ. ಹೀಗಾಗಿ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಿಂತು ಹೋಗಿವೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಆರೋಪಿಸಿದರು.



ಪಟ್ಟಣದ ಕೇಶವ ಕಲಾಭವನದಲ್ಲಿ ಸೋಮವಾರ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಪಂಚಯತ್, ತಾಲೂಕು ಪಂಚಾಯತ್ ಚುನಾವಣೆ ಮಾಡದೇ ವಿಳಂಬ ಮಾಡುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಾಂಗ್ರೆಸ್ ಸರ್ಕಾರ ಕೊಡಲಿ ಪೆಟ್ಟು ಹಾಕುತ್ತಿದೆ. ಗ್ರಾಮ ಪಂಚಾಯಿತಿ ಚುನಾವಣೆ ಮಾಡುವ ಗೋಜಿಗೂ ಸರ್ಕಾರ ಹೋಗಲಿಕ್ಕಿಲ್ಲ. ಎರಡನೇ ಸ್ತರದ ರಾಜಕಾರಣಿಗಳನ್ನು ಬೆಳೆಸುವಲ್ಲಿ ರಾಜ್ಯ ಸರ್ಕಾರ ಹಿಂದೆ ಬಿದ್ದಿದೆ ಎಂದು ಕಿಡಿಕಾರಿದರು. ಜಿಲ್ಲೆಯಲ್ಲಿ ಪ್ರಮುಖ ಇಲಾಖೆಗಳಲ್ಲಿ 21495 ಹುದ್ದೆಗಳು ಮಂಜೂರಾತಿ ಇದ್ದು, 8139 ಖಾಲಿ ಹುದ್ದೆಗಳು ಇವೆ. ನೀರಾವರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು 666 ಇದ್ದು, 656 ಖಾಳಿ ಹುದ್ದೆಗಳಿವೆ. ಜಿಲ್ಲಾ ಪಂಚಾಯತ್ ನಲ್ಲಿ 993 ಹುದ್ದೆಗಳಿದ್ದು, 214 ಖಾಲಿ ಹುದ್ದೆಗಳಿವೆ. ಹೀಗೆ ಸಾಕಷ್ಟು ಹುದ್ದೆಗಳು ಖಾಲಿ ಇದ್ದು, ಸಾರ್ವಜನಿಕರ ಕೆಲಸ ಕಾರ್ಯಗಳು ವಿಳಂಬವಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಬಿಜೆಪಿ ಪ್ರದಾನ ಕಾರ್ಯದರ್ಶಿ ಪಿ ರಾಜೀವ, ಚಿಕ್ಕೋಡಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ ಅಪ್ಪಾಜಿಗೋಳ, ಮುಖಂಡರಾದ ಮಹೇಶ ಭಾತೆ, ಸದಾಶಿವ ಹಳಿಂಗಳೆ, ಶ್ರೀಧರ ಮೂಡಲಗಿ, ಪವನ ಮಹಾಜನ, ಅಮೃತ ಕುಲಕರ್ಣಿ, ಶಿವಾನಂದ ನವಿನಾಳೆ, ಶಾಂಭವಿ ಅಶ್ವತ್ಥಪೂರ ಇತರರು ಇದ್ದರು.

ಕಾರ್ಖಾನೆಯಿಂದ ಮಾಲಿನ್ಯ: ದೂರು ತಜ್ಞರ ತಂಡದಿಂದ ಪರಿಶೀಲನೆ

• **ಕೊಕಟನೂರ :** ಸುತ್ತಮುತ್ತಲಿನ ಪರಿಸರ ಹಾಳಾಗಿದೆ ಎಂದು ಆರೋಪಿಸಿ ಸಮೀಪದ ಬುರ್ಲಟ್ಟಿ ಶ್ರೀ ರೇಣುಕಾ ಸಕ್ಕರೆ ಕಾರ್ಖಾನೆಯ ವಿರುದ್ಧ ಉಚ್ಚನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಹಿನ್ನಲೆಯಲ್ಲಿ ಸೋಮವಾರ' ನ್ಯಾಯಾಲಯದ ಆದೇಶದ ಮೇರೆಗೆ ಜಿಲ್ಲಾ ವಿವಿಧ ಇಲಾಖೆಗಳ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿ ಬಾವಿ, ಕೊಳವ ಬಾವಿ ಮತ್ತು ಬೆಳೆಗಳನ್ನು ವಿಕ್ಷಿಸಿದರು.

ಶ್ರೀ ರೇಣುಕಾ ಸಕ್ಕರೆ ಕಾರ್ಖಾನ ಅಕ್ಕ-ಪಕ್ಕದಲ್ಲಿರುವ ಬಸಪ್ಪ ಖೋತ, ಬಾಳಕೃಷ್ಣ ಖೋತ, ಶಿವಾನಂದ ಖೋತ, ಹಾಗೂ ಶ್ರೀಶೈಲ ಖೋತ ಎಂಬ ರೈತರು ಕಾರ್ಖಾನೆಯ ಜಲ ಮಾಲಿನ್ಯ ಮತ್ತು ವಾಯು ಮಾಲಿನ್ಯದಿಂದ ನಮ್ಮ ಜಮೀನದಲ್ಲಿರುವ ಬಾವಿ, ಕೊಳವೆ ಬಾವಿಯ ನೀರು ಕಪ್ಪಾಗಿವೆ. ಜಮೀನದಲ್ಲಿ ಬೆಳೆದ ಕೃಷಿ ಮತ್ತು ಹೊಟಗಾರಿಕೆ ಬೆಳೆಗಳ ಇಳುವರಿ ಕಡಿಮೆ ಆಗಿರುವ ಬಗ್ಗೆ ನ್ಯಾಯಾಲಯದ ಮೊರೆ ಹೋಗಿದ್ದರು. ಉಚ್ಚನ್ಯಾಯಾಲಯದ ನೀಡಿರುವ ನಿರ್ದೇಶದನ್ವಯ ಜಿಲ್ಲಾ ಮಟ್ಟದ ಮತ್ತು ತಾಂತ್ರಿಕ ತಂಡದ ಅಧಿಕಾರಿಗಳು ಜಂಟಿಯಾಗಿ ಸ್ಥಳ ತಪಾಸಣೆ ಮಾಡಿ ಬಾವಿ, ಕೊಳವೆ ಬಾವಿಯ ನೀರನ್ನು ಸಂಗ್ರಹಿಸಿದರು.

ಈ ಸಂದರ್ಭದಲ್ಲಿ ಚಿಕ್ಕೋಡಿ ಉಪವಿಭಾಗಾಧಿಕಾರಿ ಸುಭಾಸ ಸಂಪಗಾವಿ, ತಹಶೀಲ್ದಾರ್ ಸಿದ್ದರಾಯ ಭೋಸಗಿ, ಹಿರಿಯ ಪರಿಸರ ಅಧಿಕಾರಿ ಗೋಪಾಲಕೃಷ್ಣ, ತಗಣಿ ವಿದ್ಯಾಶೆಟ್ಟಿ, ಕೃಷಿವಿಶ್ವವಿದ್ಯಾಲಯ ತನಿಕಾಸಹಾಯಕ ಡಾ, ಸುನಿಲಕುಮಾರ ಮೂಲಿ, ಹಣಮಂತಪ್ಪ, ಕೃಷಿ ಅಧಿಕಾರಿ ನಿಂಗಪ್ಪ ಬಿರಾದಾರಪಾಟೀಲ, ಜಿಯೋಲಿಸ್ಟ ಪವಿನ ಗೋಕಾವಿ, ಸಿಪಿಐ ಸಂತೋಷ ಹಳ್ಳೂರ, ಅಬಕಾರಿ ಸಿಪಿಐ ಮಹಾಂತೇಶ ಬಂಡಗರ, ವೈದ್ಯಾಧಿಕಾರಿ ಬಸಗೌಡ ಕಾಗೆ, ಯಂಕಪ್ಪ ಉಬ್ಬರ, ತಾಪಂ ಇಒ ಶಿವಾನಂದ ಕಲ್ಲಾಪುರ, ಕಂದಾಯವೀರೀಕ್ಷಕ ಸಂಜೀವ ರಾಠೋಡ, ಗ್ರಾಮಾಡಳಿತಾಧಿಕಾರಿ ಕಲ್ಮೇಶ್ ಕಲಮಡಿ. ಸೇರಿದಂತೆ ಹಲವರು ಇದ್ದರು.



ವಿದ್ಯಾರ್ಥಿ ಜೀವನ ಒಂದು ತಪಸ್ಸಿನಂತೆ: ಐ. ಆರ್. ಮಠಪತಿ

• **ಅಥಣಿ:** ವಿದ್ಯಾರ್ಥಿ ಜೀವನ ಒಂದು ತಪಸ್ಸು ಇದ್ದಂತೆ, ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೆ ನಿರ್ದಿಷ್ಟ ಗುರಿ ಇಟ್ಟುಕೊಂಡು, ಗುರುಗಳ ಮಾರ್ಗದರ್ಶನದಂತೆ ಸತತ ಪ್ರಯತ್ನ ಮಾಡಬೇಕು. ನಿಮ್ಮಲ್ಲಿ ಆತ್ಮವಿಶ್ವಾಸ ಮತ್ತು ಸಾಧಿಸುವ ಛಲ ಇದ್ದರೆ ಸಾಧನೆ ನಿಮಗೆ ಸುಲಭವಾಗಿ ದೊರಕುತ್ತದೆ ಎಂದು ಹಾರೂಗೇರಿ ಶರಣ ವಿಚಾರ ವಾಹಿನಿ ಅಧ್ಯಕ್ಷ ಐ. ಆರ್. ಮಠಪತಿ ಹೇಳಿದರು.

ಅವರು ತಾಲೂಕಿನ ಸತ್ತಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಜರುಗಿದ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ಸಾಧಕ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಬಾಲ್ಯದಲ್ಲಿಯೇ ಮಕ್ಕಳಿಗೆ ತಂದೆ ತಾಯಿಯ ಕಷ್ಟ ಅರ್ಥವಾಗಬೇಕು. ಸರ್ಕಾರಿ ಶಾಲೆಯ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಶಾಲಾ ಅಭಿವೃದ್ಧಿ ಸಮಿತಿಗೆ ಸಹಾಯಧನ 10 ಸಾವಿರ ರೂ. ನೀಡುವುದಾಗಿ ವಾಗ್ದಾನ ಮಾಡಿದರು.

ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಕುಮಾರಸ್ವಾಮಿ ಮಠ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ರಾವಸಾಬ ಜಿನರಾಳ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ತಾ.ಪಂ ಮಾಜಿ ಸದಸ್ಯ ಜಡೇಪ್ಪ ಕುಂಬಾರ, ಹಿರಿಯ ಮುಖಂಡ ಪ್ರಕಾಶ ಭೂಷಣ್ಣವರ, ಅಶೋಕ ಜಗದೇವ, ಮಹಾದೇವಗೌಡ ಪಾಟೀಲ, ಪುಲಿಕೇಶ ದೊಡ್ಡಮನಿ, ಪಿಡಿಒ ಭುವನೇಶ್ವರಿ ಹಿರೇಮಠ, ಸಿ ಆರ್ ಪಿ ಆರತಿ ಖೋತ, ಸಂಜೀವ ಗಡ್ಯಾಗೋಳ, ಎಸ್. ಕೆ. ಕುಂಬಾರ, ಮಲ್ಲೇಶ ದೊಡ್ಡಮನಿ, ಕೆ ಅಶೋಕ, ಕನ್ನಡ ಪರ ಹೋರಾಟಗಾರ ಅಣ್ಣಾಸಾಬ ತೆಲಸಂಗ, ಜಲಯೋಗತಜ್ಞ ವಿಲಾಸ ಕುಲಕರ್ಣಿ ಸೇರಿದಂತೆ ಶಾಲೆಯ ಶಿಕ್ಷಕರು ಮತ್ತು ಎಸ್ ಡಿಎಂ ಸಿ ಸದಸ್ಯರು ಉಪಸ್ಥಿತರಿದ್ದರು.

ಅಂತರ್ಜಲ ಮಟ್ಟದಲ್ಲಿ ಗಣನೀಯ ಸುಧಾರಣೆ: ಸಂಸದ ಈರಣ್ಣ ಕಡಾಡಿ



• **ಮೂಡಲಗಿ :** ಕೇಂದ್ರ ಸರ್ಕಾರದ 'ಜಲಶಕ್ತಿ' ಅಭಿಯಾನದಡಿ ಜಿಲ್ಲೆಯಲ್ಲಿ 1,676 ಚೆಕ್ ಡ್ಯಾಂಗಳು ಸೇರಿದಂತೆ ಒಟ್ಟು 1.1 ಲಕ್ಷ ಜಲ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಜಿಲ್ಲೆಯಾದ್ಯಂತ 'ಮಿಷನ್ ಅಮೃತ್ ಸರೋವರ' ಅಡಿಯಲ್ಲಿ 228 ಕೆರೆಗಳನ್ನು ಪುನಶ್ಚೇತನಗೊಳಿಸಿ ಜಲ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸುವುದರ ಮೂಲಕ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟದಲ್ಲಿ ಸುಧಾರಣೆ ಕಂಡು ಬಂದಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅಂತರ್ಜಲ ಸಂಪನ್ಮೂಲಗಳ ನಿರ್ವಹಣೆ ಪ್ರಗತಿಯ ಕುರಿತು ಕೇಳಿದ ಪ್ರಶ್ನೆಗೆ ಕೇಂದ್ರ ಜಲಶಕ್ತಿ ಇಲಾಖೆ ಸಚಿವ ಸಿ.ಆರ್. ಪಾಟೀಲ್ ಅವರು ನೀಡಿದ ಲಿಖಿತ ಉತ್ತರದಲ್ಲಿ ಜಿಲ್ಲೆಯಲ್ಲಿ ಕಳೆದ ಹತ್ತು ವರ್ಷಗಳ ಸರಾಸರಿಗೆ ಹೋಲಿಸಿದರೆ, ಶೇ. 81 ರಷ್ಟು ಬಾವಿಗಳಲ್ಲಿ ಅಂತರ್ಜಲ ಮಟ್ಟವು ಗಮನಾರ್ಹವಾಗಿ ಸುಧಾರಿಸಿದೆ ಮತ್ತು ಜಿಲ್ಲೆಯ ಶೇ. 97 ರಷ್ಟು ಬಾವಿಗಳಲ್ಲಿ ಕೇವಲ 0-10 ಮೀಟರ್ ಆಳದಲ್ಲಿಯೇ ನೀರು ಲಭ್ಯವಾಗುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಜಿಲ್ಲೆಯ 'ಸುರಕ್ಷಿತ' ತಾಲೂಕುಗಳ ಪ್ರಮಾಣವು 2017 ರಲ್ಲಿ ಶೇ. 40 ಇದ್ದದ್ದು 2025 ರಲ್ಲಿ ಶೇ. 53.3 ಕ್ಕೆ ಏರಿಕೆಯಾಗಿದೆ. 'ಅತಿಯಾಗಿ ಬಳಸಲ್ಪಟ್ಟ' ಘಟಕಗಳ ಪ್ರಮಾಣವು ಶೇ. 30 ರಿಂದ ಶೇ. 13.3 ಕ್ಕೆ ಇಳಿದಿದ್ದು, ಪ್ರಸ್ತುತ ಬೈಲಹೊಂಗಲ ಮತ್ತು ಸವದತ್ತಿ ತಾಲೂಕುಗಳು ಮಾತ್ರ ಈ ಪಟ್ಟಿಯಲ್ಲಿವೆ. ಅಟಲ್ ಭೂಜಲ ಯೋಜನೆಯಡಿ ಅಥಣಿ ಮತ್ತು ರಾಮದುರ್ಗ ತಾಲೂಕುಗಳ 45 ಗ್ರಾಮ ಪಂಚಾಯಿತಿಗಳಲ್ಲಿ 1,536 ಮರುಪೂರಣ ಘಟಕಗಳನ್ನು (ರೀಚಾರ್ಜ್ ಆಫ್ ಬೋರ್‌ವೆಲ್) ನಿರ್ಮಿಸಲಾಗಿದ್ದು, 31 ಪಂಚಾಯಿತಿಗಳಲ್ಲಿ ನೀರಿನ ಮಟ್ಟ ಗಣನೀಯವಾಗಿ ಸುಧಾರಿಸಿದೆ.

ಕೇಂದ್ರ ಸರ್ಕಾರದ 'ಪರ್ ಡ್ರಾಪ್ ಮೋರ್ ಕ್ರಾಪ್' ಯೋಜನೆಯಡಿ ಸೂಕ್ಷ್ಮ ನೀರಾವರಿ ಅಳವಡಿಕೆಗೆ ಹೆಚ್ಚಿನ ಸಹಾಯಧನ ನೀಡಲಾಗುತ್ತಿದೆ. ಇದರ ಜೊತೆಗೆ, ರಾಜ್ಯ ಸರ್ಕಾರದ ವಿಶೇಷ ಸುಸ್ಥಿರ ಬೆಳೆ ನಿರ್ವಹಣಾ ಯೋಜನೆಯಡಿ, ಬೆಳಗಾವಿ ಜಿಲ್ಲೆಯೊಂದರಲ್ಲೇ 1,000 ಹೆಕ್ಟೇರ್ ಕಬ್ಬು ಬೆಳೆಯುವ ಪ್ರದೇಶದಲ್ಲಿ ಹೊಸದಾಗಿ ಸೂಕ್ಷ್ಮ ನೀರಾವರಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ, ಎಂದು ಸಚಿವರು ಮಾಹಿತಿ ನೀಡಿದ್ದಾರೆಂದು ಸಂಸದ ಈರಣ್ಣ ಕಡಾಡಿ ಅವರು ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ಸಕಲ ಸಿದ್ಧತೆ



- 24100 ಬಾಲಕರು, 21498 ಬಾಲಕಿಯರು
- 131 ಪರೀಕ್ಷಾ ಕೇಂದ್ರ,2134 ಕೊಠಡಿ
- ಸಿಸಿಟಿವಿ ಅಳವಡಿಕೆ, ಅಕ್ರಮಕ್ಕೆ ಕಡಿವಾಣ

• **ಚಿಕ್ಕೋಡಿ:** ಮಾ.18ರಿಂದ ಏ.2 ರವರೆಗೆ ನಡೆಯುವ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1ಕ್ಕೆ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಶೈಕ್ಷಣಿಕ ಜಿಲ್ಲೆಯಲ್ಲಿ 240 ಸರ್ಕಾರಿ, 152 ಅನುದಾನಿತ ಹಾಗೂ 229 ಅನುದಾನರಹಿತ ಪ್ರೌಢಶಾಲೆಗಳು ಇದ್ದು, 45598 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಚಿಕ್ಕೋಡಿ ಡಿಡಿಪಿಐ ಆರ್ ಎಸ್ ಸೀತಾರಾಮು ತಿಳಿಸಿದರು.

ಪಟ್ಟಣದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯದಲ್ಲಿ ಸೋಮವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 39 ಕ್ಲಸ್ಟರ್ ಹಾಗೂ 92 ನಾನ್ ಕ್ಲಸ್ಟರ್ ಸೇರಿದಂತೆ ಒಟ್ಟು 131 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಹೊಸದಾಗಿ, ಪುನರಾವರ್ತಿತ ಹಾಗೂ ಖಾಸಗಿ ಸೇರಿದಂತೆ 24100 ಬಾಲಕರು ಹಾಗೂ 21498 ಬಾಲಕಿಯರು ಪರೀಕ್ಷೆ ಎದುರಿಸಲಿದ್ದಾರೆ. 131 ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ, ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದರು. ಪರೀಕ್ಷಾ ಕೇಂದ್ರಕ್ಕೆ 2134 ಕೊಠಡಿಗಳನ್ನು ಬಳಸಿಕೊಳ್ಳಲಾಗುತ್ತಿದೆ. , 131 ಸ್ಥಾನಿಕ ಜಾಗೃತ ದಳ, 65 ಉಪಅಧೀಕ್ಷಕರುನ್ನು ನೇಮಿಸಲಾಗಿದೆ. ಒಟ್ಟು 48 ರೂಟ್ ಗಳು ಇದ್ದು, ಜಿಲ್ಲಾ ಹಂತದಲ್ಲಿ 4 ಹಾಗೂ ತಾಲ್ಲೂಕು ಹಂತದಲ್ಲಿ 24 ಸ್ಕ್ವಾಡ್ ತಂಡಗಳನ್ನು ನಿಯೋಜನೆ ಮಾಡಲಾಗಿದೆ. 23 ಜನ ವೆಬ್ ಕಾಸ್ಟಿಂಗ್ ವೀಕ್ಷಕರನ್ನು ನೇಮಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಚಿಕ್ಕೋಡಿ ಡಯಟ್ ಪ್ರಾಚಾರ್ಯ ಸಂಜು ಹುಲ್ಲೋಳ್ಳಿ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ನೋಡಲ್ ಅಧಿಕಾರಿ ಹರಿದಾಸ ಖಾಡೆ, ರಾಜು ದೇವಋಷಿ ಇದ್ದರು.

ಎಸ್ಸೆಸ್ಸೆಲ್ಸಿ : 427 ವಿದ್ಯಾರ್ಥಿಗಳು

• **ಕುಡಚಿ:** ಪಟ್ಟಣದ ಜುನ್ನೇದಿಯಾ ಪ್ರೌಢಶಾಲೆಯಲ್ಲಿ ಜರುಗಲಿರುವ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರ ಕೊಠಡಿ ಮೇಲ್ವಿಚಾರಕರಿಗೆ ಪರೀಕ್ಷಾ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿತ್ತು.

ಪರೀಕ್ಷೆಗಳನ್ನು ಸುಗಮವಾಗಿ ಪಾರದರ್ಶಕವಾಗಿ ಹಾಗೂ ಪರೀಕ್ಷಾ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ನಡೆಸಲು ಪರೀಕ್ಷಾ ಮಂಡಳಿಯವರು ನೀಡಿರುವ ಮಾರ್ಗದರ್ಶನದಂತೆ ನಡೆಸಬೇಕೆಂದು ಮುಖ್ಯ ಅಧೀಕ್ಷಕರಾದ ಐ. ಎನ್.ಪಟೇಲ ಅವರು ಎಲ್ಲ ಕೊಠಡಿ ಮೇಲ್ವಿಚಾರಕರಿಗೆ ಮಾರ್ಗದರ್ಶನ ನೀಡಿದರು.

ಈ ಬಾರಿ ಪರೀಕ್ಷಾ ಕೇಂದ್ರದಲ್ಲಿ 18 ಬ್ಲಾಕ್ ಗಳಲ್ಲಿ 427 ಪರೀಕ್ಷಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದು, ಇದರಲ್ಲಿ 8 ಪರೀಕ್ಷಾರ್ಥಿಗಳು ವಿಶೇಷ ಚೇತನ ಮಕ್ಕಳಿದ್ದು, ಅವರಿಗೆ ಅನುಕೂಲವಾಗುವ ದೃಷ್ಟಿಯಿಂದ ನೆಲಮಹಡಿಯಲ್ಲಿ ಆಸನದ ವ್ಯವಸ್ಥೆ ಮಾಡಲಾಗುವುದು.



ಉಪ ಮುಖ್ಯ ಅಧೀಕ್ಷಕರಾದ ಫರೀದಾ ಬಾಗಸಿರಾಜ, ಪ್ರಶ್ನೆ ಪತ್ರಿಕೆ ಕಸ್ಟೋಡಿಯನ ಮೋಪಗಾರ ಹಾಗು 25 ಜನ ಕೊಠಡಿ ಮೇಲ್ವಿಚಾರಕರು ಸಭೆಗೆ ಉಪಸ್ಥಿತರಿದ್ದರು.

ಪರೀಕ್ಷೆಗಳು ಸುಗಮ ಹಾಗು ಶಾಂತಿಯೂತವಾಗಿ ನಡೆಸಲು ಬೆಳಗಾವಿ ಜಿಲ್ಲೆಯ ಎಲ್ಲ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಜಿಲ್ಲಾಧಿಕಾರಿಗಳು ಬೆಳಗಾವಿ ಅವರು ನಿಷೇಧಾಜ್ಞೆಯನ್ನು ಜಾರಿಗೊಳಿಸಿದ್ದಾರೆ ಎಂದು ಪರೀಕ್ಷಾ ಅಧೀಕ್ಷಕ ಐ.ಎನ.ಪಟೇಲ ತಿಳಿಸಿದರು.

ಭಯ ರಹಿತವಾಗಿ ಪರೀಕ್ಷೆ ಎದುರಿಸಿ

• **ಅಥಣಿ:** ಪ್ರತಿಯೊಬ್ಬ ವಿದ್ಯಾರ್ಥಿಯು ಭಯ ರಹಿತವಾಗಿ ಯಶಸ್ವಿಯಾಗಿ ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆಯುವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಎಂದು ತಹಶಿಲ್ದಾರ ಸಿದರಾಯ ಭೋಸಗಿ ಹೇಳಿದರು.

ಅವರು ಸ್ಥಳೀಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಿಇಒ ಎಂ.ಆರ್. ಮುಂಜೆ ಮಾತನಾಡಿ, ಅಥಣಿ ತಾಲೂಕಿನಲ್ಲಿ 2025-26 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಗಳು ಮಾ.18ರಿಂದ ಎ.2ರವರೆಗೆ ಜರುಗಲಿವೆ. ಈ ಬಾರಿಯ ಎಸ್ ಎಸ್ ಎಲ್ ಸಿ ಪರೀಕ್ಷೆಯನ್ನು ಒಟ್ಟು 6590 ವಿದ್ಯಾರ್ಥಿಗಳು ಬರೆಯುತ್ತಿದ್ದು 3247ಹೆಣ್ಣು , 3343 ಗಂಡು ಮಕ್ಕಳು ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. 21 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲಿದ್ದಾರೆ. ತಾಲೂಕಿನಾದ್ಯಂತ 21 ಪರೀಕ್ಷಾ ಕೇಂದ್ರಗಳಿದ್ದು, ಎಲ್ಲ ಪರೀಕ್ಷಾ ಕೇಂದ್ರಗಳಿಗೆ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಶಿವಾನಂದ ಕಲ್ಲಾಪುರ, ಸಿಪಿಐಯ್ ಸಂತೋಷ ಹಳ್ಳೂರ್ ,ನಿಜಗುಣಿ ಕೇರಿ, ಎ ಬಿ ಗೂಳಿರ್ಥ, ಶಿಕ್ಷಣ ಸಂಯೋಜಕ ಪರೀಕ್ಷಾ ನೋಡಲ್ ಅಧಿಕಾರಿ ಸಾವನ್ ಗಸ್ತಿ, ಎಂ ವಿ ನಾಮದಾರ , ಕ್ಷೇತ್ರ ಸಮನ್ವಯ ಅಧಿಕಾರಿ ಗೌಡಪ್ಪ ಖೋತ, ಸಮೂಹ ಸಂಪನ್ಮೂಲ ಅಧಿಕಾರಿ ಸಂಜೀವ ತೇಲಿ ಉಪಸ್ಥಿತರಿದ್ದರು.



ರೇಣುಕಾಚಾರ್ಯರ ಸಿದ್ಧಾಂತ ಅಳವಡಿಸಿಕೊಳ್ಳೋಣ

• **ಚನ್ನಮ್ಮನ ಕಿತ್ತೂರು:** ಎಲ್ಲರೂ ಜಗದ್ಗುರು ರೇಣುಕಾಚಾರ್ಯರರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಗಂದಿಗವಾಡದ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ಜಂಗಮ ಸಮಾಜದ ಸಹಯೋಗದಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಜಂಗಮರು ತಮ್ಮ ಮೂಲ ಧರ್ಮವನ್ನು ಮರೆಯುತ್ತಿದ್ದಾರೆ. ಅದಕ್ಕೆ ಕಡಿವಾಣ ಹಾಕಿ ಧರ್ಮದ ಬಗ್ಗೆ ತಿಳಿದುಕೊಂಡು ನಮ್ಮ ಮುಂದಿನ ಪೀಳಿಗೆಗೆ ಧರ್ಮದ ಬಗ್ಗೆ ತಿಳಿಸುವ ಕೆಲಸವನ್ನು ಮಾಡಿ ಎಂದರು.

ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳರಾಜಯೋಗಿಂದ್ರ ಸ್ವಾಮೀಜಿ, ಹಿಡಕಲ್‌ದ ಪ್ರಭು ಅಡವೀಸಿದ್ದೇಶ್ವರ ಸ್ವಾಮೀಜಿ, ಕಲ್ಲಸುತಗಟ್ಟಿಯ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಜಾರಕಿಹೊಳಿ ಕಾಡಸಿದ್ದೇಶ್ವರ ಮಠದ ಕೃಪಾನಂದ ಸ್ವಾಮೀಜಿ, ಬೈಲಹೊಂಗಲದ ಡಿ ವಾಯ್ ಎಸ್ ಪಿ ಡಾ. ವೀರಯ್ಯ ಹಿರೇಮಠ ಮಾತನಾಡಿದರು.



ಬೈಲಹೊಂಗಲ ಡಿವಾಯ್ ಎಸ್‌ಪಿ ಡಾ. ವೀರಯ್ಯ ಹಿರೇಮಠ, ನಿವೃತ್ತ ನೌಕರ ಕಲ್ಲಯ್ಯ ಪತ್ರಿಮಠ, ವಿದ್ಯಾರ್ಥಿನಿಯರಾದ ಕಿತ್ತೂರಿನ ಪೂಜಾ ಪರಸನಟ್ಟಿ, ಎಮ್ ಕೆ ಹುಬ್ಬಳ್ಳಿಯ ಚಿನ್ಮಯ ಗಂಗಾಧರಮಠ, ಹೊನ್ನಿದಿಬ್ಬದ ಕೀರ್ತಿ ಬೋಗೂರ, ಮುಂತಾದವರನ್ನು ಸನ್ಮಾನಿಸಲಾಯಿತು.

ಇದಕ್ಕೂ ಪೂರ್ವದಲ್ಲಿ ರಾಷ್ಟ್ರೀಯ ಹೆದ್ದಾರೆ ಪಕ್ಕದ ಚನ್ನಮ್ಮಾಜಿ ವರ್ತುಗಳದಲ್ಲಿ ರೇಣುಕಾಚಾರ್ಯರ ಭಾವ ಚಿತ್ರದ ಹಾಗೂ ಜ್ಯೋತಿಯ ಮರೆವಣಿಗೆಯು 101 ಕುಂಭ ಹೊತ್ತ ಮಹಿಳೆಯರ, ವಿವಿಧ ವಾದ್ಯ ಮೇಳಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಯ ಮೂಲಕ ಸಾಗಿ ಕೊನೆಗೆ ವೀರಭದ್ರೇಶ್ವರ ದೇವಸ್ಥಾನ ತಲುಪಿತು.

ಮುಖಂಡರಾದ ಚನಬಸಯ್ಯ ಹಿರೇಮಠ, ಡಾ. ಎಮ್ ಎಸ್ ಕಲ್ಮಠ, ಪ್ರಭು ಪಾಟೀಲ, ಸುರೇಶ ಮುರಡಿಮಠ, ವೀರೇಶ ಹಿರೇಮಠ, ಕಲ್ಲಯ್ಯ ಪತ್ರಿಮಠ, ಈಶ್ವರ ಹಾಲ್ಮಠ, ಕಿರಣ ವಾಳದ, ಆನಂದ ನರೇಂದ್ರಮಠ, ಅಜ್ಜಯ್ಯ ಹಿರೇಮಠ, ಬಸಯ್ಯ ಪೂಜೇರ ಸತೀಶ ಕಂಬಾಳಿಮಠ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗುಣಮಟ್ಟದ ವಿದ್ಯುತ್ ಪೂರೈಕೆ ಸಂಘದ ಉದ್ದೇಶ

• **ಸಂಕೇಶ್ವರ :** ತೋಟದ ಮನೆಗಳಿಗೆ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವುದು ಸಂಘದ ಚುನಾವಣೆಯ ಮುಖ್ಯ ಉದ್ದೇಶವಾಗಿತ್ತು ಎಂದು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ನಿರ್ದೇಶಕರಾದ ಪೃಥ್ವಿ ಕತ್ತಿ ಹೇಳಿದರು.



ಸಮೀಪದ ಅಂಕಲೆ, ನಿಡಸೋಸಿ ಮತ್ತು ಅಮ್ಮಣಗಿ ಗ್ರಾಮಗಳಲ್ಲಿ ಹೆಚ್ಚುವರಿಯಾಗಿ ಅಳವಡಿಸಿದ 63 ಕೆವಿ ಸಾಮರ್ಥ್ಯದ ನೂತನ 5 ಟಿ.ಸಿಗಳನ್ನು ಉದ್ಘಾಟಿಸಿ ಮಾತನಾಡಿದ ಅವರು ತಾಲೂಕಿನ ಸುಮಾರು15,000 ಮನೆಗಳಿಗೆ ನಿರಂತರ ಜ್ಯೋತಿ ಯೋಜನೆ ಜಾರಿಗೊಳಿಸುವ ಉದ್ದೇಶ ನಮ್ಮ ಆಡಳಿತ ಮಂಡಳಿಯವರದಾಗಿದೆ ಎಂದರು.

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷರಾದ ಮಹಾವೀರ ನಿಲಜಗಿ ಅವರು ನೂತನ ಟಿ.ಸಿ ಉದ್ಘಾಟಿಸಿ ಮಾತನಾಡಿ, ಹೆಚ್ಚುವರಿಯಾಗಿ ಟಿ.ಸಿ ಗಳು ಬೇಕು ಎಂದು ಜನರ ಬೇಡಿಕೆಯಾಗಿತ್ತು ಅದರಂತೆ ತಾಲೂಕಿನ ಗ್ರಾಮಗಳಲ್ಲಿ ಬರುವ ದಿನಗಳಲ್ಲಿ ತೋಟಪಟ್ಟಿ ಪ್ರದೇಶದಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ಹಂತ-ಹಂತವಾಗಿ ಹಮ್ಮಿಕೊಳ್ಳಲಾಗುವುದು ಎಂದರು.

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ನಿರ್ದೇಶಕರಾದ ವಿನಗೌಡ ಪಾಟೀಲ ಮಾತನಾಡಿ, ಸಂಘದ ಚುನಾವಣೆಯಲ್ಲಿ ಜನರ ಆಶೀರ್ವಾದದಿಂದ ನಮ್ಮ ಅಧಿಕಾರ ಸಿಕ್ಕಿದ್ದು, ಗ್ರಾಹಕರ ಯಾವುದೇ ಸಮಸ್ಯೆಗಳಿದರು ಆಡಳಿತ ಮಂಡಳಿಯ ಗಮನಕ್ಕೆ ತನ್ನಿ ಕೂಡಲೇ ಸ್ಪಂದಿಸಲಾಗುವು ಎಂದರು.

ಅಂಕಲೆ ಗ್ರಾಮದಲ್ಲಿ ನೂತನ ಎರಡು ಟಿ.ಸಿ. ಹಾಗೂ ಭರತ್ ಪುಂಡೆ ಇವರ ಮನೆಯ ಹತ್ತಿರ ದಾರಿದೀಪ ಉದ್ಘಾಟನೆ ಮತ್ತು ನಿಡಸೋಸಿ ಗ್ರಾಮದಲ್ಲಿ ಎರಡು ಮತ್ತು ಅಮ್ಮಣಗಿ ಗ್ರಾಮದಲ್ಲಿ ಒಂದು ಟಿ.ಸಿಯನ್ನು ಉದ್ಘಾಟನೆಗೊಳಿಸಲಾಯಿತು.

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ನಿರ್ದೇಶಕರಾದ ಶಿವಾನಂದ ಮುಡಶಿ, ಗಜಾನನ ಕ್ವಳ್ಳಿ, ಅಂಕಲೆ ಪಿಕೆಪಿಎಸ್ ಅಧ್ಯಕ್ಷ ಜಿ.ಆರ್.ಪಾಟೀಲ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ, ಭರತ ಪುಂಡೆ,ಮುಖಂಡರಾದ ಸುಭಾಷ್ ಕಾಸರರ್ಕ, ಸಂದೀಪ ದವಡತೆ, ಆಕಾಶ ಜರಳಿ, ಶಶಿಕಾಂತ ಗೊಡಶೆ, ಅಂಗತ ಜರಳಿ, ಅರ್ಜುನ ಘಸ್ತಿ ಹಾಜರಿದ್ದರು.

ಕಿರುಸುದ್ದಿ

ಮಾರುತೇಶ್ವರ ಮೂರ್ತಿಗೆ ವಿಶೇಷ ಪೂಜೆ



• **ಬೀಳಗಿ:** ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಮಾರುತೇಶ್ವರ ಮೂರ್ತಿಗೆ ಮರುಶಾಂತಿ ಮಾಡಿದ್ದರ ಅಂಗವಾಗಿ ಪ್ರಾಣ ಪ್ರತಿಷ್ಠಾಪನೆ ನೆರವೇರಿತು. ಬಾಗಲಕೋಟೆಯ ಸಚಿನ್ ಕೃಷ್ಣಭಟ್ ಜೋಶಿ ಮತ್ತು ಸಂಗಡಿಗರಿಂದ ಮನ್ಯು ಸೂಕ್ತ ಹೋಮ, ದೇವತಾ ಪ್ರತಿಷ್ಠಾಪನೆ ಹೋಮ, ಕಲಾಕರ್ಷಣ ಹೋಮ, ಮಹಾಮೃತ್ಯುಂಜಯ ಹೋಮ ಹವನಗಳು ಜರುಗಿದವು. ಮಾರುತೇಶ್ವರನಿಗೆ ಅಭಿಷೇಕ, ಅಲಂಕಾರ, ವಿಶೇಷ ಪೂಜೆ, ಗೋಪಾಲ ಪೂಜೆ ನೆರವೇರಿಸಲಾಯಿತು. ಭಕ್ತಾದಿಗಳು ಕಾಯಿ ಕರ್ಪೂರ, ನೈವೇದ್ಯ ಅರ್ಪಿಸಿದರು. ಭಕ್ತಾದಿಗಳಿಗೆ ಹೂರಣದ ಹೋಳಿಗೆ ಮಹಾಪ್ರಸಾದ ಸೇವಿಸಿ ಪುನೀತರಾದರು. ಮುಚಖಂಡಿ ಮತ್ತು ಚಿಕ್ಕಾಲಗುಂಡಿ ಗ್ರಾಮಗಳ ಭಜನಾ ಮೇಳದ ಕಲಾವಿದರಿಂದ ಶಿವಭಜನೆ ಕಾರ್ಯಕ್ರಮದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ಮೆಡಿಕಲ್ ಕಾಲೇಜ್ ನಿರ್ಮಾಣ ಉಪಚುನಾವಣೆಯ ಗಿಮಿಕ್: ಚರಂತಿಮಠ



• **ಬಾಗಲಕೋಟೆ:** ಸಿಎಂ ಸಿದ್ದರಾಮಯ್ಯ ಈ ಮೊದಲು ಅಧಿಕಾರದಲ್ಲಿದ್ದಾಗ ಸರ್ಕಾರಿ ವೈದ್ಯಕೀಯ ಕಾಲೇಜ್ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡದೇ ಉಪಚುನಾವಣೆ ಘೋಷಣೆ ಎರಡು ದಿನ ಇರುವಾಗ ಬಂದು ಶಂಕುಸ್ಥಾಪನೆ ನೆರವೇರಿಸಿರುವುದು ಉಪಚುನಾವಣೆಯ ಗಿಮಿಕ್ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಗಂಭೀರ ಆರೋಪ ಮಾಡಿದರು. ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾಯಿತ ಪ್ರತಿನಿಧಿಯೂ ಅಲ್ಲ, ಆಡಳಿತಕ್ಕೂ ಸಂಬಂಧ ಇಲ್ಲದ ವ್ಯಕ್ತಿಯೊಬ್ಬ ಇಂಗ್ ಪತ್ರ ಕೊಟ್ಟ ದಿನವೇ ಛತ್ರಪತಿ ಶಿವಾಜಿ ಹಾಗೂ ಬಸವೇಶ್ವರ ಮೂರ್ತಿ ಪ್ರತಿಷ್ಠಾಪನೆಗೆ ತಲಾ 40 ಲಕ್ಷ ರೂ. ನೀಡುವುದನ್ನು ನೋಡಿದರೆ ಇದೊಂದು ಉಪಚುನಾವಣೆಯ ಗಿಮಿಕ್ ಅಲ್ಲದೇ ಬೇರೆ ಏನು ಎಂದು ಅವರು ಪ್ರಶ್ನಿಸಿದರು. ಛತ್ರಪತಿ ಶಿವಾಜಿ ಮಹಾರಾಜರು, ಬಸವೇಶ್ವರ ಮೂರ್ತಿ ಪ್ರತಿಷ್ಠಾಪನೆಗೆ ಈಗಾಗಲೇ ಜಾಗವನ್ನು ಸಹ ಗುರುತಿಸಲಾಗಿದೆ. ನಗರಸಭೆ ಇತರೆ ಇಲಾಖೆ ಪರವಾನಿಗೆ ಕೊಟ್ಟಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಅದಕ್ಕೆ ಅನುಮತಿ ನೀಡಲಿಲ್ಲ. ಮರಾಠ ಸಮುದಾಯದವರು ಶಿವಾಜಿಯವರ ಮೂರ್ತಿ ಮತ್ತು ಸಂಬಂಧಿಸಿದ ಬಸವೇಶ್ವರ ಮೂರ್ತಿ ಸಿದ್ಧವಾಗಿದೆ ಕೇವಲ ಮೂರ್ತಿ ಪ್ರತಿಷ್ಠಾಪನೆಗೆ ಅನುಮತಿ ನೀಡಲು ಕೇಳಿದರೆ ಇದುವರೆಗೆ ನೀಡಿಲ್ಲ. ಎರಡೂ ಸಮುದಾಯಕ್ಕೆ ಅಪಮಾನವನ್ನು ಸರ್ಕಾರ ಮಾಡಿದೆ. ನಮಗೆ ದುಡ್ಡು ಬೇಕಾಗಿಲ್ಲ ಮೂರ್ತಿ ಪ್ರತಿಷ್ಠಾಪನೆಗೆ ಅನುಮತಿ ಕೊಡಿ. ಅದನ್ನು ಬಿಟ್ಟು ಈಗ ಚುನಾವಣೆಯ ಗಿಮಿಕ್ ಮಾಡುವುದು ಎಲ್ಲರಿಗೂ ಅರ್ಥ ಆಗುತ್ತಿದೆ ಎಂದರು. ಸತ್ಯನಾರಾಯಣ ಹೇಮಾದ್ರಿ, ಜಿ.ಎನ್.ಪಾಟೀಲ, ಸುರೇಶ ಕೊಣ್ಣೂರ, ಬಸವರಾಜ ಹುನಗುಂದ ಪತ್ರಿಕಾಗೋಷ್ಠಿಯಲ್ಲಿದ್ದರು.

ಕಳ್ಳರ ಹಾವಳಿ: ಆತಂಕ

• **ಜಮಖಂಡಿ:** ಹೊರ ಬಡಾವಣೆ ಸೇರಿ ನಗರದಲ್ಲಿ ನಾಲ್ಕಾರು ಕಳ್ಳರ ತಂಡವು ತಡರಾತ್ರಿಯಲ್ಲಿ ಬೀಗ ಮುರಿದು ಕಳ್ಳತನ ಮಾಡಿರುವ ಘಟನೆಗಳು ಹೆಚ್ಚುತ್ತಿದ್ದು, ಜನರು ಭಯಭೀತರಾಗಿದ್ದಾರೆ. ಕೆಲ ಕಡೆಗಳಲ್ಲಿ ಕಳ್ಳರ ಗ್ಯಾಂಗ್ ಮುಖಕ್ಕೆ ಮಂಕಿ ಕ್ಯಾಫ್ ಧರಿಸಿಕೊಂಡು ಕೈಯಲ್ಲಿ ಕಬ್ಬಿಣದ ಸಲಾಕೆ ಹಿಡುಕೊಂಡ ಮನೆ-ಮನೆಗಳಿಗೆ ತಿರುಗಾಡುತ್ತಾ ಮನೆಯ ಮುಂದಿನ ಗೇಟ್‌ಗಳನ್ನು ತೆಗೆದು ಮನೆಗಳನ್ನು ಕಳ್ಳತನ ಮಾಡುತ್ತಿರುವ ತಂಡ ಗಲ್ಲಿಗಳಲ್ಲಿ ತಿರುಗಾಡುತ್ತಿದ್ದಾರೆ. ಕಳ್ಳರ ತಂಡವು ತಿರುಗಾಡುವ ದೃಶ್ಯಾವಳಿಗ ಚಿತ್ರಗಳು ಸಿಸಿ ಕ್ಯಾಮರಾಗಳಲ್ಲಿ ಸೆರೆಯಾಗಿದ್ದು. ಅದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ವಿಡಿಯೋಗಳನ್ನು ನೋಡಿದ ಪ್ರತಿಯೊಂದು ಗಲಿಯ ಜನರು ಭಯಭೀತಗೊಂಡಿದ್ದಾರೆ. ನಸುಕಿನ ಜಾವದಲ್ಲಿ ಮುಸ್ಲಿಂ ಸಮಾಜದವರು ನಮಾಜ ಮಾಡಲು ಮಸೀದಿಗೆ ಹೋಗಲು ಹಿಂಜರಿಯುತ್ತಿದ್ದಾರೆ. ತಡರಾತ್ರಿಯಲ್ಲಿ ಮಹಿಳೆಯೊಬ್ಬಳು ಮನೆಯ ಮುಂದೆ ಇರುವ ನಾಯಿಯ ಚಿರಾಟವನ್ನು ಕೇಳಿ ಎದ್ದು ಹೊರಗೆ ಬಂದು ನೋಡಿದರೆ ನಾಲ್ಕಾರು ಕಳ್ಳರ ತಂಡ ಮನೆಯ ಬಾಗಿಲಿನಲ್ಲಿ ನಿಂತಿರುವದನ್ನು ಕಂಡು ಮಹಿಳೆಯೊಬ್ಬಳು ಹೆದರಿ ಬಾಗಿಲವನ್ನು ಹಾಕಿಕೊಂಡು ಪಕ್ಕದ ಮನೆಯವನ್ನು ಕೂಗಿ ಕರೆದಿದ್ದಾಳೆಂದು ಜನರು ಹೇಳುತ್ತಿದಾರೆ. ಈ ಕಳ್ಳರ ಗ್ಯಾಂಗ್ ನೋಡಿದ ಜನತೆ ಭಯಭೀತಗೊಂಡಿದ್ದಾರೆ. ಪೋಲಿಸರು ರಾತ್ರಿ ಸಮಯದಲ್ಲಿ ಹೆಚ್ಚು ನಿಗಾವಹಿಸಬೇಕೆಂದು ತಮ್ಮ ಅಳಲು ತೊಡಿಕೊಂಡಿದ್ದಾರೆ.



ಬಾದಾಮಿ: ನಗರದ ಸರ್ಕಾರಿ ಪ್ರೌಢಶಾಲೆಗೆ ತಹಶೀಲ್ದಾರ್ ಎಸ್.ಎಫ್.ಬೊಮ್ಮನ್ನವರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಅವರು ಭೇಟಿ ನೀಡಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿ ಶುಭ ಕೋರಿದರು. ನಂತರ ಡಾ.ಬಿ.ಆರ್.ಅಂಬೇಡ್ಕರ ವಸತಿ ನಿಲಯಕ್ಕೆ ಭೇಟಿ ನೀಡಿ ಎಲ್ಲ ಮಕ್ಕಳನ್ನು ಒಗ್ಗೂಡಿಸಿ ಮಕ್ಕಳಿಗೆ ಶುಭ ಹಾರೈಸಿದರು. ಪ್ರೌಢಶಾಲೆ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಬಿಎಸ್ ಅಬ್ಬಿಗೇರಿ ಹಾಜರಿದ್ದರು.

ಪುರೋಹಿತ ಪ್ರತ್ಯೇಕ ಮಂಡಳಿಗೆ ಮನವಿ

• **ಜಮಖಂಡಿ:** ಸಾಮಾಜಿಕ ಭದ್ರತಾ ಮಂಡಳಿ ಕಾರ್ಮಿಕ ಇಲಾಖೆಯಲ್ಲಿ ಪುರೋಹಿತ ವರ್ಗಕ್ಕೆ ಪ್ರತ್ಯೇಕ ಮಂಡಳಿ ರಚನೆಗೆ ಒತ್ತಾಯಿಸಿ ಮುಖ್ಯಮಂತ್ರಿಗಳ ಪುರೋಹಿತ ಸಂಘದಿಂದ ತಹಶೀಲ್ದಾರ್ ಅನಿಲ ಬಡಿಗೇರಗೆ ಮನವಿ ಸಲ್ಲಿಸಿದರು.

ಸಂಸ್ಥೆಯು ರಾಜ್ಯದ 31 ಜಿಲ್ಲೆಗಳಲ್ಲಿ ಇದ್ದು ಸಾವಿರಾರು ಅರ್ಚಕರು ಪುರೋಹಿತರು, ಅಡಿಗೆಯವರು ಇದ್ದಾರೆ. ಒಟ್ಟು ಅವರ ಕುಟುಂಬದ ಸದಸ್ಯರೆಲ್ಲರೂ ಎಂಟು ಲಕ್ಷಕ್ಕಿಂತ ಹೆಚ್ಚು ಸದಸ್ಯರು ಇದ್ದಾರೆ. ಇತ್ತೀಚೆಗೆ ರಾಜ್ಯ ಸರ್ಕಾರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಪುರೋಹಿತರು ಅರ್ಚಕರು ಅಡಿಗೆಯವರನ್ನು ಗುರುತಿಸಿ ಲೇಬರ್ ಕಾರ್ಡ್ ಸಿಗುವಂತೆ ವ್ಯವಸ್ಥೆ ಪ್ರತ್ಯೇಕ ಮಂಡಳಿ ರಚನೆ ಮಾಡಿದರೆ ರಾಜ್ಯದ 8 ಲಕ್ಷಕ್ಕೂ ಹೆಚ್ಚು ಮಾಡಿದ್ದಾರೆ. ಹೆಚ್ಚಿನ ಅನುದಾನ ಪಡೆಯಲು ಜನ ಸದಸ್ಯರುಗಳ ಕುಟುಂಬಕ್ಕೆ ತುಂಬಾ ಅನುಕೂಲವಾಗಲಿದೆ ಎಂದರು.

ಶೀಘ್ರದಲ್ಲಿ ಪ್ರತ್ಯೇಕ ಮಂಡಳಿ ರಚನೆ ಮಾಡಿ ಈ ಸಂಸ್ಥೆಯ ನಮ್ಮ ರಾಜ್ಯಾಧ್ಯಕ್ಷ ಡಾ.ಜೆ. ಶ್ರೀನಿವಾಸ ಮೂರ್ತಿಯವರನ್ನು ಪ್ರತ್ಯೇಕ ಮಂಡಳಿಯಲ್ಲಿ ಅಧ್ಯಕ್ಷರನ್ನಾಗಿ ಮಾಡಿ ಸತೀಶ ಸಿಂಹ ಎಚ್.ಎಸ್ ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಿಕೊಟ್ಟರೆ ರಾಜ್ಯದ 8 ಲಕ್ಷಕ್ಕೂ ಹೆಚ್ಚಿನ ಕುಟುಂಬಗಳಿಗೆ ತುಂಬಾ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ತಾಲೂಕಾಧ್ಯಕ್ಷ ವೆಂಕಣ್ಣಾಚಾರ್ಯ ಅಧ್ಯಾಪಕ, ಮುಕುಂದಾಚಾರ್ಯ ನಾಮಣ್ಣಾ, ಪ್ರಸಾದ ಗೋಠೆ, ಶ್ರೀನಿವಾಸ ಮನಗೂಳಿ, ಪ್ರವೀಣ ಕುಲಕರ್ಣಿ, ಅಶೋಖಾಚಾರ್ಯ ಮೈಗೂರ ಸೇರಿದಂತೆ ಇತರರು ಇನ್ನಿತರರಿದ್ದರು.



ಜಮಖಂಡಿ: ಸಾಮಾಜಿಕ ಭದ್ರತಾ ಮಂಡಳಿ ಕಾರ್ಮಿಕ ಇಲಾಖೆಯಲ್ಲಿ ಪುರೋಹಿತ ವರ್ಗಕ್ಕೆ ಪ್ರತ್ಯೇಕ ಮಂಡಳಿ ರಚನೆಗೆ ಒತ್ತಾಯಿಸಿ ಮುಖ್ಯಮಂತ್ರಿಗಳ ಪುರೋಹಿತ ಸಂಘದಿಂದ ತಹಶೀಲ್ದಾರ್ ಅನಿಲ ಬಡಿಗೇರಗೆ ಮನವಿ ಸಲ್ಲಿಸಿದರು. ತಾಲೂಕಾಧ್ಯಕ್ಷ ವೆಂಕಣ್ಣಾಚಾರ್ಯ ಅಧ್ಯಾಪಕ, ಮುಕುಂದಾಚಾರ್ಯ ನಾಮಣ್ಣಾ, ಪ್ರಸಾದ ಗೋಠೆ, ಶ್ರೀನಿವಾಸ ಮನಗೂಳಿ, ಪ್ರವೀಣ ಕುಲಕರ್ಣಿ, ಅಶೋಖಾಚಾರ್ಯ ಮೈಗೂರ ಸೇರಿದಂತೆ ಇತರರು ಇನ್ನಿತರರಿದ್ದರು.

ಬಾಗಲಕೋಟೆ ಕ್ಷೇತ್ರಕ್ಕೆ ಉಪ ಚುನಾವಣೆ | ರಾಜಕೀಯ ಪಕ್ಷಗಳ ಜೊತೆ ಸಭೆ

ಮಾದರಿ ನೀತಿ ಸಂಹಿತೆ ಪಾಲಿಸಿ: ಡಿಸಿ

• **ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆ ಹಿನ್ನಲೆಯಲ್ಲಿ ಜಾರಿಯಾದ ಮಾದರಿ ನೀತಿ ಸಂಹಿತೆಯನ್ನು ಎಲ್ಲ ರಾಜಕೀಯ ಪಕ್ಷಗಳು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಧಿಕಾರಿಗಳು ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಅವರು ತಿಳಿಸಿದರು.



ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿಂದು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆಗೆ ಅಧಿಸೂಚನೆ ಹೊರಡಿಸಿದ ಹಿನ್ನಲೆಯಲ್ಲಿ ಭಾರತ ಚುನಾವಣಾ ಆಯೋಗವು ಜಾರಿಗೊಳಿಸಿದ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವದರ ಜೊತೆಗೆ ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಸಲು ಎಲ್ಲರು ಸಹಕರಿಸಬೇಕೆಂದು ತಿಳಿಸಿದರು.

ಚುನಾವಣಾ ವೇಳಾ ಪಟ್ಟಿಯಂತೆ ಮಾ.16ರಂದು ಚುನಾವಣೆಗೆ ಅಧಿಸೂಚನೆ ಹೊರಡಿಸಲಾಗಿದ್ದು, ನಾಮಪತ್ರ ಸಲ್ಲಿಕೆಗೆ ಮಾ.23ರಂದು ಕೊನೆಯ ದಿನವಾಗಿದೆ. ಮಾ.24ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಮಾರ್ಚ 26 ಕೊನೆಯ ದಿನವಾಗಿದೆ. ಎ.9ರಂದು ಮತದಾನ ನಡೆಯಲಿದ್ದು, ಮತಏಣಿಕೆ ಮೇ 4ರಂದು ನಡೆಯಲಿದೆ. ಚುನಾವಣೆ ಪ್ರಕ್ರಿಯೆ ಮುಕ್ತಾಯವಾಗುವವರೆಗೂ ಮಾದರಿ ನೀತಿ ಸಂಹಿತೆಯು ಜಾರಿಯಲ್ಲಿರುತ್ತದೆ ಎಂದು ತಿಳಿಸಿದರು.

ಎಂಸಿಸಿ ಜಿಲ್ಲಾ ನೋಡಲ್ ಅಧಿಕಾರಿ ಆಗಿರುವ ಜಿಪಂ ಸಿಇಓ ಶಶಿಧರ ಕುರೇರ್ ಮಾತನಾಡಿ, ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷದವರು ಸಭೆ, ರ್‍ಯಾಲಿ, ವಾಹನಗಳಿಗೆ, ತಾತ್ಕಾಲಿಕ ಪಕ್ಷದ ಕಚೇರಿಗೆ, ಧ್ವನಿವರ್ಧಕಗಳಿಗೆ, ಹೆಲಿಪ್ಯಾಡ ಹಾಗೂ ಹೆಲಿಕ್ಯಾಪ್ಟರ ಪರವಾನಿಗೆ ಕೋರಿ ಸುವಿಧಾ ಅಡಿ ಅರ್ಜಿ ಸಲ್ಲಿಸಿ, ಅನುಮತಿ ಪಡೆಯಬಹುದಾಗಿದೆ. ನೀತಿ ಸಂಹಿತೆಗೆ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ಬಾಗಲಕೋಟೆ ತಹಶೀಲ್ದಾರ್ ವಾಸುದೇವ ಸ್ವಾಮಿ, ಹುನಗುಂದ ತಹಶೀಲ್ದಾರ ಡಾ.ಪ್ರದೀಪಕುಮಾರ ಸೇರಿದಂತೆ ವಿವಿಧ ರಾಜಕೀಯ ಪಕ್ಷದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಬಾಗಲಕೋಟೆ ಅಭಿವೃದ್ಧಿಗೆ ಬಿಜೆಪಿ ಗೆಲ್ಲಿಸೋಣ

• **ಬಾಗಲಕೋಟೆ:** ಬಿಜೆಪಿ ಅವಧಿಯಲ್ಲಿಯೇ ಬಾಗಲಕೋಟೆ ಅಭಿವೃದ್ಧಿ ಕಂಡಿದ್ದು, ಮತಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಬಿಜೆಪಿ ಗೆಲ್ಲಿಸೋಣ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ನವನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಸೋಮವಾರ ನಡೆದ ಪದಗ್ರಹಣ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವೀರಣ್ಣ ಚರಂತಿಮಠ ಅವರ ಶಾಸಕರಾಗಿದ್ದ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿದೆ. ಅವರ ಅವಧಿಯಲ್ಲಿ ಬಿಟಿಡಿಎ ದಿಂದ ಮುಳಗಡೆ ಫಲಾನುಭವಿಗಳಿಗೆ, ಬಾಡಿಗೆದಾರರಿಗೆ, ವಯಸ್ಕರ ಮಕ್ಕಳಿಗೆ ಸೇರಿ 2270ಕ್ಕೂ ಹೆಚ್ಚು ಹಕ್ಕು ಪತ್ರಗಳ ವಿತರಣೆ ಮಾಡಿದ್ದರು. 118.97 ಕೋಟಿ ರೂ.ಗಳ ಅನುದಾನದಲ್ಲಿ ಬಾಗಲಕೋಟೆ ನಡುಗಡ್ಡೆ ಕಿಲ್ಲಾ ಪ್ರದೇಶದ 1057 ಮನೆಗಳು(11/ಎ ಆಗಿದೆ) ಭೂಸ್ವಾಧೀನ ಪುನರ್ವಸತಿಗೆ ಚಾಲನೆ ಕೂಡ ಅವರ ಕಾಲದಲ್ಲಿಯೇ ಆಗಿದೆ ಎಂದರು.

ಪ್ರಪ್ರಥಮವಾಗಿ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ(ಬುಡಾ) ಸ್ಥಾಪನೆ ಮಾಡಿದ್ದು ಹಾಗೂ ಬಾಗಲಕೋಟೆ ನಗರಸಭೆಯನ್ನು 2ರಿಂದ ಗ್ರೇಡ್ 1ಕ್ಕೆ ಮೇಲ್ದರ್ಜೆಗೆ ತಂದಿದ್ದು ಚರಂತಿಮಠರು. ಸಾವಿರಾರು ಕೋಟಿ ರೂ.ಗಳ ಅನುದಾನ ತಂದು ಕ್ಷೇತ್ರ ಅಭಿವೃದ್ಧಿಪಡಿಸಿದ್ದಾರೆ ಎಂದರು.

ಮಾಜಿ ಶಾಸಕ ವೀರಣ್ಣ ಚರಂತಿಮಠ ಮಾತನಾಡಿ, ನಮ್ಮ ಅಭಿವೃದ್ಧಿ ಕೆಲಸಗಳೇ ನಮಗೆ ಶ್ರೀರಕ್ಷೆ. ಸಮಾಜದಲ್ಲಿ ಮನುಷ್ಯ ಶಾಶ್ವತನಲ್ಲ, ಆತ ಮಾಡಿದ ಅಭಿವೃದ್ಧಿ ಕಾರ್ಯಗಳು ಶಾಶ್ವತವಾಗಿರುತ್ತವೆ. ಈ ಚುನಾ ವಣೆಯಲ್ಲಿ ಕಾರ್ಯಕರ್ತರ ಶಕ್ತಿಯೊಂದಿಗೆ ಬಿಜೆಪಿ ಗೆಲ್ಲಿಸೋಣ ಎಂದರು.

ಜಿಪಂ ಮಾಜಿ ಅಧ್ಯಕ್ಷ ಹೂವಪ್ಪ ರಾಠೋಡ, ಬಾಗಲಕೋಟೆಗೆ ಮೊತ್ತೊಮ್ಮೆ ಅವಕಾಶ ಒದಗಿ ಬಂದಿದ್ದು, ಬಿಜೆಪಿ ಗೆಲ್ಲಿಸುವ ಮೂಲಕ ಸಾರ್ಥಕಗೊಳಿಸೋಣ ಎಂದರು.

ಜಿಪಂ ಮಾಜಿ ಸದಸ್ಯ ರಂಗನಗೌಡ ಗೌಡರ, ಪ್ರಭುಸ್ವಾಮಿ ಸರಗಣಾಚಾರಿ, ಬಸವರಾಜ ಯಂಕಂಚಿ, ರಾಜು ನಾಯ್ಕರ, ಸುರೇಶ ಕೋಣ್ಣೂರ, ಬಸವರಾಜ ಹುನಗುಂದ, ಕಾವೇರಿ ರಾಠೋಡ, ಮುತ್ತು ಲಮಾಣಿ, ಗಂಗಾರಾ ಚವ್ಹಾಣ, ಅಶೋಕ ಪೂಜಾರಿ, ಸೋಮುಸಿಂಗ ಲಮಾಣಿ ಇದ್ದರು.

ಜಿಲ್ಲಾ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ನೂತನವಾಗಿ ಆಯ್ಕೆಯಾದ ದೀಲೀಪ್ ರಾಠೋಡ ಅವರಿಗೆ ಬಿಜೆಪಿ ಧ್ವಜ ನೀಡಿ ಪದಗ್ರಹಣ ಮಾಡಲಾಯಿತು. ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ಸೇರ್ಪಡೆಗೊಂಡರು.



ಸಾರ್ವಜನಿಕರ ಗಂಭೀರ ಆರೋಪ: ವೈದ್ಯಾಧಿಕಾರಿ ಹುದ್ದೆಯಿಂದ ಶೆಟ್ಟರ ಬಿಡುಗಡೆ

• **ಬಾದಾಮಿ:** ಸರ್ಕಾರಿ ತಾಲೂಕು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ವಿ.ಕೆ.ಶೆಟ್ಟರ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ (ಡಿಎಚ್‌ಒ) ಮಂಜುನಾಥ ಡಿ.ಎನ್ ಆದೇಶ ಹೊರಡಿಸಿದ್ದಾರೆ.



ತಾಲೂಕಾಸ್ಪತ್ರೆಯಲ್ಲಿ ಔಷಧ ಖಾಲಿ: ಲಕ್ಷಾಂತರ ರೂ. ಅನುದಾನ ದುರ್ಬಳಕೆ ಆರೋಪ

ಡಾ.ವಿ.ಕೆ.ಶೆಟ್ಟರ ಅವರ ಮೇಲೆ ಅನುದಾನ ದುರ್ಬಳಕೆ, ಸಾರ್ವಜನಿಕರ ಜೊತೆಗೆ ಸರಿಯಾಗಿ ವರ್ತನೆ ಇಲ್ಲದಿರುವುದು, ಪತ್ರಕರ್ತನಿಗೆ ಅಶ್ಲೀಲ ಪದ ಬಳಕೆ ಮಾಡಿ ಸಾರ್ವಜನಿಕರಿಂದ ಗಂಭೀರ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಹುದ್ದೆ ಯಿಂದ ಬಿಡುಗಡೆಗೊಳಿಸಿ ಡಿಎಚ್‌ಒ ಮಂಜುನಾಥ ಆದೇಶ ಹೊರಡಿಸಿದ್ದಾರೆ.

ಹೊಸ ದಿಗಂತ ಪತ್ರಿಕೆಯು ತಾಲೂಕಾ ಆಡಳಿತ ವೈದ್ಯಾಧಿಕಾರಿಯಿಂದ ಸರ್ಕಾರಿ ಆಸ್ಪತ್ರೆಯಲ್ಲಿ ಲಕ್ಷಾಂತರ ರೂ. ಅನುದಾನ ದುರ್ಬಳಕೆ ಆಗಿರುವ ಕುರಿತಾಗಿ ವಿಶೇಷ ವರದಿ ಪ್ರಕಟಿಸಿತ್ತು.

ಮಹಿಳೆ ಶಕ್ತಿ ಸ್ವರೂಪಿಣಿಯಾಗಲಿ: ಸವದಿ

• **ಮಹಾಲಿಂಗಪುರ:** ಮಹಿಳೆಯರು ರಂಭೆ, ಊರ್ವಶಿರಾಗುವ ಬದಲು ಸೀತೆ, ದ್ರೌಪದಿ, ಚನ್ನಮ್ಮ, ಓಬವ್ವರಾಗಬೇಕು. ಹನುಮ-ಭೀಮರಿಗೆ ಜನ್ಮ ನೀಡಿದ ಮಹಿಳೆ ಹೇಗೆ ಅಬಲವಾಗುತ್ತಾಳೆ. ಭಾರತೀಯರಾದ ನಾವು ನಾವಾಗಿರಬೇಕು, ಜಗತ್ತಿನ ಶ್ರೇಷ್ಠ ಸಂಸ್ಕೃತಿ ನಮ್ಮದು, ದುಷ್ಟ ಶಕ್ತಿಗಳು ಮತ್ತು ನಗರ ನಕ್ಸಲರನ್ನು ಮಟ್ಟ ಹಾಕಲು ಮಹಿಳೆ ಶಕ್ತಿ ಸ್ವರೂಪಿಣಿಯಾಗಬೇಕು ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಸ್ಥಳೀಯ ಟೋಣಪಿನಾಥ ಸಾಂಸ್ಕೃತಿಕ ಭವನದಲ್ಲಿ ತೇರದಾಳ ಮತಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಶಕ್ತಿಸ್ವರೂಪಿಣಿಯಾದ ಮಹಿಳೆ ಸಭ್ಯ ಉಡುಗೆ ತೊಡುಗೆ ತೊಟ್ಟು, ಕುಂಕುಮ, ಕಿವಿಯೋಲೆ ಧರಿಸಿ ಮಕ್ಕಳಿಗೂ ನಮ್ಮ ಸನಾತನ ಸಂಸ್ಕೃತಿ ಕಲಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಿಳಾ ಮೋರ್ಚಾ ಗ್ರಾಮೀಣ ಘಟಕದ ಅಧ್ಯಕ್ಷೆ ಸ್ನೇಹಲ್ ಅಂಗಡಿ ಮಾತನಾಡಿ, ಕಾಳಿ, ಜಗತ್ತಿನಲ್ಲಿ ಮಹಿಳೆಯನ್ನು ಗೌರವದಿಂದ ಪೂಜಿಸುವ ಏಕೈಕ ದೇಶ ನನ್ನ ಭಾರತ. ದೇಶಧರ್ಮ ರಕ್ಷಣೆಗಾಗಿ ಮಹಿಳೆಯರು ಸಾಕಷ್ಟು ತ್ಯಾಗ ಮಾಡಿದ್ದಾರೆ. ಇಡೀ ಜಗತ್ತನ್ನು ಸಂರಕ್ಷಿಸುವ ಅನ್ನಪೂರ್ಣೆಯಾಗಬೇಕು, ಅವಳ ದುಡಿಮೆಗೆ ಮನ್ನಣೆ ಸಿಗಬೇಕು ಎಂದರು.

ವಿದ್ಯಾ ವಿದ್ಯಾಧರ ಸವದಿ ಮಾತನಾಡಿ, ಮಹಿಳೆಯರು ಸಾಹಿತ್ಯ, ಸಂಗೀತ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ರಾಜಕೀಯ ಹೀಗೆ ಸರ್ವ ರಂಗಗಳಲ್ಲೂ ಸಾಧನೆಗೈದು ಬಾಹ್ಯಾಕಾಶದವರೆಗೂ ಜಿಗಿದು ಬಾಹ್ಯ ಸೌಂದರ್ಯ ಶಕ್ತಿಗಿಂತ, ಅಂತರಂಗ ಶಕ್ತಿಯೇ ಶ್ರೇಷ್ಠ ಎಂಬುದನ್ನು ಸಾಬೀತು ಮಾಡಿ ಪುರುಷನಿಗೆ ಸಮಾನವಾಗಿ ನಿಂತಿದ್ದಾಳೆ ಎಂದರು.

ಹೈಕೋರ್ಟ್ ನ್ಯಾಯವಾದಿ ರೇಖಾ ಪಾಟೀಲ ಉಪನ್ಯಾಸ ನೀಡಿದರು. ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ಡಾ.ವಿಜಯಲಕ್ಷ್ಮಿ ತುಂಗಳ ಮಾತನಾಡಿದರು. ರಾಜ್ಯ ಕಾರ್ಯಕಾರಿಣಿ ಸದಸ್ಯೆ ಸವಿತಾ ಹೊಸೂರ, ವಿದ್ಯಾಧರ ಸವದಿ, ವೈಷ್ಣವಿ ಬಾಗೇವಾಡಿ, ಸುಜಾತ ಶಿಂಧೆ, ಪವಿತ್ರಾ ತುಕ್ಕನ್ನವರ, ಮೀನಾಕ್ಷಿ ಸವದಿ, ಸಾವಿತ್ರಿ ಬಾಬಗೌಡ, ಸುರೇಶ ಅಕ್ಕಿವಾಟ, ಮಹಾಲಿಂಗಪ್ಪ ಕುಳ್ಳೊಳ್ಳಿ, ಶಂಕರಗೌಡ ಪಾಟೀಲ, ಮಲ್ಲು ದಲಾಲ, ಬಾಬಗೌಡ ಪಾಟೀಲ, ಧರೆಪ್ಪ ಉಳ್ಳಾಗಡ್ಡಿ, ಮಹಾಲಿಂಗಪ್ಪ ಸನದಿ, ಶೇಖರ ಅಂಗಡಿ ಮಹಾನಂದ ಹೊರಟ್ಟಿ, ಕವಿತಾ ಮಡಿವಾಳ, ಶ್ರೀಶೈಲ ಬೀಳಗಿ, ಸುವರ್ಣಾ ಆಸಂಗಿ, ಸುವರ್ಣಾ ಕೊಪ್ಪದ, ಕಾಳವ್ವ ಕೇದಾರಿ, ವಿಜಯಲಕ್ಷ್ಮಿ ಕುಳ್ಳೊಳ್ಳಿ, ಪತ್ರಕರ್ತ ನಾರನಗೌಡ ಉತ್ತಂಗಿ, ಶಿಕ್ಷಕಿ ಪ್ರೀತಿ ಕಲ್ಯಾಣಿ, ಕವಿತಾ ಸುಣಧೋಳಿ, ಸವಿತಾ ಚಮಕೇರಿ ಇದ್ದರು.



ಶಾಲೆಗಳು ವ್ಯಕ್ತಿತ್ವ ನಿರ್ಮಿಸುವ ದೇವಾಲಯ: ಗುರುರಾಜ

• **ಬೀಳಗಿ:** ಶಾಲೆ ಎಂದರೆ ಕೇವಲ ವಿದ್ಯೆ ಕಲಿಸುವ ಸ್ಥಳವಲ್ಲ, ವ್ಯಕ್ತಿತ್ವ ನಿರ್ಮಾಣ ಮಾಡುವ ದೇವಾಲಯ. ವಿದ್ಯಾರ್ಥಿಗಳು ಸತ್ಯನಿಷ್ಠೆ, ಪರಿಶ್ರಮ ಮತ್ತು ಉತ್ತಮ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ವಿಶ್ರಾಂತ ಪ್ರಾಚಾರ್ಯ ಗುರುರಾಜ ಸುಳ್ಳದ ಹೇಳಿದರು.



ತಾಲೂಕಿನ ಕಾತರಕಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಮುಖ್ಯೋಪಾಧ್ಯಾಯ ಎಸ್.ಎಚ್.ನಾಯಕ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಎಸ್ಸೆಸ್ಸೆಲ್ಸಿ ಮಹತ್ವದ ಹಂತವಾಗಿದ್ದು, ಪರಿಶ್ರಮ, ಶಿಸ್ತು ಮತ್ತು ಗುರಿಯ ಮೇಲೆ ನಂಬಿಕೆ ಇದ್ದರೆ ಯಶಸ್ಸು ಖಚಿತ. ಶಿಕ್ಷಣ ಜೀವನ ರೂಪಿಸುವ ಶಕ್ತಿಯಾಗಿದೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಹಂಪಣ್ಣ ಎನ್.ಅಂಗಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳ ಶ್ರಮ ಮತ್ತು ಶಿಕ್ಷಕರ ಮಾರ್ಗದರ್ಶನದ ಫಲವಾಗಿ ಶಾಲೆ ಸದಾ ಉತ್ತಮ ಫಲಿತಾಂಶ ಗಳಿಸುತ್ತಿದೆ. ಗುರುಗಳ, ಪೋಷಕರ ಬೆಂಬಲ ಇದ್ದರೆ ಭವಿಷ್ಯ ಉಜ್ವಲವಾಗುತ್ತದೆ ಎಂದು ತಿಳಿಸಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ. ಸಾವಕಾರ ಮಾತನಾಡಿ, ಪಾಲಕರು ಮಕ್ಕಳಿಗೆ ಉನ್ನತ ಶಿಕ್ಷಣದ ಜೊತೆಗೆ ನಡೆ ನುಡಿಗಳನ್ನು ಕಲಿಸಿಕೊಡಬೇಕು. ವರ್ಗದ ಕೊಠಡಿಯಲ್ಲಿ ಶಿಕ್ಷಕರು ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿ, ಮಾನವೀಯ ಮೌಲ್ಯಗಳ ಕುರಿತು ಅಗತ್ಯ ಮಾರ್ಗದರ್ಶನ ಮಾಡಬೇಕು ಎಂದು ಹೇಳಿದರು.

ಶಿಕ್ಷಕ ಎ.ಎಚ್.ನಾವಲಗಿ, ಶಿಕ್ಷಕಿ ಮಹೇಶ್ವರಿ ಕೋಟಿ ಮಾತನಾಡಿದರು. ಗ್ರಾಪಂ ಮಾಜಿ ಅಧ್ಯಕ್ಷ ಎಸ್.ಎಸ್.ಕೆರಕಲಮಟ್ಟಿ, ಬಿ.ಟಿ.ಕೆರಕಲಮಟ್ಟಿ, ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಮಹಾಂತೇಶ ಸುಳ್ಳದ, ಗಿರಿಯಪ್ಪ ನುಚ್ಚಿನ, ಪಿ.ಬಿ.ಮೇಟಿ, ಪಾಂಡು ಸೊನ್ನದ, ರಾಚಣ್ಣ ಜೀರಗಾಳ, ಶಿವಪ್ಪ ಕೆರಕಲಮಟ್ಟಿ, ಪಡಿಯಪ್ಪ ಭೂಷಣ್ಣವರ, ವಿಠ್ಠಲ ಕೆರಕಲಮಟ್ಟಿ, ನೀಲಪ್ಪ ಬಳೂಲದ, ರಾಮಣ್ಣ ಬಡಿಗೇರ, ಹಣಮಂತ ಕೆರಕಲಮಟ್ಟಿ, ರಾಜು ಅವಟಿ, ವೀಣಾ ನಾಯಿಕ, ಐ.ಕೆ.ಬಾಗವಾನ, ಎಂ.ಎಲ್.ಸಜ್ಜನ ಮತ್ತಿತರಿದ್ದರು.

ಮಕ್ಕಳ ಮಾಹಿತಿ ಸಂಗ್ರಹಣೆಗೆ ಪ್ರಶಸ್ತಾ ಆ್ಯಪ್ ಬಳಕೆ: ಕೊಡಗಲಿ

• **ಬಾದಾಮಿ:** ಪ್ರಶಸ್ತಾ ಆಪ್ 2.0 ಇದರಲ್ಲಿ ವಿಕಲಚೇತನ ಮಕ್ಕಳು ಸಹಿತ ಎಲ್ಲ ಮಕ್ಕಳನ್ನು ಇಂದೀಕರಿಸುವ ಮೂಲಕ ಎಲ್ಲರಿಗೂ ಗುಣಾತ್ಮಕ ಶಿಕ್ಷಣ ನೀಡಬೇಕು ಎಂದು ಇಲಕಲ್ ಡಯಟ್ ಉಪನ್ಯಾಸಕ ಅಶೋಕ ಕೊಡಗಲಿ ಹೇಳಿದರು.



ನಗರದ ತಾಪಂ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಇಲಕಲ್ ಡಯಟ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಬಾದಾಮಿ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪ್ರಶಸ್ತಾ ಆಪ್ 2.00 ತರಬೇತಿ ಕಾರ್ಯಾಗಾರಮ ಉದ್ಘಾಟಿಸಿ ಮಾತನಾಡಿದರು.

ಉಪನ್ಯಾಸಕ ಎ.ಎಸ್.ಕಬ್ಬರದ ಮಾತನಾಡಿ, ಪ್ರಶಸ್ತಾ ಆ್ಯಪ್ ಕುರಿತು ಮಾಹಿತಿ ನೀಡಿದರು. ಎಲ್ಲರೂ ಕೆಲಸದ ಒತ್ತಡ ಇದ್ದು, ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ನಾವು ಕೆಲಸ ಮಾಡುತ್ತಿದ್ದೇವೆ. ಸಾಮಾನ್ಯ ಮಕ್ಕಳೊಂದಿಗೆ ವಿಕಲಚೇತನ ಮಕ್ಕಳು ಸಹಿತ ಸಮನ್ವಯ ಶಿಕ್ಷಣ ಪಡೆಯಲಿ. ಆಪ್ ಮೂಲಕ ಮಾಹಿತಿ ಸಂಗ್ರಹ ಮಾಡಲಾಗುತ್ತಿದೆ ಎಂದು ಹೇಳಿದರು.

ಕ್ಷೇತ್ರ ಸಮನ್ವಯಾಧಿಕಾರಿ ಎಂ.ಬಿ.ದೊಡ್ಡಪ್ಪನ್ನವರ ಮಾತನಾಡಿ, ಸಾಮಾನ್ಯ ಮಕ್ಕಳ ಜೊತೆಗೆ ವಿಕಲಚೇತನ ಮಕ್ಕಳ ಬಗ್ಗೆ ಕಾಳಜಿ ವಹಿಸಬೇಕು. 21 ವಿಕಲತೆಗಳಲ್ಲಿ ಯಾವುದಾದರೂ ಒಂದು ವಿಕಲತೆ ಹೊಂದಿದ್ದರ ಬಗ್ಗೆ ಯುಡಿಐಡಿ ಕಾರ್ಡ ಹೊಂದಿರಬೇಕು. ಅರ್ಹ ವಿಕಲಚೇತನ ಮಕ್ಕಳು ಇದ್ದರೂ ವೈದ್ಯಕೀಯ ಪ್ರಮಾಣಪತ್ರ, ಯುಡಿಐಡಿ ಕಾರ್ಡ ಇರದಿದ್ದರೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಹೊಸದಾಗಿ ಕಾರ್ಡ ಮಾಡಿಸಬೇಕು ಎಂದು ಪಾಲಕರಿಗೆ ತಿಳುವಳಿಕೆ ನೀಡಬೇಕು ಎಂದು ಸಲಹೆ ನೀಡಿದರು.

ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಿ.ಎಫ್.ಕುಂಬಾರ ಹಾಜರಿದ್ದರು. ಬಿಐಇಆರ್‌ಟಿ ಎಸ್.ಎಸ್.ಚೌಕದ ಕಾರ್ಯಕ್ರ ನಿರೂಪಿಸಿದರು. ಪ್ರಶಸ್ತಾ ಆಪ್ ತರಬೇತಿ ಕಾರ್ಯಾಗಾರದಲ್ಲಿ ತಾಲೂಕಿನ ಪ್ರಾಥಮಿಕ, ಪ್ರೌಢಶಾಲೆ ಮುಖ್ಯಶಿಕ್ಷಕರು ಉಪಸ್ಥಿತರಿದ್ದರು.

ಸಾಕ್ಷ್ಯ ಚಿತ್ರಗಳ ಮೂಲಕ ಬೋಧನೆ ಮಾಡಿ

• **ಜಮಖಂಡಿ:** ಮಕ್ಕಳಿಗೆ ಸಾಕ್ಷ್ಯ ಚಿತ್ರಗಳ ಮೂಲಕ ಪಾಠ ಭೋಧನೆ ಮಾಡಿದರೆ ಹೆಚ್ಚಿನ ಜ್ಞಾನ ಸಂಗ್ರಹವಾಗುವುದು. ಪಾಠ ಬೋಧನೆ ಸರಳವಾಗುತ್ತದೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ಹೇಳಿದರು.



ಸ್ಥಳೀಯ ಓಲೇಮಠದ ಆವರಣದಲ್ಲಿ ಶಾಲಾ ಶಿಕ್ಷಣ ಇಲಾಖೆ ಯ್‌ಐಎಫ್‌ಎಲ್ ಸಮಸ್ತ ಹಣಕಾಸು ಸಂಸ್ಥೆ ಹಾಗೂ ಪ್ರಜ್ಞಾ ಪೌಂಡೇಶನ್ ಸಹಯೋಗದಲ್ಲಿ ಡಿಜಿಟಲ್ ಸ್ಮಾರ್ಟ ತರಗತಿ ಯೋಜನೆಯ ಕೊಠಡಿ ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಮಕ್ಕಳಿಗೆ ತಂತ್ರಜ್ಞಾನ ಹೊಸ ಆವಿಷ್ಕಾರಗಳ ಬಗ್ಗೆ ಪಾಠ ಭೋಧನೆ ಅವಶ್ಯವಾಗಿದೆ. ಖಾಸಗಿ ಶಾಲೆಗಳಿಗೆ ಸರಿಸಮಾನವಾಗಿ ಸರ್ಕಾರಿ ಶಾಲೆಗಳಲ್ಲಿ ಸ್ಮಾರ್ಟ್‌ಕ್ಲಾಸ್‌ಗಳ ಮೂಲಕ ಪಾಠ ಭೋಧನೆ ಮಾಡುತ್ತಿರುವದು ಒಳ್ಳೆಯ ಬೆಳವಣಿಗೆ ಎಂದರು.

ಸರ್ಕಾರ ಪಠ್ಯ ಪುಸ್ತಕ ಸಮವಸ್ತ್ರ ಬಿಸಿಯೂಟ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ನೀಡುತ್ತಿದೆ. ಅದರ ಜೊತೆಗೆ ಸಂಘ ಸಂಸ್ಥೆಗಳು ಇಂತಹ ಮಹತ್ತರ ಯೋಜನೆಗಳನ್ನು ಸರ್ಕಾರಿ ಶಾಲೆಗಳಿಗೆ ನೀಡುತ್ತಿರುವುದರಿಂದ ಅಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುವುದರ ಜೊತೆಗೆ ಶಾಲೆಗಳು ಅಭಿವೃದ್ಧಿ ಹೊಂದುತ್ತಿವೆ ಎಂದರು.

ಪದನಿಮಿತ್ತ ಉಪನಿರ್ದೇಶಕರು ಅಭಿವೃದ್ಧಿ ಹಾಗೂ ಡಯಟ್ ಇಲಕಲ್ ಕಾಲೇಜಿನ ಪ್ರಾಂಶುಪಾಲ ಸಲೀಂ ಪಾಷಾ, ಕ್ಷೇತ್ರ ಶಿಕ್ಷಣಾದಿಕಾರಿ ಎ.ಕೆ.ಬಸಣ್ಣವರ, ಬೆಂಗಳೂರಿನ ಐಐಎಫ್‌ಎಲ್ ಪ್ರಾದೇಶಿಕ ವ್ಯವಸ್ಥಾಪಕ ರಾಮನಗೌಡ, ಪ್ರಜ್ಞಾ ಪೌಂಡೇಶನದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಓಲೇಮಠದ ಆನಂದ ದೇವರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಬಾಗೇನವರ ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಅಶ್ರಫಲಿ ಖಾದ್ರಿ, ಇಕ್ತಿಯಾರ ಅವಟಿ, ಬಿಆರ್‌ಸಿಒ ಕಾಡೇಶ ಕೋಲೂರ, ಬಿ.ಆರ್.ಪಿ ಶಿವು ಯಾದವಾಡ, ಮುಖ್ಯಗುರು ಎಂ.ಎ.ಅತ್ತಾರ, ಐ.ಐ.ಎಫ್‌ಎಲ್ ಸಂಸ್ಥೆಯ ಶಬ್ಬಿರ ಪಟೇಲ, ದಾವುದ ಕಾಶಿನಾಥ, ಪರಶುರಾಮ ಬಾಲಪ್ಪಾ, ಯಮನೂರ, ಮಹಾದೇವ, ಮುಖ್ಯಗುರು ಎನ್.ಆರ್ ಕುಲಕರ್ಣಿ, ಶಿಕ್ಷಕ ಎನ್.ಬಿ ಮಾಲಗಾರ ಇದ್ದರು.

ಬಡ ಕುಟುಂಬಕ್ಕೆ ದಿನಸಿ ಕಿಟ್ ವಿತರಣೆ

• **ಲೋಕಾಪುರ:** ಪಟ್ಟಣದ ಬಳ್ಳೊಳ್ಳಿ ಹೋಲ್ ಸೇಲ್ ವ್ಯಾಪಾರಸ್ಥ ರಫೀಕ ಗುಳೇದಗುಡ್ಡ ರಂಜಾನ್ ಹಬ್ಬದ ನಿಮಿತ್ತ 250 ಬಡ ಕುಟುಂಬಗಳಿಗೆ ರಂಜಾನ್ ಹಬ್ಬದ ಕಿಟ್ ವಿತರಿಸಿದರು. ಕಿಟ್ ವಿತರಣೆ ಮಾಡಿ ಮಾತನಾಡಿದ ರಫೀಕ ಗುಳೇದಗುಡ್ಡ, ಸಮಾಜದಲ್ಲಿ ಎಲ್ಲರೂ ಸಮಾನತೆಯಿಂದ ಬದುಕಬೇಕು. ಇರುವವರು ಇಲ್ಲದವರಿಗೆ ಸಹಾಯ ಮಾಡಬೇಕು. ಸಮಾನತೆಯಿಂದ ಎಲ್ಲರೂ ಹಬ್ಬ ಆಚರಣೆ ಮಾಡಲು ಸಹಾಯದ ಅವಶ್ಯಕತೆ ಇರುವ 250 ಮಂದಿ ಬಡವರನ್ನು ಗುರುತಿಸಿ ಅಡಿಗೆ ಪದಾರ್ಥಗಳ ಕಿಟ್ ವಿತರಣೆ ಮಾಡುತ್ತಿದ್ದೇವೆ ಎಂದು ತಿಳಿಸಿದರು. ಅಂಜುಮನ್ ಇಸ್ಲಾಂ-ಎ-ಕಮೀಟಿ ಅಧ್ಯಕ್ಷ ಹಸನ್‌ಡೋಂಗ್ರಿ ಮಹಾಲಿಂಗಪುರ ಮಾತನಾಡಿ, ಮಾನವೀಯತೆಯ ಸೇವೆಯತ್ತ ಒಂದು ಹೆಜ್ಜೆ ಸದಾ ಮುಂದೆ ಎಂಬ ಸಂದೇಶ ರಫೀಕ ಗುಳೇದಗುಡ್ಡ ಮಾಡಿದ್ದಾರೆ. ಬಡವರಿಗೆ ಕಿಟ್ ವಿತರಣೆ ಮಾಡಿದ್ದು ಸಹಾಯ ಸಹಕಾರದಿಂದ ಸಾಧ್ಯ ಎಂದರು. ನಬಿಸಾಬ ಇಂಗಳಗಿ ಮಾತನಾಡಿ, ನಿರ್ಗತಿಕರ ಕಷ್ಟಗಳಿಗೆ ಸ್ಪಂದಿಸಲು ಅವರನ್ನು ಸಂತೋಷಪಡಿಸುವ ಇಂತಹ ಕಾರ್ಯಗಳು ಹೆಚ್ಚೆಚ್ಚು ಜರುಗಲಿ ಎಂದು ಆಶಿಸಿ, ದಾನ ನೀಡಿದ ಗುಳೇದಗುಡ್ಡ ಕುಟುಂಬಕ್ಕೆ, ಪ್ರೀತಿ ಪಾತ್ರರಿಗೆ ಆರೋಗ್ಯ, ಆಯುಸ್ಸು, ಸಂಪತ್ತನ್ನು ನೀಡಲಿ ಪ್ರಾರ್ಥಿಸಿದರು. ಸೈಯದ ಇಂಗಳಗಿ, ನಬಿಸಾಬ ಇಂಗಳಗಿ, ಸುಲ್ತಾನ ಕಲಾದಗಿ, ಬಾಪು ಬದಾಮಿ, ಗೈಬು ಜಮಖಂಡಿ, ಅಬೂಬಕರ್ ಭಂಟನೂರ ಮುಸ್ಲಿಂ ಸಮಾಜದ ಯುವಕರು ಇದ್ದರು.



ಮಹಿಳೆಗೆ ಮಾತೃ ಸ್ಥಾನ ನೀಡಿದ್ದು ಭಾರತ: ಪರಾಂಡೆ

• **ಬಾಗಲಕೋಟೆ:** ಮಹಿಳೆಯರ ಮಾತೃತ್ವ ಶಕ್ತಿ ದೊಡ್ಡದಾಗಿದ್ದು, ಜಗತ್ತಿನಲ್ಲಿ ಮಹಿಳೆಗೆ ಮಾತೃಸ್ಥಾನ ನೀಡಿ ಗೌರವಿಸಿದ್ದು ಭಾರತ ಎಂದು ನ್ಯಾಯವಾದಿ ಸೋನಿಯಾ ಪರಾಂಡೆ ಹೇಳಿದರು.



ನಗರದ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದ ಮಹಿಳಾ ಮೋರ್ಚಾದಿಂದ ಬಿವಿವಿ ಸಂಘದ ಮಿನಿ ಸಭಾಭವನದಲ್ಲಿ ಹಮ್ಮಿಕೊಂಡ ವಿಶ್ವ ಮಹಿಳಾ ದಿನಾಚರಣೆ ಹಾಗೂ ಸಾಧಕಿಯರಿಗೆ ಸನ್ಮಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಮಾತನಾಡಿ, ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಬಂದ ಮೇಲೆ ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಿ, ಅವರಿಗೆ ಪ್ರೋತ್ಸಾಹ ಗೌರವ ಹೆಚ್ಚಿಸುವಲ್ಲಿ ಅನೇಕ ಯೋಜನೆಗಳ ತಂದಿದ್ದಾರೆ. ವಿಶ್ವದಲ್ಲಿ ಭಾರತೀಯ ಮಹಿಳೆಯರ ಮಾತೃತ್ವ ಶಕ್ತಿ ದೊಡ್ಡದು. ಇಂದು ಎಲ್ಲಡೆ ಮಹಿಳೆಯರ ಗೌರವ ಹೆಚ್ಚಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಗರ ಮಂಡಲದ ಮಹಿಳಾ ಮೋರ್ಚಾ ಅಧ್ಯಕ್ಷ ಶಶಿಕಲಾ ಮಜ್ಜಗಿ ಮಾತನಾಡಿ, ಇಂದು ಮಹಿಳೆಯರ ಸರ್ವಾಂಗೀಣ ಬೆಳವಣಿಗೆಯೊಂದಿಗೆ ಅವರ ಭದ್ರತೆಗೆ ಪ್ರಧಾನಿ ನರೇಂದ್ರ ಮೋದಿಯವರು ಆದ್ಯತೆ ನೀಡಿರುವುದು ಸ್ವಾಗತಾರ್ಹ. ಮಹಿಳೆಯರು ಹೆಚ್ಚು ಸಂಘಟಿತರಾಗಿ ನೈತಿಕ ಗುಣಮಟ್ಟ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷೆ ಭಾಗೀರತಿ ಪಾಟೀಲ ಹಾಗೂ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸುಮೇದಾ ಮಾನೆ, ರಾಜ್ಯ ಕಾರ್ಯದರ್ಶಿ ಭಾಗ್ಯಾ ಉದ್ನೂರ, ಜಿಲ್ಲಾ ಕಾರ್ಯದರ್ಶಿ ಪಾರ್ವತಿ ಹುಗ್ಗಿ, ಮಹಿಳಾ ಗ್ರಾಮೀಣ ಮಂಡಲ ಅಧ್ಯಕ್ಷೆ ಸವಿತಾ ಪಾತ್ರೋಟ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಜಾತ ಶಿಂಧೆ ನಾಗರತ್ನಾ ಒಕ್ಕಲಕುಂಟಿ, ಲಕ್ಷ್ಮೀ ಮಡಿವಾಳರ, ಸುನಂದಾ ಹಿರೇಮಠ, ಶೋಭಾ ರಾವ್, ರೇಖಾ ಕಲಬುರಗಿ, ಸರಸ್ವತಿ ಕುರಬರ, ಶಿವಲೀಲಾ ಪಟ್ಟಣಶೆಟ್ಟಿ, ಪ್ರೇಮಾ ಅಂಬಿಗೇರ ಉಪಸ್ಥಿತರಿದ್ದರು. ರಾಷ್ಟ್ರ ಪ್ರಶಸ್ತಿ ವಿಜೇತೆ ಗುರುಮ್ಮ ಸಂಕೀನಮಠ ಹಾಗೂ ಕ್ರೀಡೆಯಲ್ಲಿ ಸಾಧನೆ ಮಾಡಿದ ಮಹಿಳಾ ಕ್ರೀಡಾಪಟುಗಳಿಗೆ ಸನ್ಮಾನಿಸಲಾಯಿತು.

ಕಿರುಸುದ್ದಿ



ವಿಜಯಪುರ: ನಗರ ಹೊರ ವಲಯ ಅಲ್-ಅಮೀನ್ ಆಸ್ಪತ್ರೆ ಎದುರಿನ ಹವಾಲ್ದಾರ್ ಕಾಲೋನಿಯ ಲಕ್ಷ್ಮೀ ದೇವಸ್ಥಾನದಲ್ಲಿ 3ನೇ ವರ್ಷದ ಜಾತ್ರಾ ಮಹೋತ್ಸವ ನಿಮಿತ್ತ ಸಾಮೂಹಿಕ ಲಲಿತ ಸಹಸ್ರ ನಾಮಾವಳಿ ಪಠಣ, ಕುಂಕುಮಾರ್ಚನೆ ಹಮ್ಮಿಕೊಳ್ಳಲಾಯಿತು.

ಇಂದು ಪೂರ್ವಭಾವಿ ಸಭೆ

ಬಸವನಬಾಗೇವಾಡಿ: ಎ.5ರಂದು ಆಚರಿಸಲ್ಪಡುವ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ ರಾಂ ಜಯಂತಿ ಹಾಗೂ ಎ.14ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ನಿಮಿತ್ತ ಮಾ.17ರಂದು ಬೆಳಗ್ಗೆ 11 ಗಂಟೆಗೆ ತಹಶೀಲ್ದಾರ್ ಕಚೇರಿ ಸಭಾಭವನದಲ್ಲಿ ತಹಶೀಲ್ದಾರ್ ವೈ.ಎಸ್. ಸೋಮನಕಟ್ಟಿ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮುಖಂಡರು ಸೇರಿದಂತೆ ಎಲ್ಲ ಸಮಾಜದ ಮುಖಂಡರು ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳು ತಾಲೂಕಿನ ಎಲ್ಲ ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಗೆ ಹಾಜರಾಗಿ ಸಲಹೆ ಸೂಚನೆ ನೀಡಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಮಂಜುಳಾ ಹಿರೇಮನಿ ತಿಳಿಸಿದ್ದಾರೆ.

ವಿಶಿಷ್ಟಚೇತನರಿಗೆ ನ್ಯಾಯ ಒದಗಿಸಲು ಆಗ್ರಹ



ವಿಜಯಪುರ: ಮರಣ ಹೊಂದಿದ ಸಿಬ್ಬಂಧಿ ಹೆಸರಿನಲ್ಲಿ ವೇತನ ತೆಗೆದ ಅಂಗವಿಕಲ ಕಲ್ಯಾಣಾಧಿಕಾರಿ ಜಗದೀಶ ಕೆಂಪಲಿಂಗಣ್ಣವರ ಅವರನ್ನು ಕೂಡಲೆ ಅಮಾನತ್ತುಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಜಿಲ್ಲಾಧ್ಯಕ್ಷ ವಿನೋದ ಎಂ. ಖೇಡ ಜಿಲ್ಲಾಧಿಕಾರಿಗೆ ಆಗ್ರಹಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯಪುರ ಜಿಲ್ಲೆಯಲ್ಲಿ ಅಂಗವಿಕಲರ ಶ್ರೇಯೋಭಿವೃದ್ಧಿಗಾಗಿ ಕರ್ತವ್ಯ ನಿರ್ವಹಿಸಬೇಕಾಗಿದ್ದ ಅಧಿಕಾರಿ ತನ್ನ ಬೇಜವಾಬ್ದಾರಿ ನಡೆಯಿಂದ ಸರ್ಕಾರದ ಹಣವನ್ನು ಸತ್ತ ನೌಕರದಾರರ ಹೆಸರಿನಲ್ಲಿ ವೇತನ ಪಾವತಿ ಮಾಡಿದ್ದು ಈ ಕುರಿತು ಹಲವಾರು ಭಾರಿ ಜಿಲ್ಲಾಧಿಕಾರಿಗಳೀಗೆ ಮನವಿ ಮಾಡಿಕೊಂಡರು ಕ್ರಮ ತೆಗೆದುಕೊಳ್ಳದೇ ಇರುವುದು ಅಂಗವಿಕಲ ಕಲ್ಯಾಣಾಧಿಕಾರಿಗೆ ಸರ್ಕಾರ ಹಾಗೂ ಮೇಲಾಧಿಕಾರಿಗಳಿಗೆ ಭಯ ಇಲ್ಲದಂತಾಗಿದೆ ಎಂದರು. ಜಿಲ್ಲಾ ಉಪಾಧ್ಯಕ್ಷ ಮಲ್ಲಿಕಾರ್ಜುನ ಉಮರಾಣಿ ಮಾತನಾಡಿ, ವಿಜಯಪುರ ಜಿಲ್ಲೆಯಲ್ಲಿ ಅಂಗವಿಕಲರಿಗೆ ವೈದ್ಯಕೀಯ ದೃಢೀಕೃತ ಪ್ರಮಾಣ ಪತ್ರ ಪಡೆದು ನೀಡಬೇಕಾಗಿದ್ದ ಅಂಗವಿಕಲರ ಗುರುತಿನ ಚೀಟಿಯಲ್ಲಿ ಬಾರಿ ಅವ್ಯಹಾರ ನಡೆದಿದ್ದು ಅಂಗವಿಕರಲ್ಲದ 1900 ವ್ಯಕ್ತಿಗಳಿಗೆ ಗುರುತಿನ ಚೀಟಿ ನೀಡಿ ನೈಜ ಅಂಗವಿಕಲರಿಗೆ ದೊರಕಬೇಕಾಗಿದ್ದ ಸರ್ಕಾರಿ ಸೌಲಭ್ಯಗಳನ್ನು ವಂಚಿಸುವ ಭಾರಿ ಹುನ್ನಾರ ನಡೆದಿದೆ. ಕೂಡಲೇ ತಪ್ಪಿತಸ್ಥ ಎಲ್ಲ ಅಧಿಕಾರಿಗಳ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಶೋಕ ವಾಲಿಕಾರ ಮಾತನಾಡಿ, ವಿಜಯಪುರ ಜಿಲ್ಲಾ ಅಂಗವಿಕಲ ಕಲ್ಯಾಣ ಅಧಿಕಾರಿ ಜಗದೀಶ ಕೆಂಪಲಿಂಗಣ್ಣವರ ಅವರು ಮಾಡಿರುವ ಅವ್ಯವಹಾರದ ಕುರಿತು ಹಲವಾರು ಭಾರಿ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಜಿಲ್ಲಾಧಿಕಾರಿಗಳು ಅಂಗವಿಕಲ ಕಲ್ಯಾಣ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳದೇ ಇರುವುದು ಅನುಮಾನಕ್ಕೆ ಎಡೆ ಮಾಡಿದೆ ಆಗ್ರಹಿಸಿದರು. ವಿವೇಕಾನಂದ ದೊಡಮನಿ, ಅಂಬಣ್ಣ ಗುನ್ನಾಪೂರ, ಮಲ್ಲಿಕಾರ್ಜುನ ಲಂಗೋಟಿ, ರಾಜು ಕುಮಟಗಿ, ಅನೀಲ ಪವಾರ, ಸೋಮಶೇಖರ ಮೆಂಡೇಗಾರ, ಸಂತೋಷ ಕಲಗುಡಗಿ, ಅಶೋಕ ಚೋಳಕೆ, ಶಂಕ್ರೆಮ್ಮ ಕೋರಿ, ತುಳಸಾ ಕನಸೆ ಇದ್ದರು.

ಶಾಂತಾಬಾಯಿ ನಿಧನ

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ಶತಾಯುಷಿ ಪತ್ರಿಕಾ ವಿತರಕ ಶಿವಾಜಿ ಮೋರೆ ತಾಯಿ ಶಾಂತಾಬಾಯಿ ಜ್ಯೋತಿಬಾ ಮೋರೆ(100) ಇಂಡಿ ತಾಲೂಕಿನ ಬರಡೋಲ ಗ್ರಾಮದ ವಿಠ್ಠಲ ನಗರದ ಮಗಳ ಮನೆಯಲ್ಲಿ ನಿಧನರಾದರು. ಮೃತರಿಗೆ ಪುತ್ರ, ನಾಲ್ವರು ಪುತ್ರಿಯರು, ಇಬ್ಬರು ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.





ಮುದ್ದೇಬಿಹಾಳ: ತಾಲೂಕಿನ ಬಸರಗೋಡ ಪವಾಡ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳ ವಿಶೇಷ ವಾರ್ಷಿಕ ಎನ್ಎಸ್ಎಸ್ ಶಿಬಿರದಲ್ಲಿ ವಿದ್ಯಾರ್ಥಿಗಳು ಸ್ವಚ್ಛತಾ ಕಾರ್ಯದ ಜೊತೆಗೆ ಇಂದು ಗುಂಡಿ, ಚರಂಡಿ ದುರಸ್ತಿ ಹಾಗೂ ರಸ್ತೆ ದುರಸ್ತಿ ಮಾಡುವ ಮೂಲಕ ಕ್ಷೇತ್ರ ಕಾರ್ಯವನ್ನು ಮಾಡಿದರು. ಎನ್ಎಸ್ಎಸ್ ಸಂಚಾಲಕ ಪ್ರೊ. ಪರುಶುರಾಮ ದೇವಿ, ಜ್ಯೋತಿಕಾ ಕೆ. ಹಾಗೂ ಹಿರಿಯ ಉಪನ್ಯಾಸಕರಾದ ಎಲ್.ಎಚ್.ಮಮದಾಪುರ, ಗಿರೀಶ ವಾಘನಗೇರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ದ್ರಾಕ್ಷಿ ಬೆಳೆಗಾರರ ಬಾಕಿ ವಿಮೆ ನೀಡಲು ಆಗ್ರಹ

ವಿಜಯಪುರ: 2024-25ನೇ ಸಾಲಿನ ಹವಾಮಾನ ಆಧಾರಿತ ವಿಮಾ ಯೋಜನೆಯಡಿ ವಿಮೆ ಕಂತು ಪಾವತಿಸಿದ್ದರೂ ಪರಿಹಾರದಿಂದ ವಂಚಿತರಾಗಿರುವ ಜಿಲ್ಲೆಯ 931 ದ್ರಾಕ್ಷಿ ಬೆಳೆಗಾರರಿಗೆ ತಕ್ಷಣವೇ ವಿಮಾ ಪರಿಹಾರ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ನೇತೃತ್ವದ ನಿಯೋಗವು ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಮನವಿ ಪತ್ರ ಅರ್ಪಿಸಿತು. ಕಳೆದ ಸಾಲಿನಲ್ಲಿ ಅತಿವೃಷ್ಟಿ, ಅನಾವೃಷ್ಟಿ ಹಾಗೂ ರೋಗಬಾಧೆಯಿಂದ ದ್ರಾಕ್ಷಿ ಬೆಳೆ ನಷ್ಟವಾಗಿತ್ತು. ಜಿಲ್ಲೆಯಲ್ಲಿ 15 ಸಾವಿರಕ್ಕೂ ಅಧಿಕ ಬೆಳೆಗಾರರು ವಿಮೆ ಮಾಡಿಸಿದ್ದರು. ಆದರೆ, ನಿಯಮಾನುಸಾರ ವಿಮೆ ಕಂತು ಪಾವತಿಸಿದ್ದರೂ, ನಕಲಿ ಕ್ಷೇತ್ರ ಎಂಬ ನೆಪವೊಡ್ಡಿ ವಿಮಾ ಕಂಪನಿಗಳು ಜಿಲ್ಲೆಯ 931 ಬೆಳೆಗಾರರಿಗೆ (ವಿಶೇಷವಾಗಿ ಬಬಲೇಶ್ವರ ತಾಲೂಕಿನ ರೈತರಿಗೆ) ಪರಿಹಾರ ನೀಡದೆ ಸತಾಯಿಸುತ್ತಿವೆ ಎಂದು ಮುಖಂಡರು ಆರೋಪಿಸಿದರು. ಈ ಕೂಡಲೇ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲಾಡಳಿತ ವಿಮಾ ಕಂಪನಿಯೊಂದಿಗೆ ಮಾತನಾಡಿ, ಬಾಕಿ ಉಳಿದಿರುವ ಎಲ್ಲಾ ಅರ್ಹ ದ್ರಾಕ್ಷಿ ಬೆಳೆಗಾರರ ಖಾತೆಗಳಿಗೆ ತಕ್ಷಣವೇ ವಿಮೆ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಪರಿಹಾರ ವಂಚಿತ ರೈತರೊಂದಿಗೆ ಸೇರಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಲಾಯಿತು.ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಮುಖಂಡರಾದ ಸಂಜಯ ಪಾಟೀಲ ಕನಮಡಿ ಇದ್ದರು.



ವಿಜಯಪುರ: 2024-25ನೇ ಸಾಲಿನ ಹವಾಮಾನ ಆಧಾರಿತ ವಿಮಾ ಯೋಜನೆಯಡಿ ವಿಮೆ ಕಂತು ಪಾವತಿಸಿದ್ದರೂ ಪರಿಹಾರದಿಂದ ವಂಚಿತರಾಗಿರುವ ಜಿಲ್ಲೆಯ 931 ದ್ರಾಕ್ಷಿ ಬೆಳೆಗಾರರಿಗೆ ತಕ್ಷಣವೇ ವಿಮಾ ಪರಿಹಾರ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಉಮೇಶ ಕೋಳಕೂರ, ಚಿದಾನಂದ ಚಲವಾದಿ, ಸಂಗನಗೌಡ ಚಿಕ್ಕೊಂಡ, ಅಬ್ದುಲರಜಾಕ್ ವಾಲೀಕಾರ, ಜಗದೀಶ ಪಂಪಣ್ಣವರ, ಸಿದ್ದಗೊಂಡ ಬಿರಾದಾರ, ಮಲ್ಲಿಕಾರ್ಜುನ ದೇವರಮನಿ, ಮಲ್ಲು ಕನ್ನೂರ, ಸ್ವಪ್ನಾ ಕಣಮುಚನಾಳ ಇದ್ದರು.

ಬೆಳಗ್ಗೆ ಎಳೆ ಬಿಸಿಲಿನ ಶಾಖ | ಮಧ್ಯಾಹ್ನ ನೆತ್ತಿ ಸುಡುವ ಸೂರ್ಯನ ತಾಪ

ಬಿಸಿಲಿಗೆ ವಿಜಯಪುರ ಮಂದಿ ಕಂಗಾಲು

ಪರಶುರಾಮ ಶಿವಶರಣ

ದಿಗಂತ ವಿಶೇಷ

ವಿಜಯಪುರ: ಬಯಲು ಸೀಮೆಯ ಬಿಸಿಲೂರಿನಲ್ಲಿ ಬೇಸಿಗೆ ಬಿಸಿಲು ಪ್ರಖರಗೊಂಡಿದ್ದು, ಸಾರ್ವಜನಿಕರು ಕಂಗಾಲಾಗುವಂತಾಗಿದೆ. ನೀರು, ನೆರಳಿಲ್ಲದ ಗುಮ್ಮಟ ನಗರಿಗೆ ಪ್ರಖರ ಬಿಸಿಲು ಹೊಸದೇನಲ್ಲ. ಆದರೆ ಇಲ್ಲಿ ಕೆಂಡದಂತಹ ಬಿಸಿಲು, ಕುಂಭದ್ರೋಣದಂತಹ ಮಳೆ, ಮೈಕೊರೆಯುವ ಚಳಿ ಹೀಗೆ ಆಯಾ ಋತುಮಾನಕ್ಕೆ ತಕ್ಕಂತೆ ವಾಡಿಕೆಗಿಂತ ಹೆಚ್ಚಾಗುತ್ತಿವೆ.

ಇತ್ತೀಚೆ ಗಂತೂ ಬಿಸಿಲು, ಮಳೆ ಹಾಗೂ ಚಳಿ ಪ್ರಮಾಣದಲ್ಲಿ ತೀವ್ರ ಹೆಚ್ಚಳವಾಗುತ್ತಿದ್ದು, ವಾತಾವರಣದಲ್ಲಿ ಏರುಪೇರಾಗುತ್ತಿದೆ. ಕಳೆದ ಕೆಲ ದಿನಗಳಿಂದ ಬಿಸಿಲಿನ ಪ್ರಖರತೆ ಹೆಚ್ಚಳವಾಗುತ್ತಿದ್ದು, ಸೋಮವಾರ 35.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ಜನರಿಗೆ ಬಿಸಿಲಿನ ಬಿಸಿ ತಟ್ಟುವಂತೆ ಮಾಡಿದೆ. ಬೇಸಿಗೆಯ ಮಾರ್ಚ್ ಅಂತ್ಯದಲ್ಲಿ ಈ ಪರಿ ಬಿಸಿಲಿನ ಪ್ರಖರತೆ ಉಂಟಾದರೆ, ಇನ್ನು ಏಪ್ರಿಲ್, ಮೇ ತಿಂಗಳಲ್ಲಿ ಇನ್ನೆಷ್ಟು ಬಿಸಿಲು ಹೆಚ್ಚಳಗೊಳ್ಳಬಹುದು ಎಂದು ಜನರು ಆತಂಕಗೊಳ್ಳುವಂತಾಗಿದೆ.

ಬೆಳಗ್ಗೆ ಏಳು ಗಂಟೆಗೆ ಎಳೆ ಬಿಸಿಲು ಆರಂಭಗೊಂಡು ಬಲೆಯಲು ಶುರುವಾಗುತ್ತದೆ. ಮಧ್ಯಾಹ್ನದ ಹೊತ್ತಿಗೆ ಪ್ರಖರತೆಯ ಬಿಸಿಲಿನಿಂದ ಜನರ ನೆತ್ತಿ ಸುಡುತ್ತ, ಜನರನ್ನು ಕೆಂಗೆಡಿಸುತ್ತದೆ. ಸಂಜೆ 6 ಗಂಟೆ ವರೆಗೂ ತನ್ನ ಪ್ರಖರತೆಯಿಂದ ಜೀವಹಿಂಡುವಂತೆ ಮಾಡುತ್ತಿದ್ದು, ಜನರು ರಸ್ತೆ ಪಕ್ಕದ ಮರ, ಗಿಡಗಳ ಆಸರೆಗೆ, ಉದ್ಯಾನವನಕ್ಕೋ ತೆರಳಿ ನೆರಳನ್ನು ಆಶ್ರಯಿಸುವಂತಾಗಿದೆ.

ಇಲ್ಲಿನ ರಸ್ತೆ ಬದಿಯಲ್ಲಿ ಖರಬೂರ್, ಕಲ್ಲಂಗಡಿ, ಐಸ್ಕ್ರೀಮ್, ಕಬ್ಬಿನ ಹಾಲು, ಲಸ್ಸಿ, ಲಿಂಬು ಶರಬತ್, ಥೂದ ಕೋಲ್ಡ್ರಿಂಕ್ಸ್ ಸೇರಿದಂತೆ ತಂಪು ಪಾನಿಯ ಅಂಗಡಿಗಳಲ್ಲಿ ವ್ಯಾಪಾರ ಜೋರಾಗುತ್ತಿದೆ. ಅಲ್ಲದೆ ಕಲ್ಲಂಗಡಿ, ಖರಬುಜ್ ಹಣ್ಣುಗಳನ್ನು ರಸ್ತೆಯಲ್ಲಿ ಗುಡ್ಡೆ ಹಾಕಿ ಮಾರಾಟ ಮಾಡಲಾಗುತ್ತಿದೆ.



35.6 ಉಷ್ಣಾಂಶ ದಾಖಲು

ಸೋಮವಾರ 35.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ಮಾ. 15 ರಂದು 36.5, ಮಾ. 14 ರಂದು 36.5 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು.

> **ನಗರದ್ಯಾಗ ಮಣ್ಣಿನ ಗಡಗಿ ಮಾರಾಕ್ ಬ್ಯಾರೇ ಹೊರಗೀನ ಜನ್ರು ಬಂದಾರೀ, ಇದರಿಂದ್ ಮೊದ್ಲೀನ ಥರಾ ನಮ್ ವ್ಯಾಪಾರ ಇಲ್ಲರೀ, ಜನಾ ಚೌಕಾಶಿ ಮಾಡಿದ್ಕ, ಕೈಗಿ ಬಂದ್ ದುಡ್ಡೀಗಿ, ಗಡಗೀ ಮಾರಾಕತ್ತೀವಿ ನೋಡ್ರಿ.**
>
> ■ ಸಂಗಮ್ಮ ಕುಂಬಾರ, ಮಡಿಕೆ ವ್ಯಾಪಾರಿ

ಲಗ್ಗೆಯಿಟ್ಟ ಮಣ್ಣಿನ ಮಡಿಕೆ

ನಗರದಲ್ಲಿ ಈಗಾಗಲೇ ಮಣ್ಣಿನ ಮಡಿಕೆ (ಬಡವರ ಫ್ರಿಜ್)ಗಳು ಲಗ್ಗೆ ಇಟ್ಟಿವೆ. ಇಲ್ಲಿನ ಸ್ಟೇಶನ್ ರಸ್ತೆ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ ಬಳಿಯ ರಸ್ತೆಯ ಇಕ್ಕೆಲಗಳಲ್ಲಿ, ಶಿವಾಜಿ ವೃತ್ತದ ಬಳಿ, ಜೋಡುಗುಮ್ಮಟ ರಸ್ತೆ ಪಕ್ಕದಲ್ಲಿ ಮಣ್ಣಿನ ಮಡಿಕೆಗಳನ್ನು ಮಾರಾಟ ಮಾಡಲಾಗುತ್ತಿದೆ. ಗಾತ್ರಕ್ಕೆ ತಕ್ಕಂತೆ 200 ರೂ. ಗಳಿಂದ 500 ರೂ.ಗಳ ವರೆಗೆ ಮಾರಾಟ ಮಾಡಲಾಗುತ್ತಿದೆ. ಪ್ರಸಕ್ತ ವರ್ಷ ಇತರೆ ರಾಜ್ಯದಿಂದ ಮಡಿಕೆ ವ್ಯಾಪಾರಕ್ಕೆ ಜನರು ಬಂದಿದ್ದು, ಇದರಿಂದ ಸ್ಥಳೀಯ ಮಡಿಕೆ ಮಾರಾಟಗಾರರ ವ್ಯಾಪಾರ-ವಹಿವಾಟದಲ್ಲಿ ಮಂದಗತಿಯಾಗುತ್ತಿದೆ ಎಂದು ವ್ಯಾಪಾರಸ್ಥರು ಅಳಲು ತೋಡಿಕೊಳ್ಳುತ್ತಾರೆ.

ರಾಷ್ಟ್ರೀಯ ಲೋಕ ಅದಾಲತ್ ಯಶಸ್ವಿ

ವಿಜಯಪುರ: ರಾಜಿಸಂಧಾನದಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡರೆ ಹಣ ಮತ್ತು ಸಮಯ ಎರಡೂ ಉಳಿಯುತ್ತವೆ. ಹಾಗಾಗಿ ಸಾರ್ವಜನಿಕರು ಜನತಾ ನ್ಯಾಯಾಲಯದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹರೀಶ ಎ. ಹೇಳಿದರು.

ಜಿಲ್ಲೆಯಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಕ್ಷಿದಾರರು ತಮ್ಮ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಬಹಳ ವರ್ಷ ನ್ಯಾಯಾಲಯಕ್ಕೆ ಅಲೆದಾಡುವ ಬದಲು ಜನತಾ ನ್ಯಾಯಾಲಯದಲ್ಲಿ ಭಾಗವಹಿಸಿ, ರಾಜಿ ಸಂಧಾನದ ಮೂಲಕ ಪ್ರಕರಣ ಇತ್ಯರ್ಥಪಡಿಸಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಯಶಸ್ವಿಯಾಗಿ ನಡೆದಿದ್ದು, ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತಲ್ಲಿದ್ದ ಹಲವು ಪ್ರಕರಣಗಳ ಪೈಕಿ 13624 ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡಿವೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಅರವಿಂದ ಹಾಗರಗಿ ಮಾತನಾಡಿ, ಜನತಾನ್ಯಾಯಾಲಯದಲ್ಲಿ ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡು ಸಾರ್ವಜನಿಕರು ಶೀಘ್ರ ನ್ಯಾಯ ಪಡೆದುಕೊಂಡು ಪರಸ್ಪರ ಸೌಹಾರ್ದತೆಯಿಂದ ಸಮಾಜದಲ್ಲಿ ಜೀವನ ಸಾಗಿಸಬೇಕು ಎಂದರು.

ವಿಜಯಪುರ ನಗರ ಸೇರಿದಂತೆ ಮತ್ತು ತಾಲೂಕು ಒಳಗೊಂಡು ಸುಮಾರು 8 ಜೋಡಿಗಳನ್ನು ಜನತಾ ನ್ಯಾಯಾಲಯದಲ್ಲಿ ರಾಜಿ ಸಂಧಾನದ ವೈವಾಹಿಕ ಜೀವನ ನಡೆಸಲು ಒಪ್ಪಿಸಲಾಯಿತು. ಈ ರಾಷ್ಟ್ರೀಯ ಲೋಕ್ ಅದಾಲತನಲ್ಲಿ 1009 ಭೂ ಸ್ವಾಧೀನ ಪ್ರಕರಣಗಳ ಪೈಕಿ 386 ಪ್ರಕರಣಗಳು ಇತ್ಯರ್ಥಗೊಳಿಸಲಾಯಿತು. ಇದಕ್ಕೆ 42,28,21,328 ರೂ.ಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಗಳಿಸಲಾಗಿದ್ದು, ಅದರಲ್ಲಿ ಸರ್ಕಾರದವರು 21,00,00000 ರೂ. ಬಿಡುಗಡೆ ಮಾಡಿದ್ದು, ಅದರಲ್ಲಿ ಸದ್ಯ 42, 84, 784 ರೂ. ಗಳನ್ನು ಈಗಾಗಲೇ ಪಾವತಿಸಲಾಗಿದೆ ಎಂದರು.

ವಕೀಲರು, ಕಕ್ಷಿದಾರರು, ಪೊಲೀಸ್ ಅಧಿಕಾರಿ. ಸಿಬ್ಬಂದಿಸೇರಿದಂತೆಸಾರ್ವಜನಿಕರ ಕಾರ್ಯಕ್ಕೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ನ್ಯಾಯಾಧೀಶ ಹರೀಶ ಎ. ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಆರ್ಥಿಕ ಸದೃಢತೆಗೆ ಮೀನುಗಾರಿಕೆ ಸಹಕಾರಿ

ಮುದ್ದೇಬಿಹಾಳ: ವಿಜಯಪುರ ಜಿಲ್ಲೆಗೆ ಕೃಷ್ಣಾ ನದಿ, ಸಮುದ್ರ ಉಪಾದಿಯಲ್ಲಿ ಇದ್ದು ಜಿಲ್ಲೆಗೆ ದೇವರು ಕೊಟ್ಟ ವರವಾಗಿದೆ. ಮೀನುಗಾರಿಕೆ ಉತ್ಪಾದನೆ ಮತ್ತು ಬಳಕೆಯಲ್ಲಿ ಆದಾಯ ಹೆಚ್ಚಿಸುವ ಅವಕಾಶ ಇದ್ದು, ಇಲ್ಲಿಯವರೆಗೆ ಸದ್ಬಳಕೆ ಆಗದಿರುವುದು ಹಲವು ಕಾರಣಗಳು ಇವೆ. ಇನ್ನು ಮುಂದೆ ಮೀನುಗಾರರಿಗೆ ಹಾಗೂ ಹಿಂದುಳಿದ ಪ್ರದೇಶ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಅನುಕೂಲವಾಗುವಂತೆ ಸದ್ಬಳಕೆ ಮಾಡಬೇಕಾದ ಅವಶ್ಯಕತೆ ಇದೆ ಎಂದು ಶಾಸಕ ಸಿ.ಎಸ್.ನಾಡಗೌಡ ಹೇಳಿದರು.

ಆಲಮಟ್ಟಿ ರಸ್ತೆಯ ಬಿರಾದಾರ ಮಂಗಲ ಭವನದ ಹಿಂದುಗಡೆ ಬಡಾವಣೆಯಲ್ಲಿ ಮೀನುಗಾರಿಕೆ ಇಲಾಖೆಯ ಕಟ್ಟಡದ ಭೂಮಿಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಾಲೂಕಿನ ಸಿದ್ದಾಪುರ ಗ್ರಾಮದ ನಾರಾಯಣಪುರ ಹಿನ್ನೀರಿನಲ್ಲಿ 9 ಕೋಟಿ ವೆಚ್ಚದಲ್ಲಿ ಮೀನು ಮರಿ ಸಾಕಾಣಿಕೆ ಕೇಂದ್ರವನ್ನು ತಾವು ಅಧಿಕಾರದಲ್ಲಿ ಇಲ್ಲದಾಗಲೂ ಪ್ರಯತ್ನಿಸಿ ಮಂಜೂರು ಮಾಡಿದ್ದೆ. ತಾಲೂಕಿನಲ್ಲಿ ಹಿಂದುಳಿದ ಜಾತಿ ಜನಾಂಗದ ಜನ ಮೀನುಗಾರಿಕೆಯನ್ನು ಬಿಟ್ಟಿದ್ದು ವಿಫಲ ಉದ್ಯೋಗಾವಕಾಶಗಳು ಇವೆ. ಆದರೆ ಆಂಧ್ರ ಮೂಲದ ಮೀನುಗಾರರು ಹಾಗೂ ಮೀನು ಸಾಕಾಣಿಕೆ ಗುತ್ತಿಗೆ ಹಿಡಿದವರು ಕಾರ್ಮಿಕರಿಗೆ ಕಡಿಮೆ ಬೆಲೆ ನೀಡಿ ಶೋಷಣೆ ಮಾಡಿ ಶ್ರೀಮಂತರಾಗಿದ್ದಾರೆ. ಇದಕ್ಕೆ ಜನರ ನಿರ್ಲಕ್ಷ ಹಾಗೂ ಮೀನುಗಾರಿಕೆಗೆ ಒತ್ತು ನೀಡದಿರುವದೇ ಮುಖ್ಯ ಕಾರಣ ಎಂದರು.

ಮೀನುಗಾರಿಕೆ ಉಪ ನಿರ್ದೇಶಕ ಶರಣಗೌಡ ಪಾಟೀಲ ಮಾತನಾಡಿ, ಕಟ್ಟಡ ನಿರ್ಮಾಣವಾದರೆ ತರಬೇತಿ ಹಾಗೂ ಮೂಲಸೌಕರ್ಯ ಕಲ್ಪಿಸಲು ಅನುಕೂಲವಾಗುತ್ತದೆ. ಆರ್ಥಿಕ ಬೆಂಬಲ ನೀಡಲು ಬ್ಯಾಂಕುಗಳಿಗೆ ಸೂಚಿಸಬಹುದಾಗಿದೆ ಎಂದು ಮಾತನಾಡಿದರು.

ಜಿಲ್ಲಾ ಮೀನುಗಾರಿಕೆ ಉಪ ನಿರ್ದೇಶಕ ಇರ್ಫಾನ್ ಬಾಂಗಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುನಾಥ ತಾರನಾಳ, ಮಹಾಂತಪ್ಪ ನಾವದಗಿ, ಸುರೇಶ ಪಾಟೀಲ, ಪ್ರಭುರಾಜ್ ಕಲಬುರ್ಗಿ, ರಮೇಶ್ ಓಸ್ವಾಲ್, ಲಕ್ಷ್ಮಣ ಲಮಾಣಿ, ನಾಗರಾಜ ತಂಗಡಗಿ, ಶ್ರೀಕಾಂತ ಚಲವಾದಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ ಉಪಯೋಜನೆ ಕಾರ್ಯಕ್ರಮದ ಅಡಿಯಲ್ಲಿ ನಾಲ್ಕು ಚಕ್ರದ ವಾಹನವನ್ನು ಶಾಂತಾಬಾಯಿ ಬಾಬು ಲಮಾಣಿ ಅವರಿಗೆ ಮೀನುಗಾರರಿಗೆ ಜೀವ ರಕ್ಷಕ ಕವಚ ಹಾಗೂ ಬಲೆಯನ್ನು ವಿತರಿಸಲಾಯಿತು.



ಕಾಲುವೆಗೆ ನೀರು ಹರಸಲು ಮನವಿ

ಝಳಕಿ: ನಾರಾಯಣಪುರ ಎಡದಂಡೆ ಕಾಲುವೆಗೆ ಹೊಂದಿಕೊಂಡ ಇಂಡಿ ಶಾಖಾ ಕಾಲುವೆಯ ನೀರು ಕಡೆ ಭಾಗ ಹಳ್ಳಿಗಳಿಗೆ ಸರಿಯಾಗಿ ನೀರು ಹರಸಿರಿ ಎಂದು ರೈತ ಮುಖಂಡ ಶಿವಾನಂದ ಬಿರಾದಾರ ಹೇಳಿದರು.

ಸ್ಥಳೀಯ ಕಾರ್ಯಪಾಲಕ ಎಂಜಿನಿಯರ ಕೃಭಾಜನಿನಿ ಇಂಶಾಕಾ, ನಿಮಪೋ, ವಿಭಾಗ ಝಳಕಿ ಕಛೇರಿ ಮೇಲಾಧಿರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದರು ಕಾರ್ಯಪಾಲಕ ಅಭಿಯಂತರರು ಝಳಕಿ ಅವರಿಗೆ ಎಷ್ಟೇ ಬಾರಿ ಮನವಿ ಅರ್ಜಿ ಕೊಟ್ಟಿದ್ದರು ಕೂಡಾ ಯಾವುದೇ ಕ್ರಮ ಕೈಗೊಂಡಿಲ್ಲ, ಹೋದ ತಿಂಗಳು ಫೆಬ್ರುವರಿ ಮತ್ತು ಮಾರ್ಚ ತಿಂಗಳಲ್ಲಿ ಒಮ್ಮೆಯೂ ಸಹ ಕಾಲುವೆಗೆ ನೀರನ್ನು ಸರಿಯಾಗಿ ಹರಿಸಿದರೂ ಕೂಡ ಕಡೆವರಿಗೆ ನೀರು ತಲುಪು ವ್ಯವಸ್ಥೆ ಮಾಡಿಲ್ಲ ಎಂದು ಆರೋಪಿಸಿದರು.

ನಾಗಠಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಡಚಣ ತಾಲೂಕಿನ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ದನಕರುಗಳಿಗೆ ಕುಡಿಯಲು ನಾರಾಯಣಪೂರ ಜಲಾಶಯದಿಂದ ಇಂಡಿ ಶಾಖಾ ಕಾಲುವೆಗೆ 4-5 ದಿನ ನೀರನ್ನು ಹರಿಸಿದರೆ ಮಾತ್ರ ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಬಗೆಹರಿಸಿ

ಇಲ್ಲಾವಾದಲ್ಲಿ ಮಾ.18ರಂದು ಕಚೇರಿ ಮುಂದೆ ಅನಿರ್ದಿಷ್ಟಾವದಿ ಧರಣಿ ಸತ್ಯಾಗ್ರಹ ಕೈಗೊಳ್ಳುತ್ತೇವೆ. ಕೂಡಲೇ ನೀವು ಸ್ಪಂದಿಸದೇ ಇದ್ದಲ್ಲಿ ಮುಂದಾಗುವ ಪರಿಣಾಮಗಳಿಗೆ ನೀವೇ ಹೊಣೆಗಾರರಾಗುತ್ತೀರಿ. ಜನರಿಗೆ ಜಾನುವಾರುಗಳಿಗೆ ಕುಡಿಯಲು ನೀರು ಪೂರೈಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೃಭಾಜನಿನಿ ಅಧಿಕಾರಿ ಸಂಜೀವ ಹೀರೋಳ್ಳಿ ರೈತರಿಂದ ಮನವಿ ಸ್ವೀಕರಿಸಿ ಮಾತನಾಡಿ, ಮೇಲಾಧಿಗಳ ಗಮನಕ್ಕೆ ಮನವಿ ಸಲ್ಲಿಸುತ್ತೇನೆ. ಮಾ.19ರಂದು ನೀರು ಹರಿಸುತ್ತೇವೆ. ನೀಮ್ಮಗೆ ಸರಿಯಾಗಿ ತಲುಪು ವ್ಯವಸ್ಥೆ ಕಲ್ಪಿಸುತ್ತೇವೆ ಎಂದು ಹೇಳಿದರು.

ವಿಶ್ವನಾಥ ಬಿರಾದಾರ, ಸತೀಶ ತೋಳನೂರ, ಶಿವಾನಂದ ಬಿರಾದಾರ, ಸುನೀಲ ಜಿತ್ತಿ, ರವಿ ತೋಳನೂರ, ಎಂ.ಆರ್.ಜಿತ್ತಿ, ಆಕಾಶ ನಾವಿ, ಸಿದ್ದಣ್ಣಾ ಮಾಳಾಬಾಗಿ, ಸಂತೋಷ ಅಂಜುಟಗಿ, ವಿಶ್ವನಾಥ ಮೇತ್ರಿ, ಈಶ್ವರ ಮಾಳಾಬಾಗಿ, ರತ್ನಪ್ಪ ಮಾಶ್ಯಾಳ, ಮಲ್ಲಿಕಾರ್ಜುನ ಕೊಡಹಳ್ಳಿ ಶಂಕರ ಬಿರಾದಾರ ಉಪಸ್ಥಿತರಿದ್ದರು.



ವಿವಿಧ ಬೇಡಿಕೆ ಈಡೇರಿಸಲು ಒತ್ತಾಯ

ವಿಜಯಪುರ: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ರಾಜ್ಯ ಅಂಗನವಾಡಿ ನೌಕರರ ಸಂಘದ ಪದಾಧಿಕಾರಿಗಳು ನಗರದ ಜನಪ್ರತಿನಿಧಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ಇಲ್ಲಿನ ನಗರ ಶಾಸಕ, ಜಿಲ್ಲಾ ಉಸ್ತುವಾರಿ ಸಚಿವ, ನಾಗಠಾಣ ಮೀಸಲು ಕ್ಷೇತ್ರದ ಶಾಕರ ಕಚೇರಿಗೆ ತೆರಳಿ ಅಂಗನವಾಡಿ ನೌಕರರು ಮನವಿ ಸಲ್ಲಿಸಿದರು.

ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ಸುನಂದ ನಾಯಕ ಮಾತನಾಡಿ, 2025 ನವೆಂಬರ್‌ನಲ್ಲಿ ರಾಜ್ಯದ ಮುಖ್ಯಮಂತ್ರಿಗಳು 5,000 ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿಯನ್ನು ಪ್ರಾರಂಭಿಸಲು ಘೋಷಿಸಿ ನ. 12, 2025 ರಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಆದೇಶ ಮಾಡಿದೆ. ರಾಜ್ಯದಲ್ಲಿ ಎಲ್ಲ ಅಂಗನವಾಡಿ ಕೇಂದ್ರಗಳಲ್ಲಿಯೂ ಎಲ್‌ಕೆಜಿ, ಯುಕೆಜಿ ಪ್ರಾರಂಭಿಸಲು ಆದೇಶಿಸಿ ಅಗತ್ಯವಿರುವ ಬಜೆಟ್‌ನ್ನು ಮೀಸಲಿಡಬೇಕು. ಎಲ್ಲ ಅಂಗನವಾಡಿ ನೌಕರರನ್ನು ಕನಿಷ್ಠ ಕೂಲಿಯ ಕಾಯ್ದೆಯ ವ್ಯಾಪ್ತಿಗೆ ತಂದು ಇಎಸ್ಐ, ಪಿಎಫ್‌ನ್ನು ಕೊಡಬೇಕು. ಅಂಗನವಾಡಿ ಕೇಂದ್ರಕ್ಕೆ ಸರಬರಾಜು ಮಾಡುವ ಆಹಾರ ಪದಾರ್ಥಗಳು ಗುಣಮಟ್ಟ ಸರಿಯಿಲ್ಲದ ಕಾರಣ ಬಿಎಸ್ ಪರವಾನಿಗೆ ರದ್ದು ಮಾಡಿ, ಸ್ಥಳೀಯವಾಗಿ ಸಿಗುವ ಆಯಾ ಪ್ರದೇಶಕ್ಕೆ ಅನುಗುಣವಾಗಿ ಆಹಾರ ಸರಬರಾಜು ಮಾಡಬೇಕು ಎಂದರು.



ಸುವರ್ಣ ಹಲಗಣಿ ಮಾತನಾಡಿ, ಶಿಶು ಅಭಿವೃದ್ಧಿ ಯೋಜನೆಗಾಗಿ ದುಡಿದು ಬರಿಗೈಯಲ್ಲಿ 2011 ರಿಂದ 2023 ಮಾರ್ಚ್ ತನಕ ನಿವೃತ್ತರಾದ ಕಾರ್ಯಕರ್ತೆ ಸಹಾಯಕಿಯರಿಗೂ ಕೂಡಲೇ ಗ್ರಾಚ್ಯುಟಿ ಹಣ 183 ಕೋಟಿ ಕೂಡಲೇ ಬಿಡುಗಡೆ ಮಾಡಬೇಕು. ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆ ತುಂಬಬೇಕು ಮತ್ತು ಇಲಾಖೆಯಲ್ಲಿ ಖಾಲಿ ಇರುವ ಮೇಲ್ವಿಚಾರಕಿ, ಸಿಡಿಪಿಒ ಹುದ್ದೆ ತುಂಬಬೇಕು. ನಗರ ಪ್ರದೇಶಗಳಲ್ಲಿ ಸಹಾಯಕಿ ಆಯ್ಕೆಗೆ ಇರುವ ಮಾನದಂಡ ಬದಲಾಯಿಸಬೇಕು ಎಂದರು.

ರಾಜೇಶ್ವರಿ ಸಂಕದ, ಲಲಿತಾ ಪೋಳ, ಗೀತಾ ನಾಯಕ, ರಿಯಾನ, ಶೈಲಾ ಕಟ್ಟಿ, ಪ್ರೇಮಾ ಚೌಧರಿ, ಲಲಿತಾ ಹೊನ್ನುಟಗಿ, ಶಶಿಕಲಾ, ಬಿರಾದಾರ, ಶ್ರೀದೇವಿ, ಮುಚಂಡಿ, ಮಾದೇವಿ ಚವ್ಹಾಣ, ರಮೇಜಾ ನಾಜಿಯಾ ಪಿಡ್ಡಿ ಇದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಬಸವನಬಾಗೇವಾಡಿ: ಪೌರಾಡಳಿತ ಇಲಾಖೆ ಮನಗೂಳಿ ಪಟ್ಟಣ ಪಂಚಾಯತಿ ಕಾರ್ಯಾಲಯ ನೇತೃತ್ವದಲ್ಲಿ 2023-24ನೇ ಸಾಲಿನ ಎಸ್ಎಫ್‌ಸಿ ವಿಶೇಷ ಅನುದಾನದ ಯೋಜನೆಯಡಿ ಹಾಗೂ 2025-26ನೇ ಸಾಲಿನ 15ನೇ ಹಣಕಾಸಿನ ಅಡಿಯಲ್ಲಿ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಭೂಮಿಪೂಜೆ ನೆರವೇರಿಸಿದರು.

ಪಟ್ಟಣದ 9,12,13ನೇ ವಾರ್ಡ್ ನಲ್ಲಿ ರಡ್ಡೆರಬಾವಿ ಹತ್ತಿರ ಸಿಸಿ ರಸ್ತೆಗೆ ಭೂಮಿ ಪೂಜೆ ನೆರವೇರಿಸಿದರು ಹಾಗೂ 7ನೇ ವಾರ್ಡಿನಲ್ಲಿ ಮುಸ್ಲಿಂ ಸಮಾಜದ ದೈವದ ಕೋಣೆ ದುರಸ್ಥಿ ಪಡಿಸುವುದು ಹಾಗೂ ವಾರ್ಡ್ ನಂಬರ 9ರಲ್ಲಿರುವ ಉದ್ಯಾನವನ ಅಭಿವೃದ್ಧಿ ಪಡಿಸುವುದಕ್ಕೆ ಭೂಮಿಪೂಜೆ ನೆರವೇರಿಸಿದರು.

ಚಂದ್ರಶೇಖರಗೌಡ ಪಾಟೀಲ, ವಿಶ್ವನಾಥಗೌಡ ಪಾಟೀಲ, ಬಸವರಾಜ ಸುಂಪುರ, ಪಪಂ ಸದಸ್ಯರಾದ ಭಾಗ್ಯರಾಜ ಸೊನ್ನದ, ಡಾ.ಆರ್.ಕೆ.ಪತ್ತಾರ ಪ್ರದೀಪ ಜಾನಕರ, ಸಲೀಮ್ ಮಕಾನದಾರ, ತಿಪ್ಪಣ್ಣ ಖ್ಯಾತನವರ, ವಿಜಯ ರಜಪೂತ, ಪಪಂ ಮುಖ್ಯಾಧಿಕಾರಿ ನಿಖಿಲ್ ಪಾಟೀಲ, ಅಭಿಯಂತರ ಸೋಮಶೇಖರ ತುಪ್ಪದ, ಕಂದಾಯ ನಿರೀಕ್ಷಕ ವಿಜಯ ರೋಕಡೆ, ಗುತ್ತಗೆದಾರ ಸಚೀನ ಪಾಟೀಲ, ಪ್ರವೀಣ ಕರಿಶಂಕರಿ, ಯಲ್ಲಪ್ಪ ರೊಳ್ಳಿ ಇದ್ದರು.

ಪ್ರಗತಿ ಹಂತದ ಕಾಮಗಾರಿ ಪೂರ್ಣಗೊಳಿಸಿ

ವಿಜಯಪುರ: ಜಿಲ್ಲೆಯ ತಿಕೋಟಾ, ಬಬಲೇಶ್ವರ ಹಾಗೂ ವಿಜಯಪುರ ತಾಲೂಕುಗಳ ವಿವಿಧ ಗ್ರಾಮಗಳ ಸ್ಥಳಕ್ಕೆ ಭೇಟಿ ನೀಡಿದ ಜಿಪಂ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಅವರು ರಸ್ತೆ ಕಾಮಗಾರಿ ಹಾಗೂ ಬ್ರಿಡ್ಜ್ ಕಾಮಗಾರಿ ಪರಿಶೀಲಿಸಿದರು.

ತಿಕೋಟಾ ತಾಲೂಕಿನ ಹರನಾಳ ಗ್ರಾಮದ ಪೂರ್ಣಗೊಂಡಿರುವ ಡೋಣಿ ನದಿಯ ಹೂಳು ತೆಗೆಯುವ ಕಾಮಗಾರಿ ಪರಿಶೀಲನೆ ನಡೆಸಿದರು. ಬಳಿಕ ಬಬಲೇಶ್ವರ ತಾಲೂಕಿನ ಸಾರವಾಡ ಹಾಗೂ ಹೊನಗನಹಳ್ಳಿ ಗ್ರಾಮದ ವ್ಯಾಪ್ತಿಯ ಸೇತುವೆ, ವಿಜಯಪುರ ತಾಲೂಕು ವ್ಯಾಪ್ತಿಯ ಹಿಟ್ಟಿನಹಳ್ಳಿ ಗ್ರಾಮದ ಹತ್ತಿರ ಇರುವ ಸೇತುವೆಗಳ ಹೂಳು ತೆಗೆಯುವ ಕಾಮಗಾರಿ ಪರಿಶೀಲಿಸಿದರು.

ಬಳಿಕ ಮಾತನಾಡಿದ ಅವರು, ಹೂಳು ತೆಗೆಯುವ ಕಾಮಗಾರಿಗಳು ಪ್ರಗತಿ ಹಂತದಲ್ಲಿರುವುದರಿಂದ ನಿಯಮಾನುಸಾರ ಪೂರ್ಣಗೊಳಿಸಬೇಕು. ಹಿಟ್ಟಿನಹಳ್ಳಿ ಗ್ರಾಮದ ಸೇತುವೆ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ಸಂಜಯ ಕೋಟೆನ್ನವರ, ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ವಿದ್ಯಾಧರ ನ್ಯಾಮಗೊಂಡ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ರವಿ ಪವಾರ ಇದ್ದರು.



ರಾಜಕೀಯೇತರ ಸಂಘಟನೆ ಗಟ್ಟಿಗೊಳ್ಳಲಿ



ವಿಜಯಪುರ: ಯಾವ ಸಮಾಜದ ರಾಜಕೀಯೇತರ ಸಂಘಟನೆಯ ಬೇರು ಗಟ್ಟಿಯಾಗಿರುತ್ತೊ, ಆ ಸಮುದಾಯ ರಾಜಕೀಯ ಅಧಿಕಾರವನ್ನು ಪಡೆದು ಆಳುವ ವರ್ಗವಾಗುತ್ತದೆ ಎಂದು ದಲಿತ ವಿದ್ಯಾರ್ಥಿ ಪರಿಷತ್ ರಾಜ್ಯಾಧ್ಯಕ್ಷ ಶ್ರೀನಾಥ ಪೂಜಾರಿ ಹೇಳಿದರು.

ನಗರದ ದಲಿತ ವಿದ್ಯಾರ್ಥಿ ಪರಿಷತ್ ಕಚೇರಿಯಲ್ಲಿ ಹಮ್ಮಿಕೊಂಡ ಬಹುಜನ ನಾಯಕ ದಾದಾಸಾಹೇಬ್ ಕಾನ್ಶಿರಾಮ್ ಅವರ 92ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆಧುನಿಕ ಸಮಾಜ ಪರಿವರ್ತನೆಯಲ್ಲಿ ದಾದಾಸಾಹೇಬ ಕಾನ್ಶಿರಾಮ್ ಅವರ ಕೊಡುಗೆ ಅನನ್ಯವಾದದ್ದು, ಶೋಷಿತ ಸಮುದಾಯಗಳ ಸಮಗ್ರ ಅಭಿವೃದ್ಧಿಯು ಅವರ ರಾಜಕೀಯ ಅಧಿಕಾರದಿಂದ ಮಾತ್ರ ಸಾಧ್ಯ ಎಂದು ಪ್ರಯೋಗಾರ್ಥವಾಗಿ ದೇಶದ ಬಹುದೊಡ್ಡ ರಾಜ್ಯವಾದ ಉತ್ತರಪ್ರದೇಶದಲ್ಲಿ ಸಾಧಿಸಿ ತೋರಿಸಿದ್ದು ನಮಗೆಲ್ಲ ಮಾದರಿಯಾಗಿದೆ ಎಂದರು.

ಪರಿಷತ್ ರಾಜ್ಯ ಸಂಚಾಲಕ ಬಾಲಾಜಿ ಕಾಂಬಳೆ ಮಾತನಾಡಿದರು.

ಮುಖಂಡರಾದ ಮಹಾದೇವ ಚಲವಾದಿ, ಪ್ರೇಮಾ ಕೋಳಿ, ದಾವಲ್ ನಾಯ್ಕೋಡಿ, ಸಂದೇಶ್ ಕುಮಟಗಿ, ಹುಚ್ಚಪ್ಪ ಭಾವಿಮನಿ, ವಿರೇಶ ಪೂಜಾ, ಭಾಗ್ಯಶ್ರೀ ಇದ್ದರು.

ಸಿಎಂ ಭೇಟಿಯಾದ ಯಶವಂತರಾಯಗೌಡ

ಇಂಡಿ: ಬೆಂಗಳೂರಿನ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಾಗೂ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಅವರನ್ನು ಇಂಡಿ ಶಾಸಕ ಯಶವಂತರಾಯಗೌಡ ವಿ.ಪಾಟೀಲ ಅವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಬಿ.ಎಸ್.ಕವಲಗಿ ಭೇಟಿ ಮಾಡಿ ಸನ್ಮಾನಿಸಿದರು.

ವಿಜಯಪುರ ಜಿಲ್ಲಾ ಗ್ಯಾರಂಟಿ ಅಧ್ಯಕ್ಷ ಇಲಿಯಾಸ್ ಬೋರಾಮಣಿ, ಇಂಡಿ ತಾಲೂಕು ಗ್ಯಾರಂಟಿ ಅಧ್ಯಕ್ಷ ಪ್ರಶಾಂತ ಕಾಳೆ, ಇಂಡಿ ಹಾಗೂ ಬಳ್ಳೊಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಶಿವಯೋಗೆಪ್ಪ ಚನಗೊಂಡ, ಬಿ ಸಿ ಸಾಹುಕಾರ್, ಶ್ರೀಕಾಂತ ಕೂಡಿಗನೂರ, ಇಂಡಿ ನಗರದ ಯೋಜನಾ ಪ್ರಾಧಿಕಾರ ಅಧ್ಯಕ್ಷ ಅಜಿತಕುಮಾರ್ ಧನಶೆಟ್ಟಿ ಹಾಗೂ ಸದಸ್ಯರು, ಜಿಲ್ಲಾ ಹಾಗೂ ತಾಲೂಕುಮಟ್ಟದ ಕೆಡಿಪಿ ಸದಸ್ಯರು, ಕಲಣಗೌಡ ಬಿರಾದಾರ, ಗುರಣಗೌಡ ಪಾಟೀಲ, ನ್ಯಾಯವಾದಿ ಬುದಿಹಾಳ ಸೇರಿದಂತೆ ಅನೇಕರು ಇದ್ದರು.



ಕಿರುಸುದ್ದಿ

ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಿ: ಈಶಪ್ಪ

• **ಕುಕನೂರ:** ಪಟ್ಟಣದ ಶ್ರೀರಮಾಬಾಯಿ ಅಂಬೇಡ್ಕರ್ ಪ್ರೌಢಶಾಲೆಯ ಆವರಣದಲ್ಲಿ ಮಾನವ ಬಂಧುತ್ವ ವೇದಿಕೆಯ ಗ್ರಾಮ ಸಂಚಾಲಕರ ಕಾರ್ಯಾಗಾರ ಭಾನುವಾರ ಜರುಗಿತು. ವೇದಿಕೆಯ ತಾಲುಕು ಸಂಚಾಲಕ ಈಶಪ್ಪ ದೊಡ್ಡಮನಿ ಮಾತನಾಡಿ, ಇಂದಿನ ದಿನಗಳಲ್ಲಿ ಗ್ರಾಮೀಣ ಭಾಗಗಳಲ್ಲಿ ಮೂಡನಂಬಿಕೆ, ಕಂದಾಚಾರ ಹೋಗಲಾಡಿಸಿ ವೈಜ್ಞಾನಿಕ ಮನೋಭಾವನೆ ಬೆಳೆಸಲು ಗ್ರಾಮ ಸಂಚಾಲಕರ ಪಾತ್ರ ಪ್ರಮುಖವಾಗಿದೆ. ವೇದಿಕೆಯ ಸಂಸ್ಥಾಪಕರಾದ ಸತೀಶ ಜಾರಕಿಹೊಳಿ ಅವರ ಕನಸು ನನಸು ಗೊಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಮಾನವ ಬಂಧುತ್ವ ವೇದಿಕೆಯ ಕಾರ್ಯ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಹಸ್ರಾರು ಜನರಿಗೆ ಅರಿವು ಮೂಡಿಸಲು ಮುಂದಾಗಬೇಕೆಂದು ಮನವಿ ಮಾಡಿದರು. ವಿಭಾಗೀಯ ಸಂಚಾಲಕ ಭೀಮಪ್ಪ ಹವಳಿ, ಜಿಲ್ಲಾ ಸಂಚಾಲಕ ಮಲ್ಲಿಕಾರ್ಜುನ ಗೋನಾಳ, ಶ್ರೀಕಾಂತ ಹೊಸಮನಿ, ಹನುಮಂತಪ್ಪ ಭಾವಿಮನಿ, ಮಾರುತೆಪ್ಪ ಹೊಸಮನಿ, ಸುಭಾ ನಿರಲಗಿ ಇತರರಿದ್ದರು.

ಎನ್‌ಎ ಪ್ರಸ್ತಾವನೆಗಳ ಸ್ಥಳ ಪರಿಶೀಲಿಸಿದ ಡಿಸಿ



• **ಕಲಬುರಗಿ:** ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಸೋಮವಾರ ಕೃಷಿಯೇತರ ಭೂಮಿ ಪರಿವರ್ತನೆಗೆ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳ ಕುರಿತು ಕಲಬುರಗಿ ತಾಲೂಕಿನ ಮಾಲಗತ್ತಿ, ಕೆರೂರು ಹಾಗೂ ಫರಹತಾಬಾದ್ ಗ್ರಾಮದಲ್ಲಿ ಸ್ಥಳ ಪರಿಶೀಲನೆ ನಡೆಸಿದರು. ನಂತರ ತಾಲೂಕಿನ ಫರಹತಾಬಾದ ಹೋಬಳಿಯ ಹೊನ್ನಕೀರಣಗಿ ಹಾಗೂ ನದಿಸಿನ್ನೂರ್ ಗ್ರಾಮದಲ್ಲಿ ನಡೆಯುತ್ತಿರುವ ಪಿಎಂ ಮಿತ್ರ ಮೆಗಾ ಜವಳಿ ಪಾರ್ಕ್ ಮೂಲಸೌಕರ್ಯ ಕಾಮಗಾರಿಗಳನ್ನು ವೀಕ್ಷಿಸಿದರು. ಕಲಬುರಗಿ ತಹಶೀಲ್ದಾರರ ಕೆ.ಆನಂದಶೀಲ ಸೇರಿದಂತೆ ಇತರೆ ಸಿಬ್ಬಂದಿ ಇದ್ದರು.

ವಿದ್ಯುತ್ ವ್ಯತ್ಯಯ ಇಂದು

• **ಕಲಬುರಗಿ:** ಯಡ್ರಾಮಿ 110 ಕೆ.ವಿ ವಿದ್ಯುತ್ ಉಪ-ಕೇಂದ್ರದಲ್ಲಿ ಮೆಂಟೇನೆನ್ಸ್ ಕೈಗೊಂಡಿದ್ದು ಮಾ.17ರಂದು ಬೆಳಗ್ಗೆ 8 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಯಡ್ರಾಮಿ ತಾಲೂಕಿನ ಯಡ್ರಾಮಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಯಡ್ರಾಮಿ, ಗೂಗಿಹಾಳ, ಕಡಕೊಳ, ವಡಗೆರಾ, ಅರಳಗುಂಡಗಿ, ಕೋಣಸಿರಸಗಿ, ಕುಕನೂರ, ಆಲೂರ್ ಎಲ್ಲ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಗೃಹ ಬಳಕೆ ಅಡುಗೆ ಅನಿಲದ ಕೊರತೆ ಇಲ್ಲ: ಡಿಸಿ

• **ಕಲಬುರಗಿ:** ಜಿಲ್ಲೆಯಲ್ಲಿ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಲಭ್ಯವಿದ್ದು, ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ. ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದೆಂದು ಕಲಬುರಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ. ಜಿಲ್ಲೆಯ ಎಲ್ಲಾ ಗೃಹ ಬಳಕೆ ಅಡುಗೆ ಅನಿಲ ಗ್ರಾಹಕರು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವದಂತಿಗಳಿಗೆ ಸಾರ್ವಜನಿಕರು ಕಿವಿಕೊಡಬಾರದು.

ದೇಶಾದ್ಯಂತ ಎಲ್.ಪಿ.ಜಿ.ಉತ್ಪಾದನೆ ಮತ್ತು ಬಾಟಲಿಂಗ್ ಎರಡು ಹೆಚ್ಚಿರುವುದರಿಂದ ದೇಶಿಯ ಎಲ್.ಪಿ.ಜಿ.ಯ ಕೊರತೆಯಿಲ್ಲ. ಜಿಲ್ಲೆಯಲ್ಲಿ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ ಸಾಕಷ್ಟು ಪ್ರಮಾಣದಲ್ಲಿ ಸದ್ಯ ದಾಸ್ತಾನು ಲಭ್ಯವಿರುವುದರಿಂದ ಗ್ರಾಹಕರು ಯಾರು ಗಾಬರಿಗೊಳ್ಳಬಾರದೆಂದು ಹಾಗೂ ಹೆಚ್ಚುವರಿಯಾಗಿ ದಾಸ್ತಾನುಮಾಡಿಕೊಳ್ಳಬಾರದೆಂದು ತಿಳಿಸಿದ್ದಾರೆ. ಬೇಡಿಕೆಯ ಭಾಗವನ್ನು ನಿರ್ವಹಿಸಲು, ಪ್ರತಿ ಗ್ರಾಹಕರಿಗೆ ಕೊನೆಯ ಮರುಪೂರಣದ ದಿನಾಂಕದಿಂದ 25 ದಿನಗಳವರೆಗೆ ಇಂಟರ್- ಬುಕ್ಕಿಂಗ್ ಅವಧಿಯನ್ನು ನಿಗದಿಪಡಿಸಲಾಗಿದೆ. ಒಂದು ವೇಳೆ ಯಾವುದೇ ಸಮಸ್ಯೆ ಕಂಡುಬಂದಲ್ಲಿ ತಾಲೂಕು ಮಟ್ಟದಲ್ಲಿ ಆಯಾ ತಾಲ್ಲೂಕಿನ ತಹಸೀಲ್ದಾರರಿಗೆ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲೆಯ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕರ ಕಚೇರಿಯ ದೂರವಾಣಿ ಸಂಖ್ಯೆ: 08472-200112 ಗೆ ಕರೆ ಮಾಡಬಹುದಾಗಿದೆ ಎಂದು ಪ್ರಕಟನೆ ತಿಳಿಸಿದೆ.



ಕುಕನೂರ: ಪಟ್ಟಣದ ಶ್ರೀರಮಾಬಾಯಿ ಅಂಬೇಡ್ಕರ್ ಪ್ರೌಢಶಾಲೆಯ ಆವರಣದಲ್ಲಿ ಮಾನವ ಬಂಧುತ್ವ ವೇದಿಕೆಯ ಗ್ರಾಮ ಸಂಚಾಲಕರ ಕಾಯಾ೯ಗಾರ ಭಾನುವಾರ ಜರುಗಿತು.

ಶುದ್ಧ ಕುಡಿಯುವ ನೀರು, ಮಜ್ಜಿಗೆ ವಿತರಣೆ

• **ಮಾನ್ವಿ:** ಪಟ್ಟಣದ ಪಂಪಾ ಉದ್ಯಾನದ ಹತ್ತಿರ ಕರ್ನಾಟಕ ರಕ್ಷಣ ವೇದಿಕೆ ಶಿವರಾಮೇಗೌಡ ಬಣ ತಾಲೂಕು ಘಟಕ ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಸಾರ್ವಜನಿಕರಿಗಾಗಿ ಹಮ್ಮಿಕೊಂಡ ಶುದ್ಧ ಕುಡಿಯುವ ನೀರು ಹಾಗೂ ಮಜ್ಜಿಗೆ ವಿತರಣೆ ಅರವಟಿಗೆಗೆ ಮಾನ್ವಿ ಪೊಲೀಸ್ ಠಾಣೆಯ ಪಿಐ ಸೋಮಶೇಖರ ಎಸ್.ಕೆಂಚರೆಡ್ಡಿ ಚಾಲನೆ ನೀಡಿದರು. ಬಳಿಕ ಮಾತನಾಡಿ, ಈ ಬಾರಿ ಬೇಸಿಗೆಯಲ್ಲಿ ಬಿಸಿಲಿನ ತಾಪ ಹೆಚ್ಚಿರುವುದರಿಂದ ಪ್ರತಿದಿನ ಪಟ್ಟಣಕ್ಕೆ ಬರುವ ಗ್ರಾಮೀಣ ಭಾಗದ ಜನರಿಗೆ ಹಾಗೂ ವೃದ್ಧರು, ಮಕ್ಕಳು, ಮಹಿಳೆಯರಿಗೆ ಅತಿಯಾದ ಬಿಸಿಲಿರುವುದರಿಂದ ಬಾಯಾರಿ ಬರುವವರಿಗೆ? ಕುಡಿಯುವ ನೀರು ಮಜ್ಜಿಗೆಯನ್ನು ನೀಡುವ ಕಾರ್ಯಕ್ರಮ ಹಮ್ಮಿಕೊಂಡಿರುವುದರಿಂದ ಜನರಿಗೆ ಅನುಕೂಲವಾಗುತ್ತದೆ ಎಂದರು. ಕರ್ನಾಟಕ ರಕ್ಷಣ ವೇದಿಕೆ ಶಿವರಾಮೇಗೌಡ ಬಣ ತಾಲೂಕು ಘಟಕದ ಅಧ್ಯಕ್ಷ ನರಸಿಂಹ ಎನ್.ಎಚ್.ಮಾತನಾಡಿ, ಪ್ರತಿದಿನ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ನೀಡುವುದಕ್ಕಾಗಿ ಅರವಟಿಗೆ ವ್ಯವಸ್ಥೆಯನ್ನು ಮಾಡಲಾಗಿದ್ದು ವಾರಕ್ಕೆ ಒಮ್ಮೆ ಮಜ್ಜಿಗೆ ವಿತರಿಸಲಾಗುವುದು. ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಬೇಕೆಂದರು. ಸಂತೋಷ್ ಕುಮಾರ್ ಜೈನ್, ಕರವೇ ಪ್ರಾಧಾನ ಕಾರ್ಯದರ್ಶಿ ದೀಪಕ್ ಕುಮಾರ್ ಯಾದವ್, ತಾ.ಗೌರವಾಧ್ಯಕ್ಷರಾದ ಯಲ್ಲಪ್ಪ ನೆಲಗಲ್, ಚೇತನ್‌ಕುಮಾರ್, ಚಂದ್ರ ಮುದ್ದಾಪುರ್, ರವಿ ಮದ್ದಾಪುರ್, ಶಿವು ಕುಮಾರ, ಆನಂದ್ ಸ್ವಾಮಿ, ಅನಿಲ್‌ಕುಮಾರ್, ವಿನಯ ಕುಮಾರ್, ಬಿ.ಎಂ.ಸನತ್ ಕುಮಾರ್, ಹರೀಶ್ ಕಾತರಕಿ ಇತರರಿದ್ದರು.



ಮಾನ್ವಿ: ಪಟ್ಟಣದ ಪಂಪಾ ಉದ್ಯಾನದ ಹತ್ತಿರ ಕರ್ನಾಟಕ ರಕ್ಷಣ ವೇದಿಕೆ ಶಿವರಾಮೇಗೌಡ ಬಣ ತಾಲೂಕು ಘಟಕ ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಸಾರ್ವಜನಿಕರಿಗಾಗಿ ಹಮ್ಮಿಕೊಂಡ ಶುದ್ಧ ಕುಡಿಯುವ ನೀರು ಹಾಗೂ ಮಜ್ಜಿಗೆ ವಿತರಣೆ ಅರವಟಿಗೆಗೆ ಮಾನ್ವಿ ಪೊಲೀಸ್ ಠಾಣೆಯ ಪಿಐ ಸೋಮಶೇಖರ ಎಸ್.ಕೆಂಚರೆಡ್ಡಿ ಚಾಲನೆ ನೀಡಿದರು.

ಆಯವ್ಯಯ ತಯಾರಿಕೆಯ ಪೂರ್ವಭಾವಿ ಸಭೆ

ಪೈಪ್‌ಲೈನ್ ದುರಸ್ತಿಗೆ ಅನುದಾನ ಮೀಸಲಿಡಿ

• **ರಾಯಚೂರು:** ನಗರಕ್ಕೆ ಸ್ಥಳೀಯರು ಸೇರಿದಂತೆ ಬೇರೆ ಸ್ಥಳಗಳಿಂದ ಆಗಮಿಸುವ ಸಾರ್ವಜನಿಕರ ಉಪಯೋಗಕ್ಕೆ ನಗರದ ಅಗತ್ಯ ಸ್ಥಳಗಳಲ್ಲಿ ಮುಕ್ತ ಶೌಚಾಲಯಗಳ ನಿರ್ಮಾಣಕ್ಕೆ ಹಾಗೂ ನಗರದ ಕೆಲವೆಡೆ ನೀರೊದಗಿಸುವ ಪೈಪ್‌ಲೈನ್ ಗಳು ಹಾಳಾಗಿರುವುದರಿಂದ ಕಲುಷಿತ ನೀರು ಬರುವುದನ್ನು ತಪ್ಪಿಸುವುದಕ್ಕೆ ಆಯವ್ಯಯದಲ್ಲಿ ಅನುದಾನ ತಗೆದಿರಿಸುವಂತೆ ಸಾರ್ವಜನಿಕರು ಆಗ್ರಹಿಸಿದರು.

ಮಹಾನಗರ ಪಾಲಿಕೆಯ 2026-27ನೇ ಸಾಲಿನ ಆಯವ್ಯಯ ತಯಾರಿಕೆ ಹಿನ್ನೆಲೆಯಲ್ಲಿ ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ಪಾಲಿಕೆಯ ಜೋನಲ್-1ರ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯಲ್ಲಿ ಈ ಒತ್ತಾಯ ಕೇಳಿಬಂದಿತು.

ಜುಬಿನ್ ಮೊಹಾಪಾತ್ರ ಮಾತನಾಡಿ, ನಗರದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಬಜೆಟ್ ಸಿದ್ಧಪಡಿಸಲು ಸಾರ್ವಜನಿಕರ ನೇರ ಪಾಲ್ಗೊಳ್ಳುವಿಕೆ ಅತ್ಯಗತ್ಯವಾಗಿದೆ. ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ನಂತರ ಮೊದಲ ಬಜೆಟ್ ಇದಾಗಿದ್ದು, ಪ್ರತಿಯೊಬ್ಬ ನಾಗರಿಕರು ಮುಕ್ತವಾಗಿ ತಮ್ಮ ಸಲಹೆ ಮತ್ತು ಸೂಚನೆಗಳನ್ನು ನೀಡಿದ್ದನ್ನು ಸ್ವಾಗತಿಸಿ ಟಿಪ್ಪಣಿ ಮಾಡಿಕೊಂಡರು.

ರವಿಂದ್ರ ಜಲ್ದಾರ್ ಮಾತನಾಡಿ, ನಗರಕ್ಕೆ ರಾಂಪೂರ ಮತ್ತು ಕೃಷ್ಣ ನದಿಯಿಂದ ನೀರು ಸರಬರಾಜು ಮಾಡಲಾಗುತ್ತದೆ, ಮೋಟಾರುಗಳು ದುರಸ್ತಿಯಾದಲ್ಲಿ ನೀರು ಸರಬರಾಜು ನಿಲ್ಲುತ್ತದೆ. ಹೆಚ್ಚುವರಿ ಮೋಟಾರುಗಳ ವ್ಯವಸ್ಥೆ ಒದಗಿಸಿಕೊಡಬೇಕು. ಹೊಸ ಯೋಜನೆಗಳನ್ನು ರೂಪಿಸಬೇಕು. ನಗರದಲ್ಲಿ ಸುಸಜ್ಜಿತ ಮಾರುಕಟ್ಟೆ ವ್ಯವಸ್ಥೆ ಮಾಡಬೇಕು ಎಂದರು.



▸▸ ನಗರದಲ್ಲಿರುವ ಶಿಕ್ಷಣ ಸಂಸ್ಥೆಗಳಿಂದ ಸರಿಯಾದ ತೆರಿಗೆ ಸಂಗ್ರಹಣೆಯಾಗಬೇಕು. ನಗರದಲ್ಲಿ ಸಾಕಷ್ಟು ರಸ್ತೆಗಳಲ್ಲಿ ಸಾರ್ವಜನಿಕ ಶೌಚಾಲಯಗಳಿಲ್ಲ.

▸▸ ನಗರದ ಬೀದಿ ಬೀದಿಗಳಲ್ಲಿ ಸಣ್ಣ ಪುಟ್ಟ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದು, ರಸ್ತೆ ತೆರವು ನೆಪದಲ್ಲಿ ಅಂಗಡಿಗಳನ್ನು ತೆರವು ಮಾಡುವ ಮುನ್ನ ಮಾಹಿತಿ ನೀಡಬೇಕು.

ಉಸ್ಮಾನಿಯಾ ತರಕಾರಿ ಮಾರುಕಟ್ಟೆಯ ಮಾಜಿ ಅಧ್ಯಕ್ಷ ಎನ್.ಮಹಾವೀರ ಮಾತನಾಡಿ, ನಗರ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಇದಕ್ಕೆ ತಕ್ಕಂತೆ ಮಾರುಕಟ್ಟೆ ವಿಸ್ತರಣೆ ಮಾಡಬೇಕು. ನಾಲ್ಕು ದಿಕ್ಕಿನಲ್ಲಿ ಜೋನ್ ವಲಯ ಮಾಡಿ, ತರಕಾರಿ ಮಾರುಕಟ್ಟೆ, ಹೂ-ಹಣ್ಣುಗಳ ಮಾರುಕಟ್ಟೆ, ಮಾಂಸ ಮಾರುಕಟ್ಟೆ ಮಾಡಬೇಕು ಎಂದರು.

ದಲಿತ ಸಂಘಟನೆ ಮುಖಂಡ ರಾಜು ಪಟ್ಟಿ ಮಾತನಾಡಿ, ನಗರದಲ್ಲಿರುವ ಶಿಕ್ಷಣ ಸಂಸ್ಥೆಗಳಿಂದ ಸರಿಯಾದ ತೆರಿಗೆ ಸಂಗ್ರಹಣೆಯಾಗಬೇಕು. ನಗರದಲ್ಲಿ ಸಾಕಷ್ಟು ರಸ್ತೆಗಳಲ್ಲಿ ಸಾರ್ವಜನಿಕ ಶೌಚಾಲಯಗಳಿಲ್ಲ, ಇದರಿಂದ ನಗರದ ಜನರಿಗೆ ತೊಂದರೆಯಾಗಿದೆ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಕ್ರಮವಹಿಸಬೇಕೆಂದರು.

ಬೀದಿಬದಿ ವ್ಯಾಪಾರಿಗಳ ಸಂಘದ ಮುಖ್ಯಸ್ಥ ಯೇಸುಮಿತ್ರ ಮಾತನಾಡಿ, ನಗರದ ಬೀದಿ ಬೀದಿಗಳಲ್ಲಿ ಸಣ್ಣ ಪುಟ್ಟ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದು, ರಸ್ತೆ ತೆರವು ನೆಪದಲ್ಲಿ ಅಂಗಡಿಗಳನ್ನು ತೆರವು ಮಾಡುವ ಮುನ್ನ ಮಾಹಿತಿ ನೀಡಬೇಕು. ಬೀದಿಬದಿ ವ್ಯಾಪಾರಿಗಳಿಗೆ ಪ್ರತ್ಯೇಕವಾಗಿ ಮಳಿಗೆ ಮಾಡಿ ಒಂದೇ ಕಡೆಗೆ ಇರುವಂತೆ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದರು.

ಮಹಾನಗರ ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತ ಶರಣಪ್ಪ, ಪಾಲಿಕೆಯ ಅಭಿವೃದ್ಧಿ ವಿಭಾಗದ ಉಪ ಆಯುಕ್ತ ಭರತ್, ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತ ಸಂತೋಷ ರಾಣಿ, ಜಿ.ಪಂ ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ, ಪಾಲಿಕೆಯ ವಲಯ-1ರ ಉಪ ಆಯುಕ್ತ ಮಲ್ಲಿಕಾರ್ಜುನ, ಪಾಲಿಕೆಯ ಸಮನಯ ಅಧಿಕಾರಿ ಕೃಷ್ಣ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳಿದ್ದರು.

ಲೋಕ ಅದಾಲತ್: 49,953 ಪ್ರಕರಣ ಇತ್ಯರ್ಥ

• **ಕೊಪ್ಪಳ:** ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ, ಕುಷ್ಟಗಿ ಹಾಗೂ ಯಲಬುರ್ಗಾ ನ್ಯಾಯಾಲಯಗಳಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಲಾಗಿದೆ.

ಈ ಸಂದರ್ಭದಲ್ಲಿ ಒಟ್ಟು 7 ಪ್ರಕರಣಗಳಲ್ಲಿ ಗಂಡ-ಹೆಂಡತಿಯರು ತಮ್ಮ ಮನಸ್ತಾಪವನ್ನು ಬಿಟ್ಟು, ಮಧ್ಯಸ್ಥಿಕೆಗಾರರು, ವಕೀಲರು ಹಾಗೂ ನ್ಯಾಯಾಧೀಶರು ನೀಡಿದ ಸೂಕ್ತ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಮತ್ತೆ ಒಟ್ಟಿಗೆ ಬಾಳು ನಡೆಸಲು ಒಪ್ಪಿಕೊಂಡಿರುವುದು ವಿಶೇಷವಾಗಿತ್ತು.

ನ್ಯಾಯಾಲಯಗಳಲ್ಲಿ ನಡೆಯುತ್ತಿದ್ದ ವಿಮೆ, ನೀರಿನ ಬಿಲ್, ಬ್ಯಾಂಕ್ ಸಾಲ, ಮನೆ ಕರ, ಕೌಟುಂಬಿಕ ದೌರ್ಜನ್ಯ, ಜೀವನಾಂಶ, ಚೆಕ್ ಬೌನ್ಸ್, ಜನನ-ಮರಣ, ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಸೇರಿದಂತೆ ವಿವಿಧ ರೀತಿಯ ಒಟ್ಟು 5123 ಪ್ರಕರಣಗಳ ಪೈಕಿ 3032 ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು.

ಇದೇ ವೇಳೆ ವಿಮೆ, ನೀರಿನ ಕರ, ಮೋಟಾರ್ ವಾಹನ ಅಪಘಾತ ಸೇರಿದಂತೆ ವಿವಿಧ ಪೂರ್ವ ದಾವೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 52,194 ಪ್ರಕರಣಗಳ ಪೈಕಿ 46,921 ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಲಾಯಿತು. ಇತ್ಯರ್ಥಗೊಂಡ ಪ್ರಕರಣಗಳ ಒಟ್ಟು ಮೌಲ್ಯ 3,21,81,082 ರೂ. ಆಗಿದೆ.

ಒಟ್ಟಾರೆ ಒಂದೇ ದಿನದಲ್ಲಿ ನಡೆದ ಈ ಲೋಕ ಅದಾಲತ್‌ನಲ್ಲಿ ಒಟ್ಟು 57,316 ಪ್ರಕರಣಗಳ ಪೈಕಿ 49,953 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಇತ್ಯರ್ಥಗೊಂಡ ಪ್ರಕರಣಗಳ ಒಟ್ಟು ಮೌಲ್ಯ 44,44,49,017 ರೂ. ಆಗಿದೆ.

> **ಈ ಬಾರಿ ದಾಖಲೆ ಪ್ರಮಾಣದಲ್ಲಿ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಲು ಸಹಕರಿಸಿದ ನ್ಯಾಯಾಧೀಶರು, ವಕೀಲರು, ಕಕ್ಷಿಗಾರರು ಹಾಗೂ ಮಧ್ಯಸ್ಥಿಕೆಗಾರ ವಕೀಲರಿಗೆ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಧನ್ಯವಾದ.**
> ■ ಚಂದ್ರಶೇಖರ, ಜಿಲ್ಲಾ ಸತ್ರ ನ್ಯಾಯಾಧೀಶ



ಹನುಮಸಾಗರ: ಬೃಹತ್ ರಕ್ತದಾನ ಶಿಬಿರ

• **ಹನುಮಸಾಗರ:** ಪಟ್ಟಣದ ಶ್ರೀಕರಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಪಟ್ಟಣದ ಕರಿಸಿದ್ದೇಶ್ವರ ಮಠದ ಬಸವ ಮಂಟಪದಲ್ಲಿ ಕರಿಸಿದ್ದೇಶ್ವರ ಜಾತ್ರಾ ಸಮಿತಿ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕೊಪ್ಪಳ, ಪ್ರಾಥಮಿಕ ಆರೋಗ್ಯ ಕೇಂದ್ರ, ಪತ್ರಿಕಟ್ಟಿ ಬಸವೇಶ್ವರ ತರುಣ ಸಂಘ ಹನುಮಸಾಗರ ಗಾನಯೋಗಿ ಡಾ.ಪಂ.ಪುಟ್ಟರಾಜ ಕವಿಗವಾಯಿಗಳ ಭಜನಾ ಸಂಘ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಲ್ಲಿ ಭಾನುವಾರ ಬೃಹತ್ ರಕ್ತದಾನ ಶಿಬಿರ ಜರುಗಿತು. ಶಿವಕುಮಾರ್ ದೇವರು ಪ್ರವಚನಕಾರರು ಬಳೂಟಗಿ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ಅನ್ನದಾನ, ನೇತ್ರದಾನ, ಭೂದಾನ, ವಿದ್ಯಾದಾನ ಇವೆಲ್ಲವುಗಳಲ್ಲಿ ಮನುಷ್ಯರ ಜೀವ ಉಳಿಸಲು ಅತ್ಯಂತ ಅವಶ್ಯಕವಾಗಿರುವ ರಕ್ತದಾನ ಶ್ರೇಷ್ಠವಾಗಿದೆ. ರಕ್ತವನ್ನು ಕೃತಕವಾಗಿ ತಯಾರಿಸಲು ಸಾಧ್ಯವಾಗದಿರುವುದರಿಂದ ಮನುಷ್ಯರ ದೇಹದಿಂದಲೇ ತೆಗೆದು ಇನ್ನೊಬ್ಬ ರೋಗಿಗೆ ನೀಡಬೇಕಾಗುತ್ತದೆ. ರಕ್ತದಾನ ಮಾಡುವುದರಿಂದ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗಿ ಹೊಸ ಚೈತನ್ಯ ಕೂಡ ಮೂಡುತ್ತದೆ. ಆದುದರಿಂದ ರಕ್ತದ ಅವಶ್ಯಕತೆ ಹಾಗೂ ಅಗತ್ಯ ಬಿದ್ದಾಗ ಪ್ರತಿಯೊಬ್ಬರು 18 ವರ್ಷದಿಂದ ಮೇಲ್ಪಟ್ಟು 45 ಕೆಜಿ ತೂಕದ ಮೇಲಿದ್ದು 65 ವರ್ಷದ ಒಳಗಿನವರು ಯಾರು ಕೂಡ ರಕ್ತದಾನ ಮಾಡಬಹುದಾಗಿದೆ ಎಂದು ಹೇಳಿದರು.

ಮಲ್ಲಯ್ಯ ಕೋಮಾರಿ ಜಾತ್ರಾ ಸಮಿತಿ ಕಾರ್ಯದರ್ಶಿ ಮಾತನಾಡಿ, ರಕ್ತದಾನ ಎಂಬುದು ಒಂದು ಪುಣ್ಯದ ಕೆಲಸ. ಒಬ್ಬ ರಕ್ತದಾನ ಮಾಡುವುದರಿಂದ 3-4 ಮಂದಿಯ ಜೀವ ಉಳಿಸಬಹುದಾಗಿದೆ. ಯುವಕರು ಸ್ವಯಂ ಪ್ರೇರಿತರಾಗಿ ನೂರಾರು ಜನ ರಕ್ತದಾನ ಮಾಡಿರುವುದು ಒಳ್ಳೆಯ ಕೆಲಸ ಎಂದರು.

ರಕ್ತದಾನ ಮಾಡಿದ ದಾನಿಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಲಾಯಿತು ಗ್ರಾಮದ ಹಿರಿಯ ಮುಖಂಡ ವಿಶ್ವನಾಥ್ ಕನ್ನೂರ ಮಹಾಂತೇಶ ಅಗಸಿ ಮುಂದಿನ, ಮಹಾಂತಯ್ಯ ಕೋಮಾರಿ,ಶರಣಪ್ಪ ಹುಬ್ಬಳ್ಳಿ, ಗಣೇಶ್ ಪವಡಶೆಟ್ಟರ್, ಅಂದಪ್ಪ ಲಂಗಟದ, ಕರ್ಕಂಠಿ ಮಠ, ರಕ್ತದಾನಿಗಳಾದ ನಾಗಯ್ಯ ಹಿರೇಮಠ, ಶಿವಕುಮಾರ ಚಿನಿವಾಲರ, ರಾಜಶೇಖರ್ ವಸ್ತ್ರದ, ಗುರುದೇವ್ ಚಿನಿವಾಲರ, ಸುನಿಲ್ ವಿಭೂತಿ, ಶ್ರೀಕಾಂತ್ ಗೊರೆಬಾಳ್, ವಿಜಯ್ ಕುಮಾರ್ ಕುಷ್ಟಗಿ ಇತರರಿದ್ದರು.



ಗ್ರಾಮೀಣ ಕ್ಷೇತ್ರದಲ್ಲಿ ಪಶು ಚಿಕಿತ್ಸೆಗೆ ವೈದ್ಯರ ಕೊರತೆ: ಸದನದಲ್ಲಿ ಚರ್ಚೆ

• **ಕಲಬುರಗಿ:** ಗ್ರಾಮೀಣ ವಿಧಾನಸಭೆ ಕ್ಷೇತ್ರದಲ್ಲಿ ಪಶು ಚಿಕಿತ್ಸಾ ಸೇವೆಗಳ ಕೊರತೆ ಕುರಿತು ವಿಧಾನಸಭೆ ಅಧಿವೇಶನದಲ್ಲಿ ಚರ್ಚೆ ನಡೆಯಿತು. ಪಶು ವೈದ್ಯರ ಕೊರತೆಯಿಂದ ರೈತರು ತಮ್ಮ ಜಾನುವಾರುಗಳಿಗೆ ಸಮರ್ಪಕ ಚಿಕಿತ್ಸೆ ಪಡೆಯಲು ಕಷ್ಟಪಡುವ ಸ್ಥಿತಿ ಉಂಟಾಗಿದೆ ಎಂದು ಶಾಸಕ ಬಸವರಾಜ ಮತ್ತಿಮಡು ಸದನದ ಗಮನಕ್ಕೆ ತಂದರು.



ಕ್ಷೇತ್ರದಲ್ಲಿದ್ದ ಕೆಲವು ಪಶು ವೈದ್ಯರನ್ನು ಮೈಸೂರು ಭಾಗಕ್ಕೆ ವರ್ಗಾವಣೆ ಮಾಡಿರುವುದರಿಂದ ಅನೇಕ ಪಶು ಆಸ್ಪತ್ರೆಗಳು ಪ್ರಭಾರಿ ವೈದ್ಯರ ಮೇಲೆಯೇ ಅವಲಂಬಿತವಾಗಿವೆ. ಇದರಿಂದ ಗ್ರಾಮೀಣ ಪ್ರದೇಶದ ರೈತರು ಪಶುಗಳ ಚಿಕಿತ್ಸೆಗೆ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆಕ್ಷೇಪಿಸಿದರು.

ಶಾಸಕರ ಪ್ರಶ್ನೆಗೆ ಉತ್ತರಿಸಿದ ಪಶು ಸಂಗೋಪನಾ ಇಲಾಖೆ ಸಚಿವ ಕೆ.ವೆಂಕಟೇಶ, ಕಲಬುರಗಿ ಗ್ರಾಮೀಣ ಕ್ಷೇತ್ರದಲ್ಲಿ ಸುಮಾರು 64 ಸಾವಿರ ಜಾನುವಾರುಗಳಿದ್ದು, ನಿಯಮಾನುಸಾರ 13 ಪಶು ಆಸ್ಪತ್ರೆಗಳು ಸಾಕಾಗುತ್ತವೆ. ಆದರೆ ಈಗಾಗಲೇ 31 ಪಶು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು. ಪ್ರಸ್ತುತ 17 ಪಶು ವೈದ್ಯರು ಮತ್ತು 53 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ಇತರ ಪ್ರದೇಶಗಳಿಗೆ ಹೋಲಿಸಿದರೆ ಇಲ್ಲಿ ವೈದ್ಯರ ಕೊರತೆ ಕಡಿಮೆ ಇದೆ ಎಂದು ಹೇಳಿದರು.

ಆದರೆ ಈ ಹೇಳಿಕೆಗೆ ಪ್ರತಿಕ್ರಿಯಿಸಿದ ಶಾಸಕ ಮತ್ತಿಮಡು, ಗ್ರಾಮೀಣ ಕ್ಷೇತ್ರದಲ್ಲಿ ನಾಲ್ಕು ತಾಲೂಕುಗಳಿದ್ದು, ಅನೇಕ ಪಶು ಆಸ್ಪತ್ರೆಗಳು ಮುಚ್ಚಿರುವುದಾಗಿ ಹಾಗೂ ವಾಹನಗಳ ಸೇವೆಯೂ ಸರಿಯಾಗಿ ಕಾಣುತ್ತಿಲ್ಲ ಎಂದು ಹೇಳಿದರು. ಬಹುತೇಕ ಕಡೆ ಪ್ರಭಾರಿ ವೈದ್ಯರೇ ಇದ್ದು, ಶಾಶ್ವತ ವೈದ್ಯರ ನೇಮಕ ಅಗತ್ಯವಿದೆ ಎಂದು ಒತ್ತಾಯಿಸಿದರು.

ಈ ವೇಳೆ ಸಚಿವರು ಮುಂದಿನ ದಿನಗಳಲ್ಲಿ ಹೆಚ್ಚುವರಿ ಪಶು ವೈದ್ಯರನ್ನು ನಿಯೋಜಿಸುವ ಮೂಲಕ ಸಮಸ್ಯೆ ಪರಿಹರಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಭಾರತ್ ಸ್ಕೌಟ್ಸ್, ಗೈಡ್ಸ್ ಘಟಕದಿಂದ ಬೇಸಿಗೆ ಶಿಬಿರ

• **ಮಸ್ಕಿ:** ಪಟ್ಟಣದ ಶ್ರೀವಿರೇಶ್ವರ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕದಿಂದ ಬೇಸಿಗೆ ಶಿಬಿರದ ಕಾರ್ಯಕ್ರಮ ಜರುಗಿತು.

ಈ ವೇಳೆ ಎಸ್‌ಡಿಎಂ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಹನುಮಂತಪ್ಪ ಯಾದವ ಮಾತನಾಡಿ, ಮಕ್ಕಳಿಗೆ ನಾಯಕತ್ವ,ಸಾಹಸ,ತಂಡದ ಕೆಲಸ ಮತ್ತು ಆತ್ಮ ವಿಶ್ವಾಸವನ್ನು ಬೆಳೆಸುವ ತರಬೇತಿಯಾಗಿದೆ. ಈ ಶಿಬಿರದಲ್ಲಿ ಟೆಂಟ್ ನಿರ್ಮಾಣ ಕ್ಯಾಂಪ್ ಫೈರ್, ಟ್ರೆಕ್ಕಿಂಗ್, ಪ್ರಥಮ ಚಿಕಿತ್ಸೆ ಮತ್ತು ಕಲೆ-ಕೈಕಸಬುಗಳಂತಹ ಚಟುವಟಿಕೆ ಮೂಲಕ ಶಿಸ್ತು ಮತ್ತು ಸೇವಾ ಮನೋಭಾವನ್ನು ಕಲಿಸಲಾಗುತ್ತದೆ ಎಂದು ತಿಳಿಸಿದರು.



ವಿರೇಶ್ವರ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕಿಯಾದ ಕವಿತಾ ಹೂವಿನಭಾವಿ ರವರು ಮಾತನಾಡಿ,ಕೌಶಲ್ಯಗಳ ಅಭಿವೃದ್ಧಿ, ನಾಯಕತ್ವದ ಗುಣಗಳನ್ನು ಆತ್ಮ ವಿಶ್ವಾಸವನ್ನು ಶಿಸ್ತು ಮತ್ತು ಪರಿಸರ ಸ್ನೇಹಿ ಜೀವನ ಶೈಲಿ ಕಲಿಸುವುದು ಮಕ್ಕಳಲ್ಲಿ ಸಾಮಾಜಿಕ ಜವಾಬ್ದಾರಿ, ಸಾಮಾಜಿಕವಾಗಿ ಪರಸ್ಪರ ಸಹಕಾರ ಮತ್ತು ಬೆಳೆಸುವುದು ಬೆಂಕಿರಹಿತ ಅಡಿಗೆ ಮಾಡುವುದನ್ನು ನಮ್ಮ ಮಕ್ಕಳು ಕಲಿಯಬೇಕು ಎಂದು ಹೇಳಿದರು. ಕವಿತಾ ಹೂವಿನಭಾವಿ, ಮಹ್ಮದ್ ಹನೀಫ್, ಚನ್ನಬಸವ ತುಪ್ಪದೂರ ಹನುಮಂತಪ್ಪ ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಇದ್ದರು.

ರೇಣುಕಾಚಾರ್ಯರ ಕೊಡುಗೆ ಅಪಾರ: ಸಿದ್ಧರಾಮೇಶ್ವರ ಶ್ರೀ

• **ಯಲಬುರ್ಗಾ:** ಜಗದ್ಗುರು ರೇಣುಕಾಚಾರ್ಯರು ಸರ್ವ ಜನಾಂಗದ ಒಳಿತಿಗಾಗಿ ಶ್ರಮಿಸಿದ್ದಾರೆ ಎಂದು ಎಂದು ಯಲಬುರ್ಗಾದ ಸಂಸ್ಥಾನ ಹಿರೇಮಠದ ಸಿದ್ಧರಾಮೇಶ್ವರ ಸ್ವಾಮೀಜಿ ಹೇಳಿದರು.

ತಾಲೂಕಿನ ಕಲ್ಲೂರು ಗ್ರಾಮದಲ್ಲಿ ವೀರಮಹೇಶ್ವರ ಜಂಗಮ ಕ್ಷೇಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ನಡೆದ ಶ್ರೀಜಗದ್ಗುರು ರೇಣುಕಾಚಾರ್ಯರಜಯಂತ್ಯುತ್ಸವ, ತಾಲೂಕು ಸಮಾವೇಶದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಮಾನವೀಯ ಉದಾತ್ತ ಮೌಲ್ಯಗಳನ್ನು ಸಂವರ್ಧಿಸಿದ ಕೀರ್ತಿ ಶ್ರೀಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ. ಜತೆಗೆ ಯಲಬುರ್ಗಾ ಪಟ್ಟಣದಲ್ಲಿ ರೇಣುಕಾಚಾರ್ಯ ಮೂರ್ತಿ ಸ್ಥಾಪನೆಗಾಗಿ, ಮಂಗಲ ಭವನ ನಿರ್ಮಾಣಕ್ಕೆ ಕ್ಷೇತ್ರದ ಶಾಸಕ ಬಸವರಾಜ ರಾಯರೆಡ್ಡಿಯವರು ಮಂಜೂರು ಮಾಡಿಸಬೇಕೆಂದು ಮನವಿ ಮಾಡಿದರು.



ಬ್ಲಾಕ್ ಕಾಂಗ್ರೆಸ್ ತಾಲೂಕಾಧ್ಯಕ್ಷ ಕೆರಿಬಸಪ್ಪ ನಿಡಗುಂದಿ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಸುಧೀರ ಕೊರ್ಲಳ್ಳಿ, ಜಂಗಮ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಹಂಪಯ್ಯಸ್ವಾಮಿ ಹಿರೇಮಠಮಾತನಾಡಿಕಲಿಯುಗದಲ್ಲಿ ವೀರಶೈವ ಧರ್ಮವನ್ನು ಬೋಧಿಸಲು ಬಂದ ಆಚಾರ್ಯರಲ್ಲಿ ಜಗದ್ಗುರು ರೇಣುಕಾಚಾರ್ಯರು ಒಬ್ಬರು. ಅವರು ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ಸಾರಿದ ಮಹಾಮಹಿಮರಾಗಿದ್ದಾರೆ ಎಂದು ಹೇಳಿದರು.

ಸಂಘದ ಗೌರವಾಧ್ಯಕ್ಷ ಡಾ.ಅಂದಾನಯ್ಯ ಶ್ಯಾಡ್ಲಗೇರಿಮಠ, ಸಿದ್ದಯ್ಯ ಕಳ್ಳಿಮಠ ಸೇರಿದಂತೆ ಮತ್ತಿತರರು ಮಾತನಾಡಿದರು. ಇದಕ್ಕೂ ಪೂರ್ವದಲ್ಲಿ ಬೆಳಿಗ್ಗೆ ರೇಣುಕಾಚಾರ್ಯ ಮೂರ್ತಿಗೆ ರುದ್ರಾಭಿಷೇಕ ಪೂಜಾ ಕಾರ್ಯಕ್ರಮ ನಂತರ ಯಲಬುರ್ಗಾದ ಶ್ರೀಧರ ಮುರಡಿ ಹಿರೇಮಠದ ಬಸವಲಿಂಗೇಶ್ವರ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಜಂಗಮ ವಟುಗಳಿಗೆ ಅಯ್ಯಾಚಾರ ನಡೆಯಿತು.

ಶಿರಕೋಳದ ಗುರುಸಿದ್ದೇಶ್ವರ ಸ್ವಾಮೀಜಿಗಳಿಂದ ಐದು ದಿನಗಳ ಕಾಲ ನಡದುಕೊಂಡು ಬಂದ ಆಧ್ಯಾತ್ಮಿಕ ಪ್ರವಚನ, ಜೀವನ ದರ್ಶನ ಪ್ರವಚನ ಮಹಾಮಂಗಲೋತ್ಸವ ನಡೆಯಿತು. ಈ ವೇಳೆಯಲ್ಲಿ ಗಣ್ಯರಾದ ಶಿವಣ್ಣ ರಾಯರೆಡ್ಡಿ, ಶರಣಪ್ಪ ಗಾಂಜಿ, ಮಲ್ಲಿಕಾರ್ಜುನ ಜಕ್ಕಲಿ, ಶಿವಕುಮಾರ ನಾಗಲಾಪುರುಮಠ, ಅನಿಲ್ ಆಚಾರ, ವರದಯ್ಯ ಹೊಸಮನಿ, ಕಲ್ಲಯ್ಯ ಜಾರಗಡ್ಡಿಮಠ, ಕಲ್ಲಯ್ಯ ಹಿರೇಮಠ, ಕಲ್ಲಯ್ಯ ಸಂಗನಾಳಮಠ, ಡಾ.ಕೆ.ಜಿ.ಹಿರೇಮಠ, ಬಸವರಾಜ ಮಠದ, ಮಲ್ಲಯ್ಯ ಹಿರೇಮಠ, ಗವಿಸಿದ್ದಯ್ಯ ಹಿರೇಮಠ, ಕಲ್ಲನಗೌಡ ಪೊಲೀಸ್‌ಪಾಟೀಲ, ಗವಿಸಿದ್ದಯ್ಯ ಹಿರೇಮಠ, ಪ್ರಭಯ್ಯ ಸೊಪ್ಪಿಮಠ, ಡಾ.ನಾಗಯ್ಯ, ಸೋಮಲಿಂಗಯ್ಯ ಹಿರೇಮಠ, ಈಶಯ್ಯ ಶಿರೂರುಮಠ, ವೀರುಪಾಕ್ಷಯ್ಯ ಪರಯ್ಯನಮಠ, ವೀರುಪಾಕ್ಷಯ್ಯ ಗಂದದಥ, ಮಂಜುನಾಥ ಕಡೇಮನಿ, ದೊಡ್ಡಯ್ಯ ಸಂಗನಾಳಮಠ ಸೇರಿದಂತೆ ಜಂಗಮ ಸಮಾಜದವರು, ಗ್ರಾಮಸ್ಥರು ಇದ್ದರು.

ವಿದ್ಯಾರ್ಥಿಗಳ ಬೀಳ್ಕೊಡುಗೆ, ಸ್ನೇಹ ಸಮ್ಮಿಲನ ಕಾರ್ಯಕ್ರಮ

• **ಕುಷ್ಟಗಿ:** ತಾಲೂಕಿನ ಹಿರೇಮನ್ನಾಪುರ ಗ್ರಾಮದ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಸ್ನೇಹ ಸಮ್ಮಿಲನ ಅಂಗವಾಗಿ ವಾರ್ಷಿಕೋತ್ಸವ ಕಾರ್ಯಕ್ರಮವು ಶನಿವಾರ ಅದ್ದೂರಿಯಾಗಿ ನಡೆಯಿತು.

ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಲ್ಲಿರುವ ವಿವಿಧ ಪ್ರತಿಭೆಗಳನ್ನು ಹೊರಹೊಮ್ಮಿಸುವ ವೇದಿಕೆಯಾಗಿದ್ದ ಈಕಾರ್ಯಕ್ರಮವು ಗ್ರಾಮಸ್ಥರು, ಪೋಷಕರು ಹಾಗೂ ಶಿಕ್ಷಣಾಭಿಮಾನಿಗಳ ಗಮನ ಸೆಳೆಯಿತು.

ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಅಧ್ಯಕ್ಷ ವಿರುಪಾಕ್ಷಪ್ಪ ವಂದಾಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿಗಳು ಜಾನಪದ ನೃತ್ಯ, ಕಿರು ನಾಟಕ, ಗಾಯನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮನಮೋಹಕವಾಗಿ ಪ್ರದರ್ಶಿಸಿ ಪ್ರೇಕ್ಷಕರಿಂದ ಭಾರೀ ಚಪ್ಪಾಳೆ ಪಡೆದರು.



'ಸರ್ಕಾರಿ ಶಾಲೆಗಳಲ್ಲಿ ಸುರಕ್ಷಿತ ಹಾಗೂ ಗುಣಮಟ್ಟದ ಶಿಕ್ಷಣ' ಎಂಬ ಸಂದೇಶವನ್ನು ಕಾರ್ಯಕ್ರಮದ ಮೂಲಕ ಪೋಷಕರಿಗೆ ತಲುಪಿಸುವ ಪ್ರಯತ್ನವೂ ನಡೆಯಿತು.

ಕರವೇ ಗ್ರಾಮ ಘಟಕದ ಅಧ್ಯಕ್ಷ ಪರಸಪ್ಪ ಅಳ್ಳಳ್ಳಿ ಮಾತನಾಡಿ, ಭೂದಾನಿಗಳ ಉದಾರತೆ ಮತ್ತು ಸಮಾಜದ ಸಹಕಾರದಿಂದಲೇ ಶಿಕ್ಷಣ ಸಂಸ್ಥೆಗಳು ಬೆಳೆಯುತ್ತವೆ. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಹೊರತರುವ ಉತ್ತಮ ವೇದಿಕೆಗಳಾಗಿವೆ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಭಾಗವಹಿಸುವ ಮೂಲಕ ತಮ್ಮ ವ್ಯಕ್ತಿತ್ವವನ್ನು ವಿಕಸಿಸಿಕೊಳ್ಳಬೇಕು ಎಂದು ಹೇಳಿದರು.

ಪಿಎಸಿಸಿಎಸ್ ಅಧ್ಯಕ್ಷಮಂಜುನಾಥ ಕಜ್ಜಿ ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಈ ಶಾಲೆ ಪ್ರಮುಖ ಪಾತ್ರ ವಹಿಸುತ್ತಿದೆ. ಶಿಕ್ಷಕರ ಪರಿಶ್ರಮ ಮತ್ತು ಪೋಷಕರ ಸಹಕಾರದಿಂದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುತ್ತಿದ್ದಾರೆ ಎಂದರು. ಶಾಲೆಯ ಮುಖ್ಯೋಪಾಧ್ಯಾಯ ಬಸವರಾಜ ಗುರಿಕಾರ ಮಾತನಾಡಿದರು.

ಎಸ್‌ಡಿಎಂಸಿ ಉಪಾಧ್ಯಕ್ಷೆ ಸುವರ್ಣಮ್ಮ ಮಾಲಿ ಪಾಟೀಲ ಸರ್ವ ಸದಸ್ಯರು ಹಾಜರಿದ್ದರು ಭೂದಾನಿ ಹಿರಿಯಣ್ಣ ಸುಬೇದಾರ ಸೇರಿದಂತೆ ಗ್ರಾಮದ ಏಕಲವ್ಯ ಚಳ್ಳೂರು, ಮರಿಯಪ್ಪ ಮುಳ್ಳೂರು, ಮುಖ್ಯೋಪಾಧ್ಯಾಯರಾದ ವೀರೇಶ್ ಟೆಂಗುಂಟಿ, ದೊಡ್ಡಬಸಪ್ಪ ಬಂಡಿಹಾಗೂಶಿಕ್ಷಕರಾದಶಿವಕುಮಾರ ಪುರದ ಉಪಸ್ಥಿತರಿದ್ದರು.

ಅಂಗನವಾಡಿ ಕಾರ್ಯಕರ್ತೆಯರು, ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ, ಗ್ರಾಮಸ್ಥರು, ಯುವಕರು, ಯುವತಿಯರು ಮತ್ತು ಶಿಕ್ಷಣಾಭಿಮಾನಿಗಳು ಕಾ ಯ ರ್ ಕ್ರ ಮ ದ ಲ್ಲಿ ಭಾಗವಹಿಸಿದ್ದರು. ಶರಣಪ್ಪ ನೈನದ ನಿರ್ವಹಿಸಿದರು. ಶಿಕ್ಷಕಿ ರತ್ನಾ ಪೊಲೀಸ್‌ಪಾಟೀಲ ವಂದಿಸಿದರು.

ಕಿರುಸುದ್ದಿ

ರಂಜಾನ್ ಹಬ್ಬ: ಶಾಂತಿ ಸಭೆ



◆ **ಸಿರುಗುಪ್ಪ:** ನಗರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಂಜಾನ್ ಹಬ್ಬವನ್ನು ಸುಗಮವಾಗಿ ನಡೆಸುವ ಉದ್ದೇಶದಿಂದ ನಗರ ಪೊಲೀಸ್ ಠಾಣೆಯಲ್ಲಿ ಡಿವೈಎಸ್‌ಪಿ ಮಹಾಂತೇಶ ಕುನಬೇವು ಅವರ ನೇತೃತ್ವದಲ್ಲಿ ಸೋಮವಾರ ಶಾಂತಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಭೆಯಲ್ಲಿ ಹಬ್ಬದ ಮೆರವಣಿಗೆ, ಪ್ರಾರ್ಥನೆ ಮತ್ತು ಧ್ವನಿವರ್ಧಕಗಳ ಬಳಕೆ ಕುರಿತು ಇಲಾಖೆಯ ನಿಯಮಗಳನ್ನು ಗಮನ ದಲ್ಲಿಟ್ಟುಕೊಂಡು ಹಬ್ಬವನ್ನು ಆಚರಿಸಬೇಕೂ ಎಂದು ಡಿವೈಎಸ್‌ಪಿ ಮಹಾಂತೇಶ ಕುನಬೇವು ತಿಳಿಸಿದರು.

ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಹಬ್ಬವನ್ನು ಆಚರಿಸಬೇಕು ಹಾಗೂ ಮುಸ್ಲಿಂ ಮುಖಂಡರು ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗುವ ವದಂತಿಗಳಿಗೆ ಕಿವಿಗೊಡಬಾರದು. ಶಾಂತಿಯುತ ಹಬ್ಬದ ಆಚರಣೆಗೆ ಸಾರ್ವಜನಿಕರು ಮತ್ತು ಮುಖಂಡರು ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ತಿಳಿಸಿದರು. ಸಿಪಿಐ. ವೈ.ಎನ್.ಹನುಮಂತಪ್ಪ ಮಾತನಾಡಿದರು. ಪಿಎಸ್‌ಐ ಪರಶುರಾಮ, ತನಿಖಾ ಪಿಎಸ್‌ಐ ಮಲ್ಲಯ್ಯ ಹಾಗೂ ಮುಸ್ಲಿಂ ಸಮುದಾಯದ ಮುಖಂಡರಾದ ಅಜೀಮ್, ಮೋದಿನ್ ಸಾಬ್, ಡೊಳ್ಳಿ ವಲೀಭಾಷಾ ಹಾಗೂ ಠಾಣಾ ವ್ಯಾಪ್ತಿಯ ವಿವಿಧ ಗ್ರಾಮದ ಮುಖಂಡರು, ವಿವಿಧ ಗಣ್ಯರು ಭಾಗವಹಿಸಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ : ನಿಷೇಧಾಜ್ಞೆ ಜಾರಿ

◆ **ವಿಜಯನಗರ:** ಮಾ.18 ರಿಂದ ಏಪ್ರಿಲ್ 2 ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ವಾರ್ಷಿಕ ಪರೀಕ್ಷೆ ನಡೆಯಲಿವೆ. ಪರೀಕ್ಷೆ ಪಾರದರ್ಶಕ ಮತ್ತು ಶಾಂತಿಯುತವಾಗಿ ನಡೆಸುವ ಉದ್ದೇಶದಿಂದ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಎಲ್ಲಾ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶಿಸಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಅವ್ಯವಹಾರ ತಡೆಗಟ್ಟಲು ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿರುವ ಜೆರಾಕ್ಸ್ ಅಂಗಡಿ, ಕಂಪ್ಯೂಟರ್ ಸೆಂಟರ್ ಮತ್ತು ಸೈಬರ್ ಸೆಂಟರ್‌ಗಳನ್ನು ಪರೀಕ್ಷಾ ದಿನದಂದು ಕಡ್ಡಾಯವಾಗಿ ಮುಚ್ಚುವಂತೆ ಹಾಗೂ ಅನಧಿಕೃತ ವ್ಯಕ್ತಿಗಳಿಗೆ, ಸಾರ್ವಜನಿಕರಿಗೆ ಪರೀಕ್ಷಾ ಕೇಂದ್ರದ ಆವರಣದೊಳಗೆ ಪ್ರವೇಶ ನಿಷೇಧಿಸಿದೆ ಎಂದು ಆದೇಶಿಸಿದ್ದಾರೆ.

ಸಮಾನ ಅವಕಾಶಗಳಿಂದ ಸಮಾಜದ ಪ್ರಗತಿ ಸಾಧ್ಯ



◆ **ಹೂವಿನಹಡಗಲಿ:** ಮಹಿಳೆಯರ ಹಕ್ಕುಗಳು, ಸಮಾನತೆ ಮತ್ತು ಗೌರವಕ್ಕಾಗಿ ನಡೆದ ಹೋರಾಟಗಳನ್ನು ಸ್ಮರಿಸುವ ದಿನವೇ ಮಹಿಳಾ ದಿನಾಚರಣೆ ಎಂದು ಸಂಗೀತಗಾರ್ತಿ ಗೀತಾಂಜಲಿ ಹೇಳಿದರು. ಇಲ್ಲಿನ ಬಣಜಿಗ ಮಹಿಳಾ ಘಟಕದ ವತಿಯಿಂದ ಪಟ್ಟಣದ ಗವಿಸಿದ್ಧೇಶ್ವರ ಶಾಖಾಮಠದಲ್ಲಿ ಭಾನುವಾರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳಾ ಸಬಲೀಕರಣವು ಸಮಾಜದ ಅಭಿವೃದ್ಧಿಗೆ ಅತ್ಯಂತ ಮುಖ್ಯವಾಗಿದ್ದು, ಮಹಿಳೆಯರಿಗೆ ಸಮಾನ ಅವಕಾಶಗಳು, ಶಿಕ್ಷಣ, ಉದ್ಯೋಗ ಮತ್ತು ಸ್ವಾವಲಂಬನೆ ದೊರಕಿದಾಗ ಕುಟುಂಬ ಹಾಗೂ ಸಮಾಜದ ಪ್ರಗತಿ ಸಾಧ್ಯವಾಗುತ್ತದೆ. ಆದ್ದರಿಂದ ಮಹಿಳೆಯರ ಗೌರವ, ಹಕ್ಕುಗಳು ಮತ್ತು ಸಬಲೀಕರಣವನ್ನು ಉತ್ತೇಜಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು. ಧರ್ಮಸ್ಥಳ ಸಂಘದ ಸಂಯೋಜನಾಧಿಕಾರಿ ರೇಷ್ಮಾ ಮಾತನಾಡಿ, ಮಹಿಳೆ ಸ್ವಾವಲಂಬಿ ಮತ್ತು ಸಬಲಳಾಗುವುದರೊಂದಿಗೆ ಕುಟುಂಬದ ಬಾಂಧವ್ಯವನ್ನು ಕಾಪಾಡಿಕೊಳ್ಳುವುದು ಸಹ ಅತ್ಯಂತ ಮುಖ್ಯವೆಂದರು. ಕಾರ್ಯಕ್ರಮದಲ್ಲಿ ಬಣಜಿಗ ಸಮಾಜದ ತಾಲೂಕು ಅಧ್ಯಕ್ಷ ಮುಂಡವಾಡ ಉಮೇಶ್, ಮಹಿಳಾ ಘಟಕದ ಗೌರವ ಅಧ್ಯಕ್ಷೆ ಸೌಮ್ಯ ತುರಕಾಣಿ, ಗಿರಿ ಮಲ್ಲಿಗೆ ಮಹಿಳಾ ಸೌಹಾರ್ದ ಸಂಘದ ಅಧ್ಯಕ್ಷೆ ಸವಿತಾ ಅಂಗಡಿ, ಸಂಗೀತ ಕಲಾವಿದ ಚಂದ್ರಪ್ಪ ಸೇರಿದಂತೆ ಸಮಾಜದ ಮಹಿಳೆಯರು ಇದ್ದರು. ವಿದ್ಯಾ ಯಳಮಲಿ ಅಧ್ಯಕ್ಷತೆ ವಹಿಸಿದ್ದರು. ನೂರಾರು ಹೆರಿಗೆಗಳನ್ನು ಮಾಡಿಸಿದ ಸೂಲಗಿತ್ತಿ ನಂದಿಹಳ್ಳಿ ಯಮುನಮ್ಮ, ರೇಷ್ಮಾ ಹಾಗೂ ಗೀತಾಂಜಲಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಉಪನ್ಯಾಸಕಿ ಡಾ. ಶೈಲಜ ಪವಾಡಶೆಟ್ರ ಕಾರ್ಯಕ್ರಮ ನಿರೂಪಿಸಿದರು. ನಾಗರತ್ನ ಕುಂಚೂರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಜಯ ಕಡ್ಲಿ ವಂದಿಸಿದರು.



ಕೊಟ್ಟೂರು: ಶ್ರೀ ಬೀರೇಶ್ವರ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್ ಯಕ್ಸಂಬಾದ 233ನೇ ನೂತನ ಶಾಖೆಯನ್ನು ಕೊಟ್ಟೂರಿನಲ್ಲಿ ಉದ್ಘಾಟಿಸಲಾಯಿತು. ಡೋಣೂರು ಜಾನು ಕೋಟಿ ಮಠದ ಪೀಠಾಧ್ಯಕ್ಷ ಡಾ. ಸಿದ್ದಲಿಂಗ ಶಿವಾಚಾರ್ಯ ಶ್ರೀಗಳು, ಬಳ್ಳಾರಿ ವಿಭಾಗದ ಬಿಜೆಪಿ ಸಹ ಪ್ರಭಾರಿ ಚನ್ನಬಸವನಗೌಡ ಪಾಟೀಲ್, ಬಿಡಿಸಿಸಿ ಬ್ಯಾಂಕ್‌ನ ಉಪಾಧ್ಯಕ್ಷ ಐ.ಎಂ. ದಾರುಕೇಶ್, ಬಿಜೆಪಿ ಮುಖಂಡರಾದ ಎಸ್. ತಿಂದಪ್ಪ, ಆಡಿಟರ್ ಪ್ರವೀಣ್ ಕುಮಾರ್, ಪತ್ತಿಕೊಂಡ ಶ್ರೀಕಾಂತ್, ಡಾ.ಎಸ್. ರಾಕೇಶ್, ತಿಮಲಾಪುರ ವಿಶ್ವನಾಥ್,ಕಸಾಪ ತಾಲೂಕು ಅಧ್ಯಕ್ಷ ದೇವರಮನಿ ಕೊಟ್ರೇಶ್ ಸೇರಿದಂತೆ ಇತರರಿದ್ದರು.

ಶಿಶು ಪೋಷಣೆಗೆ 5 ವರ್ಷಗಳ ಅವಕಾಶ

◆ **ಬಳ್ಳಾರಿ:** ಮಾತೃತ್ವ ರಜೆಯ ನಂತರ ಮಹಿಳಾ ಶಿಕ್ಷಕರು ಕರ್ತವ್ಯಕ್ಕೆ ಮರಳಿ ಹಾಜರಾಗಲು ಮಗುವಿನ 5 ವರ್ಷ ಪೂರ್ಣಗೊಳ್ಳುವವರೆಗೂ ಮಗುವಿನ ಆರೈಕೆಗೆ ಅನುಕೂಲ ಆಗಲು ಶಿಕ್ಷಕಿಯರು ಕೇಳುವ ಸ್ಥಳಕ್ಕೆ ಕೌನ್ಸಿಲಿಂಗ್ ಮೂಲಕ ನಿಯುಕ್ತಿಗೊಳಿಸಿ ಆದೇಶ ನೀಡಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದರು.

ಬಳ್ಳಾರಿ-ವಿಜಯನಗರ ಜಿಲ್ಲಾ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿ, ಶಾಸಕ ವೈ.ಎಂ. ಸತೀಶ್ ಅವರು, ಮಹಿಳಾ ಶಿಕ್ಷಕರಿಗೆ ಶಿಶುಪಾಲನಾ ರಜೆಯನ್ನು ಮಂಜೂರು ಮಾಡುವ ಕುರಿತು ಕೇಳಿದ ಪ್ರಶ್ನೆಗೆ, ಅವಧಿ ಪೂರ್ವದಲ್ಲೇ (ಆರು ತಿಂಗಳ ಗರ್ಭದ ಶಿಶು) ಜನಿಸಿದ ಮಗುವಿನ ತಾಯಿಗೆ ಮಗುವನ್ನು ಆರೈಕೆ ಮಾಡುವ ಜವಾಬ್ದಾರಿ ಇದೆ. ಈ ಶಿಕ್ಷಕಿಗೆ ಮಾನವೀಯತೆಯ ಆಧಾರದ ಮೇಲೆ ಅವರು ಕೇಳುವ ಸ್ಥಳಕ್ಕೆ ನಿಯುಕ್ತಿಗೊಳಿಸಿ ಆದೇಶ ನೀಡಬೇಕು ಎಂದು ಒತ್ತಾಯಿಸಿದರು.

ಆಗ, ಸಚಿವ ಎಸ್. ಮಧು ಬಂಗಾರಪ್ಪ, ಶಿಶುಪಾಲನಾ ರಜೆಯನ್ನು ಮಂಜೂರು ಮಾಡಲು ಸರ್ಕಾರದ ಆದೇಶ ಸಂಖ್ಯೆ ಆಇ 4(ಇ) ಶೇನಿಸೇ 2021, ದಿ.21.06.2021ರಲ್ಲಿ ಸ್ಪಷ್ಟವಾದ ನಿರ್ದೇಶನಗಳನ್ನು ಇಲಾಖೆಯ ಅಧಿಕಾರಿಗಳಿಗೆ ನೀಡಲಾಗಿದೆ. ಶಿಶುಪಾಲನಾ ರಜಾ ಮನವಿ ಸ್ವೀಕೃತಗೊಂಡ 15 ದಿನಗಳೊಳಗಾಗಿ ರಜೆಯನ್ನು ಮಂಜೂರು ಮಾಡಲಾಗುತ್ತದೆ. ಈ ಹುದ್ದೆಗೆ ಅತಿಥಿ ಶಿಕ್ಷಕರನ್ನ ನೇಮಕ ಮಾಡಿಕೊಳ್ಳಲು ಅವಕಾಶವಿದೆ ಎಂದರು. ಶಾಸಕ ವೈ.ಎಂ. ಸತೀಶ್ ಅವರು ಪ್ರಸ್ತಾಪಿಸಿರುವ ಶಿಕ್ಷಕಿಗೆ ಮಾನವೀಯತೆಯ ಆಧಾರದ ಮೇಲೆ 5 ವರ್ಷಗಳ ಅವಧಿಗೆ ಅವರು ಕೇಳಿದ ಸ್ಥಳದಲ್ಲಿಯೇ ಕೌನ್ಸಿಲಿಂಗ್ ಮೂಲಕ ನಿಯುಕ್ತಿಗೊಳಿಸಿ, ಈ ಹುದ್ದೆಗೆ ಮುಂದಿನ ಶೈಕ್ಷಣಿಕ ಅವಧಿಯಲ್ಲಿ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು ಎಂದರು.



ಬಳ್ಳಾರಿ: ನಗರದ ಮೋಕಾ ರಸ್ತೆಯ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಸೋಮವಾರ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಅಭಿಯಾನ - 2026, ಜಿಲ್ಲಾ ಮಟ್ಟದ ಯೋಜನಾ ಸಭೆ ಹಾಗೂ ಜಿಲ್ಲಾ ಕಾರ್ಯಕಾರಣಿ ಸಭೆ ನಡೆಯಿತು. ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ, ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಗಾಳಿ ಶಂಕ್ರಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಡವಿ ಸ್ವಾಮಿ, ಸುನೀಲ್ ರೆಡ್ಡಿ, ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಎಂ.ಎಸ್.ಸಿದ್ದಪ್ಪ ಇದ್ದರು.

ಶಾಲೆಯಲ್ಲಿ ಬಿಸಿಯೂಟಕ್ಕೆ ಸೌದೆ ಒಲೆಯೇ ಗತಿ!

▸ ಪುಷ್ಪವತಿ ಜಿಎಂ ಬಸಯ್ಯ

ದಿಗಂತ ವಿಶೇಷ



◆ **ಕುರುಗೋಡು:** ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷದಿಂದ ಉಂಟಾದ ಗ್ಯಾಸ್ ಅಭಾವ ಸರ್ಕಾರಿ ಶಾಲೆಗಳ ಬಿಸಿಯೂಟ ಯೋಜನೆ ಮೇಲೂ ಪರಿಣಾಮ ಬೀರಿದೆ. ಅನಿಲ ಇಲ್ಲದೇ ತಾಲೂಕಿನ ಎಚ್.ವೀರಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಿಬ್ಬಂದಿ ಅಡುಗೆ ಮಾಡಲು ಪರದಾಡಿದ್ದಾರೆ.

ಅನಿಲ ಸರಬರಾಜಾಗದ ಹಿನ್ನೆಲೆ ಶಾಲೆಯ ಮುಖ್ಯಗುರುಗಳು ಒಂದು ಟ್ರ್ಯಾಕ್ಟರ್ ಸೌದೆಯನ್ನು ತಂದು ಸ್ವತಃ ತಾವೇ ಕಟ್ಟಿಗೆ ಕಡಿದು ಹಾಕುತ್ತಿದ್ದಾರೆ. ಬಿಸಿಯೂಟ ಕಾರ್ಯಕರ್ತೆಯರು ಒಲೆಯಲ್ಲೇ ಅಡುಗೆ ತಯಾರಿಸುತ್ತಿದ್ದಾರೆ.

ಈ ಬಗ್ಗೆ ಮಾತನಾಡಿದ ಶಾಲೆಯ ಸಿಬ್ಬಂದಿ, ಐದು ದಿನಗಳಿಂದ ಗ್ಯಾಸ್ ಇಲ್ಲದೆ ಸೌದೆಯಲ್ಲೇ ಅಡುಗೆ ಮಾಡುತ್ತಿದ್ದೇವೆ. ಶಾಲೆಯಲ್ಲಿ ಸುಮಾರು 251 ಮಕ್ಕಳಿದ್ದಾರೆ. ಗ್ಯಾಸ್ ಇಲ್ಲದೇ ಸೌದೆಯಲ್ಲಿ ಅಷ್ಟು ಮಕ್ಕಳಿಗೆ ಅಡುಗೆ ಸಿದ್ಧಪಡಿಸುವುದು ಕಷ್ಟವಾಗುತ್ತಿದೆ ಎಂದಿದ್ದಾರೆ.

ಕೆಲ ದೇಶದ ಅನಿಲದ ಪರಿಸ್ಥಿತಿ ಗಮನಿಸಿ ಈ ಮೊದಲೆ ಸೌದೆ ಸಂಗ್ರಹ ಮಾಡಲಾಗಿದ್ದು, ಈ ಬಗ್ಗೆ ಶಿಕ್ಷಣ ಇಲಾಖೆ ಗಮನಕ್ಕೆ ತಂದರೂ ಯಾವುದೇ ಗಮನ ಹರಿಸಿಲ್ಲ ಎಂದು ತಿಳಿದು ಬಂದಿದೆ.

ಈಗ ಪರೀಕ್ಷೆ ಸಮಯ, ಇಂತಹ ವೇಳೆ ಮುಖ್ಯಗುರುಗಳು ಹಾಗೂ ಶಿಕ್ಷಕರು ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಿದ್ಧಪಡಿಸುವುದನ್ನು ಬಿಟ್ಟು ಕಟ್ಟಿಗೆ ಸೀಳುವ ಮೂಲಕ ಬಿಸಿಯೂಟ ಬೇಯಿಸುವ ಪರಿಸ್ಥಿತಿ ಬಂದಿದೆ.

ಅಕ್ಷರ ದಾಸೋಹದ ತಾಲೂಕು ಸಹಾಯಕ ನಿರ್ದೇಶಕರ ಸೂಚನೆಯ ಮಧ್ಯೆಯೂ ಒಂದು ವರ್ಷದಿಂದ ಗ್ಯಾಸ್ ಏಜೆನ್ಸಿಯವರು ಸಿಲಿಂಡರ್ ಸರಬರಾಜು ಮಾಡಿಲ್ಲ ಎಂಬ ಆರೋಪ ಸಹ ಸತ್ಯವಾಗಿದೆ ಎಂದು ಶಿಕ್ಷಣ ಪ್ರೇಮಿಗಳು ತಿಳಿಸಿದ್ದಾರೆ.

ಪರೀಕ್ಷೆ ಸಮಯವಾಗಿರುವುದರಿಂದ ಶಿಕ್ಷಕರು ಮಕ್ಕಳಿಗೆ ಅಭ್ಯಾಸ ಮಾಡಿಸುತ್ತಿದ್ದಾರೆ. ಇದರ ನಡುವೆ ಅಡುಗೆಗೆ ಆದ ತೊಂದರೆಯನ್ನು ಸಹ ಬಗೆಹರಿಸಿಕೊಂಡು ಹೋಗುವುದು ಅವರಿಗೆ ಕಷ್ಟವಾಗುತ್ತಿದೆ. ಕೂಡಲೇ ಗ್ಯಾಸ್ ಸೌಲಭ್ಯ ಕಲ್ಪಿಸುವಂತೆ ಶಾಲಾ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಹಾಗೂ ಸ್ಥಳೀಯರು, ಪಾಲಕರು ಆಗ್ರಹಿಸಿದ್ದಾರೆ.

ಗೌರವ ಧನದ ಹೆಸರಲ್ಲಿ ಶೋಷಣೆ: ಆರೋಪ

◆ **ಹೂವಿನಹಡಗಲಿ:** ಅಂಗನವಾಡಿ ಕಾರ್ಯಕರ್ತೆಯರು ದಿನದ ಬಹುತೇಕ ಸಮಯವನ್ನು ತಮ್ಮ ಕಾರ್ಯಕ್ಕಾಗಿ ಶ್ರಮಿಸುತ್ತಿದ್ದಾರೆ. ಸರ್ಕಾರ ಗೌರವಧನದ ಹೆಸರಲ್ಲಿ ಮಹಿಳೆಯರನ್ನು ಶೋಷಣೆ ಮಾಡುತ್ತಿದೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಇದುಹೆಸರಿಗಷ್ಟೇ! ಪ್ರಧಾನಮಂತ್ರಿ ಮೋದಿಜಿಅವರತವರುಮನೆಗುಜರಾತ್‌ನಲ್ಲಿ 20 ಲಕ್ಷಕ್ಕೂ ಹೆಚ್ಚು ಮಕ್ಕಳು ಅಪೌಷ್ಟಿಕವಾಗಿ ಬಳಲುತ್ತಿದ್ದಾರೆ. ಇದರ ಅರಿವು ಅವರಿಗಿಲ್ಲ ಎನಿಸುತ್ತೆ? ಸರ್ಕಾರ ಅಂಗನವಾಡಿ ಕಾರ್ಯಕರ್ತರನ್ನು ಮಹಿಳೆಯರಿಗೆ ಸೀರೆ ಕೊಟ್ಟು ಕಮಿಷನ್ ದಂಧೆ ಮಾಡುತ್ತಿದೆ, ತಾಕತ್ತಿದ್ದರೆ ಸಂಬಳ ಕೊಟ್ಟು ನಮ್ಮ ಮನಸ್ಸನ್ನು ಗೆಲ್ಲಿ ಎಂದು ಕ.ರಾ.ಅ.ಕಾ.ಸ ಫೆಡರೇಶನ್ ರಾಜ್ಯಾಧ್ಯಕ್ಷ ಕಾಂ.ಬಿ. ಅಮ್ಜದ್ ಹೇಳಿದರು.

ತಾಲೂಕಿನ ಎಸ್‌ಆರ್‌ಎಂಪಿ ಸರ್ಕಾರಿ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್, ಎಐಟಿಯುಸಿ ಸಂಯೋಜಿತ ವತಿಯಿಂದ ನಡೆದ 6ನೇ ತಾಲೂಕು ಸಮ್ಮೇಳನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕ.ರಾ.ಅ.ಕಾ.ಸ ಫೆಡರೇಶನ್ ತಾಲೂಕು ಅಧ್ಯಕ್ಷೆ ಬಿ. ಜಯಲಕ್ಷ್ಮಿ, ಕ.ರಾ.ಅ.ಕಾ.ಸ ಫೆಡರೇಶನ್ ಗೌರವಾಧ್ಯಕ್ಷೆ ಎನ್ ಮಂಜುಳಾ ಮಾತನಾಡಿದರು.

ಅ.ಕಾ.ಸ.ಫೆ ಕಾರ್ಯದರ್ಶಿ ಸವಿತಾ ಹರವಿ ಸ್ವಾಗತಿಸಿ, ಅಂಗನವಾಡಿ ಕಾರ್ಯಕರ್ತೆ ಅಪರ್ಣ ಶಿವಲಿಂಗನಹಳ್ಳಿ ಕಾರ್ಯಕ್ರಮ ನಿರ್ವಹಿಸಿದರು.

ಈ ವೇಳೆ ಕ.ರಾ.ಅ.ಕಾ.ಸ ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ, ಅಖಿಲ ಭಾರತ ಕಿಸಾನ್ ಸಭಾ ರಾಜ್ಯ ಉಪಾಧ್ಯಕ್ಷ ಎಚ್. ವೀರಣ್ಣ, ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಚ್. ಎಂ. ಸಂತೋಷ್, ಎಸ್. ಆರ್. ಎಂಪಿಪಿ ಕಾಲೇಜು ಪ್ರಾಂಶುಪಾಲ ಎಂ. ವಿಜಯಕುಮಾರ ಹೇಮಪ್ಪ, ಅಖಿಲ ಭಾರತ ಕಿಸಾನ್ ಸಭಾ ಜಿಲ್ಲಾಧ್ಯಕ್ಷ ಗುಡಿಹಳ್ಳಿ ಹಾಲೇಶ, ಭಾರತೀಯ ಮಹಿಳಾ ಒಕ್ಕೂಟದ ರಾಜ್ಯ ಕಾರ್ಯದರ್ಶಿ ಕೆ. ರೇಣುಕಮ್ಮ, ಎಐಟಿಯುಸಿ ರಾಜ್ಯ ಮಂಡಳಿ ಸದಸ್ಯ ಹಲಗಿ ಸುರೇಶ್, ಅ.ದಾ.ಬಿ.ತ ಫೆ ಜಿಲ್ಲಾಧ್ಯಕ್ಷೆ ಹೆಚ್. ಅನುಸೂಯಮ್ಮ, ಪದಾಧಿಕಾರಿಗಳಾದ ಡಿ. ಮುಕುಂದ ಗೌಡ, ಬಸವರಾಜ ಸಂಶಿ, ಶಾಂತರಾಜ್ ಜೈನ್, ಪಿ ಕವಿತಾ, ಹೆಚ್. ದಂಡೆಮ್ಮ, ಎನ್. ಸುಮಾ, ಫಾತಿಮಾ, ಎನ್. ರತ್ನಮ್ಮ, ಪತ್ರಿಕೆ ಸಂಘದ ಅಧ್ಯಕ್ಷರಾದ ಎಂಪಿಎಂ ಶಿವಪ್ರಕಾಶ್, ವೀರೇಶ್ ಕಲ್ಮಠ ಇದ್ದರು.



ನಿರಂತರ ಅಭ್ಯಾಸದಿಂದ ಸಾಧನೆ ಸಾಧ್ಯ: ಕಾಂತೇಶ ಹಲಗಿಮನಿ

◆ **ಹುಣಸಗಿ:** ನಿರಂತರ ಅಭ್ಯಾಸದಿಂದ ವಿದ್ಯಾರ್ಥಿಗಳ ಭವಿಷ್ಯ ರೂಪಗೊಳ್ಳುತ್ತದೆ ಎಂದು ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರ ಸಂಘದ ಜಿಲ್ಲಾಧ್ಯಕ್ಷ ಕಾಂತೇಶ ಹಲಗಿಮನಿ ಹೇಳಿದರು.

ತಾಲೂಕಿನ ವಜ್ಜಲ್ ಗ್ರಾಮದ ಆಶ್ರಯ ಕಾಲೋನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ 5ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ಮಕ್ಕಳು ದೇವಲೋಕದ ಪುಷ್ಪಗಳು ಅವರ ಜೀವನ ಹೂ ಅರಳಿದಂತೆ ಅರಳಲಿ. ಎಲ್ಲಾ ವಿದ್ಯಾರ್ಥಿಗಳು 6ನೇ ತರಗತಿಗೆ ಪ್ರವೇಶ ಪಡೆದು ಮುಂದಿನ ವ್ಯಾಸಂಗ ಮುಂದುವರಿಸಿ ಎಂದು ಹೇಳಿ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಸಿಆರ್‌ಪಿ ಪ್ರಕಾಶ್ ಬಡಿಗೇರ ಮಾತನಾಡಿದರು. ನಂತರ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಮುಖ್ಯಗುರು ಕಮಲಸಾ ಮುಲ್ಲಾ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಸಿಆರ್‌ಪಿ ಷಣ್ಮುಖ ನುಚ್ಚಿ, ಪ್ರಕಾಶ ಬಡಿಗೇರ, ಶಿಕ್ಷಕಿಯರಾದ ರೇಣುಕಾ, ನಾಗರತ್ನ, ಹಾಜೀಮಾಬೇಗಂ, ಪಾಲಕರು, ಮಕ್ಕಳು ಇದ್ದರು.



ರೋಗ ತಡೆಗೆ ಫಿಜಿಯೋಥೆರಪಿ ಚಿಕಿತ್ಸೆ ಮುಖ್ಯ

◆ **ಕೂಡ್ಲಿಗಿ:** ನವಜಾತ ಶಿಶುವಿನಿಂದ ಹಿಡಿದು ವೃದ್ಧರವರೆಗೆ ಇಂದಿನ ದಿನಗಳಲ್ಲಿ ಫಿಜಿಯೋಥೆರಪಿ ಚಿಕಿತ್ಸೆ ಅವಶ್ಯವಾಗಿದೆ. ವಿಶೇಷ ಚೇತನ ಮಕ್ಕಳ ಪೋಷಕರು ತಮ್ಮ ಮಕ್ಕಳಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಿ ಅವರನ್ನು ಸಹ ಸಮಾಜದ ಮುಖ್ಯವಾನಿಗೆ ತರುವಲ್ಲಿ ನೇರವಾಗಬೇಕು ಎಂದು ತಾಲೂಕು ವೈದ್ಯಾಧಿಕಾರಿ ಡಾ.ಎಸ್.ಪಿ ಪ್ರದೀಪ್ ತಿಳಿಸಿದರು.

ಪಟ್ಟಣದ ಪ್ರತಿಷ್ಠಾ ಮಾನಸಿಕ ವಿಶೇಷ ಚೇತನ ಮಕ್ಕಳ ಶಾಲೆಯಲ್ಲಿ ಸೋಮವಾರ ನಡೆದ ಮಾನಸಿಕ ವಿಶೇಷ ಚೇತನ ಮಕ್ಕಳಿಗೆ, ಸಿಬ್ಬಂದಿ, ಹಾಗೂ ಮಕ್ಕಳ ಪೋಷಕರಿಗೆ ಉಚಿತ ಫಿಜಿಯೋಥೆರಪಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ತಾಲೂಕಿನಲ್ಲಿ ವಿಶೇಷ ಚೇತನ ಮಕ್ಕಳ ಶಾಲೆ ಇರುವುದು ನಮ್ಮ ತಾಲೂಕಿಗೆ ಹೆಮ್ಮೆಯ ವಿಷಯವಾಗಿದೆ. ವಿಶೇಷ ಚೇತನ ಮಕ್ಕಳ ಪೋಷಕರು ಇದನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಮಕ್ಕಳಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಿ ಅವರನ್ನು ಸಹ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ನೇರವಾಗಬೇಕು ಎಂದರು.

ಈ ಶಾಲೆಯ ಮಕ್ಕಳಿಗೆ ಯಾವುದೇ ರೀತಿಯಾದ ವೈದ್ಯಕೀಯ ಸೌಲಭ್ಯಗಳನ್ನು ಇರುವ ಸ್ಥಳದಲ್ಲೇ ಒದಗಿಸಲು ನಾವು ಸಿದ್ಧ. ಮಕ್ಕಳ ಹೆಚ್ಚಿನ ಔಷದೋಪಚಾರಗಳಿಗೆ ನನ್ನಿಂದ ಸಹಾಯ ಒದಗಿಸುತ್ತೇನೆ ಎಂದು ಸಂಸ್ಥೆಯ ಏಳಿಗೆ ಕಂಡು ಪ್ರಶಂಸಿಸಿದರು.

ಫಿಜಿಯೋಥೆರಪಿ ಡಾ ವರ್ಷಿಣಿ ಮಾತನಾಡಿ, ಮಾನಸಿಕ ವಿಕಲಚೇತನರು ಅದರಲ್ಲೂ ಸೆರೆಬ್ರಲ್ ಪಾಲ್ಸಿ ಮಕ್ಕಳಿಗೆ ಫಿಜಿಯೋಥೆರಪಿ ಅತ್ಯಾವಶ್ಯಕವಾಗಿದ್ದು, ಪೋಷಕರು ಮಕ್ಕಳಿಗೆ ಅದರ ಪ್ರಯೋಜನವನ್ನು ಮಾಡಿಕೊಟ್ಟಲ್ಲಿ ಮಕ್ಕಳು ತಮ್ಮ ತಮ್ಮ ಕಾರ್ಯಗಳನ್ನು ಮಾಡಿಕೊಂಡು ಸ್ವತಂತ್ರವಾಗಿ ಬದುಕಲು ಸಹಕಾರಿಯಾಗುತ್ತದೆ. ಹಾಗಾಗಿ ಬಡ ಮಕ್ಕಳ ಇರುವ ಈ ಸಂಸ್ಥೆಗೆ ನಾನು ಉಚಿತವಾಗಿ ತರಬೇತಿ ನೀಡಲು ಸದಾ ಸಿದ್ಧವಿದ್ದೇವೆ ಎಂದರು. ಸಂಸ್ಥೆಯ ಸಂಸ್ಥಾಪಕರು ಬಸವರಾಜ್, ಕಾರ್ಯದರ್ಶಿ ಪುಷ್ಪಲತಾ, ವಿಶೇಷ ಚೇತನ ಶಾಲೆಯ ಶಿಕ್ಷಕಿ ಒಬ್ಬಮ್ಮ, ಚಂದ್ರಿಕಾ, ಅಭಿಷೇಕ್, ಭಾರತಿ, ನಾಗರತ್ನಮ್ಮ ಸೇರಿದಂತೆ ವಿಶೇಷ ಚೇತನರ ಪೋಷಕರು, ಮಕ್ಕಳು ಉಪಸ್ಥಿತರಿದ್ದರು.



11,406 ಪ್ರಕರಣಗಳು ಇತ್ಯರ್ಥ

◆ **ಬಳ್ಳಾರಿ:** ವಿಜಯನಗರ, ಬಳ್ಳಾರಿ ಜಿಲ್ಲೆ ಒಳಗೊಂಡು ಒಟ್ಟು 32 ನ್ಯಾಯಾಲಯಗಳಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ವಿವಿಧ ವ್ಯಾಜ್ಯಗಳ 11,406 ಪ್ರಕರಣಗಳು ಇತ್ಯರ್ಥಗೊಂಡಿದ್ದು,ಒಟ್ಟು 37.86 ಕೋಟಿ ರೂ. ಪರಿಹಾರ ಮೊತ್ತ ವಸೂಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಕೆ.ಜಿ.ಶಾಂತಿ ಅವರು ಖುದ್ದಾಗಿ ಪ್ರಕರಣಗಳ ವಿಲೇವಾರಿ ಮಾಡುವಲ್ಲಿ ಸಕ್ರಿಯವಾಗಿ ಭಾಗವಹಿಸಿ, ನಗರದ ತಾಳೂರು ರಸ್ತೆಯ ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿ ಎಲ್ಲ ನ್ಯಾಯಾಲಯಗಳಲ್ಲಿ ನಡೆದ ಲೋಕ್-ಅದಾಲತ್‌ಗಳನ್ನು ವೀಕ್ಷಿಸಿದರು.

ಲೋಕ್ ಅದಾಲತ್‌ನ ಅಂಕಿಅಂಶ: ಇತ್ಯರ್ಥಗೊಂಡ ಬಾಕಿ ಪ್ರಕರಣಗಳ ಒಟ್ಟು ಸಂಖ್ಯೆ: 11,406 ಪ್ರಕರಣಗಳು. ವಸೂಲಾದ ಪರಿಹಾರ ಮೊತ್ತ: ರೂ.37,86,70,940. ಇತ್ಯರ್ಥಗೊಂಡ ವ್ಯಾಜ್ಯ ಪೂರ್ವ ಪ್ರಕರಣಗಳು: 6,47,139. ವಸೂಲಾದ ಪರಿಹಾರ ಮೊತ್ತ: ರೂ.127,58,84,012.

ಇತ್ಯರ್ಥಗೊಳಿಸಿದ ಪ್ರಕರಣಗಳು: ನ್ಯಾಯಾಲಯದಲ್ಲಿ ದೀರ್ಘಕಾಲದಿಂದ ಬಾಕಿ ಇದ್ದ 17,590 ಪ್ರಕರಣಗಳನ್ನು ರಾಜಿ ಸಂಧಾನಕ್ಕೆ ಗುರುತಿಸಲಾಗಿತ್ತು. ಇವುಗಳಲ್ಲಿ 11,406 ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥಪಡಿಸಲಾಗಿದೆ.



ರಾಷ್ಟ್ರೀಯ ಲೋಕ್ ಅದಾಲತ್ ಗೆ ಸಂಬಂಧಿಸಿದಂತೆ ಶನಿವಾರ ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 27 ನ್ಯಾಯಪೀಠಗಳನ್ನು (ಬೆಂಚ್) ಸ್ಥಾಪಿಸಲಾಗಿತ್ತು.ವಿವಾದಗಳ ಪರಿಹಾರಕ್ಕೆ ಮತ್ತು ಸಮುದಾಯದಲ್ಲಿ ಪರಸ್ಪರ ವಿಶ್ವಾಸವನ್ನು ಹೆಚ್ಚಿಸಲು ಲೋಕ್ ಅದಾಲತ್‌ಗಳು ಪರಿಣಾಮಕಾರಿ ಸಾಧನಗಳಾಗಿವೆ.ಈ ಅದಾಲತ್‌ನ ಯಶಸ್ಸಿಗೆ ನ್ಯಾಯಾಧೀಶರು, ವಕೀಲರು, ಪೊಲೀಸ್ ಅಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಮತ್ತು ವಿಮಾ ಕಂಪನಿಗಳು ಸೇರಿದಂತೆ ಎಲ್ಲ ಪಾಲುದಾರರ ಸಹಕಾರ ಕಾರಣವಾಗಿದೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ್.ಎನ್ ಹೊಸಮನೆ ಸೇರಿದಂತೆ ವಿವಿಧ ನ್ಯಾಯಾಲಯಗಳ ನ್ಯಾಯಾಧೀಶರು, ಅಧಿಕಾರಿಗಳು ಇದ್ದರು.

ಮಗುವಿನಲ್ಲಿ ನಿರ್ಜಲೀಕರಣ ತಡೆಗೆ ಹಾಲುಣಿಸಿ: ಡಾ. ರಮೇಶ್‌ಬಾಬು

◆ **ಬಳ್ಳಾರಿ:** ಹೆರಿಗೆ ನಂತರದಲ್ಲಿ ತಾಯಂದಿರು ನವಜಾತ ಶಿಶುವಿಗೆ ಪದೇ ಪದೇ ಎದೆ ಹಾಲುಣಿಸುವ ಮೂಲಕ ಅಧಿಕ ಬಿಸಿಲಿನಿಂದ ಮಕ್ಕಳಲ್ಲಿ ಉಂಟಾಗುವ ನಿರ್ಜಲೀಕರಣವನ್ನು ತಡೆಯಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು ತಿಳಿಸಿದ್ದಾರೆ.



ಜಿಲ್ಲೆಯ ತೋರಣಗಲ್ಲು ಸಮುದಾಯ ಆರೋಗ್ಯ ಕೇಂದ್ರಕ್ಕೆ ಸೋಮವಾರ ಭೇಟಿ ನೀಡಿ ಸಾರ್ವಜನಿಕ ಜಾಗೃತಿ ಮೂಡಿಸಿದ ಅವರು, ಸಾಮಾನ್ಯವಾಗಿ ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಬಳ್ಳಾರಿ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬಿಸಿಲಿನ ಪ್ರಮಾಣ 40 ಡಿಗ್ರಿ ಮೇಲ್ಪಟ್ಟು ದಾಖಲಾಗುತ್ತದೆ. ಮುಂಜಾಗ್ರತ ಕ್ರಮವಾಗಿ ಜಿಲ್ಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಬೇಸಿಗೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಎಲ್ಲ ಆಸ್ಪತ್ರೆಯ ಸಿಬ್ಬಂದಿಗೆ ಮಾಹಿತಿ ನೀಡಿ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ ಎಂದರು.

ಇದರ ಭಾಗವಾಗಿ ನವಜಾತ ಶಿಶುಗಳು ಮತ್ತು ಮಕ್ಕಳ ಹಾರೈಕೆಯಲ್ಲೂ ತಾಯಂದಿರು ಮತ್ತು ಪಾಲಕರು ಹೆಚ್ಚಿನ ಜಾಗೃತಿ ವಹಿಸುವುದು ಅವಶ್ಯಕತೆ ಇದೆ. ವಯಸ್ಕರು, ಸಾಮಾನ್ಯ ಮನುಷ್ಯನಿಗಿಂತ ಮಕ್ಕಳಲ್ಲಿ ನಿರ್ಜಲೀಕರಣ ಪ್ರಮಾಣ ಹೆಚ್ಚುತ್ತದೆ. ಹೀಗಾಗಿ ತಾಯಂದಿರು ಮಕ್ಕಳಿಗೆ ಪದೇ ಪದೇ ಎದೆ ಹಾಲುಣಿಸಬೇಕು ಎಂದರು.

ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ ಹೆರಿಗೆಯಾಗುವ ಅದರಲ್ಲೂ ಮೊದಲ ಮಗುವಿಗೆ ಜನನ ನೀಡುವ ತಾಯಿಗೆ ತನ್ನ ನವಜಾತ ಶಿಶುವಿಗೆ ಹೆರಿಗೆ ನಂತರದಲ್ಲಿ ನಿಯಮಿತವಾಗಿ ಹಾಲುಣಿಸುವ ಅಭ್ಯಾಸವು ಗೊತ್ತಿಲ್ಲದೇ ಕೆಲವು ನವಜಾತ ಶಿಶುವುಗಳಲ್ಲಿ ನಿರ್ಜಲೀಕರಣ ಕಂಡುಬರುವ ಸಾಧ್ಯತೆಗಳಿವೆ. ಅದರಲ್ಲೂ ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆಯಾದಲ್ಲಿ ಇಂತಹ ಸಾಧ್ಯತೆಗಳು ಹೆಚ್ಚು, ಅಂತಹ ಸಂದರ್ಭದಲ್ಲಿ ಕುಟುಂಬದ ಸದಸ್ಯರು ಚೊಚ್ಚಲು ಹೆರಿಗೆಯಾದ ಬಾಣಂತಿಯರಿಗೆ ಹೆರಿಗೆ ನಂತರದಲ್ಲಿ ಪ್ರತಿ ಒಂದರಿಂದ 2 ಗಂಟೆಯೊಳಗೆ ಶಿಶುವಿಗೆ ತಪ್ಪದೇ ಎದೆ ಹಾಲುಣಿಸಬೇಕು. 6 ತಿಂಗಳವರೆಗೆ ಮಗುವಿಗೆ ತಾಯಿಯ ಎದೆಹಾಲನ್ನು ಮಾತ್ರ ಕೊಡಬೇಕು. ಅಲ್ಲದೇ ಮಗುವಿಗೆ ಬಿಸಿಲಿನ ತಾಪಮಾನದಿಂದ ರಕ್ಷಿಸಲು ತೆಳುವಾದ ಹತ್ತಿಬಟ್ಟೆ ಮಾತ್ರ ಹಾಕಬೇಕು ಎಂದರು.

ಇನ್ನು ಸಾರ್ವಜನಿಕರು ಕೂಡ ಬಿಸಿಲಿನಿಂದ ರಕ್ಷಣೆ ಮೊರೆ ಹೋಗಬೇಕು. ಮ. 1 ರಿಂದ ಸಂಜೆ 4 ರ ವರೆಗೆ ಆದಷ್ಟು ಮನೆಯಲ್ಲಿಯೇ ಇರಲು ಪ್ರಯತ್ನಿಸಬೇಕು. ಒಂದು ವೇಳೆ ಮನೆಯಿಂದ ಹೊರಗೆ ಬರುವ ಅಗತ್ಯವಿದ್ದರೆ ಛತ್ರಿ ಹಾಗೂ ನೀರಿನ ಬಾಟೆಲ್‌ನೊಂದಿಗೆ ಬರುವಂತೆ ಡಿಎಚ್‌ಒ ಮನವಿ ಮಾಡಿದ್ದಾರೆ.

ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದು

◆ **ಹಗರಿಬೊಮ್ಮನಹಳ್ಳಿ:** ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಮಹತ್ವದಾಗಿದೆ ಎಂದು ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮಾಜಿ ಸಿಂಡಿಕೇಟ್ ಮೆಂಬರ್ ಪದ್ಮ ವಿಠಲ್ ತಿಳಿಸಿದರು.

ಪಟ್ಟಣದ ರಾಷ್ಟ್ರೋತ್ಥಾನ ವಿದ್ಯಾಪರಿಷತ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳೆಯರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರಸಕ್ತ ದಿನಗಳಲ್ಲಿ ಮಹಿಳೆ ನೌಕರಿಯ ಜೊತೆಗೆ ಕುಟುಂಬ ಪಾಲನೆಯ ಹೊರೆ ಹಾಗೂ ಜವಾಬ್ದಾರಿ ಮಹತ್ತರವಾಗಿದೆ ಮಕ್ಕಳನ್ನು ಬೆಳೆಸುವ ಹೊಣೆಗಾರಿಕೆಯೂ ಆಕೆಯ ಮೇಲಿದೆ. ಕುಟುಂಬವನ್ನು ಆರ್ಥಿಕವಾಗಿ ಬಲಿಷ್ಠ ಗೊಳಿಸಲು ಮಹಿಳೆಯು ಉದ್ಯೋಗಸ್ಥೆಯಾಗುವುದು ಅನಿವಾರ್ಯ ಎಂದರು.



ಪ್ರಸ್ತಾವಿಕವಾಗಿ ತಾಲೂಕು ನೌಕರರ ಸಂಘದ ಅಧ್ಯಕ್ಷ ಎಂಪಿಎಂ ಮಂಜುನಾಥ್ ಮಾತನಾಡಿ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಹಾಗೂ ಪೌರಕಾರ್ಮಿಕ ಮಹಿಳೆಯರ ಸೇವೆಯನ್ನು ಗುರುತಿಸಿ ಈ ವರ್ಷ ಸನ್ಮಾನಿಸುತ್ತಿರುವುದು ಸಂಘದ ಹೆಮ್ಮೆ ಎಂದು ಸಂತೋಷ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದ ಉಪಾಧ್ಯಕ್ಷೆ ನಾಗರತ್ನ ವೈ. ಇಟಗಿ ಅಧ್ಯಕ್ಷತೆ ವಹಿಸಿದ್ದರು.

ಸಂಘದ ಪದಾಧಿಕಾರಿಗಳಾದ ಆರ್. ಜಯಶ್ರೀ, ಅರ್ಪಿತ ಆನಂದ್, ಗಾಳೆಮ್ಮ, ದಾದಿ ಬಿ.ಸಾವಿತ್ರಿ ಬಾಯ್ ಫುಲೆಸಂಘದ ದೀಪಿಕಾ, ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಜೆ.ಎಂ. ಜ್ಯೋತೇಶ್ವರಿ. ತಾಲೂಕು ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಗೌರಮ್ಮ, ಆಯುಷ್ಯ ಡಾಕ್ಟರ್ ಹಾಲಮ್ಮ, ಪದಾಧಿಕಾರಿಗಳಾದ ಎಂ.ಯಂಕರೆಡ್ಡಿ, ಹಂಸಾಗರದ ಆನಂದ್, ಆಂಜನೇಯ, ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ರಾಜ್ಯ ಪರಿಷತ್ ಸದಸ್ಯ ಎನ್. ಮಂಜುನಾಥ್, ನಾಮ ನಿರ್ದೇಶಕ ಸದಸ್ಯ ರಾಜು ಸೋಗಿ, ಸೊನ್ನದ ಕೊಟ್ರೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್. ಲೋಕಪ್ಪ, ಮಹಿಳಾ ವಿಭಾಗದ ಗುಲ್ಜಾರ್ ಬೇಗಮ್, ವಿ. ನಾಗಲಕ್ಷ್ಮೀ, ಕೆ.ಎಂ. ನಿರ್ಮಲ, ಭಾರತಿ, ಪ್ರಮೋದಿನಿ, ಕವಿತಾ, ಉಷಾರಾಣಿ, ಖಾಜಾ ಬನ್ನಿ ಇತರರಿದ್ದರು. ಶಾರದಾ ಮಂಜುನಾಥ್ ಪ್ರಾರ್ಥಿಸಿದರು. ಶಿಕ್ಷಕಿ ಶಾಂತಕುಮಾರಿ, ಸಮಾಜ ಕಲ್ಯಾಣ ಇಲಾಖೆಯ ಶೋಭಾ ನಾಗರಾಜ್ ನಿರ್ವಹಿಸಿದರು.

ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ

◆ **ಸಿರುಗುಪ್ಪ:** ಈ ಹಿಂದೆ ವ್ಯಾಪಾರ, ವಹಿವಾಟು ಮಾಡುವಾಗ ಗ್ರಾಹಕರ ವಿಶ್ವಾಸಕ್ಕೆ ಮಹತ್ವ ಕೊಡುತ್ತಿದ್ದರು, ಇಂದು ವ್ಯಾಪಾರ ವಿಶ್ವಾದ್ರೋಹವಾಗಿದೆ ಎಂದು ಸಿವಿಲ್ ನ್ಯಾಯಾಧೀಶ ಅಶೋಕ್ ಆರ್.ಎಚ್.ಹೇಳಿದರು.

ನಗರದ ಅಭಯಾಂಜನೇಯ್ಯ ಸ್ವಾಮಿ ದೇವಸ್ಥಾನದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ವಿವಿಧ ಇಲಾಖೆಯ ಸಹಯೋಗದೊಂದಿಗೆ ಭಾನುವಾರ ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗ್ರಾಹಕರಿಗೆ ಮಾರಾಟವಾಗುವ ಪ್ರತಿ ವಸ್ತು, ಸರಕು ಮತ್ತು ಸೇವೆಗಳ ಮೌಲ್ಯ, ವೆಚ್ಚ ಹಾಗೂ ಗುಣಮಟ್ಟದ ಬಗ್ಗೆ ಸಂಪೂರ್ಣ ಮಾಹಿತಿ ಗ್ರಾಹಕರಿಗೆ ಸಿಗಬೇಕು. ಗ್ರಾಹಕರ ಹಕ್ಕುಗಳು, ಜವಾಬ್ದಾರಿಗಳು, ಸುರಕ್ಷತೆ ಮತ್ತು ನ್ಯಾಯಯುತ ವ್ಯಾಪಾರ ಪದ್ಧತಿಗಳ ಬಗ್ಗೆ ಜಾಗೃತಿ ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ವಕೀಲರ ಸಂಘದ ತಾಲೂಕು ಅಧ್ಯಕ್ಷ ಯು.ವೆಂಕೋಬ ಮಾತನಾಡಿ, ಸಮಾಜದ ಪ್ರತಿಯೊಬ್ಬರೂ ಕಡ್ಡಾಯವಾಗಿ ಗ್ರಾಹಕರ ಹಕ್ಕುಗಳನ್ನು ತಿಳಿದುಕೊಂಡರೆ ವಿವಿಧ ವಂಚನೆಗೆ ಒಳಗಾಗದಂತೆ ಜಾಗೃತವಾಗಿರಬಹುದು ಎಂದರು. ಅಬಕಾರಿ ನಿರೀಕ್ಷಕ ಎ.ಜಿ.ಅಂಬಣ್ಣ, ಪಿ.ಎಸ್.ಐ. ಮಲ್ಲಯ್ಯ, ಕೃಷಿ ಸಹಾಯಕ ನಿರ್ದೇಶಕ ಮಂಜುನಾಥರೆಡ್ಡಿ, ವಕೀಲರ ಸಂಘದ ಉಪಾಧ್ಯಕ್ಷ ಶರೀಫ್ ಸಾಬ್, ಕಾರ್ಯದರ್ಶಿ ಎಂ.ಶಿವಕುಮಾರ, ವಕೀಲೆ ಮಂಜುಳ ಇದ್ದರು.



ಮಹಿಳೆ ಶಿಕ್ಷಿತಳಾದರೆ ಸಮಾಜದ ಪ್ರಗತಿ ಸಾಧ್ಯ

◆ **ಬೀದರ್:** ಮಹಿಳೆ ಸುಕ್ಷಿತವಾದರೆ ಆಕೆಯ ತವರು, ಗಂಡನ ಮನೆ ಬೆಳಗುವುದರ ಜೊತೆಗೆ ಇಡೀ ಸಮಾಜವನ್ನೇ ಬೆಳಗುವಳು ಎಂದು ಗುರುನಾನಕ ಸಮೂಹ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷೆ ಡಾ.ರೇಷ್ಮಾ ಕೌರ್ ಹೇಳಿದರು.

ಭಾನುವಾರ ನಗರದ ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ರಾಜಮಾತಾ ಜಿಜಾವು ಮಹಿಳಾ ಸಮಿತಿ ಬೀದರ್ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಓರ್ವ ಮಹಿಳೆ ಸುಶಿಕ್ಷಿತವಾದರೆ ಸಮಾಜದ ಸರ್ವಾಂಗೀಣ ಪ್ರಗತಿ ಸಾಧ್ಯವಿದೆ. ಶಿಕ್ಷಣದ ಜೊತೆಗೆ ಇಂದು ಸಂಸ್ಕಾರ, ಮಾನವೀಯ ಮೌಲ್ಯಗಳನ್ನು ಕಲಿಸುವುದು, ನೈತಿಕ, ಸಾಮಾಜಿಕ ಹಾಗೂ ಸೈದ್ಧಾಂತಿಕ ನೆಲೆಗಟ್ಟನ್ನು ಅರಿತುಕೊಳ್ಳುವುದು ತುಂಬ ಅಗತ್ಯವಾಗಿದೆ ಎಂದರು.

ಧರಮಸಿಂಗ್ ಫೌಂಡೇಷನ್ ನಿರ್ದೇಶಕಿ ಸೋನಲ್ ವಿಜಯಸಿಂಗ್ ಮಾತನಾಡಿ, ಓರ್ವ ಮಹಿಳೆ ಸುಶಿಕ್ಷಿತವಾದರೆ ಸಬಲಿಕರಣ, ಸಶಕ್ತಿಕರಣ ಹಾಗೂ ಸಾಂಸ್ಕೃತಿಕರಣದ ವಿಚಾರಧಾರೆ ಇರಿಸಿ ಮುಂದೆ ಬರುವಳು. ನಾರಿಶಕ್ತಿ ದೇಶದ ಬಹುದೊಡ್ಡ ಶಕ್ತಿಯಾಗಿದ್ದಾಳೆ. ಮಹಿಳೆ ಮುಂದೆ ಬರಲು ನಮ್ಮ ಫೌಂಡೇಷನ್ ವತಿಯಿಂದ ಇನ್ನು ಸಾಕಷ್ಟು ಸಹಾಯ ಮಾಡುವುದಾಗಿ ತಿಳಿಸಿದರು.

ಸಮಾಜದ ದಾದಾ ಮಹಾರಾಜ ನಗರಕರ್ ಮಾತನಾಡಿ, ಮಹಿಳೆ ಇಂದು ಎಲ್ಲ ಕ್ಷೇತ್ರಗಳಂತೆ ಅಧ್ಯಾತ್ಮದಲ್ಲೂ ಎತ್ತಿದ ಕೈ. ಹಾಗಾಗಿ ಈ ದೇಶದ ಚುಕ್ಕಾಣಿ ಹಿಡಿಯಲು ಓರ್ವ ಶಕ್ತಿಶಾಲಿ ಮಹಿಳೆಯ ಅಗತ್ಯವಿದೆ ಎಂದರು.



ಜಿಎನ್‌ಡಿ ಕಾಲೇಜಿನ ಪ್ರಾಧ್ಯಾಪಕಿ ಡಾ.ಜಸ್ಮಿತ್ ಕೌರ್ ಮಾತನಾಡಿ, ಇಂದು ಮಹಿಳೆ ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಒತ್ತು ನೀಡಬೇಕು. ನಿತ್ಯ ಯೋಗ, ವ್ಯಾಯಾಮ ಜೊತೆಗೆ ದೈಹಿಕ ಚಟುವಟಿಕೆಗಳಿಗೂ ಉತ್ತೇಜನ ನೀಡಬೇಕಿದೆ. ಹೆಚ್ಚುತ್ತಿರುವ ಸೈಬರ್ ಅಪರಾಧಗಳಿಂದ ಮಹಿಳೆ ಜಾಗೃತಳಾಗಬೇಕು ಎಂದು ತಿಳಿಸಿದರು.

ಮಹಾನಗರ ಪಾಲಿಕೆಯ ಸದಸ್ಯೆ ಉಲ್ಲಾಸಿನಿ ಮುದಾಳೆ, ಪೊಲೀಸ್ ಅಧಿಕಾರಿ ಕೌಶಲ್ಯಾ ಮಸ್ಕಿ, ಅಕ್ಕಪಡೆಯ ಸಂಗೀತಾ, ವಿಜಯಾ ಜಾಧವ, ರೇಖಾ ಮುಳೆ, ಸೋನಿ ಬಿರಾದಾರ, ಅನಿತಾ ಭೋಸ್ಲೆ, ಸುರೇಖಾ ಜಾಧವ ಹಾಗೂ ಇತರರು ಕಾರ್ಯಕ್ರಮದಲ್ಲಿದ್ದರು.

ಪ್ರಾಧ್ಯಾಪಕಿ ಸೋನಿ ಮಾನಕಾರಿ ಸರ್ವರನ್ನು ಸ್ವಾಗತಿಸಿ, ಪ್ರೊ.ಮೀನಾಕ್ಷಿ ಕಾಳೆ ಕಾರ್ಯಕ್ರಮ ನಿರೂಪಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.